ಮಂಗಳೂರು
ಸೋಮವಾರ, 22 ಜೂನ್ 2026
ಸಂಪುಟ 48, ಸಂಚಿಕೆ 95, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕಾರ್ಯಕರ್ತರಿಗೆ ಅಧಿಕಾರ: ಸಿಎಂ ಡಿಕೆಶಿ | ೦೫
ಆರು ಸಂಸದರು ಶೀಘ್ರ ಶಿಂಧೆ ಬಣಕ್ಕೆ | ೦೨
ಬ್ರಿಟನ್ ಪ್ರಧಾನಿ ರಾಜೀನಾಮೆ ಸಾಧ್ಯತೆ | ೦೨

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಉತ್ತರೆ

ದಿನದ ಮಾತು

ಗೆಲುವು ಸೋಲುಗಳೆರಡನ್ನು ಸಮಾನವಾಗಿ ಸ್ವೀಕರಿಸುವವರೇ ಬಾಳಿನಲ್ಲಿ ಆನಂದವನ್ನು ಹೊಂದುತ್ತಾರೆ.

▲ ಗೌತಮ ಬುದ್ಧ

'ಬಾಲ್ಕನೀಕರಣ'ದ ಅಪಾಯಗಳು

ಗುರುಪ್ರಸಾದ ಭಟ್ ಉಡುಪಿ

• ಪುಟ ೬

ಕಿರುಸುದ್ದಿ

ಮೈಸೂರಲ್ಲಿ ಬಾಂಗ್ಲಾ 40 ಶಂಕಿತ ವಲಸಿಗರ ವಿಚಾರಣೆ

• **ಮೈಸೂರು:** ರೈಲು ನಿಲ್ದಾಣದಲ್ಲಿ 40ಕ್ಕೂ ಹೆಚ್ಚು ಶಂಕಿತ ಬಾಂಗ್ಲಾ ವಲಸಿಗರು ಪತ್ತೆಯಾಗಿದ್ದು, ಹಿಂದು ಜಾಗರಣ ವೇದಿಕೆ ಕಾರ್ಯಕರ್ತರು ಇವರನ್ನು ಗುರುತಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೋಲ್ಕತ್ತಾದಿಂದ ವಾರಕ್ಕೊಮ್ಮೆ ಸಂಚರಿಸುವ ಹೌರಾ ಎಕ್ಸ್‌ಪ್ರೆಸ್ ರೈಲಿನ ಮೂಲಕ ಇವರು ಮೈಸೂರಿಗೆ ಬಂದಿರುವುದಾಗಿ ತಿಳಿದುಬಂದಿದೆ. ರೈಲು ನಿಲ್ದಾಣದಲ್ಲಿ ಕಾರ್ಯಕರ್ತರು ಅವರ ಗುರುತಿನ ಚೀಟಿಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದಾರೆ.

• ಪುಟ ೪

ಇರಾನ್-ಅಮೆರಿಕ ಶಾಂತಿ ಮಾತುಕತೆ ಸ್ವಿಸ್‌ನಲ್ಲಿ ಶುರು

• **ಜ್ಯೂರಿಚ್:** ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ನಿಟ್ಟಿನಲ್ಲಿ, ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಭಾನುವಾರ ಸ್ವಿಜರ್ಲೆಂಡ್‌ನ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಶಾಂತಿ ಮಾತುಕತೆ ಆರಂಭಿಸಿದ್ದಾರೆ. ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಖತಾರ್‌ನ ಹಿರಿಯ ನಾಯಕರು ಮಧ್ಯವರ್ತಿಗಳಾಗಿ ಪಾಲ್ಗೊಂಡಿದ್ದಾರೆ.

• ಪುಟ ೨

ಅನಿಲ ಸೋರಿಕೆ: 7 ಬಲಿ, 67 ಜನರ ಸ್ಥಿತಿ ಗಂಭೀರ

• **ತಿರುವಳ್ಳೂರು:** ತಮಿಳುನಾಡಿನ ತಿರುವಳ್ಳೂರಿನ ಸೀಫುಡ್ ರಫ್ತು ಕಾರ್ಖಾನೆಯಲ್ಲಿ ಸಂಭವಿಸಿದ ಅಮೋನಿಯಾ ಅನಿಲ ಸೋರಿಕೆಯಿಂದಾಗಿ 7 ಮಂದಿ ಸಾವನ್ನಪ್ಪಿದ್ದು, 40ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರವಾಗಿದೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಈ ದುರಂತ, ಸೇಂಟ್ ಪೀಟರ್ ಆಂಡ್ ಪಾಲ್ ಸೀಫುಡ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಂಭವಿಸಿದೆ.

• ಪುಟ ೨

ಧರ್ಮಸ್ಥಳದ ಶ್ರೀಕ್ಷೇತ್ರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

• ಪುಟ ೪



ವಯಸ್ಸಿಗೂ ಬಲ ಮನಸ್ಸಿಗೂ ಛಲ

• ಪುಟ ೨

ಸುದ್ದಿ ಸಮಗ್ರ

ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೋದಿ ಚಾಲನೆ

ವಿಶ್ವ ಶಾಂತಿಗೆ ಯೋಗ





• **ಕೋಲ್ಕತ್ತಾ:** ಯೋಗವು ವೈಯಕ್ತಿಕ ಆರೋಗ್ಯ ರಕ್ಷಕ ಮಾತ್ರವಲ್ಲ, ಜಾಗತಿಕ ಶಾಂತಿಗೆ ಹಾದಿ ತೆರೆಯಬಲ್ಲ ವೇಗವರ್ಧಕ ಶಕ್ತಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಯೋಗಾಭ್ಯಾಸದ ಅನನ್ಯ ಮಹತ್ವಗಳತ್ತ ಬೆಳಕು ಚೆಲ್ಲಿದ್ದಾರೆ. ಜಗತ್ತಿನ ಹಲವು ರಾಷ್ಟ್ರಗಳು ನಿರಂತರ ಸಂಘರ್ಷಗಳಿಂದ ತತ್ತರಿಸಿರುವ ಪ್ರಸಕ್ತ ಸನ್ನಿವೇಶದಲ್ಲಿ, ಶಾಂತಿಯ ಮರುಸ್ಥಾಪನೆ ಮತ್ತು ಸಮಾಜದಲ್ಲಿ ಸೌಹಾರ್ದ ಸೃಷ್ಟಿಸಲು ಯೋಗ ಅತ್ಯಂತ ಅಮೂಲ್ಯ ಮಾಧ್ಯಮವೆಂಬ ಪ್ರಧಾನಿ ಮೋದಿ ಅಭಿಮತ ಸಕಾಲಿಕ ಮತ್ತು ಹೆಚ್ಚು ಮಹತ್ವಪೂರ್ಣವೆನಿಸಿದೆ.

ಯೋಗವು ಕಲಿಸುವ ಸಮತೋಲಿತ ಜೀವನಶೈಲಿ ಪಾಲಿಸುವುದು ಅತ್ಯವಶ್ಯ. ಎಲ್ಲಾ ವಯೋಮಿತಿಯವರೂ ಯೋಗಾಭ್ಯಾಸ ರೂಢಿಸಿಕೊಳ್ಳುವುದು ಕೂಡ ಅಗತ್ಯವೆಂದ ಪ್ರಧಾನಿ ಮೋದಿ, ಸಮಸ್ಯೆಗಳಿಂದ ಹೊರಬರಲು ದುಡಿಮೆ, ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಮತ್ತು ನಿದ್ರೆ ತೀರಾ ಮುಖ್ಯ, ಈ ರೀತಿಯ ಸಮತೋಲಿತ ಜೀವನ ಶೈಲಿ ಪಾಲಿಸುವವರಿಗೆ ಸಮಸ್ಯೆಗಳೆದುರಾಗದು ಎಂದು ಭಗವದ್ಗೀತೆ ಸಾರಿದೆ.

➡ ಪುಟ ೪

ದೇಶವ್ಯಾಪಿ ಯೋಗ ಪ್ರದರ್ಶನ

• ಪುಟ ೨

ಬದುಕಿನ ಭಾಗವಾಗಲಿ

ಯೋಗವನ್ನು ನಿರ್ದಿಷ್ಟ ದಿನ ಅಥವಾ ಕಾರ್ಯಕ್ರಮಕ್ಕೆ ಸೀಮಿತಗೊಳಿಸುವ ಬದಲು ಇದನ್ನು ನಮ್ಮ ಮತ್ತು ನಮ್ಮ ಕುಟುಂಬಗಳು ಹಾಗೂ ಭಾವೀ ಪೀಳಿಗೆಗಳ ಬದುಕಿನ ಭಾಗವಾಗಿ ಮಾರ್ಪಡಿಸುವ ಸಂಕಲ್ಪವನ್ನು ತೊಡೋಣ. ವಿವಿಧ ದೇಶಗಳು, ವಿಭಿನ್ನ ಸಂಸ್ಕೃತಿಗಳ ಜನರನ್ನು ಒಗ್ಗೂಡಿಸುವ ಯೋಗವು ಜಗತ್ತಿನ ಬೃಹತ್ ಸಾಮುದಾಯಿಕ ಆಚರಣೆಯಾಗಿ ರೂಪುಗೊಂಡಿದೆ. ಭೂಮಿಯಲ್ಲಿ ಅತಿ ದೊಡ್ಡ ಹಗಲಿನ ದಿನವಾಗಿರುವ ಜೂ.21 ಇಂದೀಗ ಯೋಗದಿಂದಾಗಿ ಬೃಹತ್ ಸಾಮುದಾಯಿಕ ಆಚರಣಾ ದಿನವಾಗಿ ಪರಿವರ್ತಿತವಾಗಿದೆ. ಜನರನ್ನು ಒಗ್ಗೂಡಿಸುವ ಶಕ್ತಿಯಿದೆ ಯೋಗಕ್ಕೆ. ಯೋಗ ದಿನಾಚರಣೆಯ ಸದವಸರದಲ್ಲಿ ನಾನು ಜಗತ್ತಿನ ಜನರೆಲ್ಲರನ್ನು ಅಭಿನಂದಿಸುವುದಾಗಿ ಪ್ರಧಾನಿ ಮೋದಿ ಹೇಳಿದ್ದಾರೆ.

ರಾಜ್ಯದ ವಿವಿಧೆಡೆ ಯೋಗ ಕಾರ್ಯಕ್ರಮ

• **ಬೆಂಗಳೂರು:** ರಾಜ್ಯಾದ್ಯಂತ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಅತ್ಯಂತ ಸಡಗರ ಮತ್ತು ಉತ್ಸಾಹದಿಂದ ಆಚರಿಸಲಾಯಿತು. ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಧ್ಯೇಯವಾಕ್ಯದಲ್ಲಿ ನಡೆದ ಈ ಆಚರಣೆಗಳಲ್ಲಿ, ಮಕ್ಕಳು, ಯುವಕರು ಹಾಗೂ ಹಿರಿಯರು ಸೇರಿದಂತೆ ಲಕ್ಷಾಂತರ ಮಂದಿ ಸ್ವಯಂಪ್ರೇರಿತರಾಗಿ ಪಾಲ್ಗೊಂಡಿದ್ದರು. ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ನಡೆದ ಯೋಗ ದಿನಾಚರಣೆಯಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್. ಆರೋಗ್ಯ ಸಚಿವ ಯು.ಟಿ.ಖಾದರ್ ಭಾಗವಹಿಸಿದ್ದರು. ಸಾವಿರಾರು ಯೋಗಪಟುಗಳು ಯೋಗದ ವಿವಿಧ ಭಂಗಿಗಳನ್ನು ಪ್ರದರ್ಶಿಸಿದರು.

➡ ಪುಟ ೪

20 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳ ಹಾಜರಿ

ದೇಶದಾದ್ಯಂತ ನೀಟ್ ಮರುಪರೀಕ್ಷೆ ಸುಗಮ



• **ಹೊಸದಿಲ್ಲಿ:** ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ರದ್ದುಗೊಂಡಿದ್ದ ನೀಟ್ (ಯುಜಿ)-2026 ಪರೀಕ್ಷೆಯ ಮರುಪರೀಕ್ಷೆ ಭಾನುವಾರ ದೇಶಾದ್ಯಂತ ಕಟ್ಟುನಿಟ್ಟಿನ ಭದ್ರತಾ ಕ್ರಮಗಳ ನಡುವೆ ಯಶಸ್ವಿಯಾಗಿ ನಡೆಯಿತು. 20 ಲಕ್ಷಕ್ಕೂ ಹೆಚ್ಚು ವೈದ್ಯಕೀಯ ಪ್ರವೇಶಾಕಾಂಕ್ಷಿಗಳು ಮರುಪರೀಕ್ಷೆಯಲ್ಲಿ ಭಾಗವಹಿಸಿದರು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಾಹಿತಿ ಪ್ರಕಾರ, ಭಾರತದಲ್ಲಿನ 5,440 ಪರೀಕ್ಷಾ ಕೇಂದ್ರಗಳು ಹಾಗೂ ವಿದೇಶಗಳ 14 ಕೇಂದ್ರಗಳಲ್ಲಿ 13 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಯಿತು. ಸುಮಾರು 7 ಲಕ್ಷ ಅಧಿಕಾರಿಗಳು, ಸಿಬ್ಬಂದಿ, ವೀಕ್ಷಕರು ಮತ್ತು ಪೊಲೀಸ್ ಸಿಬ್ಬಂದಿಯನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿತ್ತು.



ಬಯೋಮೆಟ್ರಿಕ್, ಸಿಸಿಟಿವಿ, ಜಾಮರ್‌ಗಳ ಕಣ್ಗಾವಲು: ಆಧಾರ್ ಆಧಾರಿತ ಬಯೋಮೆಟ್ರಿಕ್ ಪರಿಶೀಲನೆ, ಮುಖ ಗುರುತಿಸುವಿಕೆ, ಸಿಸಿಟಿವಿ ನಿಗಾ ವ್ಯವಸ್ಥೆ, ಮೊಬೈಲ್ ಜಾಮರ್‌ಗಳು ಹಾಗೂ ಎರಡು ಹಂತದ ತಪಾಸಣೆ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ರಾಜ್ಯ ಪೊಲೀಸ್ ಇಲಾಖೆಗಳ ಸಹಯೋಗದಲ್ಲಿ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿ ಪರೀಕ್ಷೆಯ ಮೇಲೆ ನಿಗಾ ವಹಿಸಲಾಯಿತು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ದಿಲ್ಲಿಯ ಎನ್‌ಟಿಎ ಕೇಂದ್ರದಲ್ಲಿ ಪರೀಕ್ಷಾ ವ್ಯವಸ್ಥೆಗಳ ಪರಿಶೀಲನೆ ನಡೆಸಿದರು. ಪಾರದರ್ಶಕ ಹಾಗೂ ಸುಗಮ ಪರೀಕ್ಷೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

➡ ಪುಟ ೪

ರಾಜ್ಯದಲ್ಲಿ ಬಿಗಿಭದ್ರತೆ ನಡುವೆ ನೀಟ್ ಪರೀಕ್ಷೆ

• ಪುಟ ೫

ದಿಲ್ಲಿ ಏರ್‌ಪೋರ್ಟ್‌ನಲ್ಲಿ 45 ನಿಮಿಷ ಕಾದ ಮೋದಿ

ನೀಟ್ ಪರೀಕ್ಷಾರ್ಥಿಗಳಿಗೆ ತೊಂದರೆ ತಪ್ಪಿಸುವ ಉದ್ದೇಶ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು, ನೀಟ್ -ಯುಜಿ ಪರೀಕ್ಷಾರ್ಥಿಗಳ ಸಂಚಾರಕ್ಕೆ ತೊಂದರೆಯಾಗಬಾರದೆಂಬ ಕಾಳಜಿ ಹಿನ್ನೆಲೆ ದಿಲ್ಲಿ ವಿಮಾನ ನಿಲ್ದಾಣದಲ್ಲೇ 45 ನಿಮಿಷಗಳ ಕಾಲ ಕಾದು ಕುಳಿತ ಘಟನೆ ಭಾನುವಾರ ನಡೆದಿದೆ. ಪ್ರಧಾನಿಯವರು ಕೋಲ್ಕತ್ತಾದಿಂದ ಮಧ್ಯಾಹ್ನ 1:15ಕ್ಕೆ ದಿಲ್ಲಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಪ್ರಧಾನಿಯವರ ವಾಹನದ ಸುಗಮ ಸಂಚಾರಕ್ಕಾಗಿ ನಿರ್ದಿಷ್ಟ ಮಾರ್ಗಗಳಲ್ಲಿ ಸಂಚಾರ ನಿಯಂತ್ರಣ ಮತ್ತು ತಾತ್ಕಾಲಿಕ ನಿರ್ಬಂಧಗಳನ್ನು ಜಾರಿಗೊಳಿಸಲಾಗುತ್ತದೆ. ಆದರೆ, ಮೋದಿಯವರು ನೀಟ್ -ಯುಜಿ ಮರುಪರೀಕ್ಷೆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತೆರಳುವ ವೇಳೆ ಅವರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ವಿಮಾನ ನಿಲ್ದಾಣದಲ್ಲೇ 45 ನಿಮಿಷ ಕಾಯಲು ನಿರ್ಧರಿಸಿದರು.

➡ ಪುಟ ೪

ಸಂಘ 100: ಪ್ರಬುದ್ಧರೊಂದಿಗೆ ಸಂವಾದದಲ್ಲಿ ಮುಕುಂದ್ ಸಿ.ಆರ್.

ಸವಾಲಿಗೆ ಹಿಂದು ಮೌಲ್ಯ ಪರಿಹಾರ

• **ಮಂಗಳೂರು:** ಜಗತ್ತು ಇಂದು ಬಹುಧ್ರುವೀಯ ವ್ಯವಸ್ಥೆಯತ್ತ ಸಾಗುತ್ತಿದ್ದು, ಡಿಜಿಟಲೈಸೇಶನ್, ಡಿ-ಗ್ಲೋಬಲೈಸೇಶನ್, ಡಿ-ಕಾರ್ಬನೈಸೇಶನ್ ಹಾಗೂ ಡೆಮಾಗ್ರಫಿಕ್ ಚೇಂಜಸ್(ಜನಸಂಖ್ಯಾ ಅಸಮತೋಲನ)ನಂತಹ ಮಹತ್ವದ ಸವಾಲುಗಳನ್ನು ಎದುರಿಸುತ್ತಿದೆ. ಇಂತಹ ಜಾಗತಿಕ ಸವಾಲುಗಳಿಗೆ ಹಿಂದು ಧರ್ಮ, ಸಂಸ್ಕೃತಿ ಮತ್ತು ಮೌಲ್ಯಗಳಲ್ಲಿ ಅಡಗಿರುವ ಜೀವನದೃಷ್ಟಿಯೇ ಸಮತೋಲನದ ಪರಿಹಾರ ಒದಗಿಸಬಲ್ಲದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ಮುಕುಂದ ಸಿ.ಆರ್. ಅವರು ಒತ್ತಿ ಹೇಳಿದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಮಂಗಳೂರಿನ ಸಂಘನಿಕೇತನದಲ್ಲಿ ಭಾನುವಾರ ಆಯೋಜಿಸಿದ್ದ 'ಸಂಘದ ಶತಮಾನೋತ್ಸವ ಮತ್ತು ಜಾಗತಿಕ ದೃಷ್ಟಿಕೋನ' ವಿಷಯದ ಕುರಿತು ಪ್ರಬುದ್ಧ ನಾಗರಿಕರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

➡ ಪುಟ ೪

ಸಂಘದ ವಿಚಾರಕ್ಕೆ ಜಗದ ಮನ್ನಣೆ

ಇತ್ತೀಚಿನ ವರ್ಷಗಳಲ್ಲಿ ಜಗತ್ತಿನ ವಿವಿಧ ದೇಶಗಳ ಚಿಂತಕರು ಮತ್ತು ನೀತಿ ನಿರೂಪಕರು ಸಂಘದ ಕಾರ್ಯ ಹಾಗೂ ಹಿಂದು ಮೌಲ್ಯಗಳ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾರೆ. ವಿವಿಧ ದೇಶಗಳಿಂದ ಬಂದ ಪ್ರತಿನಿಧಿಗಳು ಸಂಘದ ಕಾರ್ಯಪದ್ಧತಿಯನ್ನು ಮೆಚ್ಚಿ ಕೊಂಡಿದ್ದು, ತಮ್ಮ ದೇಶಗಳಲ್ಲಿಯೂ ಇಂತಹ ಮೌಲ್ಯಾಧಾರಿತ ಸಾಮಾಜಿಕ ಸಂಘಟನೆಗಳ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದ ಅವರು , ಅರಬ್ ಮತ್ತು ಯುರೋಪಿನ ಗಣ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಉಲ್ಲೇಖಿಸಿದರು.

ಕಾಂಗ್ರೆಸ್ ಮತ್ತಷ್ಟು ಬಲಪಡಿಸಲು ಮಹತ್ವದ ನಿರ್ಣಯ

ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್

• **ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಭಾನುವಾರ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು. ನಗರದ ಅರಮನೆ ಮೈದಾನದಲ್ಲಿ ನಡೆದ ಬೃಹತ್ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹರಿಪ್ರಸಾದ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಸಮಾರಂಭದಲ್ಲಿ ಕಾಂಗ್ರೆಸ್ ನಾಯಕರು ಬಿಜೆಪಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, 2028ರ ಕರ್ನಾಟಕ ವಿಧಾನಸಭೆ ಚುನಾವಣೆ ಹಾಗೂ 2029ರ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಮಹತ್ವದ ನಿರ್ಣಯಗಳನ್ನು ಕೈಗೊಂಡರು. ಅಧಿಕಾರ ಹಸ್ತಾಂತರಿಸಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್. ಈ ವೇಳೆ ತಾವು ಅಧಿಕಾರ ವಹಿಸಿಕೊಂಡ ದಿನವನ್ನು ನೆನಪಿಸಿಕೊಂಡರು.

➡ ಪುಟ ೪



ಕಾಂಗ್ರೆಸ್ ಮಾದರಿ ದೇಶಕ್ಕೆ ಮಾದರಿ. ಕಾಂಗ್ರೆಸ್ ನಾಯಕತ್ವ ದೇಶಕ್ಕೆ ಮಾದರಿ. ಕರ್ನಾಟಕ ಮಾದರಿ ಇಡೀ ದೇಶಕ್ಕೆ ಮಾದರಿ. ಸಮಾಜದ ಕಟ್ಟಕಡೆಯ ಪ್ರಜೆಗೆ ನ್ಯಾಯ ಒದಗಿಸುವುದೇ ಕಾಂಗ್ರೆಸ್ ತತ್ತ್ವ.

■ ರಣದೀಪ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ನೌಕಾಪಡೆಗೆ 3 ಹಡಗು ಸೇರ್ಪಡೆ

• **ಕೋಲ್ಕತ್ತಾ:** ಬಲಿಷ್ಠ ಸಮುದ್ರ ಸಾಮರ್ಥ್ಯ, ದೇಶದ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವನ್ನು ನಿರ್ಧರಿಸುವ ಪ್ರಮುಖ ಅಂಶ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು. ಶ್ಯಾಮ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗುಗಳನ್ನು ಸೇರ್ಪಡೆಗೊಳಿಸಿದ ಬಳಿಕ ಮಾತನಾಡಿದ ಅವರು, ಭಾರತ ಈ ವಾಸ್ತವವನ್ನು ಅರಿತು ಅದಕ್ಕೆ ತಕ್ಕ ಸಿದ್ಧತೆ ನಡೆಸುತ್ತಿದೆ ಎಂದರು.


ಮೋದಿ ಸ್ವದೇಶಿ ನಿರ್ಮಿತ ಸ್ಟೆಲ್ತ್ ಫ್ರಿಗೇಟ್ ದುನಗಿರಿ, ಸರ್ವೇ ಹಡಗು ಸಂಶೋಧಕ್ ಹಾಗೂ ಜಲಾಂತರ್ಗಾಮಿ ವಿರೋಧಿ ಯುದ್ಧನೌಕೆ ಅಗ್ರಯ್ ಅನ್ನು ನೌಕಾಪಡೆಗೆ ಸೇರ್ಪಡೆಗೊಳಿಸಿದರು. ಈ ವೇದಿಕೆಗಳು ಸಮುದ್ರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೇ ಮತ್ತು ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಲ್ಲಿ ಪ್ರಮುಖ ಸಾಮರ್ಥ್ಯ ಹೊಂದಿವೆ ಎಂದು ಹೇಳಿದರು.

• ವಿವರ ಪುಟ ೨

ಪ್ರಕಾಶ್ ರಾಜ್‌ಗೆ ಕಾನೂನು ಸಂಕಷ್ಟ

• **ಬೆಂಗಳೂರು:** 4 ರಾಜ್ಯಗಳಲ್ಲಿ ಕಾನೂನು ಬಾಹಿರವಾಗಿ ಮತದಾರರ ಗುರುತಿನ ಚೀಟಿ ಹೊಂದಿರುವ ಆರೋಪದ ಮೇಲೆ ನಟ ಪ್ರಕಾಶ್ ರಾಜ್ ಅವರಿಗೆ ಕಾನೂನು ಸಂಕಷ್ಟ ಎದುರಾಗಿದೆ. ನ್ಯಾಯಾಲಯ ನೀಡಿದ್ದ ಸಮನ್ಸ್‌ಗೆ ಸತತ ಗೈರು ಹಾಜರಾಗಿ, ಯಾವುದೇ ಪ್ರತಿಕ್ರಿಯೆ ನೀಡದ ಹಿನ್ನೆಲೆಯಲ್ಲಿ ಬೆಂಗಳೂರಿನ 48ನೇ ಎಸಿಜೆಎಂ ನ್ಯಾಯಾಲಯವು ಬಂಧನ ವಾರೆಂಟ್ ಜಾರಿಗೊಳಿಸಿ ಆದೇಶಿಸಿದೆ. 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಪ್ರಕಾಶ್ ರಾಜ್ ಅವರು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

➡ ಪುಟ ೪



ವಿಶಾಖಪಟ್ಟಣಂನಲ್ಲಿ ಐಎನ್‌ಎಸ್ ಸಾತವಾಹನ ಯುದ್ಧನೌಕೆಯಲ್ಲಿ ಯೋಗಾಭ್ಯಾಸ ನಡೆಸಿದ ಪೂರ್ವ ನೌಕಾಸೇನಾ ವಿಭಾಗದ ಸಿಬ್ಬಂದಿ

26 ಕೋಟಿ ಮಂದಿಯಿಂದ ಯೋಗಾಭ್ಯಾಸ
ದೇಶವ್ಯಾಪಿ ನಡೆದ ಯೋಗ ಪ್ರದರ್ಶನ

ಹೊಸದಿಲ್ಲಿ: ದೇಶದೆಲ್ಲೆಡೆ ಭಾರೀ ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ಸೇರಿದ 26 ಕೋಟಿ ಯೋಗಾಸಕ್ತ ಸಾಮಾನ್ಯ ಜನರು 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಬೃಹತ್ ಯಶಸ್ವಿಗೊಳಿಸಿದರು. ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಎಂಬ ಧ್ಯೇಯದೊಂದಿಗೆ ಭಾನುವಾರ ವಿಶ್ವದೆಲ್ಲೆಡೆ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ದೇಶ ವಿದೇಶದಲ್ಲಿ ಬೃಹತ್ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಯೋಗಾಭ್ಯಾಸ ನಡೆಸಲಾಯಿತು. ಕೋಲ್ಕತ್ತಾದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ 35,000 ಜನರು ಪಾಲ್ಗೊಂಡರು. ಜಬಲ್‌ಪುರದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಾಣಾಯಾಮ, ಆಸನಗಳನ್ನು ಪ್ರದರ್ಶಿಸಿದರು. ಇದೇ ರೀತಿ ದೇಶಾದ್ಯಂತ ಹಲವು ಯೋಗ ಸಂಗಮಗಳು ನಡೆದಿವೆ. ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರು ಪಾಲ್ಗೊಂಡು ಯೋಗಾಭ್ಯಾಸ ನಡೆಸಿದರು.

ಜಗತ್ತಿಗೆ ಭಾರತದ ಅಮೂಲ್ಯ ಕೊಡುಗೆ: ಮಧ್ಯಪ್ರದೇಶದ ಜಬಲ್‌ಪುರ ಗ್ಯಾರಿಸನ್ ಮೈದಾನದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಭಾಗವಹಿಸಿದ್ದರು. ಶ್ವೇತ ವರ್ಣದ ಸಲ್ವಾರ್ ಮತ್ತು ಕುರ್ತಾ ಧರಿಸಿದ್ದ ರಾಷ್ಟ್ರಪತಿ ಮುರ್ಮು ನೀಲಿ ಬಣ್ಣದ ಯೋಗ ಮ್ಯಾಟ್‌ನಲ್ಲಿ ತಮ್ಮ ಯೋಗ ಕೌಶಲವನ್ನು ತೋರಿಸಿದರು.

ಯೋಗವೆಂಬುದು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆ ಜಾಗತಿಕ ಸಮುದಾಯಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆ. ಇದು ಸಾವಿರಾರು ವರ್ಷಗಳಿಂದ ನಮ್ಮ ಋಷಿಗಳು ಮತ್ತು ಯೋಗಿಗಳು ನಡೆಸಿದ ತಪಸ್ಸಿನ ಫಲ. ಹಲವು ಜಾಗತಿಕ ಸವಾಲುಗಳ ಮಧ್ಯೆ ಮಾನವ ಜನಾಂಗಕ್ಕೆ ಶಾಂತಿ ಮತ್ತು ಸಾಮರಸ್ಯದ ಮಾರ್ಗವನ್ನು ತೋರಿಸುವಲ್ಲಿ ಯೋಗ ಪ್ರಮುಖ ಪಾತ್ರ ವಹಿಸಿದೆ. ಆರೋಗ್ಯ, ಸಮತೋಲನ ಮತ್ತು ಅರ್ಥಪೂರ್ಣ ಜೀವನ ನಡೆಸುವುದನ್ನು ಯೋಗ ಹೇಳಿಕೊಟ್ಟಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.


ಲಡಾಖ್‌ನಲ್ಲಿ ಉಪರಾಷ್ಟ್ರಪತಿ ಯೋಗ: ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಲಡಾಖ್‌ನಲ್ಲಿ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ನೂರಾರು ಜನರೊಂದಿಗೆ ಯೋಗಾಭ್ಯಾಸ ನಡೆಸಿದರು. ಹಿಮಾಲಯ ಪರ್ವತ ತಪ್ಪಲಿನ ಮುಂಭಾಗ ಆಸ್ಟ್ರೋ ಟರ್ಫ್ ಸ್ಟೇಡಿಯಂನಲ್ಲಿ ಉಪರಾಷ್ಟ್ರಪತಿ ರಾಧಾಕೃಷ್ಣನ್ ವಿವಿಧ ಆಸನಗಳನ್ನು ಪ್ರದರ್ಶಿಸಿದರು.

ಶಿಲ್ಲಾಂಗ್‌ನಲ್ಲಿ ರಾಜನಾಥ್ ಯೋಗಾಭ್ಯಾಸ: ಮೇಘಾಲಯದ ಶಿಲ್ಲಾಂಗ್‌ನಲ್ಲಿರುವ ಭಾರತೀಯ ವಾಯುಪಡೆ(ಐಎಎಫ್) ಮೈದಾನದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಜನರಿಗೆ ಯೋಗ ದಿನದ ಶುಭಾಶಯಗಳನ್ನು ತಿಳಿಸಿದರು. ಪ್ರಾಣಾಯಾಮ, ಆಸನಗಳನ್ನು ಮಾಡಿದ ರಾಜನಾಥ್ ಮಾತನಾಡಿ, ಆರೋಗ್ಯಕರ ದೇಹಕ್ಕಾಗಿ ಅಷ್ಟೇ ಅಲ್ಲದೆ ಯೋಗವು ಸಮತೋಲನ ಮತ್ತು ಶಿಸ್ತಿನ ಜೀವನದ ದಾರಿದೀಪವಾಗುತ್ತದೆ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ನಾಯಕತ್ವ ಮತ್ತು ನಿರಂತರ ಪ್ರಯತ್ನಗಳಿಂದಾಗಿ ಭಾರತದ ಸಾಂಸ್ಕೃತಿಕ ಪರಂಪರೆಯಾದ ಯೋಗವು ಜಾಗತಿಕ ಮಟ್ಟದಲ್ಲಿ ಚಳುವಳಿಯಾಗಿ ಬದಲಾಗಿದೆ ಎಂದು ರಾಜನಾಥ್ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.


ಗಣ್ಯರಿಂದ ವಿವಿಧೆಡೆ ಯೋಗ: ಅಸ್ಸಾಂನ ಗುವಾಹಟಿಯ ಬ್ರಹ್ಮಪುತ್ರಾ ನದಿ ದಡದಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮುಖ್ಯ ಅತಿಥಿಯಾಗಿದ್ದರು. ಝೂನ್ಸಿ ಕೋಟೆಯ ಬಳಿ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆಸನಗಳನ್ನು ಮಾಡಿ ಧ್ಯಾನಸ್ಥರಾಗಿ ಗಮನಸೆಳೆದರು. ದೇಶದೆಲ್ಲೆಡೆ ಮುಖ್ಯಮಂತ್ರಿಗಳು, ರಾಜ್ಯಪಾಲರು ಮತ್ತು ಸಚಿವರು ಸಾರ್ವಜನಿಕ ಯೋಗಾಭ್ಯಾಸ ನಡೆಸಿದರು.

ಸಶಸ್ತ್ರಪಡೆ, ಸೈನಿಕರಿಂದ ಯೋಗ: ಸೇನಾಪಡೆ, ವಾಯುಪಡೆ ಮತ್ತು ನೌಕಾಪಡೆಯ ವಿವಿಧ ವಿಭಾಗಗಳ ಯೋಧರು ಯೋಗಾಭ್ಯಾಸವನ್ನು ನಡೆಸಿದರು. ಹಿಮಾಲಯದ ತಪ್ಪಲಿನಲ್ಲಾಗಲಿ, ಅಂಡಮಾನ್ ನಿಕೋಬಾರ್ ದ್ವೀಪದಲ್ಲಾಗಲಿ ಅಥವಾ ಐಎನ್ ಎಸ್ ಯುದ್ಧನೌಕೆಗಳಲ್ಲಾಗಲಿ ಯೋಧರು ಯೋಗ ಅಭ್ಯಾಸವನ್ನು ನಡೆಸಿದರು.

ಯೋಗದಿಂದ ಮಾನಸಿಕ ದೃಢತೆ: ದ್ವಿವೇದಿ: ಅಸ್ಸಾಂನ ತೇಜ್‌ಪುರ ಮಿಲಿಟರಿ ಸ್ಟೇಷನ್‌ನಲ್ಲಿ ಯೋಗಾಭ್ಯಾಸದಲ್ಲಿ ಪಾಲ್ಗೊಂಡ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ಯೋಗ ಕೇವಲವೊಂದು ದೈಹಿಕ ಅಭ್ಯಾಸವಲ್ಲ. ಯೋಗದಿಂದ ಮಾನಸಿಕ ಮತ್ತು ಭಾವನಾತ್ಮಕ ದೃಢತೆಯನ್ನು ವಿಸ್ತರಿಸಲು ಸಾಧ್ಯ ಎಂದು ಹೇಳಿದ್ದಾರೆ.


ವಿಶ್ವವಿಖ್ಯಾತ ಪ್ಯಾರಿಸ್‌ನ ಐಫೆಲ್ ಟವರ್ ಮುಂಭಾಗದಲ್ಲಿ ಯೋಗಾಭ್ಯಾಸ.

ಮದರಸಾದಲ್ಲೂ ಯೋಗ!
ಉತ್ತರಪ್ರದೇಶದ ಲಖಿಮ್‌ಪುರ್ ಖೇರಿ ಮತ್ತು ಈಟಾ ಜಿಲ್ಲೆಗಳ ಮದರಸಾಗಳಲ್ಲಿ ನೂರಾರು ಮುಸ್ಲಿಮ್ ವಿದ್ಯಾರ್ಥಿಗಳು ಭಾನುವಾರ ಯೋಗಾಸನಗಳನ್ನು ಮಾಡಿ ಸಾಮರಸ್ಯ ತೋರಿದರು. ಯೋಗ ಅಧ್ಯಾಪಕ ಕುಲದೀಪ್ ವರ್ಮಾ ಮದರಸಾ ವಿದ್ಯಾರ್ಥಿಗಳಿಗೆ ಯೋಗ ಹೇಳಿಕೊಟ್ಟರು.


ಝೂನ್ಸಿಯಲ್ಲಿ ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಯೋಗ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಧ್ಯೇಯದೊಂದಿಗೆ ಭಾನುವಾರ ಒಟ್ಟು 193 ರಾಷ್ಟ್ರಗಳಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಈ ಧ್ಯೇಯವು ಎಲ್ಲಾ ವಯೋಮಾನದ ಜನರ, ವಿಶೇಷವಾಗಿ ಹಿರಿಯ ನಾಗರಿಕರ ದೈಹಿಕ ಕ್ಷಮತೆ, ಮಾನಸಿಕ ಆರೋಗ್ಯ, ಚಲನಶೀಲತೆ, ದೇಹದ ಸಮತೋಲನ ಹಾಗೂ ಜೀವನಮಟ್ಟ ಸುಧಾರಿಸುವ ಯೋಗದ ಮಹತ್ವವನ್ನು ಹೇಳುತ್ತದೆ. ದೇಶದೆಲ್ಲೆಡೆ 6 ಲಕ್ಷಕ್ಕೂ ಅಧಿಕ ಯೋಗ ಸಂಗಮ ಕಾರ್ಯಕ್ರಮಗಳು ಯಶಸ್ವಿಯಾದವು. ವಿವಿಧ ರಾಷ್ಟ್ರಗಳ ಸರ್ಕಾರಗಳು, ರಾಯಭಾರ ಕಚೇರಿಗಳು, ಯೋಗ ಸಂಸ್ಥೆಗಳು, ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಸೇನಾ ಸಂಸ್ಥೆಗಳು, ವಿವಿಧ ಸಮುದಾಯದ ಸಂಘಟನೆಗಳು ಹಾಗೂ ಸಂಘ ಸಂಸ್ಥೆಗಳು ಯೋಗ ದಿನ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಈ ಕಾರ್ಯಕ್ರಮಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಯೋಗಾಸಕ್ತರು ಭಾಗವಹಿಸಿದರು. ಯೋಗವನ್ನು ಆರೋಗ್ಯ ಮತ್ತು ಜೀವನಶೈಲಿಯ ಪ್ರಮುಖ ಸಾಧನವನ್ನಾಗಿ ಅಳವಡಿಸಿಕೊಳ್ಳುವ ಸಂದೇಶ ನೀಡಿದರು.


ಕೋಲ್ಕತಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಜತೆ ಯೋಗನಿರತ ಜನರು.


ಲಡಾಖ್‌ನಲ್ಲಿ ಭಾರತೀಯ ಯೋಧರಿಂದ ಯೋಗಾಭ್ಯಾಸ.


ಸಿಯಾಚೆನ್ ಗ್ಲೇಸಿಯರ್‌ನಲ್ಲಿ ಸೈನಿಕರೊಂದಿಗೆ ಯೋಗ ಪ್ರದರ್ಶನ ನೀಡಿದ ಸೇನೆಯ ಸ್ನಿಫರ್ ಶ್ವಾನ.


ಅಂಡಮಾನ್ ನಿಕೋಬಾರ್ ದ್ವೀಪದಲ್ಲಿ ಯೋಗನಿರತ ಕರಾವಳಿ ಪಡೆ ಸಿಬ್ಬಂದಿ.


ಯೋಗ ದಿನದಂದು ದಿಲ್ಲಿಯ ಸಂಸತ್ ಭವನ ಕಂಡಿದ್ದು ಹೀಗೆ.


ಗುರುಗ್ರಾಮದ ಯೋಗ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ.

193 ರಾಷ್ಟ್ರಗಳಲ್ಲಿ ಯೋಗಾಭ್ಯಾಸ!
ಯುನೈಟೆಡ್ ಅರಬ್ ಎಮಿರೇಟ್ಸ್‌ನ ದುಬೈ ಪೊಲೀಸ್ ಆಫೀಸರ್ಸ್ ಕ್ಲಬ್‌ನಲ್ಲಿ ಭಾನುವಾರ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 1,600ಕ್ಕೂ ಹೆಚ್ಚು ಯೋಗಾಸಕ್ತರು ಪಾಲ್ಗೊಂಡರು. ದುಬೈ ನಿವಾಸಿಗಳು ಬೆಳಗ್ಗೆ 2.30ರ ವೇಳೆಗೆ ಎದ್ದು ಯೋಗ ದಿನ ಆಚರಿಸಿದ್ದಾರೆಂದು ಖಲೀಜ್ ಟೈಮ್ಸ್ ವರದಿ ಮಾಡಿದೆ. ಸೌದಿ ಅರೇಬಿಯಾ, ನೇಪಾಳ, ಪಾಕಿಸ್ತಾನ, ಚೀನಾ, ರಷ್ಯಾ, ಅಮೆರಿಕ, ಕೆನಡಾ, ಜಪಾನ್, ಮ್ಯಾನ್ಮಾರ್ ಸೇರಿದಂತೆ 193 ರಾಷ್ಟ್ರಗಳಲ್ಲಿ ನೂರಾರು ಸಂಖ್ಯೆಯಲ್ಲಿ ಜನರು ಯೋಗಾಭ್ಯಾಸ ನಡೆಸಿದರು.

ಪಾರಂಪರಿಕ ಸ್ಥಳಗಳಲ್ಲಿ ಯೋಗ
ಆಗ್ರಾದ ತಾಜ್ ಮಹಲ್‌ನಿಂದ ತೆಲಂಗಾಣದ ವಾರಂಗಲ್ ಕೋಟೆಯವರೆಗೆ ಎಲ್ಲಾ ಭಾರತೀಯ ಪುರಾತತ್ವ ಇಲಾಖೆ(ಎಎಸ್‌ಐ) ಸ್ಥಳಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಉತ್ತರಪ್ರದೇಶದ ತಾಜ್ ಮಹಲ್ ಮತ್ತು ಫತೇಪುರ್ ಸಿಕ್ರಿ, ರಾಜಸ್ಥಾನದ ದೀಗ್ ಅರಮನೆ, ತೆಲಂಗಾಣದ ವಾರಂಗಲ್ ಕೋಟೆ, ಕರ್ನಾಟಕದ ಬೀದರ್ ಕೋಟೆ, ಕೇರಳದ ಬೇಕಲ ಕೋಟೆ ಸೇರಿ ದೇಶದೆಲ್ಲೆಡೆ ಒಟ್ಟು 3,686 ಪಾರಂಪರಿಕ ಸ್ಥಳಗಳಲ್ಲಿ ಯೋಗ ದಿನ ಆಯೋಜಿಸಲಾಯಿತು.

ಕಿರುಸುದ್ದಿ

ಆನೆಗಳೊಂದಿಗೆ ಅರಣ್ಯ ಸಿಬ್ಬಂದಿ ಯೋಗಾಭ್ಯಾಸ



ಕೋಲ್ಕತ್ತಾ: ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಪಶ್ಚಿಮ ಬಂಗಾಳದ ಜಲ್ದಾಪುರ ನ್ಯಾಷನಲ್ ಪಾರ್ಕ್‌ನಲ್ಲಿ ಅರಣ್ಯ ಸಿಬ್ಬಂದಿ ನದಿ ತೀರದಲ್ಲಿ ಆನೆಗಳ ಜತೆ ಯೋಗಾಭ್ಯಾಸ ನಡೆಸುವ ಮೂಲಕ ದೇಶದ ಗಮನಸೆಳೆದಿದ್ದಾರೆ. ದಟ್ಟ ಅರಣ್ಯ ಪ್ರದೇಶದಲ್ಲಿ ಆನೆಗಳೊಂದಿಗೆ ಯೋಗಾಸನ ಮಾಡಿ ಅರಣ್ಯ ಸಿಬ್ಬಂದಿ, ಮಾನವ ಮತ್ತು ಪ್ರಕೃತಿಯ ನಡುವಿನ ಬಾಂಧವ್ಯದ ಸಂದೇಶ ನೀಡಿದರು.

ಬ್ರಿಟನ್ ಪ್ರಧಾನಿ ಸ್ಟಾರ್ಮರ್ ರಾಜೀನಾಮೆ ಸಾಧ್ಯತೆ: ಟ್ರಂಪ್

ವಾಷಿಂಗ್ಟನ್: ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ವಲಸೆ ಹಾಗೂ ಇಂಧನ ನೀತಿಗಳಲ್ಲಿ ವಿಫಲರಾಗಿರುವ ಕಾರಣ ಶೀಘ್ರದಲ್ಲೇ ರಾಜೀನಾಮೆ ನೀಡಲಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣದಲ್ಲಿ ಟ್ರಂಪ್, ಸ್ಟಾರ್ಮರ್ ವಲಸೆ ಮತ್ತು ಇಂಧನ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಉತ್ತರ ಸಮುದ್ರದ ತೈಲ ಉತ್ಪಾದನೆಗೆ ಅವಕಾಶ ನೀಡಬೇಕಿತ್ತು ಎಂದು ಟೀಕಿಸಿದ್ದಾರೆ. ಬ್ರಿಟಿಷ್ ಮಾಧ್ಯಮ ವರದಿಗಳ ಪ್ರಕಾರ, ಸ್ಟಾರ್ಮರ್ ಸೋಮವಾರವೇ ರಾಜೀನಾಮೆ ಕುರಿತು ಘೋಷಣೆ ಮಾಡುವ ಸಾಧ್ಯತೆ ಇದೆ. ಆದರೆ, ಸರ್ಕಾರದ ಮೂಲಗಳು ಈ ವರದಿಗಳನ್ನು ತಳ್ಳಿಹಾಕಿದ್ದು, ಸ್ಟಾರ್ಮರ್ ಆಡಳಿತದ ಕೆಲಸಗಳ ಮೇಲೆಯೇ ಗಮನಹರಿಸಿದ್ದಾರೆ ಎಂದು ತಿಳಿಸಿವೆ. ಇತ್ತೀಚೆಗೆ ಲೇಬರ್ ಪಕ್ಷದೊಳಗಿನ ಅಸಮಾಧಾನ ಹೆಚ್ಚಾಗಿದ್ದು, 100ಕ್ಕೂ ಹೆಚ್ಚು ಸಂಸದರು ನಾಯಕತ್ವ ಬದಲಾವಣೆಗೆ ಒತ್ತಾಯಿಸಿದ್ದಾರೆ ಎನ್ನಲಾಗಿದೆ.

ವನ್ಯಜೀವಿ ಕಳ್ಳಸಾಗಣೆ ಪತ್ತೆ: ಬಾಂಗ್ಲಾ ಪ್ರಜೆ ಸೇರಿ 9 ಸೆರೆ

ಗುವಾಹಟಿ: ಅಸ್ಸಾಂನಲ್ಲಿ ವನ್ಯಜೀವಿಗಳ ಕಳ್ಳಸಾಗಣೆಕೆಯ ಅಂತಾರಾಷ್ಟ್ರೀಯ ಜಾಲವೊಂದನ್ನು ಭೇದಿಸಿದ ಭದ್ರತಾ ಸಿಬ್ಬಂದಿ, ಒಬ್ಬ ಬಾಂಗ್ಲಾದೇಶಿ ಪ್ರಜೆ ಸಹಿತ 9 ಮಂದಿಯನ್ನು ಸೆರೆಹಿಡಿದಿದ್ದಾರೆ. ಗೋಲ್ಡನ್ ಲಂಗೂರ್ ಮಂಗಗಳನ್ನು ಸೆರೆಹಿಡಿದು ಕಳ್ಳಸಾಗಣೆ ಮಾಡುತ್ತಿದ್ದ 9 ಮಂದಿಯ ತಂಡವೊಂದನ್ನು ಪೊಲೀಸ್ ಮತ್ತು ಅರಣ್ಯ ಸಿಬ್ಬಂದಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಸಾಕ್ಷಿಸಮೇತ ಸಿಕ್ಕಿಬಿದ್ದಿದ್ದಾರೆ. ಇವರ ಬಳಿಯಿದ್ದ 8 ಗೋಲ್ಡನ್ ಲಂಗೂರ್‌ಗಳನ್ನು ವಶಪಡಿಸಿದ್ದು, ಒಂದು ಮೃತಪಟ್ಟಿತ್ತು.

ಯುಎಇ, ರಷ್ಯಾದಿಂದ ತೈಲ ಆಮದು ಹೆಚ್ಚಳ

ಹೊಸದಿಲ್ಲಿ: ಹಾರ್ಮುಜ್ ಬಿಕ್ಕಟ್ಟು ಮತ್ತು ಗಲ್ಫ್ ರಾಷ್ಟ್ರಗಳ ಪೂರೈಕೆ ಸಂಪೂರ್ಣ ಸಹಜ ಸ್ಥಿತಿಗೆ ಬರುವ ಮುನ್ನವೇ ಭಾರತದ ತೈಲ ಶುದ್ಧೀಕರಣ ಸಂಸ್ಥೆಗಳು, ರಷ್ಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನಿಂದ(ಯುಎಇ) ಕಚ್ಚಾ ತೈಲ ಆಮದನ್ನು ಹೆಚ್ಚಿಸಿಕೊಂಡಿವೆ. ಭಾರತ ಜೂ.19ರವರೆಗೆ ರಷ್ಯಾದಿಂದ ದಿನಂಪ್ರತಿ ಸರಾಸರಿ 2.66 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದ್ದು, ಮೇ ತಿಂಗಳಿನ 1.91 ಮಿಲಿಯನ್ ಬ್ಯಾರೆಲ್‌ಗೆ ಹೋಲಿಸಿದರೆ ಇದು ಗಣನೀಯ ಹೆಚ್ಚಳವೆನಿಸಿದೆ. ಈ ಮೂಲಕ ಮಾಸ್ಕೋ ಭಾರತದ ಅತಿ ದೊಡ್ಡ ತೈಲ ಪೂರೈಕೆದಾರ ರಾಷ್ಟ್ರವಾಗಿ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದೆ. ಇನ್ನು ಯುಎಇನಿಂದ ಆಮದು ಪ್ರಮಾಣ ದಿನಕ್ಕೆ 6,36,000 ಬ್ಯಾರೆಲ್‌ಗಳಷ್ಟಿದ್ದು, ಇದು ಮೇ ತಿಂಗಳಿನ ದಾಖಲೆಯ 6,44,000 ಬ್ಯಾರೆಲ್‌ಗಿಂತ ಸ್ವಲ್ಪ ಕಡಿಮೆಯಾಗಿದೆ. ವೆನೆಜುವೆಲಾ ದಿನಕ್ಕೆ 2,09,000 ಬ್ಯಾರೆಲ್ ಪೂರೈಕೆಯೊಂದಿಗೆ ಭಾರತದ ನಾಲ್ಕನೇ ದೊಡ್ಡ ಕಚ್ಚಾ ತೈಲ ಪೂರೈಕೆದಾರ ರಾಷ್ಟ್ರವಾಗಿ ಹೊರಹೊಮ್ಮಿದ್ದು, ಸೌದಿ ಅರೇಬಿಯಾ(384,000 ಬ್ಯಾರೆಲ್) ಮೂರನೇ ಸ್ಥಾನದಲ್ಲಿದೆ. ಇದೇ ವೇಳೆ, ಅಮೆರಿಕದಿಂದ ಆಮದಾಗುತ್ತಿದ್ದ ತೈಲ ಪ್ರಮಾಣ ಮೇ ತಿಂಗಳಿನ 2,52,000 ಬ್ಯಾರೆಲ್‌ನಿಂದ ಜೂನ್‌ನಲ್ಲಿ 91,000 ಬ್ಯಾರೆಲ್‌ಗೆ ತೀವ್ರವಾಗಿ ಕುಸಿದಿದೆ.

ಅಮೆರಿಕ ಮತ್ತು ಇಸ್ರೇಲ್ ನಡುವೆ ಕದನ ವಿರಾಮ ಒಪ್ಪಂದದ ಬಳಿಕ, ತೈಲ ಹೊತ್ತ ಭಾರತದ 3 ಟ್ಯಾಂಕರ್‌ಗಳು ಮತ್ತು ಎಲ್‌ಎನ್‌ಜಿ ನೌಕೆ ಸಂಚಾರ ಪುನಾರಂಭಿಸಿವೆ.

ಅನಿಲ ಸೋರಿಕೆ: 7 ಬಲಿ, 67 ಜನರ ಸ್ಥಿತಿ ಗಂಭೀರ

ತಿರುವಳ್ಳೂರು: ತಮಿಳುನಾಡಿನ ತಿರುವಳ್ಳೂರಿನ ಸೀಫುಡ್ ರಫ್ತು ಕಾರ್ಖಾನೆಯಲ್ಲಿ ಸಂಭವಿಸಿದ ಅಮೋನಿಯಾ ಅನಿಲ ಸೋರಿಕೆಯಿಂದಾಗಿ 7 ಮಂದಿ ಸಾವನ್ನಪ್ಪಿದ್ದು, 67ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರವಾಗಿದೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಈ ದುರಂತ, ಸೇಂಟ್ ಪೀಟರ್ ಆಂಡ್ ಪಾಲ್ ಸೀಫುಡ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಂಭವಿಸಿದೆ. ಕಣ್ಣೈವೇರ್ ಗ್ರಾಮದಲ್ಲಿರುವ ಈ ಖಾಸಗಿ ಸಂಸ್ಕರಣಾ ಮತ್ತು ರಫ್ತು ಕಂಪನಿಯಲ್ಲಿ ಅನಿಲ ಸೋರಿಕೆಯಾಗಿದ್ದು, ಸಿಬ್ಬಂದಿ ಕೆಲವೇ ನಿಮಿಷಗಳಲ್ಲಿ ಒಬ್ಬರ ಹಿಂದೆ ಒಬ್ಬರಂತೆ ಕುಸಿದು ಬಿದ್ದಿದ್ದಾರೆ. ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ತನಿಖೆಗೆ ಆದೇಶಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆ: ಅರಕ್ಕೋಣಂನಲ್ಲಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ(ಎನ್‌ಡಿಆರ್‌ಎಫ್) 4ನೇ ಬೆಟಾಲಿಯನ್, ರಾಸಾಯನಿಕ, ಜೈವಿಕ, ವಿಕಿರಣ ಮತ್ತು ಪರಮಾಣು(ಸಿಬಿಆರ್‌ಎನ್) ತುರ್ತು ಸ್ಪಂದನಾ ತಂಡವನ್ನು ನಿಯೋಜಿಸಿದೆ. ಚೆನ್ನೈನಿಂದ ಬಂದ 30 ಎನ್‌ಡಿಆರ್‌ಎಫ್ ಸಿಬ್ಬಂದಿಯನ್ನೊಳಗೊಂಡ ತಂಡ ಸ್ಥಳಕ್ಕೆ ಧಾವಿಸಿದೆ. ಸೀನಿಯರ್ ಕಮಾಂಡೆಂಟ್ ಅಖಿಲೇಶ್ ಕುಮಾರ್ ನಿರ್ದೇಶನದ ಮೇರೆಗೆ ತಂಡ ಅಪಾಯಕಾರಿ ವಲಯವನ್ನು ಪ್ರತ್ಯೇಕಿಸಿ, ಬಾಧಿತ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದೆ. ರಕ್ಷಣಾ ಸಿಬ್ಬಂದಿ ಅನಿಲ ಸೋರಿಕೆಯ ತೀವ್ರತೆಯನ್ನು ಪರಿಶೀಲಿಸುತ್ತಿದ್ದು, ಹೆಚ್ಚಿನ ಅಪಾಯ ತಡೆಯಲು ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸಿದ್ದಾರೆ. ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ತೀವ್ರ ಆತಂಕ ವ್ಯಕ್ತಪಡಿಸಿದ್ದು, ಗಂಭೀರ ಸ್ಥಿತಿಯಲ್ಲಿರುವವರು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸಿದ್ದಾರೆ.

ಇರಾನ್-ಅಮೆರಿಕ ಶಾಂತಿ ಮಾತುಕತೆ ಸ್ವಿಸ್‌ನಲ್ಲಿ ಶುರು

ಜ್ಯೂರಿಚ್: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ನಿಟ್ಟಿನಲ್ಲಿ, ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಭಾನುವಾರ ಸ್ವಿಜರ್ಲೆಂಡ್‌ನ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಶಾಂತಿ ಮಾತುಕತೆ ಆರಂಭಿಸಿದ್ದಾರೆ. ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಖತಾರ್‌ನ ಹಿರಿಯ ನಾಯಕರು ಮಧ್ಯವರ್ತಿಗಳಾಗಿ ಪಾಲ್ಗೊಂಡಿದ್ದಾರೆ.

ಕಳೆದ ವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇರಾನ್ ಅಧ್ಯಕ್ಷ ಮಸೌದ್ ಪೆಝೆಶ್ಕಿಯನ್ ಸಹಿ ಹಾಕಿರುವ, ಮಧ್ಯಂತರ ಶಾಂತಿ ಒಪ್ಪಂದದಲ್ಲಿರುವ ಪ್ರಮುಖ ನಿಯಮಾವಳಿಗಳ ಜಾರಿಯನ್ನು ಕೇಂದ್ರೀಕರಿಸಿ ಮಾತುಕತೆ ನಡೆಯಲಿದೆ. ಒಪ್ಪಂದಕ್ಕೆ ಶರೀಫ್ ಖಾತ್ರಿದಾರನಾಗಿ ಸಹಿ ಹಾಕಿದ್ದರು. ಪ.ಏಷ್ಯಾದಲ್ಲಿ ಶಾಂತಿ ಮರುಸ್ಥಾಪನೆ ನಿಟ್ಟಿನಲ್ಲಿ ನಡೆಯಬೇಕಿರುವ ಮಾತುಕತೆಯ ಆರಂಭಕ್ಕೆ ಶಾಂತಿ ಒಪ್ಪಂದ ಹಾದಿ ತೆರೆದಿದೆ. ಮುಖ್ಯವಾಗಿ ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮ, ಇರಾನ್ ಮೇಲೆ ವಿಧಿಸಿರುವ ನಿರ್ಬಂಧಗಳು ಮತ್ತು ಲೆಬನಾನ್ ಮೇಲೆ ಇಸ್ರೇಲ್ ದಾಳಿ ಇತ್ಯಾದಿ ವಿಚಾರಗಳು ಮಾತುಕತೆಯಲ್ಲಿ ಪ್ರಧಾನವಾಗಿ ಪ್ರಸ್ತಾಪವಾಗಲಿವೆ.

ಕಳೆದ ಹತ್ತು ವಾರಗಳಲ್ಲಿ ಮೊದಲ ಬಾರಿ ಅಮೆರಿಕ ಮತ್ತು ಇರಾನ್‌ನ ಹಿರಿಯ ಅಧಿಕಾರಿಗಳು ಭಾನುವಾರ ಒಂದೇ ಕೊಠಡಿಯಲ್ಲಿ ನೇರ ಮಾತುಕತೆಗಳಿಗೆ ಮುಂದಾಗಿದ್ದಾರೆ. ಏಪ್ರಿಲ್‌ನಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆ ಮುರಿದುಬಿದ್ದಿತ್ತು . ಮಾತುಕತೆಗೆ ಸಂಬಂಧಿತ ತಾಂತ್ರಿಕ ವಿಚಾರಗಳ ಕುರಿತು ಶುಕ್ರವಾರ ಮಾತುಕತೆ ನಡೆಯಬೇಕಿತ್ತು. ಆದರೆ ಇರಾನ್ ಬೆಂಬಲಿತ ಹಿಜ್ಬುಲ್ಲಾ ಹಾಗೂ ಇಸ್ರೇಲ್ ಮಧ್ಯೆ ಮತ್ತೆ ಗುಂಡಿನ ದಾಳಿ ಶುರುವಾದ್ದರಿಂದ ಮಾತುಕತೆ ವಿಳಂಬವಾಗಿದೆ.

ಉದ್ಧವ್ ಬಣದ 6 ಸಂಸದರು ಶಿಂಧೆ ಬಣಕ್ಕೆ ಸೇರ್ಪಡೆ?

ಪುಣೆ: ಉದ್ಧವ್ ಠಾಕ್ರೆ ನೇತೃತ್ವದ ಶಿವ ಸೇನೆ(ಯುಬಿಟಿ)ಯ ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಹಾಗೂ ನಾಗೇಶ್ ಪಾಟೀಲ್ ಆಷ್ಟಿಕರ್ ಸೇರಿ 6 ಸಂಸದರು ಏಕನಾಥ್ ಶಿಂಧೆ ನೇತೃತ್ವದ ಬಣ ಸೇರುವುದನ್ನು ದೃಢೀಕರಿಸಿದ್ದಾರೆ. ಭಾನುವಾರ ತಮ್ಮ ಬೆಂಬಲಿಗರೊಂದಿಗೆ ನಿಂಬಾಳ್ಕರ್ ಸಭೆ ಸೇರಿ ಚರ್ಚಿಸಿದ್ದಾರೆ. ಸಭೆಯಲ್ಲಿ ನಿಂಬಾಳ್ಕರ್ ತಮ್ಮ ಬೆಂಬಲಿಗರೊಂದಿಗೆ ಚರ್ಚೆ ನಡೆಸಿದ್ದು, ನಿಂಬಾಳ್ಕರ್ ಅವರು ಶಿಂಧೆ ಅವರೊಂದಿಗೆ ಕೈಜೋಡಿಸಬೇಕು ಎಂದು ನಿಂಬಾಳ್ಕರ್ ಬೆಂಬಲಿಗರೊಬ್ಬರು ಹೇಳಿದ್ದಾರೆ. ಪುಣೆಯ ಧಾರಾಶಿವ್‌ನಲ್ಲಿನ ತಮ್ಮ ನಿವಾಸಕ್ಕೆ ವೈ ಪ್ಲಸ್ ಭದ್ರತೆಯೊಂದಿಗೆ ಆಗಮಿಸಿದ ನಿಂಬಾಳ್ಕರ್, ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಬೆಂಬಲಿಗರನ್ನು ಭೇಟಿಯಾಗಲ್ಲ. ನನ್ನ ಮನೆಯಲ್ಲೇ ಬೆಂಬಲಿಗರನ್ನು ಕರೆಸಿಕೊಳ್ಳುತ್ತೇನೆ. ದನ ಮೇಯಿಸುವವರ ಬಳಿಯೂ ನನ್ನ ದೂರವಾಣಿ ಸಂಖ್ಯೆ ಇದೆಯೆಂದು ಹೇಳಿ ತಳಮಟ್ಟದವರೆಗೂ ಬೆಂಬಲಿಗರಿದ್ದಾರೆ ಎಂಬ ಸಂದೇಶ ನೀಡಿದ್ದಾರೆ.

ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗು ಸೇರ್ಪಡೆಗೊಳಿಸಿದ ಮೋದಿ
ಕಾರ್ಯತಂತ್ರಕ್ಕೆ ಸಮುದ್ರ ಸಾಮರ್ಥ್ಯ ನಿರ್ಣಾಯಕ

ಕೋಲ್ಕತ್ತಾ: ಬಲಿಷ್ಠ ಸಮುದ್ರ ಸಾಮರ್ಥ್ಯ, ದೇಶದ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವನ್ನು ನಿರ್ಧರಿಸುವ ಪ್ರಮುಖ ಅಂಶ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಶ್ಯಾಮ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗುಗಳನ್ನು ಸೇರ್ಪಡೆಗೊಳಿಸಿದ ಬಳಿಕ ಮಾತನಾಡಿದ ಅವರು, ಭಾರತ ಈ ವಾಸ್ತವವನ್ನು ಅರಿತು ಅದಕ್ಕೆ ತಕ್ಕ ಸಿದ್ಧತೆ ನಡೆಸುತ್ತಿದೆ ಎಂದರು.

ಮೋದಿ ಸ್ವದೇಶಿ ನಿರ್ಮಿತ ಸ್ಟೆಲ್ತ್ ಫ್ರಿಗೇಟ್ ದುನಗಿರಿ, ಸರ್ವೇ ಹಡಗು ಸಂಶೋಧಕ್ ಹಾಗೂ ಜಲಾಂತರ್ಗಾಮಿ ವಿರೋಧಿ ಯುದ್ಧನೌಕೆ ಅಗ್ರಯ್ ಅನ್ನು ನೌಕಾಪಡೆಗೆ ಸೇರ್ಪಡೆಗೊಳಿಸಿದರು. ಈ ವೇದಿಕೆಗಳು ಸಮುದ್ರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೇ ಮತ್ತು ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಲ್ಲಿ ಪ್ರಮುಖ ಸಾಮರ್ಥ್ಯ ಹೊಂದಿವೆ ಎಂದು ಹೇಳಿದರು.

ಯಾವುದೇ ರಾಷ್ಟ್ರ ಸಮುದ್ರ ಸಾಮರ್ಥ್ಯವಿಲ್ಲದೆ ದೊಡ್ಡ ಶಕ್ತಿಯಾಗಲು ಸಾಧ್ಯವಿಲ್ಲ. ಅಭಿವೃದ್ಧಿ, ಭದ್ರತೆ ಮತ್ತು ಸಮೃದ್ಧಿ ಸಮುದ್ರಗಳಿಗೆ ಸಂಬಂಧಿಸಿವೆ ಎಂದು ಮೋದಿ ಹೇಳಿದರು. ಭಾರತ ರಕ್ಷಣಾ ಕ್ಷೇತ್ರದಲ್ಲಿ ಕೇವಲ ಖರೀದಿದಾರ ರಾಷ್ಟ್ರವಾಗಿ ಉಳಿಯದೆ ನಿರ್ಮಾಣ ರಾಷ್ಟ್ರವಾಗುವತ್ತ ಸಾಗುತ್ತಿದೆ ಎಂದರು.



ಆತ್ಮನಿರ್ಭರತೆಗೆ ಒತ್ತು: 2022ರಲ್ಲಿ ಐಎನ್‌ಎಸ್ ವಿಕ್ರಾಂತ್ ಸೇರ್ಪಡೆಯನ್ನು ಉಲ್ಲೇಖಿಸಿದ ಮೋದಿ, ಐಎನ್‌ಎಸ್ ಅಗ್ರಯ್, ಐಎನ್‌ಎಸ್ ದುನಗಿರಿ ಮತ್ತು ಐಎನ್‌ಎಸ್ ಸಂಶೋಧಕ್ ಸೇರ್ಪಡೆ, ಆತ್ಮನಿರ್ಭರ ಭಾರತದ ಪಯಣಕ್ಕೆ ವೇಗ ನೀಡಿದೆ ಎಂದರು. ಕಳೆದ ಕೆಲವು ವರ್ಷಗಳಲ್ಲಿ 40ಕ್ಕೂ ಹೆಚ್ಚು ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ಸೇರ್ಪಡೆಗೊಳಿಸಲಾಗಿದ್ದು, 45 ದೊಡ್ಡ ನೌಕಾ ವೇದಿಕೆಗಳ ನಿರ್ಮಾಣ ನಡೆಯುತ್ತಿದೆ ಎಂದು ಹೇಳಿದರು.

ಈ ಹಡಗುಗಳನ್ನು ಭಾರತೀಯ ನೌಕಾಪಡೆಯ ವಾರ್‌ಶಿಪ್ ಡಿಸೈನ್ ಬ್ಯೂರೋ ವಿನ್ಯಾಸಗೊಳಿಸಿದ್ದು, ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಆಂಡ್ ಎಂಜಿನಿಯರ್ಸ್ ಲಿಮಿಟೆಡ್ ನಿರ್ಮಿಸಿದೆ. ಇವುಗಳಲ್ಲಿ ಶೇ.75ಕ್ಕಿಂತ ಹೆಚ್ಚು ಸ್ವದೇಶಿ ಅಂಶಗಳಿದ್ದು, 200ಕ್ಕೂ ಹೆಚ್ಚು ಎಂಎಸ್‌ಎಂಇ ಗಳು ಪಾಲ್ಗೊಂಡಿವೆ.

ಸಮುದ್ರ ವಲಯ ಲಕ್ಷಾಂತರ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದು ಮೋದಿ ಹೇಳಿದರು. ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಳ ರಾಜ್ಯಪಾಲ ಆರ್.ಎನ್. ರವಿ, ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹಾಗೂ ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಉಪಸ್ಥಿತರಿದ್ದರು.

ಮೋದಿಗೆ ಶ್ಲಾಘನೆ: ಕೈ ಅಸಹನೆಗೆ ಶಶಿ ತರೂರ್ ಖಡಕ್ ತಿರುಗೇಟು

ಹೊಸದಿಲ್ಲಿ: ಭಾರತೀಯರ ಜೀವದ ಬಗೆಗೆ ಇರುವ ಕಾಳಜಿ ನಮ್ಮನ್ನು ಒಗ್ಗೂಡಿಸಬೇಕೇ ವಿನಾ ವಿಭಜಿಸಬಾರದು ಎಂಬುದಾಗಿ ಹೇಳುವ ಮೂಲಕ ಕಾಂಗ್ರೆಸ್ ಮುತ್ಸದ್ದಿ ಶಶಿ ತರೂರ್, ಪ್ರಧಾನಿ ನರೇಂದ್ರ ಮೋದಿಯವರನ್ನು ಟೀಕಿಸಿದ ಕಾಂಗ್ರೆಸ್ ನಾಯಕ ಪವನ್ ಖೇರಾಗೆ ಮಾರ್ಮಿಕವಾಗಿ ಬುದ್ಧಿ ಹೇಳಿದ್ದಾರೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಭಾರತೀಯ ನಾವಿಕರ ರಕ್ಷಣೆಗೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿಯವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೆದುರೇ ಖಡಕ್ ನಿಲುವು ವ್ಯಕ್ತಪಡಿಸಿದ್ದನ್ನು ಶಶಿ ತರೂರ್ ಅವರು ಶ್ಲಾಘಿಸಿದ್ದರು. ಆದರೆ, ಮೋದಿ ವಿರುದ್ಧ ನಿರಂತರ ಟೀಕಿಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿಲುವಿಗೆ ವ್ಯತಿರಿಕ್ತ ನಿಲುವು ತಾಳಿದ ಶಶಿ ತರೂರ್ ವಿರುದ್ಧ ಕೆಂಡಕಾರಿದ್ದ ಕಾಂಗ್ರೆಸ್ ವಕ್ತಾರ ಪವನ್ ಖೇರಾ ಅವರು , 'ಪ್ರಧಾನಿ ಹೇಳದೇ ಇದ್ದ ಮಾತನ್ನೂ ಇವರು ಕೇಳಬಲ್ಲರು.'ಮಹಾಮಾನವ ಮೋದಿ' ಭಕ್ತರಿಗೆ ಅವರು ಎಷ್ಟು ಕಡಿಮೆ ಮಾತನಾಡುತ್ತಾರೋ, ಅಷ್ಟೇ ಹೆಚ್ಚು ಕೇಳಿಸುತ್ತದೆ ಎಂದು ವ್ಯಂಗ್ಯವಾಡಿ ಅಸಹನೆ ತೋರಿದ್ದರು.

ಆದರೆ, ಭಾರತೀಯ ನಾಗರಿಕ ನಾವಿಕರ ರಕ್ಷಣೆಗೆ ಸಂಬಂಧಿಸಿದ ಹೇಳಿಕೆಯನ್ನು ಪಕ್ಷಪಾತದ ರಾಜಕೀಯ ವಿವಾದವನ್ನಾಗಿ ಮಾಡಿರುವುದು ಆಶ್ಚರ್ಯಕರ ಎನ್ನುವ ಮೂಲಕ ರಾಷ್ಟ್ರೀಯ ಹಿತಾಸಕ್ತಿಯ ವಿಷಯದಲ್ಲಿ ರಾಜಕೀಯ ಮಾಡುವ ಕಾಂಗ್ರೆಸ್ ನಿಲುವಿಗೆ ಶಶಿ ತರೂರ್ ಮತ್ತೊಮ್ಮೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮೂವರು ಭಾರತೀಯರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ನನ್ನ ಹೇಳಿಕೆಗಳು ನಮ್ಮ ನಾಗರಿಕರ ಸುರಕ್ಷತೆ ಹಾಗೂ ನಾಗರಿಕ ನಾವಿಕರು ಎಂದಿಗೂ ಯುದ್ಧದ ಗುರಿಯಾಗಬಾರದು ಎಂಬ ತತ್ವಕ್ಕೆ ಸಂಬಂಧಿಸಿದ್ದಾಗಿತ್ತು ಎಂದು ಸರಣಿ ಪೋಸ್ಟ್‌ಗಳ ಮೂಲಕ ಸ್ಪಷ್ಟಪಡಿಸಿದರು.

ಕೆಲವರು ಈ ವಿಷಯವನ್ನು ಪರಿಹರಿಸುವ ಬದಲು ರಾಜಕೀಯ ಅಂಕ ಗಳಿಸಲು ಹೆಚ್ಚು ಆಸಕ್ತಿ ತೋರಿಸುತ್ತಿದ್ದರೆ, ಅದು ಅವರ ಬಗ್ಗೆ ಹೆಚ್ಚು ಹೇಳುತ್ತದೆ; ನನ್ನ ಬಗ್ಗೆ ಅಲ್ಲ ಎಂದು ಅವರು ಖೇರಾಗೆ ಕುಟುಕಿದ್ದಾರೆ.

ಕಿರುಸುದ್ದಿ

ಜೂ.25ರಂದು ಪಿ.ಜಿ.ಆರ್. ಸಿಂಧ್ಯಾ ಬನವಾಸಿಗೆ

• **ಬದಿಯಡ್ಕ:** ಕರ್ನಾಟಕ ರಾಜ್ಯ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮುಖ್ಯ ಆಯುಕ್ತ, ಮಾಜಿ ಸಚಿವ, ಸಮಾಜಸುಧಾರಕ ಪಿ.ಜಿ.ಆರ್.ಸಿಂಧ್ಯಾ ಅವರು ಜೂ.25ರಂದು ಕಾಸರಗೋಡಿನ ನೀರ್ಚಾಲು ಸಮೀಪದ ಬನವಾಸಿ ಪ್ರಕೃತಿಧಾಮಕ್ಕೆ ಭೇಟಿ ನೀಡಲಿದ್ದಾರೆ. ಈ ಪ್ರಯುಕ್ತ ಅದೇ ದಿನ ಅಪರಾಹ್ನ 2ರಿಂದ ಸಿಂಧ್ಯಾ ಸಂಧ್ಯೆ ಎಂಬ ವಿಶೇಷ ಸಂವಾದ ಕಾರ್ಯಕ್ರಮವನ್ನು ಬನವಾಸಿಯಲ್ಲಿ ಏರ್ಪಡಿಸಲಾಗಿದೆ. ಕರ್ನಾಟಕ ರಾಜ್ಯದ ಹಿರಿಯ ರಾಜಕಾರಣಿಯಾಗಿರುವ ಸಿಂಧ್ಯಾ ಅವರು ರಾಜ್ಯದ ಗೃಹ, ಸಾರಿಗೆ ಹಾಗೂ ಬೃಹತ್ ಕೈಗಾರಿಕಾ ಸಚಿವರಾಗಿ ದಕ್ಷ ಆಡಳಿತ ನೀಡಿದ ಅನುಭವ ಹೊಂದಿದವರು. ಪರಿಸರ ಪ್ರೇಮಿಯಾಗಿರುವ ಅವರು ಸಮಾಜ ಸುಧಾರಣಾ ಕಾರ್ಯಗಳಲ್ಲೂ ಸದಾ ಮುಂಚೂಣಿಯಲ್ಲಿದ್ದಾರೆ. ಬನವಾಸಿ ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು, ಕಾಸರಗೋಡಿನ ಕನ್ನಡಿಗರು ಮತ್ತು ಆಸಕ್ತರು ಈ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ಬನವಾಸಿಯ ಡಾ.ರತ್ನಾಕರ ಮಲ್ಲಮೂಲೆ ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.



ಸಿಎ ಅಂತಿಮ ಪರೀಕ್ಷೆಯಲ್ಲಿ ಪ್ರಜ್ವಲ್ ಉತ್ತೀರ್ಣ

• **ಮಂಗಳೂರು:** ದಿ.ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಇವರು ಕಳೆದ ಮೇ ತಿಂಗಳಿನಲ್ಲಿ ನಡೆಸಿದ ಸಿಎ ಅಂತಿಮ ಪರೀಕ್ಷೆಯಲ್ಲಿ ಪಡುಪೆರಾರ್ ಆಕ್ಷಿಯ ಪ್ರಜ್ವಲ್ ಉತ್ತೀರ್ಣರಾಗಿದ್ದಾರೆ. ಇವರಿಗೆ ಸಿಎ ಎಸ್.ಎಸ್.ನಾಯಕ್ ಹಾಗೂ ಸಿಎ ಯಶಸ್ವಿನಿ ಕೆ.ಅಮೀನ್ ಮಾರ್ಗದರ್ಶನ ನೀಡಿದ್ದಾರೆ. ಇವರು ನೀರುಮಾರ್ಗ ಸಮೀಪದ ಪಡು ಪೋಸ್ಟ್ ಆಕ್ಷಿಯ ರಾಮಪೂಜಾರಿ –ಉಷಾ ದಂಪತಿ ಪುತ್ರ.



ಸಿಎ ಅಂತಿಮ ಪರೀಕ್ಷೆಯಲ್ಲಿ ಜಿ.ಗಣೇಶ ಪೈ ಉತ್ತೀರ್ಣ

• **ಕುಂದಾಪುರ:** ದ ಇನ್ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ ಆಫ್ ಇಂಡಿಯಾ ಇವರು ಕಳೆದ ಮೇ ತಿಂಗಳಿನಲ್ಲಿ ನಡೆಸಿದ ಸಿಎ ಅಂತಿಮ ಪರೀಕ್ಷೆಯಲ್ಲಿ ಗುಜ್ಜಾಡಿ ಗ್ರಾಮದ ಮಂಕಿಯ ಜಿ.ಗಣೇಶ ಪೈ ಅವರು ಉತ್ತೀರ್ಣರಾಗಿದ್ದಾರೆ. ಇವರು ಗುಜ್ಜಾಡಿಯ ಜಿ. ದಾಮೋದರ ಪೈ ಹಾಗೂ ದಿವ್ಯ ಪೈ ದಂಪತಿ ಪುತ್ರ. ಆರ್ಟಿಕಲ್ ಶಿಪ್‌ನ್ನು ಕುಂದಾಪುರದ ಶಾನುಭೋಗ್ ಹೆಗ್ಡೆ ಮತ್ತು ಅಸೋಸಿಯೇಟ್ಸ್ ಸಂಸ್ಥೆಯಲ್ಲಿ ಪೂರೈಸಿದ್ದಾರೆ. ಇವರು ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಆಂಗ್ಲ ಮಾಧ್ಯಮ ಶಾಲೆ ಮತ್ತು ಪದವಿ ಪೂರ್ವ ಹಾಗೂ ಪದವಿ ಶಿಕ್ಷಣವನ್ನು ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಪಡೆದಿದ್ದಾರೆ.



ಬಸ್ಸಿಗೆ ಆಟೋ ಡಿಕ್ಕಿ: ಚಾಲಕನಿಗೆ ಗಾಯ

• **ಉಡುಪಿ:** ಕಾರ್ಕಳ ತಾಲೂಕಿನ ಮಿಯಾರು ಗ್ರಾಮದ ಜೋಡುಕಟ್ಟೆ ಬಳಿ ಆಟೋರಿಕ್ಷಾವೊಂದು ಬಸ್ಸಿಗೆ ಡಿಕ್ಕಿ ಹೊಡೆದ ಪರಿಣಾಮ ರಿಕ್ಷಾ ಚಾಲಕ ಚಂದ್ರಕಾಂತ್ ಶೆಣೈ ಗಾಯಗೊಂಡಿದ್ದಾರೆ. ಜೂನ್ 19ರಂದು ಬೆಳಿಗ್ಗೆ ಈ ಅಪಘಾತ ಸಂಭವಿಸಿದೆ. ಚಾಲಕ ಚಂದ್ರಕಾಂತ್ ತನ್ನ ಆಟೋವನ್ನು ವಿರುದ್ಧ ದಿಕ್ಕಿನಲ್ಲಿ ಚಲಾಯಿಸಿಕೊಂಡು ಬಂದು ಬಸ್ಸಿಗೆ ಡಿಕ್ಕಿ ಹೊಡೆದಿದ್ದಾನೆ ಎನ್ನಲಾಗಿದೆ. ಗಾಯಾಳುವನ್ನು ಕಾರ್ಕಳ ಸಿಟಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅಪಘಾತದಿಂದ ಎರಡೂ ವಾಹನಗಳು ಜಖಂಗೊಂಡಿವೆ. ಕಾರ್ಕಳ ನಗರ ಠಾಣೆಯಲ್ಲಿ ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಯುವಕ ನಾಪತ್ತೆ

• **ಸುಳ್ಯ:** ಅಜ್ಜಾವರ ಗ್ರಾಮದ ದೊಡ್ಡೇರಿ ನಿವಾಸಿ ಚಂದ್ರಶೇಖರ್ ಎಂಬುವರ ಪುತ್ರ ಡಿ. ಸಿ. ಕೌಶಿಕ್ (23) ಜೂ. 18 ರಿಂದ ನಾಪತ್ತೆಯಾದ ಕುರಿತು ಮನೆಯವರು ಸುಳ್ಯ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ನಾಪತ್ತೆಯಾದ ಯುವಕ ಸುಳ್ಯದ ಎಲೆಕ್ಟ್ರಿಕಲ್ ಅಂಗಡಿಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಜೂ. 18 ರಂದು ಸಂಜೆ ಸುಮಾರು ಏಳು ಗಂಟೆಗೆ ಕೊಯಿಕುಳಿ ಮನೆಯಿಂದ ದೊಡ್ಡೇರಿಗೆ ಹೋಗಿ ಬರುವುದಾಗಿ ಹೇಳಿ ಹೋದವನು ಮತ್ತೆ ಮನೆಗೆ ಹಿಂತಿರುಗಲಿಲ್ಲ. ಈತನಿಗೆ ಅಲ್ಪಮಟ್ಟದ ಮಾನಸಿಕ ರೋಗವಿದ್ದು, ಈತನನ್ನು ಯಾರಾದರೂ ಕಂಡುಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಸುಳ್ಯ ಪೊಲೀಸ್ ಪ್ರಕಟಣೆ ತಿಳಿಸಿದೆ.



ಉದ್ಯಮಿಗೆ ಕೊಲೆ ಬೆದರಿಕೆ: ಮೂವರ ಬಂಧನ

• **ಮಡಿಕೇರಿ:** ಉದ್ಯಮಿಯೊಬ್ಬರ ಮನೆಗೆ ನುಗ್ಗಿ ಕೋವಿಯಿಂದ ಗುಂಡು ಹಾರಿಸಿ ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಿದ ಘಟನೆ ವೀರಾಜಪೇಟೆ ನಗರದ ನಿಸರ್ಗ ಬಡಾವಣೆಯಲ್ಲಿ ಶನಿವಾರ ತಡರಾತ್ರಿ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ವೀರಾಜಪೇಟೆಯ ಕೆ.ಕೆ ಗ್ರೂಪ್ ಮಾಲಕ ಕಾಳಮಂಡ ಜಗತ್ (50) ಅವರ ಮನೆಗೆ ತಡರಾತ್ರಿ ಕೋವಿಯೊಂದಿಗೆ ಬಂದ ವಿ.ಬಾಡಗ ಗ್ರಾಮದ ಮಳವಂಡ ಕಲನ್ (ಚಿಟ್ಟಿಯಪ್ಪ), ಕಂಜಿತಂಡ ಟೆರಿನ್ ಹಾಗೂ ಕಂಜಿತಂಡ ಸಂಧ್ಯಾ ಅವರುಗಳು ಗುಂಡು ಹಾರಿಸಿ ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಿರುವುದಾಗಿ ಹೇಳಲಾಗಿದೆ. ಉದ್ಯಮಿ ಜಗತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಜಿಲ್ಲಾ ಕಂಬಳ ಸಮಿತಿಯ ನೂತನ ಅಧ್ಯಕ್ಷರಾಗಿ ಚಂದ್ರಹಾಸ್ ಸನಿಲ್

• **ಮೂಡುಬಿದಿರೆ:** ಜಿಲ್ಲಾ ಕಂಬಳ ಸಮಿತಿಯ ನೂತನ ಅಧ್ಯಕ್ಷರಾಗಿ ಮೂಡುಬಿದಿರೆಯ ಹೊಸಬೆಟ್ಟುವಿನ ಚಂದ್ರಹಾಸ್ ಸನಿಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಗಳ ವ್ಯಾಪ್ತಿಯ ಜಿಲ್ಲಾ ಕಂಬಳ ಸಮಿತಿಯ ಮಹಾಸಭೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆಯಿತು. ಸಭೆಯಲ್ಲಿ ಸದಸ್ಯರ ಸಮ್ಮತಿಯೊಂದಿಗೆ ಚಂದ್ರಹಾಸ್ ಸನಿಲ್ ಅವರನ್ನು ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಕಂಬಳ ಕ್ರೀಡೆ ಹಾಗೂ ಸಂಪ್ರದಾಯದ ಉಳಿವು, ಸಂಘಟನೆ ಬಲವರ್ಧನೆ ಮತ್ತು ಮುಂದಿನ ಚಟುವಟಿಕೆಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ನೂತನ ಅಧ್ಯಕ್ಷರ ಆಯ್ಕೆಗೆ ಸದಸ್ಯರು ಅಭಿನಂದನೆ ಸಲ್ಲಿಸಿದರು.



ಕ್ಯಾಂಪ್ಕೋ ಸಂಸ್ಥೆಯ ಸಾಂತ್ವನ ಯೋಜನೆಯನ್ವಯ ಬಾಯಾರು ಕ್ಯಾಂಪ್ಕೋ ಶಾಖೆಯ ಸಕ್ರಿಯ ಸದಸ್ಯ ಶಂಕರನಾರಾಯಣ ಭಟ್ ನಿಡುವಜೆ ಅವರ ಹೃದಯದ ಆಂಜಿಯೋಪ್ಲಾಸ್ಟ್ ಶಸ್ತ್ರಚಿಕಿತ್ಸೆಗೆ ಧನಸಹಾಯವಾಗಿ 50,000 ರೂ. ಮೊತ್ತದ ಚೆಕ್ಕನ್ನು ನೀಡಲಾಯಿತು. ಕ್ಯಾಂಪ್ಕೋ ಸಂಸ್ಥೆಯ ನಿರ್ದೇಶಕ ಸದಾನಂದ ಶೆಟ್ಟಿ ಕೊಮ್ಮಂಡ ಕ್ಯಾಂಪ್ಕೋ ಸಂಸ್ಥೆಯ ನಿರ್ದೇಶಕಿ ಸೌಮ್ಯಾ ಪ್ರಕಾಶ್ ಮದಂಗಲ್ಲು, ಸಂಸ್ಥೆಯ ಉದ್ಯೋಗಿಗಳಾದ ಚಂದ್ರ ಎಂ., ರಮೇಶ್ ವೈ., ಪ್ರವೀಣ್‌ರಾಜ್ ಬಲ್ಲಾಳ್, ಕುಮಾರ್, ಸಜನ್, ವಿಕಾಸ್ ಜೈನ್ ಮುಂತಾದವರು ಉಪಸ್ಥಿತರಿದ್ದರು.

ಮೆಸ್ಕಾಂ ಖಾಸಗೀಕರಣ ರೈತರಿಗೆ ಮಾಡುತ್ತಿರುವ ಅನ್ಯಾಯ: ದೀಪಕ್

• **ಬೈಂದೂರು:** ಹಲವು ವರ್ಷಗಳಿಂದ ರೈತರು, ಜನಸಾಮಾನ್ಯರು ಮತ್ತು ಸಾರ್ವಜನಿಕರ ಹಿತಾಶಕ್ತಿಯಿಂದ ಕೆಲವೊಂದು ಇಲಾಖೆಗಳನ್ನು ಸರ್ಕಾರದ ಸ್ವಾಮ್ಯದಲ್ಲಿ ನಿರ್ವಹಣೆ ಮಾಡಲಾಗುತ್ತಿತ್ತು. ಪ್ರಸ್ತುತ ಜನರಿಗೆ ಅತ್ಯವಶ್ಯಕವಾದ ಮೆಸ್ಕಾಂ ಇಲಾಖೆಯನ್ನು ಖಾಸಗಿಯವರಿಗೆ ನೀಡುತ್ತಿರುವ ತಯಾರಿ ರೈತರಿಗೆ ಮಾಡುತ್ತಿರುವ ಅನ್ಯಾಯ ಎಂದು ಬೈಂದೂರು ತಾಲೂಕು ರೈತ ಸಂಘದ ಅಧ್ಯಕ್ಷ ನೆಲ್ಯಾಡಿ ದೀಪಕ್ ಕುಮಾರ್ ಶೆಟ್ಟಿ ಹೇಳಿದರು.

ಒಟ್ಟು 19 ಜಿಲ್ಲೆಗಳಲ್ಲಿ ಅತ್ಯಧಿಕ ಲಾಭವಿರುವ ವಿದ್ಯುತ್ ಇಲಾಖೆಯನ್ನು ಟಾಟಾ ಸಂಸ್ಥೆಗೆ ನೀಡುವ ಸಿದ್ಧತೆ ನಡೆಸುತ್ತಿರುವುದು ಮುಂದಿನ ದಿನದಲ್ಲಿ ಸಾರ್ವಜನಿಕರಿಗೆ ಬಹುದೊಡ್ಡ ಸಮಸ್ಯೆಯಾಗಿ ಕಾಡಲಿದೆ. ಹಂತ ಹಂತವಾಗಿ ರೈತರಿಗೆ ಸಿಗುತ್ತಿರುವ ಸೌಲಭ್ಯಗಳು ಇದರಿಂದಾಗಿ ವಂಚಿತವಾಗಲಿದೆ. ಹೀಗಾಗಿ ವಿದ್ಯುತ್ ಇಲಾಖೆ ಖಾಸಗೀಕರಣ ಸಲ್ಲದು. ಸರ್ಕಾರ ಈ ನಿರ್ಣಯ ಪರಿಶೀಲಿಸದಿದ್ದರೆ ರಾಜ್ಯವ್ಯಾಪಿ ರೈತರು ಸಿಡಿದೇಳಲಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಈ ಬಗ್ಗೆ ಗಮನಹರಿಸಬೇಕು. ಈ ಬಗ್ಗೆ ಜೂ.25 ರಂದು ಬೆಳಿಗ್ಗೆ ಬೈಂದೂರು ರೈತ ಸಂಘದ ಮುಂದಾಳತ್ವದಲ್ಲಿ ಬೈಂದೂರು ತಾಲೂಕು ಆಡಳಿತ ಸೌಧದ ಎದುರು ತಹಶೀಲ್ದಾರರ ಮೂಲಕ ಸರಕಾರಕ್ಕೆ ಮನವಿ ನೀಡಲಾಗುವುದು ಎಂದು ಬೈಂದೂರು ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.



ಪೆಟ್ರೋಲ್ ಪಂಪ್‌ಗಳಲ್ಲಿ ರೈತರಿಗೆ ಸಹಕರಿಸಬೇಕು: ಗಲ್ಫ್‌ರಾಷ್ಟ್ರದ ಯುದ್ಧ ಈಗಾಗಲೇ ಅಂತ್ಯ ಕಂಡಿದೆ. ಪೆಟ್ರೋಲ್ ಪಂಪ್‌ಗಳಿಗೆ ಬರುವ ಗ್ರಾಮೀಣ ಭಾಗದ ರೈತರಿಗೆ ಪೆಟ್ರೋಲ್, ಡೀಸೆಲ್ ಕೊರತೆಯಿಂದ ಕ್ಯಾನ್‌ಗಳಲ್ಲಿ ಹಾಗೂ ಬಾಟಲಿಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ನೀಡುತ್ತಿಲ್ಲ. ಕೃಷಿ, ಉಳುಮೆ ಯಂತ್ರಕೃಷಿ ಪಂಪ್‌ಸೆಟ್ ಹಲವಾರು ಯಂತ್ರಗಳಿಗೆ ಪೆಟ್ರೋಲ್, ಡೀಸೆಲ್ ನೀಡಬೇಕು ಮತ್ತು ಈ ಬಗ್ಗೆ ಜಿಲ್ಲಾಧಿಕಾರಿಗಳು ಗಮನಹರಿಸಬೇಕು ಎಂದರು. ರೈತ ಸಂಘದ ಪದ್ಮಾಕ್ಷ ಗೋಳಿಬೇರು ಇದ್ದರು.

ದ್ವಾರಕಾ ಕಾರ್ಪೊರೇಶನ್ ಪ್ರೈವೇಟ್ ಲಿಮಿಟೆಡ್ ವಿನೂತನ ಕಲ್ಪನೆ ಉಜ್ಜೀವನ ಲೋಕಾರ್ಪಣೆ

ಭಟ್ ಕಳಕಳಿ ಶ್ಲಾಘನಾರ್ಹ: ಕಿಶೋರ್

• **ಪುತ್ತೂರು:** ಕಳೆದ 20 ವರ್ಷಗಳಿಂದ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ದ್ವಾರಕಾ ಕಾರ್ಪೊರೇಶನ್ ಪ್ರೈವೆಟ್ ಲಿಮಿಟೆಡ್ ಪುತ್ತೂರು ಸಂಸ್ಥೆಯು ವಿನೂತನ ಕಲ್ಪನೆಯೊಂದಿಗೆ ರೂಪಿಸಿರುವ ಉಜ್ಜೀವನ ಎಂಬ ಹೆಸರಿನ ಹಿರಿಯರ ಬಡಾವಣೆಯ ಉಪ್ಪಿನಂಗಡಿ–ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಯ ಕೆಮ್ಮಿಂಜೆಯಲ್ಲಿ ಭಾನುವಾರ ಉದ್ಘಾಟನೆಗೊಂಡಿತು.

ದ್ವಾರಕಾ ನೆಸ್ಟ್ ಹೆಸರಿನ ವಾಣಿಜ್ಯ ಸಮುಚ್ಚಯ ಹಾಗೂ ದ್ವಾರಕ ಮಾರ್ಟ್ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಮಾತನಾಡಿ, ಹೊಸಜೀವನದ ಹಿರಿಯ ನಾಗರೀಕರ ಬಡಾವಣೆ ಇದು. ಹಿರಿಯರ ಜೀವನದಲ್ಲಿ ಸುಖದ ಹಾದಿಗಾಗಿ ದ್ವಾರಕದ ಗೋಪಾಲಕೃಷ್ಣ ಭಟ್ ದಾರಿದೀಪ ಆಗಿದ್ದಾರೆ. ದ್ವಾಪರ ಯುಗದಲ್ಲಿ ಕಷ್ಟ ಇದ್ದವರು ದ್ವಾರಕ ನಗರಕ್ಕೆ ಹೋಗುತ್ತಿದ್ದರು. ಅಂತೆಯೇ ಈ ದ್ವಾರಕದವರು ಸ್ವಾರ್ಥ ಯೋಚಿಸದೆ ಉತ್ತಮ ವ್ಯವಸ್ಥೆ ಇಲ್ಲಿ ಒದಗಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ದ್ವಾರಕಾ ರಿಫ್ರೆಶ್‌ಮೆಂಟ್ ಲೋಕಾರ್ಪಣೆ ಮಾಡಿ, ಅವಿಭಕ್ತ ಕುಟುಂಬ ಇರುವಾಗ ಹಿರಿಯರಿಗೆ ಸಮಸ್ಯೆ ಇರಲಿಲ್ಲ. ಈಗ ಹಿರಿಯರಿಗೆ ನಿಜವಾದ ಬದುಕು ನೀಡದೆ ಕಟ್ಟಿ ಹಾಕುತ್ತೇವೆ. ದ್ವಾರಕ ಬಡಾವಣೆಯಲ್ಲಿ ಆತ್ಮೀಯತೆ, ಖುಷಿ ಸಿಗಲಿದೆ ಎಂದರು. ಶಾಸಕಿಯಾಗಿ ನನ್ನಿಂದ ಆಗುವ ಸಹಕಾರ ಕೊಡುತ್ತೇನೆ ಎಂದು ಹೇಳಿದರು.

ಮಾಜಿ ಶಾಸಕ ಸಂಜೀವ ಮಠಂದೂರು, ಉಜ್ಜೀವನ ಹಿರಿಯ ನಾಗರಿಕರ ಬಡಾವಣೆ ಉದ್ಘಾಟಿಸಿ ಮಾತನಾಡಿ, ಆರೋಗ್ಯಕ್ಕಾಗಿ ವೃದ್ಧಾಪ್ಯದ ಬಡಾವಣೆ ಇದು. ಹಿರಿಯರ ಬದುಕಿನ ಕಾಳಜಿ ಇಲ್ಲಿ ಕಾಣಿಸುತ್ತದೆ. ಈ ಬಡಾವಣೆ ಶ್ರೀಕೃಷ್ಣನ ಉದ್ದೇಶ ಈಡೇರಿಸುತ್ತಿದೆ. ಕೂಡು ಕುಟುಂಬವನ್ನು ಮತ್ತೆ ನೆನಪಿಸಬಹುದು. ಹಳ್ಳಿಯ ಬದುಕು ಭಗವಂತನ ಸೃಷ್ಟಿ ಎಂದರು.

ಗೌರವಾರ್ಪಣೆ

ಈ ಸಂದರ್ಭದಲ್ಲಿ ಬಡಾವಣೆ ನಿರ್ಮಾಣ ಕಾರ್ಯದಲ್ಲಿ ಕಾರ್ಯ ನಿರ್ವಹಿಸಿದವರನ್ನು ಗೌರವಿಸಲಾಯಿತು. ಬಡಾವಣೆಯ ಬಳಿ ನಿರ್ಮಿಸಲಾದ ವಿನೂತನ ಬಸ್ಸು ನಿಲ್ದಾಣವನ್ನು ಗಣ್ಯರು ಉದ್ಘಾಟಿಸಿದರು.

ಆಲಂಕಾರು ಸಿಎ ಬ್ಯಾಂಕ್ ಅಧ್ಯಕ್ಷ ರಮೇಶ್ ಉಪ್ಪಂಗಳ, ಬೆಂಗಳೂರಿನ ಉದ್ಯಮಿ ಡಾ. ಹೇಮಂತ್ ರೈ ಮನವಳಿಕೆ, ಶ್ರೀ ರಾಮಕುಂಜೇಶ್ವರ ವಿದ್ಯಾವರ್ಧಕ ಸಭಾದ ಕಾರ್ಯದರ್ಶಿ ರಾಧಾಕೃಷ್ಣ ಕೆ.ಎಸ್., ಹಿರೇಬಂಡಾಡಿ ಗ್ರಾ.ಪಂ.ಮಾಜಿ ಅಧ್ಯಕ್ಷ ಸದಾನಂದ ಶೆಟ್ಟಿ, ಉದ್ಯಮಿಗಳಾದ ಮಂಜುನಾಥ್ ನಾಯಕ್, ಎಸ್.ಕೆ.ಆನಂದ್, ದ್ವಾರಕದ ಗೌರವಾಧ್ಯಕ್ಷ ಹರಿಕೃಷ್ಣ ಭಟ್ ಅರ್ತ್ಯಾಡ್ಕ, ನಿರ್ದೇಶಕರಾದ ಲಕ್ಷ್ಮೀ, ಅಶ್ವಿನಿ ಗೋಪಾಲಕೃಷ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸುಮನಾ, ರಕ್ಷಾ ಗಣೇಶ್ ಪ್ರಾರ್ಥಿಸಿದರು. ದ್ವಾರಕಾ ಕಾರ್ಪೋರೇಶನ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಅಮೃತಕೃಷ್ಣ ಸ್ವಾಗತಿಸಿದರು. ದ್ವಾರಕ ಪ್ರತಿಷ್ಠಾನದ ಕಾರ್ಯದರ್ಶಿ ಗಣರಾಜ ಕುಂಬ್ಳೆ ಕಾರ್ಯಕ್ರಮ ನಿರ್ವಹಿಸಿದರು.

ಸಭಾ ಕಾರ್ಯಕ್ರಮದ ಬಳಿಕ ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕ ರಾಹುಲ್ ವೆಲ್ಲಾಲ್ ಅವರಿಂದ ಭಕ್ತಿ ಸಂಗೀತ ಸುಧಾ ನಡೆಯಿತು.



ಕೆಲವು ವರ್ಷಗಳ ಕನಸು ಇಂದು ನನಸಾಗಿದೆ. 20 ಕೋ. ಕೆಲಸ ಇಲ್ಲಿ ಆಗಿದೆ. ಥೀಮ್ ಬೇಸ್ಡ್ ಪಾರ್ಕ್, ಮದ್ದು, ತರಕಾರಿ ಗಿಡಗಳ ಪಾರ್ಕ್ ಸೇರಿದಂತೆ ಇನ್ನಷ್ಟು ಕೆಲಸಗಳು ಆಗಲಿವೆ. ಹೊಸ ರೀತಿಯ ವ್ಯವಸ್ಥೆ ಮಾಡುತ್ತಿದ್ದೇವೆ. ದ್ವಾರಕಾ ನೀಡಿದ ಪ್ರೀತಿ, ಗೌರವ, ಭದ್ರತೆಯ ಧ್ಯೇಯವನ್ನು ಈಡೇರಿಸುತ್ತೇವೆ.

■ **ಗೋಪಾಲಕೃಷ್ಣ ಭಟ್,** ದ್ವಾರಕಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು

ಸಮಾಜ ಜೀವನಕ್ಕಾಗಿ

ವೈದ್ಯರಾದ ಡಾ. ಮುರಲೀಕೃಷ್ಣ ಪ್ರಸ್ತಾವಿಕವಾಗಿ ಮಾತನಾಡಿದರು. ಮನುಷ್ಯನ ನಿಜವಾದ ಜೀವನ ಆರಂಭವಾಗುವುದು 60 ರ ಬಳಿಕ. ಅದನ್ನು ಅರ್ಥಪೂರ್ಣವಾಗಿ ಮುನ್ನಡೆಸಬೇಕು. ತಮ್ಮನ್ನು ತಾವು ತೊಡಗಿಸಿಕೊಂಡಾಗ ತೊಂದರೆಗಳು ಬರುವುದಿಲ್ಲ. ಶಾರೀರಿಕ, ಮಾನಸಿಕ ಭದ್ರತೆ ಮುಖ್ಯ. ಹಿರಿಯರಿಗೆ ಸಮಾಜ ಜೀವನಕ್ಕಾಗಿ ಈ ಬಡಾವಣೆ ನಿರ್ಮಾಣಗೊಂಡಿದೆ ಎಂದರು.

ಕುಸಿತದ ಭೀತಿಯಲ್ಲಿದೆ ಇಲ್ಲಿನ ಮೀನುಗಾರಿಕೆ ಬಂದರು ಪ್ರದೇಶ ಬೆಸೆವ ಸಂಪರ್ಕ ಕೊಂಡಿ

• **ಕುಂದಾಪುರ :** ಜಿಲ್ಲೆಯ ಪ್ರಮುಖ ಮೀನುಗಾರಿಕೆ ಬಂದರು ಪ್ರದೇಶ ಗಂಗೊಳ್ಳಿಯನ್ನು ಬೆಸೆಯುವ ಪ್ರಮುಖ ಸಂಪರ್ಕ ಕೊಂಡಿಯಾಗಿರುವ ತ್ರಾಸಿ–ಗಂಗೊಳ್ಳಿ ಮುಖ್ಯರಸ್ತೆಯ ಕೊಡಪಾಡಿ ಎಂಬಲ್ಲಿರುವ ಕಿರು ಸೇತುವೆಯು ತೀವ್ರವಾಗಿ ಜರ್ಜರಿತಗೊಂಡಿದ್ದು, ಯಾವುದೇ ಕ್ಷಣದಲ್ಲಾದರೂ ಕುಸಿದು ಬೀಳುವ ಭೀತಿ ಎದುರಾಗಿದೆ.

ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗುಜ್ಜಾಡಿ ಗ್ರಾಮದ ಕೊಡಪಾಡಿ ಎಂಬಲ್ಲಿರುವ ಈ ಕಿರು ಸೇತುವೆಯ ತಳಭಾಗದಲ್ಲಿ ಭಾರಿ ಬಿರುಕು ಕಂಡು ಬಂದಿದ್ದು, ಗೋಡೆಗಳು ಕುಸಿದು ಬೀಳುವ ಸ್ಥಿತಿಯಲ್ಲಿದೆ. ಸೇತುವೆ ಕೆಳಭಾಗದಲ್ಲಿರುವ ತಳಪಾಯದ ಕಲ್ಲುಗಳು ಜಾರಿರುವುದರಿಂದ ಸೇತುವೆ ಕುಸಿಯುವ ಭೀತಿ ಹೆಚ್ಚಾಗಿದ್ದು, ಈ ರಸ್ತೆ ಮೂಲಕ ಸಂಚರಿಸುವ ವಾಹನಗಳು ಹಾಗೂ ಪ್ರಯಾಣಿಕರು ಆತಂಕದಲ್ಲಿದ್ದಾರೆ. ಗಂಗೊಳ್ಳಿ, ಗುಜ್ಜಾಡಿ ಹಾಗೂ ನಾಯಕವಾಡಿಯಿಂದ ಕುಂದಾಪುರ, ಬೈಂದೂರು ಕಡೆಗೆ ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಸೇರಿದಂತೆ ಸಾವಿರಾರು ವಾಹನಗಳು ಸಂಚರಿಸುವ ಮುಖ್ಯ ಮಾರ್ಗ ಇದಾಗಿದ್ದು, ಈ ಕಿರು ಸೇತುವೆ ಕುಸಿದು ಬಿದ್ದಲ್ಲಿ ಗಂಗೊಳ್ಳಿ– ಕುಂದಾಪುರ ಮತ್ತು ಬೈಂದೂರಿನ ಸಂಪರ್ಕ ಕೊಂಡಿ ಕಡಿತಗೊಳ್ಳಲಿದೆ. ಇದರಿಂದ ಸಾವಿರಾರು ಜನರು ತಮ್ಮ ದೈನಂದಿನ ಕಾರ್ಯಗಳಿಗೆ ಗಂಗೊಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಬರಬೇಕಾದರೆ ಮುಳ್ಳಿಕಟ್ಟೆ ಮಾರ್ಗವಾಗಿ ಸುತ್ತು ಬಳಸಿ ಬರಬೇಕಾದ ಅನಿವಾರ್ಯತೆ ಸೃಷ್ಟಿಯಾಗಲಿದೆ.

ಕಿರು ಸೇತುವೆಯ ತಳಭಾಗದಲ್ಲಿ ಭಾರಿ ಬಿರುಕು ಕಂಡು ಬಂದಿದ್ದು, ತಡೆಗೋಡೆಗಳು ಕುಸಿದು ಬೀಳುವ ಸ್ಥಿತಿಯಲ್ಲಿದೆ. ವಾಹನಗಳು ಮತ್ತು ಜನರು ಸಂಚರಿಸುವ ಸಮಯದಲ್ಲಿ ಸೇತುವೆ ಕುಸಿದು ಬಿದ್ದಲ್ಲಿ ದೊಡ್ಡ ಅನಾಹುತಗಳು ಸಂಭವಿಸುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಗಂಗೊಳ್ಳಿಯ ಪ್ರಮುಖ ಸಂಪರ್ಕ ಕೊಂಡಿಯಾಗಿರುವ ತ್ರಾಸಿ–ಗಂಗೊಳ್ಳಿ ಮುಖ್ಯರಸ್ತೆಯಲ್ಲಿರುವ ಈ ಕಿರು ಸೇತುವೆ ಕುಸಿದು ಬೀಳುವ ಮುನ್ನ ದುರಸ್ತಿಗೊಳಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ಮಾಡದೆ, ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿದೆ.



ತ್ರಾಸಿ- ಗಂಗೊಳ್ಳಿ ಮುಖ್ಯರಸ್ತೆಯ ಕೊಡಪಾಡಿ ಎಂಬಲ್ಲಿರುವ ಅಪಾಯಕಾರಿ ಸೇತುವೆಯನ್ನು ತಕ್ಷಣವೇ ದುರಸ್ತಿಗೊಳಿಸಬೇಕು. ಜಿಲ್ಲಾಡಳಿತ ಹಾಗೂ ಲೋಕೋಪಯೋಗಿ ಇಲಾಖೆ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು

■ **ಸತೀಶ್ ಕಂಬುಗೋಡು,** ಜಿಲ್ಲಾಧ್ಯಕ್ಷ, ಉಡುಪಿ ಜಿಲ್ಲಾ ಅಂಬೇಡ್ಕರ್ ಸೇನೆ

ಒಟ್ಟು ವಿದ್ಯಾರ್ಥಿಗಳ ಪೈಕಿ 1227 ಮಂದಿ ಪರೀಕ್ಷೆಗೆ ಗೈರು

ಬಿಗಿ ಭದ್ರತೆಯಲ್ಲಿ ಸಿಇಟಿ ಪರೀಕ್ಷೆ

• **ಮಂಗಳೂರು:** ಎಂಬಿಬಿಎಸ್, ಬಿಡಿಎಸ್ ಸೇರಿದಂತೆ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಭಾನುವಾರ ದೇಶಾದ್ಯಂತ ನಡೆದ ನೀಟ್ ಯುಜಿ– 2026 ಭಾಗವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಯಶಸ್ವಿಯಾಗಿ ಪರೀಕ್ಷೆ ನಡೆಯಿತು. ಪೊಲೀಸ್ ಕಣ್ಗಾವಲಿನ ನಡುವೆ ಬಿಗಿ ಭದ್ರತೆಯಲ್ಲಿ ಪರೀಕ್ಷೆ ನಡೆಯಿತು.

12 ಕೇಂದ್ರಗಳಲ್ಲಿ ಪರೀಕ್ಷೆ

ನೀಟ್ ಪರೀಕ್ಷೆಗೆ 12 ಕೇಂದ್ರಗಳಲ್ಲಿ ಒಟ್ಟು 5,570 ಅಭ್ಯರ್ಥಿಗಳು ನೋಂದಾಯಿಸಿದ್ದರು. ಇದರಲ್ಲಿ 4343 ಮಂದಿ ಪರೀಕ್ಷೆ ಬರೆದಿದ್ದು, 1227 ಮಂದಿ ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು.

ಎರಡು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಇದೇ ಪರೀಕ್ಷೆಯನ್ನು ಮತ್ತೊಮ್ಮೆ ನಡೆಸಲಾಗಿದ್ದು, ಎಲ್ಲ ಕೇಂದ್ರಗಳಲ್ಲೂ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಜಾರಿಗೊಳಿಸಲಾಗಿತ್ತು.

ಜಿಲ್ಲೆಯ ಹೊರಗಿನಿಂದ ಬಂದ ಹಲವಾರು ಪೋಷಕರು ಮಕ್ಕಳೊಂದಿಗೆ ಒಂದು ದಿನ ಮುಂಚಿತವಾಗಿಯೇ ನಗರಕ್ಕೆ ಬಂದು ತಂಗಿದ್ದರು. ಮೇ ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮತ್ತೆ ಪರೀಕ್ಷೆಗೆ ಸಿದ್ಧರಾಗಬೇಕಾದ ಪರಿಸ್ಥಿತಿ ಉಂಟಾಗಿದ್ದು, ಇದು ಕುಟುಂಬಗಳಿಗೆ ಮಾನಸಿಕ ಹಾಗೂ ಆರ್ಥಿಕ ಒತ್ತಡ ತಂದಿದೆ ಎಂದು ಪೋಷಕ ರಮೇಶ್ ಭಟ್ ಮಾಹಿತಿ ನೀಡಿದರು.

ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆಯದಂತೆ ಬಹಳಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ವಿದ್ಯಾರ್ಥಿಗಳನ್ನು ತಪಾಸಣೆ ನಡೆಸಿದ ಬಳಿಕ, ಮಧ್ಯಾಹ್ನ 11.30ರ ನಂತರ ಪರೀಕ್ಷಾ ಕೊಠಡಿಯೊಳಗೆ ಬಿಡಲಾಯಿತು. ಮಧ್ಯಾಹ್ನ ಎರಡು ಗಂಟೆಯಿಂದ ಸಂಜೆ ಐದು ಕಾಲು ಗಂಟೆಯ ತನಕ ಪರೀಕ್ಷೆ ನಡೆಯಿತು. ಈ ಬಾರಿ ಹೆಚ್ಚುವರಿಯಾಗಿ ಕಾಲು ಗಂಟೆಯ ಹೆಚ್ಚಿನ ಅವಧಿ ನೀಡಲಾಗಿದೆ. ವಿಕಲಚೇತನ ಮಕ್ಕಳಿಗೆ ಒಂದು ತಾಸು ಹೆಚ್ಚಿನ ಸಮಯ ನೀಡಲಾಗಿತ್ತು.



ತೀವ್ರ ಕಣ್ಗಾವಲು


ಈ ಬಾರಿ ನೀಟ್ ಪರೀಕ್ಷೆ ಬಿಗಿ ಭದ್ರತೆಯಿಂದ ನಡೆಸಲಾಗಿತ್ತು. ಸ್ಥಳೀಯ ಪೊಲೀಸರೊಂದಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯನ್ನು (ಸಿಎಪಿಎಫ್) ನಿಯೋಜಿಸಲಾಗಿತ್ತು. ಇದಕ್ಕಾಗಿ 30 ಸದಸ್ಯ ಬಲದ ಸಿಎಪಿಎಫ್ ತಂಡ ಪ್ರತೀ ಪರೀಕ್ಷಾ ಕೇಂದ್ರಕ್ಕೆ ಸ್ಥಳೀಯ ಪೊಲೀಸರನ್ನು ಸಶಸ್ತ್ರವಾಗಿ ನಿಯೋಜಿಸಲಾಗಿತ್ತು. ಪರೀಕ್ಷಾ ಕಾರ್ಯಗಳ ಮೇಲ್ವಿಚಾರಣೆಗೆ ಎನ್‌ಟಿಎ ಜಿಲ್ಲೆಗೆ ಇಬ್ಬರು ನೋಡಲ್ ಅಧಿಕಾರಿಗಳನ್ನು ನೇಮಿಸಿದ್ದು, ತೀವ್ರ ಕಣ್ಗಾವಲಿನಲ್ಲಿ ಪರೀಕ್ಷೆ ನಡೆಯಿತು.

ಮೈಸೂರಿನ ಜಯಲಕ್ಷ್ಮೀ ಪುರಂನ ಪ್ರೀಮಿಯರ್ ಸ್ಟುಡಿಯೋದಲ್ಲಿ ಸುಮಾರು 17 ಎಕ್ರೆ ಜಾಗದಲ್ಲಿ ಅ. 18, 19ರಂದು ಎರಡು ದಿನ ಕಂಬಳ

ದಸರಾಗೆ ಮೈಸೂರಿನಲ್ಲಿ ಕಂಬಳ ನಡೆಸಲು ಸಿಎಂ ಸೂಚನೆ

• **ಪುತ್ತೂರು:** ಮೈಸೂರಿನಲ್ಲಿ ನಡೆಯುವ ವಿಶ್ವಪ್ರಸಿದ್ಧ ದಸರಾಗೆ ಈ ಬಾರಿ ಕಂಬಳ ನಡೆಸುವಂತೆ ಮತ್ತು ಅದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳ ವ್ಯವಸ್ಥೆ ಮಾಡುವಂತೆ ಶಾಸಕ ಅಶೋಕ್ ರೈ ಅವರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಕಂಬಳ ನಡೆಸುವ ಮೂಲಕ ಕಂಬಳ ಕ್ರೀಡೆಯನ್ನು ಜಗತ್ತಿಗೆ ಪರಿಚಯಿಸಿದ ಮತ್ತು ಯಶಸ್ವಿಯಾಗಿ ಕಂಬಳ ನಡೆಸಿದ ಖ್ಯಾತಿ ಅಶೋಕ್ ರೈ ಅವರಿಗಿದೆ. ಕಳೆದ ಬಾರಿ ಪುತ್ತೂರಿಗೆ ಬಂದಿದ್ದ ಡಿ.ಕೆ. ಶಿವಕುಮಾರ್ ಅವರು ದಸರಾ ಕಂಬಳದ ಬಗ್ಗೆ ಮಾತನಾಡಿದ್ದರು.

ಇದೀಗ ಮುಖ್ಯಮಂತ್ರಿಯವರೇ ಸ್ವತ ಸೂಚನೆ ನೀಡಿದ್ದು, ಈ ಬಾರಿ ಮೈಸೂರು ದಸರಾ ವೇಳೆ ಕಂಬಳ ನಡೆಯಲಿದೆ. ಈಗಾಗಲೇ ಒಂದು ಸುತ್ತಿನ ಅಧಿಕಾರಿಗಳ ಸಭೆಯನ್ನು ಕರೆಯಲಾಗಿದೆ ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ. ಮೈಸೂರಿನ ಜಯಲಕ್ಷ್ಮೀ ಪುರಂನ ಪ್ರೀಮಿಯರ್ ಸ್ಟುಡಿಯೋ ಬಳಿ ಇರುವ ಸುಮಾರು 17 ಎಕ್ರೆ ಜಾಗದಲ್ಲಿ ಕಂಬಳ ನಡೆಯಲಿದೆ. ಅ. 18, 19ರಂದು ಎರಡು ದಿನ ಕಂಬಳ ನಡೆಯಲಿದೆ.



ಮೈಸೂರಿನಲ್ಲಿ ಸಭೆ

ಕಂಬಳ ನಡೆಸುವ ಬಗ್ಗೆ ಸಿಎಂ ಸೂಚನೆಯಂತೆ ಮೈಸೂರಿನಲ್ಲಿ ಅಧಿಕಾರಿಗಳ ಸಭೆ ನಡೆದಿದೆ. ಸಭೆಯಲ್ಲಿ ಜಿಲ್ಲೆಯ ಕಂಬಳ ಪ್ರಮುಖರು ಭಾಗವಹಿಸಿದ್ದರು. ಎರಡನೇ ಹಂತದ ಸಭೆ ಮುಂದಿನ ಗುರುವಾರ ಮೈಸೂರಿನಲ್ಲಿ ನಡೆಯಲಿದ್ದು, ಈ ಸಭೆಯಲ್ಲಿ ಶಾಸಕ ಅಶೋಕ್ ರೈ, ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಸಹಿತ ಪ್ರಮುಖ ಅಧಿಕಾರಿಗಳು ಭಾಗವಹಿಸಲಿದ್ದಾರೆ.

2026-27ರ ಕಂಬಳ ಋತುವಿನ ವೇಳಾಪಟ್ಟಿ ಪ್ರಕಟ


ಮೂಡುಬಿದಿರೆ: 2026-27ನೇ ಸಾಲಿನ ಕಂಬಳ ಋತುವಿನ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು, ಅಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ನಡೆಯಲಿರುವ ಕಂಬಳದ ಮೂಲಕ ಹೊಸ ಋತುವಿಗೆ ಚಾಲನೆ ದೊರೆಯಲಿದೆ. ಬಳಿಕ ನವೆಂಬರ್‌ನಿಂದ ಏಪ್ರಿಲ್‌ವರೆಗೆ ಕರಾವಳಿಯ ವಿವಿಧ ಕಂಬಳ ಕಣಗಳಲ್ಲಿ ರೋಚಕ ಸ್ಪರ್ಧೆಗಳು ನಡೆಯಲಿವೆ.

ನವೆಂಬರ್ 14ರಂದು ಪಣಪಿಲ, ನವೆಂಬರ್ 21ರಂದು ಕೊಡಂಗೆ ಹಾಗೂ ನವೆಂಬರ್ 28ರಂದು ಕಕ್ಕೆಪದವು ಕಂಬಳಗಳು ನಡೆಯಲಿವೆ. ಡಿಸೆಂಬರ್ ತಿಂಗಳಲ್ಲಿ ಹೊಕ್ಕಾಡಿ, ಬಳ್ಕುಂಜ, ಬಾರಾಡಿ, ಮಂಗಳೂರು ಹಾಗೂ ಮೂಲ್ಕಿ ಕಂಬಳಗಳಿಗೆ ದಿನಾಂಕ ನಿಗದಿಪಡಿಸಲಾಗಿದೆ.

ಜನವರಿ ತಿಂಗಳಲ್ಲಿ ಮಿಯ್ಯಾರು, ನರಿಂಗಾನ, ಅಡ್ವೆ, ಮೂಡುಬಿದರೆ ಹಾಗೂ ಐಕಳ ಕಂಬಳಗಳು ಜರುಗಲಿದ್ದು, ಫೆಬ್ರವರಿಯಲ್ಲಿ ಪುತ್ತೂರು, ಜಪ್ಪಿನಮೊಗರು, ವಾಮಂಜೂರು ಹಾಗೂ ಎರ್ಮಾಳ್ ಕಂಬಳಗಳು ಆಯೋಜನೆಗೊಳ್ಳಲಿವೆ.

ಮಾರ್ಚ್ ತಿಂಗಳಲ್ಲಿ ಬಂಟ್ವಾಳ, ಬಂಗಾಡಿ, ವೇಣೂರು ಹಾಗೂ ಉಪ್ಪಿನಂಗಡಿ ಕಂಬಳಗಳು ನಡೆಯಲಿದ್ದು, ಏಪ್ರಿಲ್‌ನಲ್ಲಿ ಗುರುಪುರ, ಬಳ್ಳುಂಜೆ, ಹರೇಕಳ ಹಾಗೂ ಬಡಗಬೆಟ್ಟು ಕಂಬಳಗಳೊಂದಿಗೆ 2026–27ರ ಕಂಬಳ ಋತು ಸಮಾಪ್ತಿಗೊಳ್ಳಲಿದೆ. ಕಂಬಳಾಭಿಮಾನಿಗಳು ಹಾಗೂ ಕರಾವಳಿ ಜನತೆ ಈಗಾಗಲೇ ಕಂಬಳ ಹಬ್ಬದ ನಿರೀಕ್ಷೆಯಲ್ಲಿದ್ದು, ಈ ಬಾರಿಯ ಋತುವಿನಲ್ಲಿ ವಿವಿಧ ಕಂಬಳ ಕಣಗಳಲ್ಲಿ ಭರ್ಜರಿ ಪೈಪೋಟಿ ನಡೆಯುವ ನಿರೀಕ್ಷೆ ಇದೆ.

ಮೈಸೂರು ದಸರಾಗೆ ಕಂಬಳ ನಡೆಸುವಂತೆ ಕಳೆದ ಬಾರಿ ಡೆಪ್ಯುಟಿ ಸಿಎಂ ಆಗಿದ್ದ ಡಿಕೆಶಿಯವರು ಕೇಳಿಕೊಂಡಿದ್ದರು. ಬಳಿಕ ಕೊನೇ ಹಂತದಲ್ಲಿ ಕೈಬಿಡಲಾಗಿತ್ತು. ಈ ಬಾರಿ ಕಂಬಳ ನಡೆಸುವಂತೆ ಸಿಎಂ ಆಗಿರುವ ಡಿಕೆಶಿ ಸೂಚನೆ ನೀಡಿದ್ದಾರೆ. ಕಂಬಳ ಖಂಡಿತವಾಗಿಯೂ ನಡೆಯಲಿದೆ. ಜಾಗವನ್ನು ನಿಗದಿಪಡಿಸಲಾಗಿದೆ. ಬೆಂಗಳೂರಿನ ಕಂಬಳದಂತೆ ಮೈಸೂರು ದಸರಾ ಕಂಬಳ ವಿಶ್ವ ವಿಖ್ಯಾತಿ ಪಡೆಯಲಿದ್ದು ತುಳು ನಾಡಿನ ಜನಪದ ಕ್ರೀಡೆಯೊಂದನ್ನು ಜಗತ್ತಿಗೆ ಪರಿಚಯಿಸಿದ ಹೆಮ್ಮೆ ನಮಗೆ ಸಿಗಲಿದೆ.



■ **ಅಶೋಕ್ ರೈ,** ಶಾಸಕರು, ಪುತ್ತೂರು

ಧರ್ಮಸ್ಥಳ ಶ್ರೀಕ್ಷೇತ್ರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷ ಸಭೆ

ಬೆಂಗಳೂರು: ವಿಧಾನಪರಿಷತ್ ಚುನಾವಣೆಯಲ್ಲಿನ ಅಡ್ಡ ಮತದಾನದ ಆರೋಪ ಕುರಿತಂತೆ ಅತಿ ಶೀಘ್ರದಲ್ಲೇ ಧರ್ಮಸ್ಥಳದ ಶ್ರೀಕ್ಷೇತ್ರದಲ್ಲಿ ನಮ್ಮ ಶಾಸಕಾಂಗ ಪಕ್ಷದ ಸಭೆ ಕರೆಯಲು ನಿರ್ಧರಿಸಿರುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.



ಭಾನುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ವಿಪಕ್ಷ ನಾಯಕ ಆರ್.ಅಶೋಕ್ ಅವರಿಗೆ ಸಭೆ ಕರೆಯುವ ಸಂಬಂಧ ಮಾತನಾಡುವೆ. ನಾವೆಲ್ಲರೂ ದೇವರನ್ನು ನಂಬುವವರು. ಧರ್ಮಸ್ಥಳದಲ್ಲಿ ಸಭೆ ಕರೆದು ತಾಯಿಗೆ ದ್ರೋಹ ಮಾಡಿದ ಶಾಸಕರ ಮತ್ತು ಸತ್ಯದ ಬಗ್ಗೆ ಗೊತ್ತಾಗಬೇಕಿದೆ. ಶ್ರೀ ಕ್ಷೇತ್ರದಲ್ಲಿ ತೀರ್ಮಾನ ಆಗಬೇಕೆಂದು ನಿರ್ಧಾರ ಮಾಡಿದ್ದೇನೆ ಎಂದು ವಿವರಿಸಿದರು. ಕಾರ್ಯಕರ್ತರಿಗೆ ನೋವಾಗುವುದು ಸಹಜ. ಅಡ್ಡ ಮತದಾನವನ್ನು ನನ್ನ ಮನಸಾಕ್ಷಿ ಒಪ್ಪುತ್ತಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಬರುತ್ತಿರುವ ಟೀಕೆಗಳ ಬಗ್ಗೆ ನಾನು ಕೂಡ ಗಮನಿಸಿದ್ದೇನೆ. ಇದನ್ನೇ ನೆಪ ಮಾಡಿಕೊಂಡು ಪರೋಕ್ಷ ದಾಳಿ ಮಾಡುವ ಕೆಲಸ ಹಾಗೂ ಕುತಂತ್ರ ನಡೆಯುತ್ತಿದೆ ಎಂದು ಆಕ್ಷೇಪಿಸಿದರು. ಈ ಸಂಬಂಧ ಸತ್ಯಾಸತ್ಯತೆಯನ್ನು ನಾವು ಜನರ ಮುಂದೆ ಇಡಬೇಕಾಗಿದೆ. ಪಕ್ಷದ ಗೌರವ ಉಳಿಸಬೇಕಿದೆ. ಕಾರ್ಯಕರ್ತರಿಗೆ ನೆಮ್ಮದಿ ನೀಡಬೇಕಿದೆ ಎಂದು ಅವರು ನುಡಿದರು.

ಎಲ್ಲ ಶಾಸಕರ ಮೇಲೆ ಅನುಮಾನ ಮೂಡುತ್ತಿದೆ: ಮೊನ್ನೆ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯಿಂದಲೂ 4 ಅಡ್ಡ ಮತದಾನ ಆಗಿರುವ ಬಗ್ಗೆ ಚರ್ಚೆ ಮಾಧ್ಯಮಗಳಲ್ಲಿ ನಡೆಯುತ್ತಿದೆ. ಪತ್ರಿಕೆಗಳಲ್ಲೂ ಬಂದಿದೆ. ಸಾಮಾಜಿಕ ಜಾಲತಾಣದಲ್ಲೂ ಅತಿ ಹೆಚ್ಚು ಚರ್ಚೆ ಆಗುತ್ತಿದೆ ಎಂದರು.

ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್

ಪುಟ ೧➡ ನನಗೆ 2020ರ ಮಾ.10 ರಂದು ಸೋನಿಯಾ ಗಾಂಧಿ ಪಕ್ಷದ ಅಧಿಕಾರ ನೀಡಿದ್ದರು. ಆಗ ಇಷ್ಟೊಂದು ದೊಡ್ಡದಾಗಿ ಕಾರ್ಯಕ್ರಮ ಮಾಡಲು ಆಗಿರಲಿಲ್ಲ. ಝೂಮ್ ಕರೆಯಲ್ಲಿಯೇ ನಾನು ಅಧಿಕಾರ ಸ್ವೀಕರಿಸಿದೆ. ನಿಮ್ಮ ವಿಶ್ವಾಸ, ಸಹಕಾರದಿಂದ ಸೇವೆ ಮಾಡಿದ್ದೇನೆ. ನಾನು ಮನುಷ್ಯ, ನನ್ನ ಕೈಯಲ್ಲಿ ಅನೇಕ ತಪ್ಪು ಆಗಿರಬಹುದು ಎಂದರು. ಪ್ರತಿ ಪಂಚಾಯತಿ, ಪ್ರತಿ ವಾರ್ಡ್‌ಗೆ ಹೆಚ್ಚುವರಿಯಾಗಿ 5 ಕಾರ್ಯಕರ್ತರನ್ನು ಗ್ಯಾರಂಟಿ ಸಮಿತಿಗೆ ನೇಮಕ ಮಾಡಲು ತೀರ್ಮಾನಿಸಿದ್ದೇವೆ. ಗ್ಯಾರಂಟಿ ಪರಿಷ್ಕರಣೆಗೆ ಅವರನ್ನ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಮಾಹಿತಿ ನೀಡಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಹರಿಪ್ರಸಾದ್, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಂಕಲ್ಪ ಮಾಡಬೇಕು. ಎಲ್ಲಾ ಶೋಷಿತರ ಪರವಾದ ಹೋರಾಟಗಳಿಗೆ ಕೈಜೋಡಿಸಬೇಕು ಎಂದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಕಾಂಗ್ರೆಸ್ ಪಕ್ಷ ಶಿಸ್ತಿಗೆ ಹೆಸರಾಗಿದೆ. ಇಲ್ಲಿ ಯಾವುದೇ ಕಾರಣಕ್ಕೂ ವ್ಯಕ್ತಿ ಪೂಜೆಗೆ ಅವಕಾಶವಿಲ್ಲ. ಪಕ್ಷದ ಪೂಜೆಗೆ ಅವಕಾಶ. ಯಾರು ಎಷ್ಟೇ ದೊಡ್ಡವರಿದ್ದರೂ ಪಕ್ಷವೇ ದೊಡ್ಡದು. ನನ್ನ 58 ವರ್ಷಗಳ ರಾಜಕೀಯ ಜೀವನದಲ್ಲಿ ಎಲ್ಲವನ್ನೂ ನೋಡಿದ್ದೇನೆ. ಕಾಂಗ್ರೆಸ್ ಪಕ್ಷದಿಂದ ನಾಯಕರು ಬೆಳೆದಿದ್ದಾರೆಯೇ ಹೊರತು ಅವರಿಂದ ಕಾಂಗ್ರೆಸ್ ಪಕ್ಷವಲ್ಲ. ನಾವೆಲ್ಲರೂ ಸೇರಿ ಕಾಂಗ್ರೆಸ್ ಪಕ್ಷವನ್ನು ಕಟ್ಟಬೇಕು. ಯಾವುದೇ ಕಾರಣಕ್ಕೂ ಶಿಸ್ತನ್ನು ಮರೆಯಬಾರದು ಎಂದರು.

2028ಕ್ಕೆ ಮತ್ತೊಮ್ಮೆ ಅಧಿಕಾರಕ್ಕೆ: 2028ರಲ್ಲಿ ಮತ್ತೊಮ್ಮೆ ನಾವೇ ಅಧಿಕಾರಕ್ಕೆ ಬರುತ್ತೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಜನರನ್ನು ತಲುಪಿದೆ. ಇದರಿಂದ ಜನರಲ್ಲಿ ಖುಷಿಯಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ 5 ಉಪಚುನಾವಣೆಗಳು ನಡೆದಿವೆ. 5 ಉಪ ಚುನಾವಣೆಗಳಲ್ಲಿ ನಾವು ಗೆಲುವು ಸಾಧಿಸಿರಬೇಕಾದರೆ, ಜನರ ಪ್ರೀತಿ, ವಿಶ್ವಾಸ ಉಳಿಸಿಕೊಂಡಿದ್ದೇವೆ ಎಂದು ಅರ್ಥ. 2028 ಹಾಗೂ 2029ರಲ್ಲೂ ಮತ್ತೊಮ್ಮೆ ನಮ್ಮ ಪಕ್ಷವನ್ನು ಅಧಿಕಾರಕ್ಕೆ ತನ್ನಿ. ಹರಿಪ್ರಸಾದ್ ಅವರ ನಾಯಕತ್ವದಲ್ಲಿ ಪಕ್ಷ ಸದೃಢವಾಗಲಿ, ಬಲವಾಗಿ ಬೆಳೆಯಲಿ ಎಂದು ಆಶಿಸುತ್ತಾ, ನನ್ನ ಸಹಕಾರವನ್ನು ಸಂಪೂರ್ಣವಾಗಿ ಅವರ ಜತೆ ಧಾರೆ ಎರೆಯುತ್ತೇನೆ ಎಂದು ಭರವಸೆ ನೀಡುತ್ತಿದ್ದೇನೆ ಎಂದರು.

ವ್ಯಕ್ತಿಗತವಾಗಿ ಕೂಗಿದರೆ ಶಿಸ್ತು ಕ್ರಮ: ಖರ್ಗೆ ಎಚ್ಚರಿಕೆ

ಡಿ.ಕೆ.ಶಿವಕುಮಾರ್ ಈ ಹಿಂದೆ ಆರೂವರೆ ವರ್ಷ ಪಕ್ಷದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದರು. ಈಗ ಮುಖ್ಯಮಂತ್ರಿಯಾದ ಮೇಲೆ ಎನ್ನುತ್ತಿದ್ದಂತೆ ಸಭಾಂಗಣದಲ್ಲಿ ಇದ್ದ ಕಾರ್ಯಕರ್ತರು, ಮುಖಂಡರ ಪೈಕಿ ಡಿಕೆ ಡಿಕೆ ಎಂದು ಘೋಷಣೆ ಕೂಗಿದರು. ಆಗ ಮುಜುಗರಕ್ಕೊಳಗಾದ ಮಲ್ಲಿಕಾರ್ಜುನ ಖರ್ಗೆ ಅವರು ನಿಮ್ಮದೆಲ್ಲಾ ಮುಗಿಯಿತೇ? ಮುಂದೆ ಇರುವ ಒಂದು ಗುಂಪಿನಲ್ಲಿ ಮಾತ್ರ ಈ ರೀತಿ ಘೋಷಣೆ ಕೇಳಿಬರುತ್ತಿದೆ. ಇಲ್ಲಿ ನಿಂತು ಕೆಲವರು ಘೋಷಣೆ ಕೂಗಿದರೆ ದೇಶ ನಮ್ಮ ಕೈಗೆ ಬಂದಾಂತಾಗುತ್ತದೆಯೇ? ಯೂಸ್‌ಲೆಸ್ ಫೆಲೋಸ್ ಎಂದು ಖಾರವಾಗಿ ಹೇಳಿದರು. ಇದು ಒಬ್ಬ ವ್ಯಕ್ತಿಯ ಸಭೆಯಲ್ಲ, ಎಲ್ಲರೂ ಸೇರಿ ಪಕ್ಷ ಬಲಗೊಳಿಸಬೇಕು. ಒಬ್ಬರ ಹೆಸರನ್ನು ಮಾತ್ರ ಕೂಗಿದರೆ ಉಳಿದವರು ಕಸ ಗುಡಿಸಲು ಬಂದಿದ್ದಾರೆಯೇ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ರೀತಿಯ ಘೋಷಣೆ ಕೂಗುವವರ ವಿರುದ್ಧ ದೃಶ್ಯಾವಳಿಗಳನ್ನು ಆಧರಿಸಿ ಶಿಸ್ತು ಕ್ರಮ ಜರುಗಿಸುತ್ತೇನೆ ಎಂದು ಎಚ್ಚರಿಕೆ ನೀಡಿದರು. ಇದು ಅತ್ಯಂತ ಮಹತ್ವದ ಸಭೆ. ಶಿಸ್ತು ಪಾಲನೆ ಮಾಡಿ ಎಂದರು.

ಹಂದಿ ಜ್ವರಕ್ಕೆ ಚವತ್ತಿ ಗ್ರಾಮದ ವ್ಯಕ್ತಿ ಬಲಿ

ಯಲ್ಲಾಪುರ: ತಾಲೂಕಿನ ಚವತ್ತಿ ಗ್ರಾಮದಲ್ಲಿ ಇನ್‌ಫ್ಲುಯೆಂಜಾ-ಎ (ಹಂದಿ ಜ್ವರ) ಸೋಂಕಿಗೆ ತುತ್ತಾಗಿ ವ್ಯಕ್ತಿ ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ. ತಾಲೂಕಿನ ಚವತ್ತಿ ಗ್ರಾಮದ ನಿವಾಸಿ ರಾಜು ಮಂಜಾ ಗೌಡ (41) ಅವರು ಇನ್‌ಫ್ಲುಯೆಂಜಾ-ಎ (Influenza A) ವೈರಲ್ ಜ್ವರಕ್ಕೆ ತುತ್ತಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ರಾಜು ಮಂಜಾ ಗೌಡ ಅವರಿಗೆ ಜೂನ್ 10ರಂದು ಜ್ವರ ಕಾಣಿಸಿಕೊಂಡ ಹಿನ್ನೆಲೆ ಉಮ್ಮಚಗಿಯ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯಲಾಗಿತ್ತು. ಬಳಿಕ ಜೂನ್ 12ರಂದು ಮತ್ತೆ ಜ್ವರ ಕಾಣಿಸಿಕೊಂಡ ಕಾರಣ ಮಂಚಿಕೇರಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಆದರೂ ಆರೋಗ್ಯದಲ್ಲಿ ಚೇತರಿಕೆ ಕಾಣದ ಹಿನ್ನೆಲೆಯಲ್ಲಿ ಜೂನ್ 16 ರಂದು ಜ್ವರ ಹಾಗೂ ಸುಸ್ತಿನ ಲಕ್ಷಣಗಳು ಹೆಚ್ಚಾದ ಕಾರಣ ಶಿರಸಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗೆ ಜೂನ್ 17ರಂದು ಮಂಗಳೂರಿನ ಕೆ.ಎಸ್.ಹೆಗಡೆ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪರೀಕ್ಷೆಯಲ್ಲಿ ಇನ್‌ಫ್ಲುಯೆಂಜಾ-ಎ ಸೋಂಕು ದೃಢಪಟ್ಟಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಜೂನ್ 21ರಂದು ಮೃತಪಟ್ಟಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನೂರು ವರ್ಷದ ಇತಿಹಾಸವಿರುವ ಆರೆಸ್ಸೆಸ್ಸಿನ ದೇಶ ಭಕ್ತಿಗೆ ಪ್ರಿಯಾಂಕಾ ಖರ್ಗೆಯವರ ನೋಂದಣಿಯ ಅಗತ್ಯವಿಲ್ಲ - **ಜಗದೀಶ ಶೆಟ್ಟರ್**

- ಆದರೆ ಅವರಿಗೆ ಅವರ ಹೆಸರು ಹೈಕಮಾಂಡಿನ ಸಂಘ ವಿರೋಧಿ ಪಟ್ಟಿಗೆ ನೋಂದಣಿಯಾಗಬೇಕಾಗಿದೆ!

ದಿನ ಭವಿಷ್ಯ

ಮೇಷ
ನಿಮ್ಮ ಕೆರಿಯರ್‌ಗೆ ಆದ್ಯತೆ ಕೊಡಿ. ಹೊಣೆ ವಹಿಸಬೇಕಾದ ಸಮಯ ಬಂದಿದೆ. ಕಾಲಹರಣ ಮಾಡಬೇಡಿ. ಹಣದ ಕೊರತೆ ಕಾಡಬಹುದು.

ವೃಷಭ
ನಿಮ್ಮ ಬದುಕಲ್ಲಿ ಇತರರ ಹಸ್ತಕ್ಷೇಪ ಅಸಹನೆ ಮೂಡಿಸಲಿದೆ. ಆರ್ಥಿಕ ವ್ಯವಹಾರವೊಂದು ನೀವು ನಿರೀಕ್ಷಿಸಿದಂತೆ ಸಾಗದು. ಧನ ಹಾನಿ ಉಂಟಾದೀತು.

ಮಿಥುನ
ಗುರಿ ಸಾಧಿಸುವ ಛಲ ನಿಮ್ಮದು. ಕೋಪದಿಂದ ಎಗರಾಡುವ ಪ್ರಸಂಗ ಬಂದೀತು. ಇತರರನ್ನು ಅರಿತು ವ್ಯವಹರಿಸಲು ಪ್ರಯತ್ನಿಸಿ.

ಕಟಕ
ಅವಸರದ ಹೆಜ್ಜೆ ಇಡಬೇಡಿ. ಯೋಚಿಸಿ ಕಾರ್ಯವೆಸಗಿ. ಕಾಣದ ಕೈಗಳು ನಿಮ್ಮ ವಿರುದ್ಧ ಕಾರ್ಯಾಚರಿಸುತ್ತಿವೆ. ಕೌಟುಂಬಿಕ ಸೌಹಾರ್ದ.

ಸಿಂಹ
ನಿಮ್ಮ ಬದುಕು ಸರಿದಾರಿಯಲ್ಲಿ ಸಾಗುತ್ತಿದೆ ಎಂಬ ಭಾವ. ವಿಘ್ನಗಳು ನಿವಾರಣೆ. ದಂಪತಿಗಳಿಗೆ ಶುಭ ಬೆಳವಣಿಗೆ. ಆರ್ಥಿಕ ಕೊರತೆ ನೀಗಲಿದೆ.

ಕನ್ಯಾ
ಉತ್ಸಾಹದ ದಿನ. ಆದರೆ ಫಲ ನೀಡದ ಕಾರ್ಯಕ್ಕೆ ಎಳಸಬೇಡಿ. ಅಪರಿಚಿತರ ಜತೆ ಎಚ್ಚರದ ನಡೆಯಿರಲಿ. ಬೇಸ್ತು ಬೀಳುವ ಸಂಭವವಿದೆ.

ತುಲಾ
ವೃತ್ತಿಯಲ್ಲೂ ಖಾಸಗಿಯಾಗಿಯೂ ಉನ್ನತಿ. ದೊಡ್ಡ ಕಿರಿಕಿರಿಯೊಂದು ಅಂತ್ಯ. ಮನಸ್ಸಿಗೆ ನಿರಾಳತೆ. ಆರೋಗ್ಯ ಸುಸ್ಥಿರ.

ವೃಶ್ಚಿಕ
ಕುಟುಂಬದ ವ್ಯವಹಾರಕ್ಕೆ ಹೆಚ್ಚು ಗಮನ ಕೊಡಿ. ನಿಮ್ಮ ಮೇಲೆ ಒತ್ತಡ ಹೆಚ್ಚಲಿದೆ. ಹೊಸ ವ್ಯವಹಾರ ಆರಂಭಿಸಿದವರಿಗೆ ತೃಪ್ತಿಕರ ಬೆಳವಣಿಗೆ.

ಧನು
ನಿಮ್ಮ ನಿರ್ವಹಣೆ ಇತರರ ಗಮನಕ್ಕೆ ಬರಲಿದೆ. ಕೌಟುಂಬಿಕ ಸೌಹಾರ್ದ. ಮಕ್ಕಳ ಸಾಧನೆಯಿಂದ ತೃಪ್ತಿ. ಆರ್ಥಿಕ ಅಡ್ಡಿ ನಿವಾರಣೆ.

ಮಕರ
ಇತರರ ಜತೆ ಹೆಜ್ಜೆಯಿಟ್ಟು ಸಾಗಿ. ನಿಮ್ಮದೇ ವಿಭಿನ್ನ ದಾರಿ ತುಳಿಯದಿರಿ. ಪರಸ್ಪರ ಸಹಕಾರ ಅಗತ್ಯ. ಕೆಲವು ಅಡ್ಡಿಗಳು ಗೋಚರಿಸಲಿವೆ.

ಕುಂಭ
ಮನಸ್ಸು ಕೆಡಿಸುವ ಬೆಳವಣಿಗೆ. ಸಂಗಾತಿ ಜತೆ ಅಸಮಾಧಾನ. ವೃತ್ತಿಯಲ್ಲಿ ಎಡರುತೊಡರು ಎದುರಿಸುವಿರಿ. ಕೆಲವರ ಅಸಹಕಾರ ಉಂಟಾದೀತು.

ಮೀನ
ಅವಕಾಶಗಳು ನಿಮ್ಮ ಮುಂದಿವೆ. ಅವನ್ನು ಸದುಪಯೋಗ ಮಾಡುವ ಕಾರ್ಯ ನಿಮ್ಮದು. ಕಳೆದುದಕ್ಕೆ ಕೊರಗುತ್ತಾ ಉತ್ಸಾಹ ಕಳಕೊಳ್ಳದಿರಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 0,7,2,6

ಮೈಸೂರಲ್ಲಿ ಶಂಕಿತ ಬಾಂಗ್ಲಾ ವಲಸಿಗರ ಪತ್ತೆ

ಮೈಸೂರು: ರೈಲು ನಿಲ್ದಾಣದಲ್ಲಿ 40ಕ್ಕೂ ಹೆಚ್ಚು ಶಂಕಿತ ಬಾಂಗ್ಲಾ ವಲಸಿಗರು ಪತ್ತೆಯಾಗಿದ್ದು, ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಇವರನ್ನು ಗುರುತಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೊಲ್ಕತ್ತಾದಿಂದ ವಾರಕ್ಕೊಮ್ಮೆ ಸಂಚರಿಸುವ ಹೌರಾ ಎಕ್ಸ್‌ಪ್ರೆಸ್ ರೈಲಿನ ಮೂಲಕ ಇವರು ಮೈಸೂರಿಗೆ ಬಂದಿರುವುದಾಗಿ ತಿಳಿದುಬಂದಿದೆ. ರೈಲು ನಿಲ್ದಾಣದಲ್ಲಿ ಕಾರ್ಯಕರ್ತರು ಅವರ ಗುರುತಿನ ಚೀಟಿಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಪರಿಶೀಲನೆ ವೇಳೆ ಹಲವರ ಬಳಿ ಇದ್ದ ಗುರುತಿನ ಚೀಟಿಗಳ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಕೆಲವು ದಾಖಲೆಗಳು ನಕಲಿಯಾಗಿರುವ ಶಂಕೆ ಮೂಡಿದೆ ಎಂದು ಹೇಳಲಾಗಿದೆ. ಹೆಚ್ಚಿನವರ ಬಳಿ ಪಶ್ಚಿಮ ಬಂಗಾಳದ ಗುರುತಿನ ಚೀಟಿಗಳು ಪತ್ತೆಯಾಗಿವೆ. ವಿಚಾರಣೆ ವೇಳೆ ಪ್ರತಿಯೊಬ್ಬರೂ ಬೇರೆ ಬೇರೆ ಕಾರಣಗಳನ್ನು ನೀಡಿರುವುದು ಅನುಮಾನಕ್ಕೆ ಕಾರಣವಾಗಿದೆ. ಕೆಲವರು ಕೆಲಸಕ್ಕಾಗಿ ಬಂದಿದ್ದೇವೆ ಎಂದರೆ, ಇನ್ನೂ ಕೆಲವರು ಬೇರೆ ಕಾರಣಗಳನ್ನು ತಿಳಿಸಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಮೈಸೂರಿನಿಂದ ಕೇರಳ ಹಾಗೂ ಮಡಿಕೇರಿ ಭಾಗಗಳಿಗೆ ತೆರಳುವ ಉದ್ದೇಶದಿಂದ ಇವರು ಬಂದಿದ್ದರು ಎಂದು ತಿಳಿದುಬಂದಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ರೈಲ್ವೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಎಲ್ಲರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬಳಿಕ ಸ್ಥಳೀಯ ಪೊಲೀಸರು ಕೂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಲಸಿಗರ ದಾಖಲೆಗಳು, ಗುರುತು ಮತ್ತು ಪ್ರಯಾಣದ ಉದ್ದೇಶದ ಬಗ್ಗೆ ಅಧಿಕಾರಿಗಳು ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ. ತನಿಖೆಯ ಬಳಿಕ ಸತ್ಯಾಸತ್ಯತೆ ಹೊರಬೀಳಲಿದೆ.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿಕೆ

ಬೇನಾಮಿ ಆಸ್ತಿ ಸಾಬೀತಾದರೆ ದಾನ

ರಾಮನಗರ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಬೇನಾಮಿ ಆಸ್ತಿ ಹೊಂದಿರುವುದನ್ನು ಸಾಬೀತುಮಾಡಿದರೆ ಆ ಜಮೀನನ್ನು ನಾನು ಶಾಲೆಗೆ ಅಥವಾ ಆಸ್ಪತ್ರೆಗೆ ದಾನವಾಗಿ ಕೊಡುತ್ತೇನೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಬಿಡದಿ ಹೋಬಳಿಯ ಮರೆವೇಗೌಡನದೊಡ್ಡಿ ಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ಈ ಭಾಗದಲ್ಲಿ 100 ಎಕರೆ ಬೇನಾಮಿ ಆಸ್ತಿ ಹೊಂದಿದ್ದಾರೆ ಎಂದು ಸ್ಥಳೀಯ ಶಾಸಕ ಹೇಳಿದ್ದಾರೆ. ಕೇತಗಾನಹಳ್ಳಿ ಗ್ರಾಮದಲ್ಲಿ 1985ರಲ್ಲಿ ನಮ್ಮ ತಂದೆ ಜಾಗ ಖರೀದಿ ಮಾಡಿದ್ದಾರೆ. ಯಾರ ತಲೆ ಹೊಡೆದು ಅದನ್ನು ಖರೀದಿ ಮಾಡಿಲ್ಲ. ಈ ಜಮೀನನ್ನು ಸಿನಿಮಾ ಹಂಚಿಕೆ ಮಾಡಿದ ದುಡ್ಡಲ್ಲಿ ಖರೀದಿ ಮಾಡಿದ್ದೇವೆ ಎಂದು ತಿಳಿಸಿದರು.

ನಮ್ಮ ತಾಯಿ ಹೆಸರಲ್ಲಿ 27 ಎಕರೆ, ನನ್ನ ಹೆಸರಲ್ಲಿ 5 ಎಕರೆ ಜಾಗವನ್ನು ಕೋವಿಡ್ ಟೈಂನಲ್ಲಿ ನಾವು ಖರೀದಿ ಮಾಡಿದ್ದೇವೆ. ನಮ್ಮ ಜಾಗದಲ್ಲಿ ಕಮರ್ಷಿಯಲ್ ಬಿಲ್ಡಿಂಗ್ ಕಟ್ಟಿಲ್ಲ. ರೈತರಿಗೆ ಅನುಕೂಲ ಮಾಡಲು ಹಾಲಿನ ಉತ್ಪನ್ನಗಳ ಉತ್ಪಾದನೆಗೆ ಅದನ್ನು ಬಳಸಲು ಇಟ್ಟಿದ್ದೇವೆ ಎಂದು ತಿಳಿಸಿದರು.

ರೈತರು ಬೇಡ ಅಂದಿದಕ್ಕೆ ಕುಮಾರಸ್ವಾಮಿ ಈ ಯೋಜನೆ ಕೈಬಿಟ್ಟಿದ್ದರು. ಕುಮಾರಸ್ವಾಮಿ ಯಾವತ್ತೂ ರೈತರ ವಿರುದ್ಧ ತೀರ್ಮಾನ ಮಾಡಿಲ್ಲ. ನಾವು ಎಲ್ಲಾ ರೀತಿಯ ಹೋರಾಟಕ್ಕೆ ಸಿದ್ಧರಿದ್ದೇವೆ. ನಾವು ಹೋರಾಟದಿಂದ ಹೆದರಿ ಓಡಿಹೋಗುವುದಿಲ್ಲ. ಯಾರ ಬೆದರಿಕೆಗೂ ದೇವೇಗೌಡರ ಕುಟುಂಬ ಹೆದರಲ್ಲ ಎಂದರು.

ರೆಡ್ ಝೋನ್ ಹಾಕಿದ್ದಾರೆ ಎಂದು ಆರೋಪ ಮಾಡುತ್ತೀರಲ್ಲ. ನೀವು ಯೋಜನೆ ಕೈಬಿಡಿ, ಮುಂದೆ ನಾವೇ ಬಂದು ರೆಡ್ ಝೋನ್ ತೆಗೆಯುತ್ತೇವೆ. ಸರ್ಕಾರ ರಾತ್ರೋರಾತ್ರಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಇದರ ವಿರುದ್ಧ ಜೆಡಿಎಸ್ ಹೋರಾಟ ನಡೆಸುತ್ತಿದೆ ಎಂದರು.

ರೈತರು 450 ದಿನಗಳಿಂದ ನಿರಂತರ ಹೋರಾಟ ಮಾಡುತ್ತಿದ್ದಾರೆ. ಸರ್ಕಾರದ ಯಾವುದೇ ಪ್ರತಿನಿಧಿ ಗಳು ರೈತರನ್ನು ಭೇಟಿ ಮಾಡಿಲ್ಲ. ರಾಜ್ಯ ಸರ್ಕಾರಕ್ಕೆ ಕಿವಿ ಕೇಳ್ತಿಲ್ಲ, ಕಣ್ಣು ಕಾಣ್ತಿಲ್ಲ. ಯೋಜನೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಮಾಡುತ್ತಿದ್ದಾರೆ. ಇದರಲ್ಲಿ ಸಾರ್ವಜನಿಕರ ಹಿತಾಸಕ್ತಿ ಇಲ್ಲ. ರೈತರ ಅನುಮತಿ ಪಡೆಯದೆ ಯೋಜನೆ ಮಾಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು. ರೈತರ ಭೂಮಿ ಕಸಿಯಲು ಸರ್ಕಾರ ದಲ್ಲಾಳಿಗಳನ್ನು ಬಿಟ್ಟಿದೆ. ಅವರು ರೈತರನ್ನು ಯಾಮಾರಿಸುವ ಕೆಲಸ ಮಾಡುತ್ತಿದ್ದಾರೆ. ರೈತರ ಒಗ್ಗಟ್ಟು ಒಡೆಯುವ ಕೆಲಸ ನಡೆಯುತ್ತಿದೆ. ಇದಕ್ಕೆ ರೈತರು ಅವಕಾಶ ಮಾಡಿಕೊಡಬಾರದು ಎಂದರು. ಪಾದಯಾತ್ರೆಯಲ್ಲಿ ಸಾವಿರಾರು ರೈತರು, ಜೆಡಿಎಸ್ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಎಂಎಲ್‌ಸಿ ಜವರಾಯಿಗೌಡ ಹಾಗೂ ಮಾಜಿ ಎಂಎಲ್‌ಸಿ ಶ್ರೀಕಂಠೇಗೌಡ, ಮಾಜಿ ಶಾಸಕ ಎ.ಮಂಜುನಾಥ್ ಪಾಲ್ಗೊಂಡಿದ್ದರು.



ಪಾದಯಾತ್ರೆ ವೇಳೆ ವಾಗ್ವಾದ ತಾಲೂಕಿನ ಬಿಡದಿ ಹೋಬಳಿಯಲ್ಲಿ ತಲೆಯೆತ್ತಲಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ವಿರೋಧಿಸಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಪಕ್ಷದ ವತಿಯಿಂದ ಯೋಜನಾ ಪ್ರದೇಶದ ಗ್ರಾಮಗಳಲ್ಲಿ ನಡೆದ ಪಾದಯಾತ್ರೆ ಸಂದರ್ಭದಲ್ಲಿ ಪರ ಮತ್ತು ವಿರೋಧ ಇರುವವರ ನಡುವೆ ವಾಗ್ವಾದ ನಡೆಯಿತು. ಪಾದಯಾತ್ರೆಯನ್ನು ಅಂಚಿಪುರ ಗ್ರಾಮದಲ್ಲಿ ಆರಂಭಿಸಿದ ನಿಖಿಲ್ ನಂತರ ಗ್ರಾಮದ ಕಾಲೊನಿ ಕಡೆಗೆ ಪಾದಯಾತ್ರೆ ಹೊರಟರು. ಅಷ್ಟೊತ್ತಿಗಾಗಲೇ ಗ್ರಾಮದ ವೃತ್ತದಲ್ಲಿ ಅಳವಡಿಸಿದ್ದ ಟೌನ್ ಶಿಪ್ ಪರವಾದ ಫ್ಲೆಕ್ಸ್ ಗಳನ್ನು ಹೋರಾಟಗಾರರು ಹರಿದಿರುವ ಸುದ್ದಿ ಹಬ್ಬಿತು.

ಪಟ್ಟಾಭಿಷೇಕದ ಗುಂಗಿನಿಂದ ಹೊರ ಬನ್ನಿ: ಸಚಿವ ಜೋಶಿ

ಬೆಳಗಾವಿ: ರಾಜ್ಯದಲ್ಲಿ ಮಳೆ ಅಭಾವ ಎದುರಾಗಿದೆ. ಚುನಾವಣೆ ಹಾಗೂ ಪಟ್ಟಾಭಿಷೇಕದ ಗುಂಗಿನಿಂದ ಹೊರ ಬಂದು ಆಡಳಿತದತ್ತ ಗಮನಹರಿಸುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತೀವ್ರ ವಾಗ್ದಾಳಿ ನಡೆಸಿದರು.

ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಹಿನ್ನೆಲೆಯಲ್ಲಿ ಬೆಳಗಾವಿಗೆ ಆಗಮಿಸಿದ ಸಂದರ್ಭದಲ್ಲಿ ಮಧ್ಯಮದೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ತಾವು ಈ ಬಾರಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಕಳೆದ ಬಾರಿ ಐಹೊಳೆ ಮತ್ತು ಪಟ್ಟದಕಲ್ಲಿನಲ್ಲಿ ಪಾಲ್ಗೊಂಡಿದ್ದನ್ನು ಸ್ಮರಿಸಿದ ಅವರು, ಬೆಳಗಾವಿ ಜಿಲ್ಲಾಡಳಿತ ಅತ್ಯುತ್ತಮವಾಗಿ ಕಾರ್ಯಕ್ರಮ ಆಯೋಜಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್ ಕಾರ್ಯಕ್ರಮದ ಬಗ್ಗೆ ಸ್ಪಷ್ಟನೆ ನೀಡಿದ ಅವರು, ಅದು ಕೇವಲ ಆರ್‌ಎಸ್‌ಎಸ್ ಕಾರ್ಯಕ್ರಮವಲ್ಲ. ರಾಜ್ಯ ಮತ್ತು ದೇಶ ಕಂಡ ಜನಸಂಘ ಹಾಗೂ ಜನತಾ ಪಾರ್ಟಿಯ ಅಪ್ರತಿಮ ನಾಯಕ, ಅದ್ಭುತ ವಾಗ್ಮಿ ಜಗನ್ನಾಥ್ ಜೋಶಿಯವರ ಸ್ಮರಣಾರ್ಥ ನಿರ್ಮಿಸಿರುವ ಭವನದ ಉದ್ಘಾಟನಾ ಕಾರ್ಯಕ್ರಮವಾಗಿದೆ. ಸಂಘದ ಹಿರಿಯ ಮುಖಂಡರಾದ ದತ್ತಾತ್ರೇಯ ಹೊಸಬಾಳೆಯವರು ಇದನ್ನು ಉದ್ಘಾಟಿಸುತ್ತಿದ್ದು, ನಾನೂ ಕೂಡ ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ ಎಂದರು.

ರಾಜ್ಯದಲ್ಲಿನ ಮಳೆ ಕೊರತೆ ಇದೆ. ಈ ಬಾರಿ 'ಸೂಪರ್ ಎಲ್ನಿನೋ' ಪ್ರಭಾವದಿಂದ ದೇಶಾದ್ಯಂತ ಶೇ.40ರಷ್ಟು ಮಳೆ ಕೊರತೆಯಾಗುವ ಸಾಧ್ಯತೆಯಿದೆ. ರಾಜ್ಯದ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಚುನಾವಣೆ ಹಾಗೂ ಪಟ್ಟಾಭಿಷೇಕ ಎಲ್ಲವೂ ಮುಗಿದಿದೆ ಎಂದರು.

ಸವಾಲಿಗೆ ಹಿಂದು ಮೌಲ್ಯ ಪರಿಹಾರ

ಪುಟ ೧➡ **ಸಂಘವೆಂಬುದು ಜೀವನ ವಿಧಾನ:** ಸಂಘವು ಕೇವಲ ಒಂದು ಸಂಘಟನೆಯಲ್ಲ; ಅದು ಸಿದ್ಧಾಂತ, ಸಂಘಟನೆ, ಆಂದೋಲನ ಹಾಗೂ ಜೀವನ ವಿಧಾನವೂ ಆಗಿದೆ. ಕಳೆದ ನೂರು ವರ್ಷಗಳಲ್ಲಿ ಸಂಘವು ವ್ಯಕ್ತಿ ನಿರ್ಮಾಣದ ಮೂಲಕ ಸಮಾಜದಲ್ಲಿ ಮೌಲ್ಯಾಧಾರಿತ ಕಾರ್ಯಶಕ್ತಿ ರೂಪಿಸಿದೆ. ಈ ಕಾರ್ಯಶಕ್ತಿಯೇ ಸಮಾಜ ಮತ್ತು ವ್ಯವಸ್ಥಾ ಪರಿವರ್ತನೆಗೆ ಕಾರಣವಾಗಿದೆ ಎಂದರು.

ಕಾಶ್ಮೀರದ 370ನೇ ವಿಧಿ ರದ್ದು, ಅಯೋಧ್ಯೆಯ ಶ್ರೀರಾಮಮಂದಿರ ನಿರ್ಮಾಣ, ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಆತ್ಮನಿರ್ಭರ ಭಾರತದಂತಹ ಉಪಕ್ರಮಗಳನ್ನು ವ್ಯವಸ್ಥಾ ಪರಿವರ್ತನೆಯ ಉದಾಹರಣೆಗಳಾಗಿ ಉಲ್ಲೇಖಿಸಿದರು. ಆದರೆ ಇವುಗಳಿಗಿಂತಲೂ ಮುಖ್ಯವಾದುದು ಸಾಮಾಜಿಕ ಪರಿವರ್ತನೆ ಎಂದು ಪ್ರತಿಪಾದಿಸಿದರು.

ಮನಸ್ಥಿತಿ ಬದಲಾಗಬೇಕು: ಸಮರಸತೆ, ಸ್ವದೇಶಿ, ಪರಿಸರ ಸಂರಕ್ಷಣೆ, ಕುಟುಂಬ ಪ್ರಬೋಧನ ಹಾಗೂ ನಾಗರಿಕ ಶಿಷ್ಟಾಚಾರ-ಕರ್ತವ್ಯಗಳಂತಹ ವಿಷಯಗಳಲ್ಲಿ ವ್ಯಕ್ತಿ ಮತ್ತು ಕುಟುಂಬದ ಮಟ್ಟದಿಂದಲೇ ಬದಲಾವಣೆ ಆಗಬೇಕಿದೆ. ಸಮಾಜದ ಮನಸ್ಥಿತಿಯಲ್ಲಿ ಬದಲಾವಣೆ ಇಲ್ಲದೆ ಯಾವುದೇ ವ್ಯವಸ್ಥಾ ಬದಲಾವಣೆ ಶಾಶ್ವತವಾಗುವುದಿಲ್ಲ ಎಂದು ಅವರು ಹೇಳಿದರು.

ಜಾಗತಿಕ ಬೆಳವಣಿಗೆಗಳ ಕುರಿತು ಮಾತನಾಡಿದ ಮುಕುಂದ ಅವರು, ವಿಶ್ವ ಈಗ ಅಮೆರಿಕ-ರಷ್ಯಾ ಕೇಂದ್ರಿತ ವ್ಯವಸ್ಥೆಯಿಂದ ಹೊರಬಂದು ಬಹುಧ್ರುವೀಯ ವ್ಯವಸ್ಥೆಯತ್ತ ಹೊರಳಿಕೊಳ್ಳುತ್ತಿದೆ. ಇದೇ ವೇಳೆ ತಂತ್ರಜ್ಞಾನ, ಪೂರೈಕೆ ಸರಪಳಿ, ಇಂಧನ, ಪರಿಸರ ಹಾಗೂ ಜನಸಂಖ್ಯಾ ರಚನೆಯಲ್ಲಿ ಸಂಭವಿಸುತ್ತಿರುವ ವೇಗದ ಬದಲಾವಣೆಗಳು ಹೊಸ ಸವಾಲುಗಳನ್ನು ಸೃಷ್ಟಿಸುತ್ತಿವೆ ಎಂದು ವಿಶ್ಲೇಷಿಸಿದರು.



ವಿಶೇಷವಾಗಿ ಜನಸಂಖ್ಯಾ ಪರಿವರ್ತನೆ ಮತ್ತು ಜನಸಂಖ್ಯಾ ಅಸಮತೋಲನದ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಭಾರತದಲ್ಲಿಯೂ ಈ ವಿಚಾರದ ಬಗ್ಗೆ ಗಂಭೀರ ಚಿಂತನೆ ಅಗತ್ಯವಿದೆ. ಕುಟುಂಬ ವ್ಯವಸ್ಥೆ ಮತ್ತು ಸಮಾಜದ ಸಮತೋಲನ ಕಾಪಾಡಲು ಆರೋಗ್ಯಕರ ಜನಸಂಖ್ಯಾ ರಚನೆ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಒಂದು ಸಮಾಜ ಸದೃಢವಾಗಿ ಉಳಿದು ಮುಂದುವರಿಯಬೇಕಾದರೆ ಅಂತಹ ಸಮಾಜದ ಫಲವತ್ತತೆ 2.5ರಷ್ಟಿರಬೇಕು.ಆದರೆ ಜಗತ್ತಿನಾದ್ಯಂತ ಇಂದು ಫಲವತ್ತತೆಯ ಕುಸಿತ ಕಂಡುಬರುತ್ತಿದ್ದು, ಭಾರತದಲ್ಲಿದು 1.9 ಆಗಿದ್ದು, ಹಿಂದುಗಳಲ್ಲಿದು 1.7ಕ್ಕೆ ಕುಸಿದಿದೆ. ಸಮೃದ್ಧ, ಸದೃಢ ಸಮಾಜ ರೂಪುಗೊಳ್ಳಬೇಕಾದರೆ ಈ ಫಲವತ್ತತೆಯನ್ನು ಹೆಚ್ಚಿಸಬೇಕಿದೆ.ಕುಟುಂಬಕ್ಕೆ ಒಂದು ಮಗು ಇದ್ದಲ್ಲಿ ಹಂಚಿ ತಿನ್ನಬೇಕೆಂಬ ಕಲ್ಪನೆಯೇ ಇಲ್ಲವಾಗಿ ವ್ಯಕ್ತಿ-ಸಮಾಜದ ವರ್ತನೆಯಲ್ಲೇ ವ್ಯತ್ಯಯವಾಗುವ ಅಪಾಯವಿದೆ. ಅದೇ 3ಮಕ್ಕಳಿರುವಲ್ಲಿ ಕೌಟುಂಬಿಕ ಸುಭದ್ರತೆ, ಸ್ವಸ್ಥತೆ ಹೆಚ್ಚಿರುತ್ತದೆ.ಈ ಬಗ್ಗೆ ಸಮಾಜ ಗಂಭೀರವಾಗಿ ಚಿಂತಿಸುವ ಅಗತ್ಯ ಇರುವುದನ್ನು ತಜ್ಞರು ಒತ್ತಿ ಹೇಳುತ್ತಿದ್ದಾರೆ.

ಹಿಂದು ಜೀವನದೃಷ್ಟಿಯು 'ವಸುಧೈವ ಕುಟುಂಬಕಂ', 'ಕೃಣ್ವಂತೋ ವಿಶ್ವಮಾರ್ಯಂ' ಮುಂತಾದ ತತ್ವಗಳ ಮೂಲಕ ವಿಶ್ವಮಾನವೀಯ ಸಂದೇಶ ನೀಡಿದೆ. ಪ್ರಕೃತಿ ಯನ್ನು ಶೋಷಿಸುವುದಲ್ಲ,ಸಹಜೀವನ ನಡೆಸುವುದು ಭಾರತೀಯ ಸಂಸ್ಕೃತಿಯ ಮೂಲ ತತ್ವವಾಗಿದೆ. ಇಂದು ಜಗತ್ತು'ಸುಸ್ಥಿರ ಅಭಿವೃದ್ಧಿ'ಎಂದು ಕರೆಯುತ್ತಿರುವ ಚಿಂತನೆಗಳನ್ನು ಭಾರತೀಯ ಋಷಿಮುನಿಗಳು ಸಾವಿರಾರು ವರ್ಷಗಳ ಹಿಂದೆ ಸಹಜವಾಗಿಯೇ ಪ್ರತಿಪಾದಿಸಿದ್ದರು ಎಂದು ಅವರು ನೆನಪಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಸಂಘ ಚಾಲಕ್ ಡಾ.ಪಿ.ವಾಮನ ಶೆಣೈ, ಮಂಗಳೂರು ಮಹಾನಗರ ಸಂಘ ಚಾಲಕ್ ಡಾ.ಸತೀಶ್ ರಾವ್ ಉಪಸ್ಥಿತರಿದ್ದರು. ಉದಯ್ ಕುಮಾರ್ ಶೆಣೈ ಸ್ವಾಗತಿಸಿ, ವಿಶ್ವಾಸ್ ಯು.ಎಸ್. ವಂದಿಸಿದರು. ಶಿವರಾಜ್ ನಿರೂಪಿಸಿದರು. ಮನ್ವಿತಾ ಪ್ರಾರ್ಥನೆ, ಆಶಾ ರೈ ವಂದೇ ಮಾತರಂ ಹಾಡಿದರು.

ದೇಶದಾದ್ಯಂತ ನೀಟ್ ಮರುಪರೀಕ್ಷೆ ಸುಗಮ

ಪುಟ ೧➡ **ವಿಶೇಷ ಅಭ್ಯರ್ಥಿಗಳಿಗೆ ನೆರವು:** 10 ಸಾವಿರಕ್ಕೂ ಹೆಚ್ಚು ವಿಶಿಷ್ಟಚೇತನ ಅಭ್ಯರ್ಥಿಗಳಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿತ್ತು. ರಸ್ತೆ ಅಪಘಾತಕ್ಕೊಳಗಾದ ಹಾಗೂ ಕೀಮೋಥೆರಪಿ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೂ ಪ್ರತ್ಯೇಕ ಸೌಲಭ್ಯಗಳನ್ನು ಒದಗಿಸಲಾಗಿತ್ತು:

ನೀಟ್ ಸುಸೂತ್ರ: ನಕಲಿ ಪ್ರವೇಶ ಪತ್ರ ಹಾಗೂ ಮೊಬೈಲ್ ತೆಗೆದುಕೊಂಡು ಬರಲು ಯತ್ನಿಸಿದ ಕೆಲ ಪ್ರಕರಣಗಳು ಪತ್ತೆಯಾಗಿದ್ದರೂ, ಯಾವುದೇ ಅಕ್ರಮ ನಡೆಯದಂತೆ ತಡೆಯಲಾಗಿದೆ. ನೀಟ್ ಮರು ಪರೀಕ್ಷೆ ಸುಸೂತ್ರವಾಗಿ ನಡೆದಿದೆ ಎಂದು ಎನ್‌ಟಿಎ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ತಿಳಿಸಿದ್ದಾರೆ. ಕೆಲವೆಡೆ ವಿದ್ಯಾರ್ಥಿಗಳು ಮಳೆ, ಸಂಚಾರ ದಟ್ಟಣೆ ಹಾಗೂ ಅಪಘಾತಗಳಿಂದ ಪರೀಕ್ಷಾ ಕೇಂದ್ರಗಳಿಗೆ ತಡವಾಗಿ ತಲುಪಿದ ಕಾರಣ ಪ್ರವೇಶ ನಿರಾಕರಣೆಯಾದ ಘಟನೆಗಳೂ ವರದಿಯಾಗಿವೆ.

ದಿಲ್ಲಿ ಏರ್‌ಪೋರ್ಟ್‌ನಲ್ಲಿ 45 ನಿಮಿಷ ಕಾದ ಮೋದಿ

ಪುಟ ೧➡ ಅವರು ತಮ್ಮ 2 ದಿನಗಳ ಒಡಿಶಾ ಮತ್ತು ಪಶ್ಚಿಮ ಬಂಗಾಳ ಭೇಟಿ ಮುಗಿಸಿ ಹಿಂತಿರುಗಿದ್ದರು. ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮರಳುತ್ತಿದ್ದರು. ದಿಲ್ಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಳಿದು ಲೋಕಕಲ್ಯಾಣ ಮಾರ್ಗದಲ್ಲಿರುವ ತಮ್ಮ ನಿವಾಸಕ್ಕೆ ತೆರಳುವ ವೇಳೆ ನೀಟ್ ಪರೀಕ್ಷೆ 2 ಗಂಟೆಯಿಂದ ಆರಂಭಗೊಳ್ಳಲಿದ್ದ ಕಾರಣ ಅವರು ವಿದ್ಯಾರ್ಥಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದಕ್ಕಾಗಿ ಏರ್‌ಪೋರ್ಟ್‌ನಲ್ಲೇ 45 ನಿಮಿಷ ಉಳಿದು ಬಳಿಕ ನಿವಾಸಕ್ಕೆ ತೆರಳಿದರು.

ವಿಶ್ವ ಶಾಂತಿಗೆ ಯೋಗ

ಪುಟ ೧➡ ಯೋಗವು ಜನರಿಗೆ ಇದನ್ನೇ ಕಲಿಸುತ್ತದೆ. ಯೋಗದ ಮೂಲ ಅಗ್ನಿಪರೀಕ್ಷೆ ಸಮತೋಲನ ಮತ್ತು ಇದು ನಮ್ಮೆಲ್ಲರ ಬದುಕಿಗೆ ಅತ್ಯವಶ್ಯ ಎಂದು ಹೇಳಿದರು. ಕೋಲ್ಕತ್ತಾದ ಐಕಾನಿಕ್ ರೆಡ್ ರೋಡ್‌ನಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಸಾವಿರಾರು ಜನರ ಎದುರ ರಾಷ್ಟ್ರವನ್ನುದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು.

ಮಾನಸಿಕ ಸ್ವಾಸ್ಥ್ಯಕ್ಕೂ ಯೋಗವೇ ಮದ್ದು: ಬಹುತೇಕ ಜನರು ತಮ್ಮ ಆಧುನಿಕ ಜೀವನಶೈಲಿಯಿಂದಾಗಿ ಬದುಕಲ್ಲಿ ಸಮತೋಲನ ಕಾಯ್ದುಕೊಳ್ಳಲು ಹೆಣಗಾಡುತ್ತಾರೆ. ಸಮತೋಲಿತವಾಗಿ ಬದುಕುವುದು ಹೇಗೆಂಬುದನ್ನು ಯೋಗವು ನಮಗೆ ಕಲಿಸುತ್ತದೆ. ಯಾವುದು ಬೇಕು, ಯಾವುದು ಬೇಡ ಎಂಬುದನ್ನೂ ಕಲಿಸುತ್ತದೆ. ನಮ್ಮ ಶರೀರಗಳನ್ನು ಸೂಕ್ತವಾದ ರೀತಿಯಲ್ಲಿ ನಿರ್ವಹಿಸಲು ಕಲಿತಾಗ ಆರೋಗ್ಯವು ನಮಗೊಂದು ಅಭ್ಯಾಸವಾಗುತ್ತದೆ. ಯೋಗವು ಕೇವಲ ಶಾರೀರಿಕ ಸ್ವಾಸ್ಥ್ಯ ಕಾಪಾಡಲು ಸೀಮಿತವಲ್ಲ. ವಾಸ್ತವದಲ್ಲಿ ಮಾನಸಿಕ ಆರೋಗ್ಯ ಕಾಪಾಡಲು ಸಹಕರಿಸುವ ಮುಖೇನ ಶಾರೀರಿಕ ಆರೋಗ್ಯಕ್ಕೆ ಹಾದಿ ತೋರುವುದು ಎಂದು ಯೋಗದ ಮಹತ್ವವನ್ನು ಪ್ರಧಾನಿ ಮೋದಿ ಅರ್ಥಪೂರ್ಣವಾಗಿ ವಿವರಿಸಿದರು.

ಜಾಗತಿಕ ಶಾಂತಿಗೂ ಹಾದಿ ಸುಗಮ: ಯಾವುದು ಸರಿ ಮತ್ತು ಯಾವುದು ತಪ್ಪು ಅಥವಾ ಯಾವುದು ಬೇಕು, ಯಾವುದು ಬೇಡ ಎಂಬುದನ್ನು ನಿರ್ಧರಿಸುವ ಆತ್ಮಪ್ರಜ್ಞೆಯಿಂದ ಮಾನಸಿಕ ಶಾಂತಿ ಲಭಿಸುವುದು ಮಾತ್ರವಲ್ಲ, ಜಾಗತಿಕ ಶಾಂತಿಗೂ ಹಾದಿ ಸುಗಮವಾಗುವುದು. ಹಾಗಾಗಿಯೇ ನಮ್ಮ ವೈಯಕ್ತಿಕ ಜೀವನಶೈಲಿಗೆ ಮಾತ್ರವಲ್ಲ. ಈ ಜಗತ್ತಿನ ಉಜ್ವಲ ಭವಿಷ್ಯಕ್ಕಾಗಿ ಕೂಡ ಯೋಗ ಅತ್ಯವಶ್ಯ ಎಂದು ಪ್ರಧಾನಿ ಮೋದಿ ಹೇಳಿದರು.

ಜಗತ್ತಿನ ಹಲವು ವಲಯಗಳು ಸಶಸ್ತ್ರ ಸಂಘರ್ಷಗಳಿಂದ ಜರ್ಝರಿತವಾಗಿ ರುವುದು ಹಾಗೂ ರಾಜತಾಂತ್ರಿಕ ಒತ್ತಡಗಳಿಂದ ತೊಳಲಾಡುತ್ತಿರುವುದು ಮತ್ತು ಸಂಘರ್ಷ, ವಿವಾದಗಳಿಗೆ ಮಾತುಕತೆ ಮುಖೇನ ಶಾಂತಿಯುತ ಪರಿಹಾರ ಕಂಡುಕೊಳ್ಳುವಂತೆ ಭಾರತ ಸುದೀರ್ಘ ಕಾಲದಿಂದ ಆಗ್ರಹಿಸುತ್ತಿರುವ ವಾಸ್ತವ ಮಧ್ಯೆ, ಸಮತೋಲಿತ ಬದುಕು, ಆತ್ಮಪ್ರಜ್ಞೆ, ಆಂತರಿಕವಾಗಿ ಸ್ಥಿರತೆ-ಮೌಲ್ಯಗಳಿಗಾಗಿ ಯೋಗಾಭ್ಯಾಸ ಮಾಡಿ, ಯೋಗವು ಪರಸ್ಪರ ದ್ವೇಷಾಸೂಯೆ, ಸಂಘರ್ಷಗಳಿಂದ ಮುಕ್ತರಾಗಲು ಸಮಾಜಕ್ಕೆ ನೆರವಾಗುವುದೆಂಬ ಅಪೂರ್ವ ಸಂದೇಶವನ್ನು ಪ್ರಧಾನಿ ಮೋದಿ ನೀಡಿದ್ದಾರೆ.

ಮೋದಿ ಅಭಿನಂದನೆ

ಸ್ವಚ್ಛತಾ ಸೆ ಸ್ವಾಗತ್ ಉಪಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸಿರುವ ಕೋಲ್ಕತ್ತಾ ಜನತೆಯನ್ನು ಪ್ರಧಾನಿ ಮೋದಿ ಅಭಿನಂದಿಸಿದರು. ಸ್ವಚ್ಛತಾ ಸೆ ಸ್ವಾಗತ್ ಘೋಷಣೆಯನ್ನು ಕಾರ್ಯಗತಗೊಳಿಸಲು ಸಮರ್ಪಣಾ ಭಾವದಿಂದ ಪ್ರಯತ್ನಿಸಿ, ದುಡಿದ ಕೋಲ್ಕತ್ತಾ ಜನತೆಯನ್ನು ತಾನು ಅಭಿನಂದಿಸುತ್ತೇನೆ. ಅವರ ನಾಗರಿಕ ಕರ್ತವ್ಯವು ಇಡೀ ದೇಶವನ್ನೇ ಪ್ರಭಾವಿತಗೊಳಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ವಯಸ್ಸಿನಂತೆ ಅನಾರೋಗ್ಯ ಹೆಚ್ಚಬೇಕಾಗಿಲ್ಲ: ಮೋದಿ

ವಯಸ್ಸು ಹೆಚ್ಚಾದಂತೆ ಅನಾರೋಗ್ಯವೂ ಹೆಚ್ಚಬೇಕು ಎಂಬ ಕಲ್ಪನೆಯನ್ನು ಬದಲಾಯಿಸುವ ಸಮಯ ಬಂದಿದೆ. ಯೋಗವು ಕೇವಲ ದೇಹವನ್ನು ಸದೃಢಗೊಳಿಸುವ ಸಾಧನವಲ್ಲ, ಆರೋಗ್ಯಕರ ಮತ್ತು ಚೈತನ್ಯಭರಿತ ವೃದ್ಧಾಪ್ಯಕ್ಕೆ ದಾರಿಯಾಗಿದೆ. 70ರ ವಯಸ್ಸಿನಲ್ಲಿ 50ರ ವಯಸ್ಸಿಗಿಂತ ಹೆಚ್ಚು ಆರೋಗ್ಯವಂತರಾಗಿರಬೇಕು. 40ರಲ್ಲಿ 20ಕ್ಕಿಂತ ಹೆಚ್ಚು , 50ರಲ್ಲಿ 30ಕ್ಕಿಂತ ಹೆಚ್ಚು ಲವಲವಿಕೆ -ಚೈತನ್ಯ ಹೊಂದುವಂತಾಗಬೇಕು. ಆದ್ದರಿಂದ ಯೋಗವನ್ನು ಒಂದು ದಿನಕ್ಕೆ ಸೀಮಿತಗೊಳಿಸಬೇಡಿ, ಜೀವನದ ಭಾಗವಾಗಿಸಿಕೊಳ್ಳಿ'' ಎಂದು ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಕರೆ ನೀಡಿದ್ದಾರೆ.ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಸಮಸ್ಯೆಗಳು, ಸ್ಥೂಲಕಾಯ ಹಾಗೂ ಒತ್ತಡದಿಂದ ಉಂಟಾಗುವ ಅನಾರೋಗ್ಯಗಳು ವೇಗವಾಗಿ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಪ್ರಧಾನಿ, ಇಂತಹ ಜೀವನಶೈಲಿ ಕಾಯಿಲೆಗಳಿಂದ ದೂರವಿರಲು ಯೋಗ ಅತ್ಯಂತ ಪರಿಣಾಮಕಾರಿ ಮಾರ್ಗ. ಇದನ್ನು ಅನುಸರಿಸಿ ಎಂದು ಜನತೆಗೆ ಕರೆ ನೀಡಿದರು.

ರಾಜ್ಯದ ವಿವಿಧೆಡೆ ಯೋಗ ಕಾರ್ಯಕ್ರಮ

ಪುಟ ೧➡ ಇದೇ ವೇಳೆ ಮಲ್ಲಕಂಬ ಪ್ರದರ್ಶನ ಕಣ್ಮನ ಸೆಳೆಯಿತು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸೇರಿದಂತೆ ನಗರದ ವಿವಿಧೆಡೆ ಬೃಹತ್ ಯೋಗ ಶಿಬಿರಗಳು ನಡೆದವು. ಏಕಕಾಲಕ್ಕೆ 45 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಗಾಭ್ಯಾಸದಲ್ಲಿ ತೊಡಗಿಸಿಕೊಂಡು ಗಮನ ಸೆಳೆದರು. ಮೈಸೂರಿನಲ್ಲಿ ಬೆಳಗ್ಗೆಯಿಂದಲೇ ಅರಮನೆ ಆವರಣ ಸೇರಿದಂತೆ ನಗರದ ಪ್ರಮುಖ ಸ್ಥಳಗಳಲ್ಲಿ ಓಂಕಾರ ಮತ್ತು ಯೋಗಾಸನಗಳ ಪ್ರದರ್ಶನಗಳು ನಡೆದವು. ಬೆಳಗಾವಿಯಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಭಾಗವಹಿಸಿದ್ದರು. ಚಾಮರಾಜನಗರದ ಪೊಲೀಸ್ ಕವಾಯತು ಮೈದಾನ, ಶಿವಮೊಗ್ಗ, ಬಳ್ಳಾರಿ ಹಾಗೂ ದಾವಣಗೆರೆ ಜಿಲ್ಲೆಗಳಲ್ಲೂ ಜಿಲ್ಲಾಡಳಿತ ಹಾಗೂ ಆಯುಷ್ ಇಲಾಖೆಯ ವತಿಯಿಂದ ವಿಶೇಷ ಯೋಗ ದಿನವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ಪ್ರಕಾಶ್ ರಾಜ್‌ಗೆ ಕಾನೂನು ಸಂಕಷ್ಟ

ಪುಟ ೧➡ ಈ ವೇಳೆ ವಕೀಲ ದಿಲೀಪ್ ಕುಮಾರ್ ಎಂಬುವರು ನಟನ ವಿರುದ್ಧ ಗಂಭೀರ ಆರೋಪ ಮಾಡಿದ್ದರು. ಪ್ರಕಾಶ್‌ರಾಜ್ ಅವರು ದೇಶದ ವಿವಿಧ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಪಾಂಡಿಚೇರಿಯಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದಾರೆ. ಇದು ಜನಪ್ರತಿನಿಧಿ ಕಾಯಿದೆ ಹಾಗೂ ದೇಶದ ಚುನಾವಣಾ ನಿಯಮಾವಳಿಗಳ ಅನ್ವಯ ಗಂಭೀರ ಅಪರಾಧ ಎಂದು ಆರೋಪಿಸಿದ್ದರು. ಈ ಅಕ್ರಮದ ಕುರಿತು ವಕೀಲ ದಿಲೀಪ್ ಕುಮಾರ್ ಅವರು 2019ರಲ್ಲಿ ಮೊದಲ ಬಾರಿಗೆ ಬೆಂಗಳೂರಿನ ಹಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಆದರೆ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳದಿದ್ದಾಗ, ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಹಾಗೂ ಕೇಂದ್ರ ಚುನಾವಣಾ ಆಯೋಗಕ್ಕೂ ಅಧಿಕೃತವಾಗಿ ದೂರು ಸಲ್ಲಿಸಲಾಯಿತು. ಯಾವುದೇ ಇಲಾಖೆಯಿಂದ ನಿರೀಕ್ಷಿತ ಮಟ್ಟದ ಕಾನೂನು ಕ್ರಮ ಜರುಗದ ಹಿನ್ನೆಲೆಯಲ್ಲಿ ದೂರುದಾರರು ಅಂತಿಮವಾಗಿ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮೊರೆ ಹೋಗಿ ಖಾಸಗಿ ದೂರು ದಾಖಲಿಸಿದ್ದರು.

ಮದ್ಯ ಪರವಾನಗಿ ಹರಾಜುಗಳಲ್ಲಿ ಎಸ್ಸಿ, ಎಸ್ಟಿಗಳಿಗೆ ಮೀಸಲಾತಿ

ಬೆಂಗಳೂರು : ರಾಜ್ಯದಲ್ಲಿ ಮೊದಲ ಬಾರಿಗೆ ಮದ್ಯ ಪರವಾನಗಿ ಹರಾಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡಲು ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಸರ್ಕಾರವು 2026ರ ಜೂನ್ 17ರಂದು ಹೊರಡಿಸಿದ ಅಧಿಸೂಚನೆಯ ಈ ತಿದ್ದುಪಡಿಯಡಿ, CL 2A ಮತ್ತು ಇಟಿ9ಎ ಪರವಾನಗಿಗಳ ಇ-ಹರಾಜುಗಳಲ್ಲಿ ಮೀಸಲಾತಿ ಹಂಚಿಕೆ ಮಾಡಿದೆ. ಪರಿಶಿಷ್ಟ ಜಾತಿ -ಎಗೆ 5.25%, ಪರಿಶಿಷ್ಟ ಜಾತಿ-ಬಿಗೆ 5.25%, ಪರಿಶಿಷ್ಟ ಜಾತಿ-ಸಿಗೆ 4.5%, ಮತ್ತು ಪರಿಶಿಷ್ಟ ಪಂಗಡಕ್ಕೆ 3% ಮೀಸಲಾತಿ ನಿಗದಿಪಡಿಸಲಾಗಿದೆ.



ಮಲ್ಲಕಂಬ ಪ್ರದರ್ಶನ

ಆಯುಷ್ ಇಲಾಖೆಯ ವತಿಯಿಂದ ಭಾನುವಾರ ವಿಧಾನಸೌಧದ ಮುಂಭಾಗದಲ್ಲಿ ಆಯೋಜಿಸಲಾಗಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರದರ್ಶಿಸಿದ ಮಲ್ಲಕಂಬ ಎಲ್ಲರ ಗಮನ ಸೆಳೆಯಿತು.

ಜಗನ್ನಾಥ ರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ | ದತ್ತಾತ್ರೇಯ ಹೊಸಬಾಳೆ ಮಾತು

ಸಮಾಜದ ಔನ್ನತ್ಯಕ್ಕೆ ಜಗನ್ನಾಥ ಭವನ ಬಳಕೆಯಾಗಲಿ

ಬೆಳಗಾವಿ: ತಮ್ಮ ಜೀವನವನ್ನೇ ಸಮಾಜ ಸೇವೆಗೆ ಸಮರ್ಪಿಸಿದ ಜಗನ್ನಾಥ ರಾವ್ ಜೋಶಿ ಅವರ ಸ್ಮರಣಾರ್ಥ ನಿರ್ಮಿಸಲಾದ ಜಗನ್ನಾಥರಾವ್ ಜೋಶಿ ಸ್ಮಾರಕ ಭವನವನ್ನು ಇಡೀ ಸಮಾಜಕ್ಕೆ ಅರ್ಪಿಸಲಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಭಾನುವಾರ ನಗರದ ಸಂಘ ಸದನದಲ್ಲಿ ನ್ಯೂ ಗೂಡ್ಸ್ ಶೆಟ್ ರಸ್ತೆಯಲ್ಲಿರುವ ಭವ್ಯ ಅಂತಸ್ತಿನ ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆಗೊಳಿಸಿದ ಬಳಿಕ ವೇದಿಕೆಯ ಸಮಾರಂಭದಲ್ಲಿ ಮಾತನಾಡಿದ ಅವರು, ಜನವಿಕಾಸ ಮತ್ತು ಜನಕಲ್ಯಾಣದ ಉದ್ದೇಶದಿಂದ ಈ ಭವನ ನಿರ್ಮಿಸಲಾಗಿದೆ. ಭವನ ನಿರ್ಮಾಣಕ್ಕೆ ಬಳಸಿರುವ ಪ್ರತಿಯೊಂದು ಪೈಸೆಯೂ ಸದುಪಯೋಗವಾಗಬೇಕು ಹಾಗೂ ಪ್ರತಿಯೊಂದು ಇಂಚು ಜಾಗವೂ ಸಮಾಜದ ಹಿತಕ್ಕಾಗಿ ಬಳಕೆಯಾಗಬೇಕು ಎಂದರು.

ಕಾರಂಜಿಮಠದ ಶ್ರೀ ಗುರುಸಿದ್ಧ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಸಂಘಚಾಲಕ ಬಸವರಾಜ ಡಂಬಳ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ ಸ್ವಾಗತಿಸಿದರು. ಜನ ಕಲ್ಯಾಣ ಟ್ರಸ್ಟ್‌ನ ನಿರ್ವಾಹಕ ವಿಶ್ವಸ್ಥ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಬೇಂಡೆ, ಆರ್‌ಎಸ್‌ಎಸ್ ಪ್ರಾಂತ ಕಾರ್ಯವಾಹ ರಾಘವೇಂದ್ರ ಕಾಗವಾಡ ಸೇರಿದಂತೆ ಹಲವು ಗಣ್ಯರು ಇದ್ದರು.



ಅತ್ಯಂತ ಸರಳ ಜೀವನ
ಜಗನ್ನಾಥರಾವ್ ಜೋಶಿ ಅವರು ಜಾತಿ, ಮತ, ಧರ್ಮಗಳ ಗಡಿಗಳನ್ನು ಮೀರಿ ಬದುಕಿದ ಮಹನೀಯರಾಗಿದ್ದು, ದೇಶ ಸೇವೆಯನ್ನೇ ಪರಮೋಚ್ಚ ಗುರಿಯನ್ನಾಗಿಸಿಕೊಂಡಿದ್ದರು. ಜನರಿಗಾಗಿ ಜೀವನವನ್ನೇ ಮುಡಿಪಾಗಿಟ್ಟ ಅವರು ಅತ್ಯಂತ ಸರಳ ಜೀವನ ನಡೆಸಿದ್ದರು. ಅವರ ಸಾರ್ಥಕ ಜೀವನಕ್ಕೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ಸ್ಮಾರಕ ಭವನ ನಿರ್ಮಿಸಲಾಗಿದೆ ಎಂದರು. ಸಮಾಜದ ಔನ್ನತ್ಯ, ಜನಕಲ್ಯಾಣದ ಕಾರ್ಯಗಳಿಗೆ ಈ ಭವನ ಕೇಂದ್ರವಾಗಲಿ. ಜಗನ್ನಾಥರಾವ್ ಜೋಶಿ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯಕ್ಕೆ ಇದು ನೆರವಾಗಲಿ ಎಂದು ದತ್ತಾತ್ರೇಯ ಹೊಸಬಾಳೆ ಆಶಿಸಿದರು.

ಸಮಾರಂಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ, ಗೋವಿಂದ ಕಾರಜೋಳ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಸಚಿವರಾದ ಸಿ.ಟಿ.ರವಿ, ಮುರುಗೇಶ ನಿರಾಣಿ, ಕೆ.ಎಸ್.ಈಶ್ವರಪ್ಪ, ಸಿ.ಸಿ.ಪಾಟೀಲ, ಶಶಿಕಲಾ ಜೊಲ್ಲೆ, ಕೋಟ ಶ್ರೀನಿವಾಸ ಪೂಜಾರಿ, ಜನಪ್ರತಿನಿಧಿಗಳು, ಸಂಘದ ಪ್ರಮುಖರು ಸೇರಿದಂತೆ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಹೈಗೆ ವರದಿ ಸಲ್ಲಿಕೆ: ಸಿಟಿ ರವಿ

ಬೆಳಗಾವಿ: ಪರಿಷತ್ ಚುನಾವಣೆಯ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಮುಂದಿನ ಎರಡು ದಿನಗಳಲ್ಲಿ ಪಕ್ಷದ ಹೈಕಮಾಂಡ್‌ಗೆ ಪ್ರಾಥಮಿಕ ಹಾಗೂ ಮಧ್ಯಂತರ ವರದಿಯನ್ನು ಸಲ್ಲಿಸಲಾಗುವುದು ಎಂದು ಸತ್ಯಶೋಧನಾ ಸಮಿತಿ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದರು. ಭಾನುವಾರ ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಎರಡೂ ಪಕ್ಷಗಳಿಂದ ಒಟ್ಟು 12 ಮತಗಳು ವ್ಯತ್ಯಾಸವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಗೌಪ್ಯ ಮತದಾನ ಆಗಿರುವ ಹಿನ್ನೆಲೆಯಲ್ಲಿ ಮತಗಳ ಕುರಿತ ವಿಮರ್ಶೆಯಾಗಿದೆ. ಇದರಲ್ಲಿ ಒಂದು ಮತ ಕುಲಗೆಟ್ಟಿದೆ (ಅಸಿಂಧು). ತಲಾ 30 ವೋಟುಗಳಂತೆ ಪ್ರತ್ಯೇಕವಾಗಿ ಯೋಜನೆ ರೂಪಿಸಿ ಜವಾಬ್ದಾರಿ ಹಂಚಲಾಗಿತ್ತು. ಆದರೆ, ಈಗ ಲೆಕ್ಕಾಚಾರ ಉಲ್ಟಾ ಆಗಿದೆ ಎಂದರು. ಯಾವ ಶಾಸಕರು ಕ್ರಾಸ್ ವೋಟಿಂಗ್ ಮಾಡಿದ್ದಾರೆ ಎನ್ನುವುದರ ಬಗ್ಗೆ ಸದ್ಯಕ್ಕೆ ಯಾರ ಮೇಲೂ ನಾವು ನೇರ ಆರೋಪ ಮಾಡುವುದಿಲ್ಲ. ಕೇವಲ ಸಾಂದರ್ಭಿಕ ಸಾಕ್ಷ್ಯಗಳನ್ನು ಮತ್ತು ಮಾಹಿತಿಯನ್ನು ಕಲೆ ಹಾಕುತ್ತಿದ್ದೇವೆ. ಅನುಮಾನಾಸ್ಪದವಷ್ಟೇ ಹೊರತು, ಇವರೇ ತಪ್ಪು ಮಾಡಿದ್ದಾರೆ ಎಂದು ಸಾರಲು ಸಾಧ್ಯವಿಲ್ಲ. ಸತ್ಯಶೋಧನೆ ನಡೆಸಿ ನಿಖರವಾದ ವರದಿ ಕೊಡುವ ಕೆಲಸವನ್ನು ಸಮಿತಿ ಪ್ರಾಮಾಣಿಕವಾಗಿ ಮಾಡಲಿದೆ. ವರದಿ ಸಲ್ಲಿಕೆಯಾದ ಬಳಿಕ ಪಕ್ಷದ ಶಿಸ್ತು ಸಮಿತಿಯು ಮುಂದಿನ ಕ್ರಮಗಳ ಬಗ್ಗೆ ಆಲೋಚನೆ ಮಾಡಲಿದೆ ಎಂದು ಹೇಳಿದರು.

ಪಕ್ಷದಲ್ಲಿ ಆತ್ಮಾವಲೋಕನ ಅಗತ್ಯ: ಶಾಸಕ ಬೆಲ್ಲದ

ಬೆಳಗಾವಿ: ರಾಜ್ಯ ಬಿಜೆಪಿಯಲ್ಲಿ ಇತ್ತೀಚೆಗೆ ನಡೆದ ರಾಜಕೀಯ ಬೆಳವಣಿಗೆಗಳು ಹಾಗೂ ಚುನಾವಣಾ ಫಲಿತಾಂಶಗಳ ಹಿನ್ನೆಲೆಯಲ್ಲಿ ಪಕ್ಷದೊಳಗಿನ ಸ್ಥಿತಿಗತಿಗಳ ಕುರಿತು ಹಾಗೂ ಪಕ್ಷದ ಸಂಘಟನೆ ಮತ್ತಷ್ಟು ಬಲಪಡಿಸಲು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದು ಶಾಸಕ ಅರವಿಂದ ಬೆಲ್ಲದ ಅಭಿಪ್ರಾಯಪಟ್ಟರು. ಭಾನುವಾರ ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಕ್ಷದ ಸಂಘಟನೆ ಮತ್ತು ಇತ್ತೀಚಿನ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಹೈಕಮಾಂಡ್ ನಾಯಕರು ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಿದ್ದಾರೆ. ಪಕ್ಷದಲ್ಲಿರುವ ಲೋಪದೋಷಗಳನ್ನು ಗುರುತಿಸಿ ಸರಿಪಡಿಸಿಕೊಂಡು ಮುನ್ನಡೆಯುವುದು ಈಗಿನ ಅಗತ್ಯವಾಗಿದ್ದು, ಇದು ಎಲ್ಲರಿಗೂ ಆತ್ಮಾವಲೋಕನದ ಸಮಯವಾಗಿದೆ ಎಂದು ಹೇಳಿದರು. ರಾಜ್ಯ ಬಿಜೆಪಿ ಅಧ್ಯಕ್ಷರು ಪಕ್ಷದ ಎಲ್ಲ ನಾಯಕರನ್ನು ಹಾಗೂ ಕಾರ್ಯಕರ್ತರನ್ನು ಒಗ್ಗೂಡಿಸಿಕೊಂಡು ಸಾಗುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ ಎಂದರು.

ಕೆರೆಗೆ ತ್ಯಾಜ್ಯ: ಡಾಕ್ಟರ್ ಮೇಲೆ ದೂರು ದಾಖಲು

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆ ಯಂಟಗಾನಹಳ್ಳಿ ಕೆರೆಗೆ ವೈದ್ಯಕೀಯ ತ್ಯಾಜ್ಯ ಸುರಿದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಸೂಚನೆ ಮೇರೆಗೆ ಅಧಿಕಾರಿಗಳು ಕ್ರಮ ವಹಿಸಿದ್ದು, ಖಾಸಗಿ ಕ್ಲಿನಿಕ್ ವೈದ್ಯರ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ. ಯಂಟಗಾನಹಳ್ಳಿ ಗ್ರಾಮಪಂಚಾಯ್ತಿಗೆ ಸಚಿವರು ಹಠಾತ್ ಭೇಟಿ ನೀಡಿದ್ದ ವೇಳೆ ಸಾರ್ವಜನಿಕರು ವೈದ್ಯಕೀಯ ತ್ಯಾಜ್ಯವನ್ನು ಕೆರೆಗೆ ಸುರಿದಿರುವ ಬಗ್ಗೆ ಮಾಹಿತಿ ನೀಡಿದ್ದರು. ಕೂಡಲೇ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗೆ ಸ್ಥಳ ಪರಿಶೀಲಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸೂಚಿಸಿದ್ದರು. ಸಚಿವ ಖಂಡ್ರೆ ಅವರ ಸೂಚನೆಯಂತೆ ಸ್ಥಳ ಪರಿಶೀಲನೆ ನಡೆಸಿದ ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಬಿಂದು, ಸಚಿತ್ರ ಮಾಹಿತಿ ನೀಡಿದ ತರುವಾಯ ತಾಲೂಕು ವೈದ್ಯಾಧಿಕಾರಿ ಡಾ. ಪದ್ಮಿನಿ ನೆಲಮಂಗಲ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನನಗೆ ಶಕ್ತಿ ತುಂಬಿದ ಪದಾಧಿಕಾರಿಗಳು: ಸಿಎಂ ಡಿ.ಕೆ.ಶಿವಕುಮಾರ್

ಕಾರ್ಯಕರ್ತರಿಗೆ ಅಧಿಕಾರ

ಬೆಂಗಳೂರು: ಕಳೆದ ಆರು ವರ್ಷಗಳಲ್ಲಿ ನನ್ನ ಜೊತೆ ಪಕ್ಷದ ಅನೇಕ ಪದಾಧಿಕಾರಿಗಳು ಶ್ರಮಿಸಿದ್ದು, ಎಲ್ಲಾ ಶಾಸಕರು ಹಾಗೂ ಮುಖಂಡರು ತನು, ಮನ, ಧನ ಅರ್ಪಿಸಿ ನನಗೆ ಶಕ್ತಿ ತುಂಬಿದ್ದಾರೆ. ಎಷ್ಟೋ ಜನಕ್ಕೆ ಅಧಿಕಾರ ನೀಡಲು ಸಾಧ್ಯವಾಗಿಲ್ಲ. ನಾವು ಗ್ಯಾರಂಟಿ ಯೋಜನೆಗಳ ಸಮಿತಿ ಮಾಡಿ, ಸಾವಿರಾರು ಕಾರ್ಯಕರ್ತರಿಗೆ ಅಧಿಕಾರ ನೀಡಿದ್ದೇವೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು. ಪಂಚಾಯಿತಿ ಹಾಗೂ ವಾರ್ಡ್ ಮಟ್ಟದಲ್ಲಿ ಸಮಿತಿ ರಚನೆಗೆ ನಾನು ಹಾಗೂ ನಮ್ಮ ವರಿಷ್ಠರು ಚರ್ಚೆ ಮಾಡಿದ್ದೇವೆ. ಎಲ್ಲಾ ವರ್ಗದವರಿಗೂ ಸಮಾನವಾಗಿ ಈ ಸಮಿತಿಯಲ್ಲಿ ನೇಮಕ ಮಾಡಲಾಗುವುದು. ಈ ಸಮಿತಿ ಸದಸ್ಯರು ಗ್ಯಾರಂಟಿ ಫಲಾನುಭವಿಗಳ ದಾಖಲೆ ಮರುಪರಿಶೀಲನೆ ಮಾಡಬೇಕು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಕರೆ ನೀಡಿದರು.

ಪ್ರತಿ ವಾರ್ಡ್ ಹಾಗೂ ಪಂಚಾಯಿತಿಯಲ್ಲಿ ಐದು ಜನರಂತೆ, 7 ಸಾವಿರ ಪಂಚಾಯಿತಿ, 4 ಸಾವಿರ ವಾರ್ಡ್‌ಗಳಲ್ಲಿ ಗ್ಯಾರಂಟಿ ಸಮಿತಿ ರಚಿಸಲಾಗುವುದು. ಆಮೂಲಕ ನಾವು ಎಷ್ಟು ನಾಯಕರನ್ನು ತಯಾರು ಮಾಡುತ್ತಿದ್ದೇವೆ ಎಂದು ನೀವೇ ಆಲೋಚಿಸಿ. ನಾಯಕನಾದವನು ನಾಯಕರನ್ನು ಬೆಳೆಸಬೇಕೇ ಹೊರತು, ಹಿಂಬಾಲಕರನ್ನಲ್ಲ ಎಂಬುದಕ್ಕೆ ಕಾಂಗ್ರೆಸ್ ಪಕ್ಷ ಬದ್ಧವಾಗಿದೆ ಎಂದು ತಿಳಿಸಿದರು.

ಕಾರ್ಯಕರ್ತ ನಂತೆ ಕೆಲಸ: ನಾನು ಮುಖ್ಯಮಂತ್ರಿಯಾಗಿದ್ದರೂ ಕಾರ್ಯಕರ್ತನಾಗಿ ನಿಮ್ಮ ಜತೆಗೆ ಕೆಲಸ ಮಾಡುತ್ತೇನೆ. 2028ರಲ್ಲಿ ಕಾಂಗ್ರೆಸ್ ಅನ್ನು ಮತ್ತೆ ಅಧಿಕಾರಕ್ಕೆ ತಂದು 2029ರಲ್ಲಿ ರಾಹುಲ್ ಗಾಂಧಿ ಅವರನ್ನು ದೇಶದ ಪ್ರಧಾನಿಯಾಗಿ ಮಾಡಲು ನಾವೆಲ್ಲರೂ ಸಂಕಲ್ಪ ಮಾಡಿದ್ದೇವೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ಸಿಕ್ಕ ಅವಕಾಶ ನಮಗೆ ಸಿಕ್ಕಿಲ್ಲ ಎಂದು ಬಿಜೆಪಿಯವರು ಕೈ ಹಿಸುಕಿಕೊಳ್ಳುತ್ತಿದ್ದಾರೆ. ನೀವು ಚಿಂತೆ ಮಾಡುವ ಅಗತ್ಯವಿಲ್ಲ. 2028ರಲ್ಲಿ ಹಾಗೂ 2029ರಲ್ಲೂ ನಿಮ್ಮದೇ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಸಂದೇಶ ನೀಡಿದರು.

ನನ್ನ ಶಕ್ತಿ ಮೀರಿ ಕಾರ್ಯಕರ್ತರ ಸೇವೆ, ಪಕ್ಷ ಸಂಘಟನೆ: ನಾನು ನನ್ನ ಶಕ್ತಿ ಮೀರಿ, ಕಾರ್ಯಕರ್ತರ ಸೇವೆ ಮಾಡಿ, ಪಕ್ಷವನ್ನು ಸಂಘಟನೆ ಮಾಡಿದ್ದೇನೆ. ನನ್ನಿಂದ ಅನೇಕ ತಪ್ಪುಗಳಾಗಿರಬಹುದು ಎಂದರು.



ಎಲ್ಲಾ ಜಿಲ್ಲಾ ಮಂತ್ರಿಗಳು ವಾರಕ್ಕೆ ಒಂದು ದಿನ ನಿಮ್ಮ ಜಿಲ್ಲೆಗಳಲ್ಲಿರುವ ಒಂದು ತಾಲ್ಲೂಕಿನಲ್ಲಿ ಜನಸ್ಪಂದನ ಕಾರ್ಯಕ್ರಮ ಮಾಡಿ, ಜನರ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಸೂಚಿಸಿದ್ದೇನೆ. ನೀವು ಶಕ್ತಿಶಾಲಿಯಾದರೆ, ನಾವು ಬಲಿಷ್ಠವಾಗುತ್ತೇವೆ.
■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಈ ವರ್ಷದಿಂದಲೇ ವಿದ್ಯಾರ್ಥಿ ಚುನಾವಣೆ

ರಾಜ್ಯದಲ್ಲಿ ನಿಲ್ಲಿಸಿರುವ ವಿದ್ಯಾರ್ಥಿ ಚುನಾವಣೆಯನ್ನು ಈ ವರ್ಷದಿಂದಲೇ ಆರಂಭಿಸುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ, ಅಧಿಕಾರ ಹಸ್ತಾಂತರಿಸಿ ಅವರು ಮಾತಾಡಿದರು. ಈ ವೇಳೆ ವಿದ್ಯಾರ್ಥಿ ಚುನಾವಣೆ ಆರಂಭಿಸುವ ಬಗ್ಗೆ ಅವರು ಮಾಹಿತಿ ನೀಡಿದರು.
ಕೋವಿಡ್ ಕಾಲದಲ್ಲಿ ಮನೆಯಿಂದ ಹೊರಗೆ ಹೋಗೋಕೆ ಆಗಿರಲಿಲ್ಲ. ಜೂಮ್ ಮೀಟಿಂಗ್ ಮೂಲಕವೇ ಅನೇಕ ಸಮಸ್ಯೆ ಪರಿಹರಿಸಿದ್ದೇವೆ.
ಕೋಟಿ ಕೋಟಿ ಹಣ ವೆಚ್ಚ ಮಾಡಿ ಫುಡ್ ಕಿಟ್ ಕೊಟ್ಟಿದ್ದೇವೆ. ಕೆಲವರು ಯಾದಗಿರಿ ವರೆಗೂ ಬಸ್‌ನಲ್ಲಿ ಹೋಗಬೇಕಿತ್ತು. ಆಗ ಕೆಪಿಸಿಸಿ ವತಿಯಿಂದ 1 ಕೋಟಿ ರೂ. ಚೆಕ್ ಕೊಟ್ಟೆ. ರೈಲು, ಬಸ್ನಲ್ಲಿ ಹೋಗೋಕೆ ವ್ಯವಸ್ಥೆ ಮಾಡಿದೆ. ಅಂದು ಮಾತು ಕೊಟ್ಟಂತೆ ನಡೆದುಕೊಂಡಿದ್ದೇವೆ. ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರಿ ನೌಕರಿ ನೀಡಿದ್ದೇವೆ ಎಂದರು. ಕೃಷಿ ಕಾಯ್ದೆ ವಿರುದ್ಧ ಹೋರಾಟ ಮಾಡಿದ್ದೆವು. ಬೆಲೆ ಏರಿಕೆ ವಿರುದ್ಧ ಹೋರಾಟ ಮಾಡಿದ್ದೆವು. ಆಗ ಇಬ್ಬರು ಮಂತ್ರಿಗಳ ರಾಜೀನಾಮೆ ಕೊಡಿಸಿದ್ದೆವು. ಆಗ ಸೋನಿಯಾ ಗಾಂಧಿ, ರಾಹುಲ್ ಗಾಂಧಿಯವರಿಗೆ ಕಿರುಕುಳ ನೀಡಿದರು. ಅದೆಲ್ಲಾ ಗಮನದಲ್ಲಿಟ್ಟುಕೊಂಡು ಹೋರಾಟ ಮಾಡಿದ್ವಿ. ಕೃಷ್ಣ ಕಾವೇರಿ ಹೋರಾಟ, ಮೇಕೆದಾಟು ಹೋರಾಟ ಮಾಡಿದ್ವಿ. ಅಂದು ಬಿಜೆಪಿವರು ಅವಕಾಶ ನೀಡಲಿಲ್ಲ.
ಈಗ ಅದೆಲ್ಲಾ ಇತಿಹಾಸ ಎಂದರು.

ಒತ್ತಡಕ್ಕೆ ಯೋಗ ಮದ್ದು

ಬೆಂಗಳೂರು: ಇಂದಿನ ಆಧುನಿಕ ದಿನಗಳಲ್ಲಿ ನಾವೆಲ್ಲ ಒತ್ತಡದಲ್ಲಿದ್ದೇವೆ. ಇದಕ್ಕೆ ಯೋಗವೇ ಮದ್ದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.



ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದ ಮುಂಭಾಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 12ನೇ ಯೋಗ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಬಾರಿ ಸೌಹಾರ್ದತೆ ಮತ್ತು ಶಾಂತಿಗಾಗಿ ಯೋಗ ಎಂಬ ಧ್ಯೇಯದಡಿ ವಿಶ್ವ ಯೋಗ ದಿನವನ್ನು ಆಚರಿಸಲಾಗುತ್ತಿದೆ. ಜಗತ್ತಿನಲ್ಲಿ ಯುದ್ಧದಿಂದಾಗಿ ಸಾಕಷ್ಟು ತೊಂದರೆಯನ್ನು ನಾವೆಲ್ಲ ಅನುಭವಿಸುತ್ತಿದ್ದೇವೆ. ಇದಕ್ಕೆ ಪ್ರಮುಖ ಕಾರಣ ವಿಶ್ವಾಸದ ಕೊರತೆ. ಈ ವಿಶ್ವಾಸವನ್ನು ಯೋಗದಿಂದ ವೃದ್ಧಿಸಿಕೊಳ್ಳಲು ಸಾಧ್ಯವಿದೆ ಎಂದರು.

ಇಂದು ಎಲ್ಲರಿಗೂ ಒತ್ತಡವಿದೆ. ಅದು ವಿದ್ಯಾರ್ಥಿ ಇರಬಹುದು, ರಾಜಕಾರಣಿಗಳು ಇರಬಹುದು. ಎಲ್ಲರದೂ ಒತ್ತಡದ ಬದುಕಾಗಿದೆ. ಈ ಒತ್ತಡದ ನಡುವೆ ಸಮಾಧಾನವಾಗಿ ಕೆಲಸ ಮಾಡಲು ಯೋಗ ಸಹಕಾರಿ. ಮನಸಿನ ಸಮತೋಲನ ಕಾಪಾಡಲು ಯೋಗ ಬೇಕು. ದೈಹಿಕ ಆರೋಗ್ಯದ ಜೊತೆಗೆ ಮನಸಿನ ಆರೋಗ್ಯವೂ ಇದ್ದರೆ ಭವಿಷ್ಯ ಉಜ್ವಲವಾಗಲಿದೆ. ನಮ್ಮ ಭವಿಷ್ಯ ಉಜ್ವಲವಾಗಿದ್ದರೆ ದೇಶದ ಭವಿಷ್ಯ ಉಜ್ವಲವಾಗಲಿದೆ. ದೇಶದ ಭವಿಷ್ಯ ಉಜ್ವಲವಾದರೆ ವಿಶ್ವದ ಭವಿಷ್ಯ ಚೆನ್ನಾಗಿ ಇರಲಿದೆ ಎಂದು ವಿಜಯೇಂದ್ರ ವಿವರಿಸಿದರು.

ನಿತ್ಯಯೋಗಿಗಳಾಗೋಣ: ಒತ್ತಡ ನಿವಾರಣೆಗೆ ನಾವೆಲ್ಲ ಪ್ರತಿ ದಿನ ಯೋಗ ಮಾಡೋಣ. ನಮ್ಮ ಬದುಕು ಉತ್ತಮವಾಗಲು, ಉತ್ತಮ ಬದುಕು ಕಾಣಲು ಪ್ರತಿ ದಿನ ಯೋಗಾಭ್ಯಾಸ ಮಾಡಲೇಬೇಕು. ಪ್ರತಿಯೊಬ್ಬರ ಬದುಕು ಚೆನ್ನಾಗಿರಲು ಯೋಗ ಸಹಕಾರಿ. ಯೋಗ ಮಾಡಲು ಕೇವಲ ಮನಸು ಮತ್ತು ಉದ್ದೇಶ ಮಾತ್ರ ಸಾಕು. ಪ್ರತಿಯೊಬ್ಬರ ವ್ಯಕ್ತಿತ್ವ ರೂಪಿಸುವಲ್ಲಿ ಯೋಗ ಮಹತ್ವದ ಪಾತ್ರ ವಹಿಸಲಿದೆ ಎಂದು ಶಾಸಕ ಡಾ. ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಥಟ್ ಅಂತ ಹೇಳಿ ಖ್ಯಾತಿಯ ಡಾ. ನಾ. ಸೋಮೇಶ್ವರ ಮಾತನಾಡಿ, ಯೋಗದಿಂದ ಹಲವಾರು ಪ್ರಯೋಜನಗಳಿವೆ. ವೈಜ್ಞಾನಿಕವಾಗಿ ಇವು ಸಾಬೀತಾಗಿವೆ ಎಂದರು. ಯೋಗ ಗುರುಗಳಾದ ಮಂಜುನಾಥ್ ಹಾಗೂ ಗೀತಾ ಮಂಜುನಾಥ್ ಅವರು ಯೋಗಭ್ಯಾಸ ಮಾಡಿಸಿದರು. ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ನಟಿ ಕಾರುಣ್ಯ ರಾಮ್ ಭಾಗವಹಿಸಿದ್ದರು.

ಬಿಗಿ ಭದ್ರತೆಯಲ್ಲಿ ಮರು ನೀಟ್

ಬೆಂಗಳೂರು: ಪರೀಕ್ಷಾ ಅಕ್ರಮಗಳ ಕಹಿ ಅನುಭವದ ಬಳಿಕ ದೇಶಾದ್ಯಂತ ಮರುನಡೆಸಲಾದ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) ಭಾನುವಾರ ರಾಜ್ಯ ಸೇರಿದಂತೆ ದೇಶದಾದ್ಯಂತ ಬಿಗಿ ಭದ್ರತೆಯ ನಡುವೆ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ಬಾರಿ ಪ್ರಶ್ನೆಪತ್ರಿಕೆ ಹಿಂದಿನ ಪರೀಕ್ಷೆಗಿಂತ ಹೆಚ್ಚು ಬಿಗಿಯಾಗಿದ್ದು, ವಿಶೇಷವಾಗಿ ಭೌತಶಾಸ್ತ್ರ ವಿಭಾಗ ವಿದ್ಯಾರ್ಥಿಗಳಿಗೆ ತೀವ್ರ ಸವಾಲೊಡ್ಡಿದೆ ಎಂದು ಪರೀಕ್ಷಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ.

ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಇತರೆ ಅಕ್ರಮಗಳ ಆರೋಪಗಳು ದೇಶವ್ಯಾಪಿ ವಿವಾದಕ್ಕೆ ಕಾರಣವಾಗಿ ಪರೀಕ್ಷೆಯನ್ನು ರದ್ದುಗೊಳಿಸಲಾಗಿತ್ತು. ಇದರ ಬೆನ್ನಲ್ಲೇ ಎಚ್ಚೆತ್ತ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ), ದೇಶಾದ್ಯಂತ 22,79,743 ವಿದ್ಯಾರ್ಥಿಗಳಿಗಾಗಿ ಮರುಪರೀಕ್ಷೆಯನ್ನು ಅತ್ಯಂತ ಪಾರದರ್ಶಕವಾಗಿ ಮತ್ತು ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಯೊಂದಿಗೆ ನಡೆಸಿತು.

ಪ್ರಶ್ನೆಪತ್ರಿಕೆ ಕಠಿಣ: ಪರೀಕ್ಷೆ ಮುಗಿದ ಬಳಿಕ ವಿವಿಧ ಕೇಂದ್ರಗಳಿಂದ ಹೊರಬಂದ ವಿದ್ಯಾರ್ಥಿಗಳು ಈ ಬಾರಿ ಪ್ರಶ್ನೆಪತ್ರಿಕೆಯು ನಿರೀಕ್ಷೆಗಿಂತ ಕಠಿಣವಾಗಿತ್ತು ಎಂದು ಪ್ರತಿಕ್ರಿಯಿಸಿದರು. ವಿಷಯವಾರು ನೋಡಿದರೆ ಭೌತಶಾಸ್ತ್ರ ವಿಭಾಗದ ಪ್ರಶ್ನೆಗಳು ದೀರ್ಘವಾಗಿದ್ದು, ವಿಶ್ಲೇಷಣಾತ್ಮಕ ಚಿಂತನೆಗೆ ಹೆಚ್ಚಿನ ಸಮಯ ಬೇಕಾಗಿತ್ತು. ರಸಾಯನಶಾಸ್ತ್ರ ವಿಭಾಗ ಸಾಧಾರಣದಿಂದ ಕಠಿಣ ಮಟ್ಟದಲ್ಲಿದ್ದರೆ, ಜೀವಶಾಸ್ತ್ರ ವಿಭಾಗದ ಪ್ರಶ್ನೆಗಳು ಸುಲಭವಾಗಿದ್ದರೂ ಅವುಗಳನ್ನು ಅರ್ಥೈಸಿ ಉತ್ತರಿಸಲು ಹೆಚ್ಚಿನ ಸಮಯ ತೆಗೆದುಕೊಂಡಿತು ಎಂದು ವಿದ್ಯಾರ್ಥಿಗಳು ತಿಳಿಸಿದರು.

ಒಟ್ಟಾರೆ ಮೇ 3ರಂದು ನಡೆದಿದ್ದ ಪರೀಕ್ಷೆಗಿಂತ ಈ ಬಾರಿಯ ಮರುಪರೀಕ್ಷೆ ಹೆಚ್ಚು ಸವಾಲಿನಿಂದ ಕೂಡಿತ್ತು ಎಂದು ಬಹುತೇಕ ಪರೀಕ್ಷಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ. ಕೆಲವರು ಹಿಂದಿನ ಪರೀಕ್ಷೆಯ 2, 3 ಪ್ರಶ್ನೆಗಳು ಪುನರಾವರ್ತನೆಯಾಗಿದ್ದವು ಎಂಬುದನ್ನೂ ಉಲ್ಲೇಖಿಸಿದರು.

ಹೆಚ್ಚುವರಿ 15 ನಿಮಿಷಗಳ ಕಾಲಾವಕಾಶ

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಬಾರಿ ಪರೀಕ್ಷೆಯ ಅವಧಿಯನ್ನು 15 ನಿಮಿಷಗಳ ಕಾಲ ವಿಸ್ತರಿಸಲಾಗಿತ್ತು. ಮಧ್ಯಾಹ್ನ 2 ಗಂಟೆಗೆ ಆರಂಭವಾದ ಪರೀಕ್ಷೆ ಸಂಜೆ 5.15 ಗಂಟೆವರೆಗೆ ನಡೆಯಿತು. ಹೆಚ್ಚುವರಿ ಸಮಯದಿಂದಾಗಿ ದೀರ್ಘ ಪ್ರಶ್ನೆಗಳಿಗೆ ಉತ್ತರಿಸಲು ಸ್ವಲ್ಪ ಅನುಕೂಲವಾಯಿತು ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್.ಸೋಮನಾಥನ್ ಇಂಗಿತ

ಯೋಗ ಜಗತ್ತಿನೊಂದಿಗೆ ಬೆಸೆಯುವ ಕೊಂಡಿ

ಬೆಂಗಳೂರು: ಯೋಗ ಎಂಬುದು ಕೇವಲ ದೈಹಿಕ ಭಂಗಿ ಅಥವಾ ಆಸನಗಳಿಗೆ ಸೀಮಿತವಾದುದಲ್ಲ. ಅದು ನಮ್ಮ ಒಳಮನಸ್ಸನ್ನು ಜಗತ್ತಿನೊಂದಿಗೆ ಬೆಸೆಯುವ ಕೊಂಡಿ ಹಾಗೂ ಜಾಗತಿಕ ಮಟ್ಟಕ್ಕೆ ಭಾರತ ನೀಡಿರುವ ಅತ್ಯುನ್ನತ ಕೊಡುಗೆಯಾಗಿದೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್.ಸೋಮನಾಥನ್ ಹೇಳಿದರು.

ವಿಶ್ವ ಯೋಗದಿನದ ಅಂಗವಾಗಿ ರಾಷ್ಟ್ರೋತ್ಥಾನ ಪರಿಷತ್ ಸಭಾಂಗಣದಲ್ಲಿ ನಡೆದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಯೋಗ ಎಂಬುದು ಒಂದು ಜಾಗತಿಕ ಆಂದೋಲನವಾಗಿ ಮಾರ್ಪಟ್ಟಿದೆ. ಜಗತ್ತಿನಾದ್ಯಂತ ನಡೆಯುತ್ತಿರುವ ಈ ಮಹತ್ತರ ಚಳುವಳಿಯಲ್ಲಿ ನಾವೆಲ್ಲರೂ ಭಾಗಿಯಾಗಿರುವುದು ಹೆಮ್ಮೆಯ ಸಂಗತಿ. ಭಾರತವು ಇತ್ತೀಚಿನ ದಿನಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಜಗತ್ತಿಗೆ ನೀಡಿದ ಅತ್ಯಂತ ದೊಡ್ಡ ಕೊಡುಗೆ ಎಂದರೆ ಯೋಗ ಎಂದು ಬಣ್ಣಿಸಿದರು.

ಸದೃಢ ಮನಸ್ಸಿಗೆ ಯೋಗದ ಆಸರೆ: ಯೋಗವನ್ನು ದಿನನಿತ್ಯದ ಬದುಕಿನಲ್ಲಿ ಶಿಸ್ತಿನಿಂದ ಅಳವಡಿಸಿಕೊಂಡರೆ, ಮಾನಸಿಕ ಒತ್ತಡಗಳನ್ನು ಗಣನೀಯವಾಗಿ ಕಡಿಮೆ ಮಾಡಿಕೊಳ್ಳಬಹುದು. ಭಾರತವು ಜಾಗತಿಕವಾಗಿ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಲು ಯೋಗದಂತಹ ಸಂಸ್ಕೃತಿ ಪ್ರಮುಖ ಕಾರಣವಾಗಿದೆ. ಧರ್ಮ, ಪ್ರಾದೇಶಿಕತೆಗಳನ್ನು ಮೀರಿ ಜಗತ್ತಿನ ಪ್ರತಿಯೊಬ್ಬರನ್ನೂ ಬೆಸೆಯುವ ವಿಶಿಷ್ಟ ಶಕ್ತಿ ಯೋಗಕ್ಕಿದೆ ಎಂದು ಹೇಳಿದರು.

ವಿಶ್ವದ ಪ್ರತಿಯೊಬ್ಬರನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ರೂಪಿಸುವುದೇ ಭಾರತದ ಮೂಲ ಆದರ್ಶವಾಗಿದೆ. ಮನುಷ್ಯ ದೈಹಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕವಾಗಿ ಬೆಳೆಯಬೇಕು. ಆಧುನಿಕ ಜೀವನಶೈಲಿಯ ತೊಂದರೆಗಳಿಗೆ ಪ್ರಾಚೀನ ಭಾರತೀಯ ಪರಂಪರೆಯು ಜಗತ್ತಿಗೆ ನೀಡಿದ ಯೋಗ ಅತ್ಯುತ್ತಮ ಪರಿಹಾರವಾಗಿದೆ. ಶೀಘ್ರವಾಗಿ ಉಸಿರಾಡುವುದರಿಂದ ಆಯುಷ್ಯ ಕ್ಷೀಣಿಸುತ್ತದೆ ಎಂದು ತಿಳಿಸಿದರು.



ರಾಷ್ಟ್ರೋತ್ಥಾನ ಪರಿಷತ್ತು ವತಿಯಿಂದ ಬೆಂಗಳೂರಿನ 26 ಕಡೆಗಳಲ್ಲಿ ಪ್ರತಿನಿತ್ಯ 4,000 ಕ್ಕೂ ಹೆಚ್ಚು ಜನರು ಯೋಗಾಭ್ಯಾಸ ಮಾಡುತ್ತಿದ್ದಾರೆ.
■ ನಾ.ದಿನೇಶ್ ಹೆಗ್ಡೆ, ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ

ಯೋಗ ಆರೋಗ್ಯಕರ

ಬೆಂಗಳೂರು: ಯೋಗವು ಆರೋಗ್ಯಕರ ವೃದ್ಧಾಪ್ಯಕ್ಕೆ ಮಾತ್ರವಲ್ಲ, ಶಾಶ್ವತ ಯೌವನದತ್ತ ಕೊಂಡೊಯ್ಯುವ ಜೀವನಶೈಲಿಯಾಗಿದೆ ಎಂದು ಪದ್ಮಶ್ರೀ ಡಾ.ಬಿ.ಎನ್.ಗಂಗಾಧರ್ ತಿಳಿಸಿದರು.



ರಾಷ್ಟ್ರೋತ್ಥಾನ ವತಿಯಿಂದ ಜಯನಗರದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ಮಾತನಾಡಿ, ಯೋಗಾಭ್ಯಾಸದ ವೇಳೆ ಓಂಕಾರ ಜಪದ ಪರಿಣಾಮಗಳ ಕುರಿತು ನಡೆದ ಸಂಶೋಧನೆಗಳನ್ನೂ ಉಲ್ಲೇಖಿಸಿದ ಡಾ. ಗಂಗಾಧರ್, ವಿಶೇಷ ಎಂಆರ್‌ಐ ತಂತ್ರಜ್ಞಾನದ ಮೂಲಕ ನಡೆಸಿದ ಅಧ್ಯಯನದಲ್ಲಿ ಓಂಕಾರ ಜಪ ಮಾಡುವಾಗ ಭಾವನೆಗಳನ್ನು ನಿಯಂತ್ರಿಸುವ ಲಿಂಬಿಕ್ ವ್ಯವಸ್ಥೆಯ ಚಟುವಟಿಕೆ ಕಡಿಮೆಯಾಗುವುದು ಕಂಡುಬಂದಿದೆ ಎಂದರು. ರಾಷ್ಟ್ರೋತ್ಥಾನ ಪರಿಷತ್‌ನ ಖಜಾಂಚಿ ನಾರಾಯಣ ಕೆ.ಎಸ್. ಹಾಗೂ ಯೋಗ ಪಟುಗಳು, ಯೋಗಾಭ್ಯಾಸಿಗಳು ಇದ್ದರು.

ಬದುಕನ್ನು ಗೆದ್ದವರು...

ಗಿರಿಧರ್ ಉದ್ಯಾವರ

ದೂರವಾಣಿಯಲ್ಲಿ ದನಿಯೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ ಮತ್ತು ಕೃಷ್ಣಮಹಾದಿಕರಿಗೆ ಆ ಬಂಗಾಲಿ ಬಾಬು ಯಾರು ಎಂಬುದೇ ಅಂದಾಜಾಗುತ್ತಿರಲಿಲ್ಲ. ಸಿಲಿಗುಡಿಯ ಯಾರೋ ವಿಕಾಸ ಚಕ್ರವರ್ತಿ ತಮ್ಮ ಮಗನ ವಿವಾಹಕ್ಕೆ ನನಗೇಕೆ ವಿಮಾನದ ಟಿಕೆಟ್ ಕಳುಹಿಸಿದ್ದಾರೆ ಎಂಬ ಗೊಂದಲ ಅವರದು!

ಅದು ಸುಮಾರು 20 ವರ್ಷಗಳ ಹಿಂದಿನ ಕಥೆ. ಅಂದು ಇದೇ ವಿಕಾಸ ಚಕ್ರವರ್ತಿ ತಮ್ಮ ಮಗನನ್ನು ಉಲ್ಬಣಿಸಿದ್ದ ಕಾಯಿಲೆಯ ಚಿಕಿತ್ಸೆಗಾಗಿ ಮುಂಬಯಿಯ ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಕರೆತಂದಿದ್ದರು. ಆಗ ಅವರ ಕುಟುಂಬದವರೆಲ್ಲಾ ನಾನಾ ಪಾಲ್ಕರ್ ಸ್ಮೃತಿ ಸಮಿತಿಯ ರುಗ್ಣಸೇವಾ ಸದನದಲ್ಲಿ ಉಳಿದುಕೊಂಡಿದ್ದರು. ಆಗ ಆ ಸಮಿತಿಯ ಪ್ರಬಂಧಕರಾಗಿದ್ದವರು ಸಂಘದ ಸ್ವಯಂಸೇವಕ ಕೃಷ್ಣಮಹಾದಿಕ್.

ಅಲ್ಲಿಗೆ ಬರುತ್ತಿದ್ದ ನೂರಾರು ಕುಟುಂಬಗಳಂತೆಯೇ ಈ ಬಂಗಾಲಿ ಮಧ್ಯಮ ವರ್ಗದ ಕುಟುಂಬದವರಿಗೂ ಉಚಿತ ಊಟ ಮತ್ತು ವಸತಿಯ ಜೊತೆಯಲ್ಲಿ ಉಳಿದೆಲ್ಲ ತರಹದ ಸಹಾಯವೂ ದೊರೆತಿತ್ತು. 5 ವರ್ಷ ವಯಸ್ಸಿನ ವಿದುರನ್ ಗಂಭೀರವಾದ ರಕ್ತದ ಕ್ಯಾನ್ಸರಿನಿಂದ ಬಳಲುತ್ತಿದ್ದ. ಬಳಲುವವರಲ್ಲಿ ಲಕ್ಷಕ್ಕೆ ಒಬ್ಬರು ಮಾತ್ರ ಬದುಕುಳಿಯುವ ಸಾಧ್ಯತೆ ಇರುವ ಕುಖ್ಯಾತಿ ಹೊಂದಿದ್ದ ಈ ಹೆಮ್ಮಾರಿಯನ್ನು ಹೊಡೆದೋಡಿಸಲು ಬೋನ್ ಮ್ಯಾರೋ ಟ್ರಾನ್ಸ್ ಪ್ಲ್ಯಾಂಟೇಶನ್ ಅನಿವಾರ್ಯವಿತ್ತು. 1997ರಲ್ಲಿ ವೈದ್ಯರು ಹೇಳಿದ್ದ 13 ಲಕ್ಷ ರೂಪಾಯಿಗಳನ್ನು ಹೊಂದಿಸುವುದು ಆ ಕುಟುಂಬದ ಕಲ್ಪನೆಗೂ ಮೀರಿದ್ದಾಗಿತ್ತು. ಆಗ ಮುಂಬಯಿಯ ನಾನಾ ಪಾಲ್ಕರ್ ಸ್ಮೃತಿ ಸಮಿತಿಯು ಈ ಪರಿವಾರಕ್ಕೆ ಸಹಾಯ ಮಾಡುವ ಹೊಣೆ ಹೊತ್ತಿತ್ತು.



ಇಂದು IITಯಿಂದ ಇಂಜಿನಿಯರ್ ಪದವಿ ಪಡೆದಿರುವ ವಿದುರನ್ ತನಗೆ ಪುನರ್ಜನ್ಮ ನೀಡಿದ್ದ ಕೃಷ್ಣ ಚಾಚಾರನ್ನು ಮರೆತಿರಲಿಲ್ಲ. ಅದಕ್ಕೆಂದೇ, ವಿಕಾಸ ಚಕ್ರವರ್ತಿಯವರು ತಮ್ಮ ಮಗನ ವಿವಾಹದ ಮೊದಲ ಆಮಂತ್ರಣ ಪತ್ರಿಕೆಯನ್ನು ದೇವರ ಮುಂದಿಡದೇ, ಸಮಿತಿಯ ಕಾರ್ಯಕರ್ತರ ಮುಂದಿರಿಸಿದ್ದರು. ವಿದುರನ್ ತರಹದ ಅದೆಷ್ಟೋ ರೋಗಿಗಳು ಕ್ಯಾನ್ಸರಿನಂತಹ ಭೀಕರ ಖಾಯಿಲೆಯ ಚಿಕಿತ್ಸೆಗಾಗಿ ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಬಂದಾಗಲೆಲ್ಲಾ, ನಾನಾ ಪಾಲ್ಕರ್ ರುಗ್ಣ ಸೇವಾ ಸದನವೇ ಅವರಿಗೆಲ್ಲಾ ಮನೆ ಹಾಗೂ ಸಮಿತಿಯ ಸದಸ್ಯರೇ ಅವರ ಬಂಧುಗಳು. ರೋಗಿಗಳಿಗಾಗಿ ಮತ್ತು ಅವರನ್ನು ನೋಡಿಕೊಳ್ಳುವವರಿಗಾಗಿ ಒಂದು ತಿಂಗಳವರೆಗೆ 5 ರೂಪಾಯಿಯ ತಿಂಡಿ ಹಾಗೂ 10 ರೂಪಾಯಿಯ ಊಟ ಮಾತ್ರವಲ್ಲದೆ ಉಚಿತ ವಸತಿ ಸೌಲಭ್ಯವನ್ನೂ ಸಮಿತಿ ಕಲ್ಪಿಸಿತ್ತು. 1968ರಲ್ಲಿ ಕೆಲವೇ ಕೊಠಡಿಗಳಿಂದ ಪ್ರಾರಂಭವಾದ ಈ ಸಮಿತಿ ಇಂದು ಹತ್ತು ಅಂತಸ್ತಿನ ಕಟ್ಟಡವಾಗಿ ಬೆಳೆದಿದೆ. ಇದರಲ್ಲಿ ಇಂದು ಡಯಾಲಿಸಿಸ್ ಪ್ಯಾಥಾಲಜಿ ಲ್ಯಾಬ್, 14 ಡಯಾಲಿಸಿಸ್ ಯಂತ್ರಗಳು, ಟಿಬಿ ಚಿಕಿತ್ಸಾ ಕೇಂದ್ರ, ಯೋಗ ಪ್ರಶಿಕ್ಷಣ ಕೇಂದ್ರ, ಆಂಬ್ಯುಲೆನ್ಸ್ ಸೇವೆ ಹಾಗೂ ಚಿಕಿತ್ಸಾ ಕೇಂದ್ರಗಳೆಲ್ಲ ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ.

ಸೇವಾಗಾಥ
ಕಥೆ-10

ಅಂದು ತಂದೆ ತಾಯಿಯ ಒಬ್ಬನೇ ಮಗನಾದ ವಿದುರನ್ ಚಕ್ರವರ್ತಿಯ ಚಿಕಿತ್ಸೆಗಾಗಿ, ಬೋನ್ ಮ್ಯಾರೋವನ್ನು ಕೇವಲ ಒಡಹುಟ್ಟಿದವರಿಂದಲೇ ಪಡೆದು ವಿದುರನ್ ಗೆ ಟ್ರಾನ್ಸ್ ಪ್ಲ್ಯಾಂಟ್ ಮಾಡಬೇಕಾಗಿತ್ತು. ಆಗ ವಿದುರನ್ ನ ತಾಯಿಗೆ ಸಮಿತಿಯ ಸದನವೇ ತವರು ಮನೆಯಂತಾಗಿ ಒಂಭತ್ತು ತಿಂಗಳ ಬಳಿಕ ಆಕೆ ಹೆಣ್ಣು ಮಗುವೊಂದಕ್ಕೆ ಜನ್ಮ ನೀಡಿದಳು. ನಂತರವೇ ವಿದುರನ್ ನ ಚಿಕಿತ್ಸೆ ಪೂರ್ಣಗೊಂಡಿದ್ದು! ನಂತರದ ಸಮಸ್ಯೆ ಚಿಕಿತ್ಸೆಯನ್ನು ಮುಂದುವರಿಸಲು ಆಗುವ ಖರ್ಚಿನದಾಗಿತ್ತು. ಆಗ ಸಮಿತಿಯು ಮುಂದೆ ಬಂದು ಕೆಲ ದಾನಿಗಳ ಮುಖಾಂತರ ಒದಗಿಸಿದ 2 ಲಕ್ಷ ರೂಪಾಯಿಗಳ ಸಹಾಯದೊಂದಿಗೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿಯವರ 4 ಲಕ್ಷ ರೂಪಾಯಿಗಳ ಉದಾರ ಧನಸಹಾಯವೂ ಬಂದು ಸೇರಿತು.

ಇಂದು ಬೆಂಗಳೂರಿನ ಪ್ರತಿಷ್ಠಿತಕಂಪನಿಯಲ್ಲಿ ಸೀನಿಯರ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ವಿದುರನ್ ಚಕ್ರವರ್ತಿಯ ಬಾಲ್ಯದಲ್ಲಿ ನಡೆದ ಯಶಸ್ವೀ ಶಸ್ತ್ರಚಿಕಿತ್ಸೆಯನ್ನು ವೈದ್ಯಕೀಯ ಪವಾಡವೆಂಬಂತೆ ಇಂದಿಗೂ ಅಮೆರಿಕದ ವೈದ್ಯಕೀಯ ವಿಶ್ವ ವಿದ್ಯಾಲಯಗಳಲ್ಲಿ ಬೋಧಿಸಲಾಗುತ್ತಿದೆ. ಇದೆಲ್ಲಾ ಕೇವಲ ಟಾಟಾ ಮೆಮೋರಿಯಲ್ ಆಸ್ಪತ್ರೆಯ ವೈದ್ಯರ ಪರಿಶ್ರಮದಿಂದ ಮಾತ್ರವಲ್ಲದೆ ಸಮಿತಿಯ ಕಾರ್ಯಕರ್ತರ ಸ್ನೇಹ, ಸಹಕಾರ ಹಾಗೂ ಹಾರೈಕೆಗಳಿಂದ ಸಾಧ್ಯವಾಯಿತೆಂದು ವಿಕಾಸರು ನಂಬಿದ್ದಾರೆ. ಇಂತಹ ಅದೆಷ್ಟೋ ಮನಮುಟ್ಟುವ ಕಥೆಗಳಿಗೆ ರುಗ್ಣಸೇವಾ ಸದನವು ಕಾರಣವಾಗಿದೆ. ಆರ್.ಎಸ್.ಎಸ್. ಪ್ರಚಾರಕರಾಗಿದ್ದ ಸ್ವರ್ಗೀಯ ನಾನಾ ಪಾಲ್ಕರ್ ರವರ ನೆನಪಲ್ಲಿ ರಚಿತವಾದ ಈ ರುಗ್ಣಸೇವಾ ಸದನವು ಬಡ ರೋಗಿಗಳು ಮತ್ತು ಅವರ ಮನೆ ಮಂದಿಯ ಪಾಲಿಗೆ ದೇವಾಲಯವೇ ಆಗಿಹೋಗಿದೆ. ಇತರೆಡೆ ಸಾವಿರಾರು ರೂಪಾಯಿಗಳಷ್ಟು ಶುಲ್ಕವಿರುವ ಡಯಾಲಿಸಿಸನ್ನು ಇಲ್ಲಿ ಕೇವಲ 350 ರೂಪಾಯಿಗಳಲ್ಲಿ ಮಾಡಲಾಗುತ್ತಿದೆ. ಅಂತಹ 1,10,000 ಡಯಾಲಿಸಿಸುಗಳನ್ನು ಸದನದ ಡಯಾಲಿಸಿಸ್ ಸೆಂಟರಿನಲ್ಲಿ 2004ರಿಂದ 2017ನೇ ಇಸವಿಯವರೆಗಿನ ಅವಧಿಯಲ್ಲಿ ಮಾಡಲಾಗಿದೆ. ಈ ಸಮಿತಿಯು ಮಾಸಿಕ ಆರೂವರೆ ಲಕ್ಷ ರುಪಾಯಿಗಳನ್ನು ವಿವಿಧ ಚಿಕಿತ್ಸಾ ಕೇಂದ್ರಗಳಲ್ಲಿರುವ ಅನಾರೋಗ್ಯಪೀಡಿತರ ಶಸ್ತ್ರಚಿಕಿತ್ಸೆ ಇತ್ಯಾದಿಗಳಿಗಾಗಿ ವ್ಯಯಿಸುತ್ತಿದೆ. ವಾಡಿಯಾ ಆಸ್ಪತ್ರೆಯಲ್ಲಿ ಬಾಣಂತಿಯರಿಗೆ ಶುಲ್ಕರಹಿತ ಊಟದ ವ್ಯವಸ್ಥೆಯನ್ನೂ ಮಾಡಲಾಗಿದೆ. ಮುಂಬಯಿಯ ಯಾವೊಬ್ಬ ರೋಗಿಯೂ ಚಿಕಿತ್ಸೆಯಿಂದ ವಂಚಿತನಾಗದಿರುವಂಥ ವ್ಯವಸ್ಥೆ ನಿರ್ಮಿಸುವುದು ಈ ಸಮಿತಿಯ ಗುರಿಯಾಗಿದೆ.

ಸಂಪರ್ಕ- ಕೃಷ್ಣ ಮಹಾದಿಕ್,
ಮೊಬೈಲ್- 9969612553

ಸಂಪಾದಕೀಯ

ಪ್ರಜೆಗಳ ಧ್ವನಿಗೆ ವೇದಿಕೆ

ರಾಜ್ಯದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಅವುಗಳಿಗೆ ತ್ವರಿತ ಪರಿಹಾರ ಒದಗಿಸುವ ಉದ್ದೇಶದಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ 'ಪ್ರಜಾಸೇವೆ' ಎಂಬ ಹೊಸ ಇಲಾಖೆಯನ್ನು ಸ್ಥಾಪಿಸಲು ಮುಂದಾಗಿರುವುದು ಗಮನಾರ್ಹ ಬೆಳವಣಿಗೆ. ಸರ್ಕಾರ ಮತ್ತು ಜನರ ನಡುವಿನ ಅಂತರವನ್ನು ಕಡಿಮೆ ಮಾಡುವ ಪ್ರಯತ್ನವಾಗಿ ಈ ನಿರ್ಧಾರವನ್ನು ನೋಡಬಹುದು. ಜನಸಾಮಾನ್ಯರು ತಮ್ಮ ಸಮಸ್ಯೆಗಳನ್ನು ಎಲ್ಲಿ, ಯಾರ ಮುಂದೆ ಮಂಡಿಸಬೇಕು ಎಂಬ ಗೊಂದಲವನ್ನು ನಿವಾರಿಸುವ ನಿಟ್ಟಿನಲ್ಲಿ ಈ ಇಲಾಖೆ ಮಹತ್ವದ ಪಾತ್ರ ವಹಿಸುವ ನಿರೀಕ್ಷೆಯಿದೆ.

ಸಾಮಾನ್ಯವಾಗಿ ಜನರು ಸರ್ಕಾರಿ ಕಚೇರಿಗಳ ಬಾಗಿಲು ತಟ್ಟಿದಾಗ, ಅವರ ಅರ್ಜಿಗಳು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗಾವಣೆಯಾಗುತ್ತಲೇ ಇರುತ್ತವೆ. ಸಮಸ್ಯೆಗಳ ಪರಿಹಾರಕ್ಕೆ ತಿಂಗಳುಗಳು, ಕೆಲವೊಮ್ಮೆ ವರ್ಷಗಳೂ ಬೇಕಾಗುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಕುಂದುಕೊರತೆಗಳ ನಿರ್ವಹಣೆಗೆ ಕೇಂದ್ರೀಕೃತ ವ್ಯವಸ್ಥೆ ರೂಪಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹವಾಗಿದೆ. ಸಚಿವ ಸಂಪುಟದಿಂದ ಅನುಮೋದನೆ ಪಡೆದಿರುವ 'ಪ್ರಜಾಸೇವೆ' ಇಲಾಖೆ ನಾಗರಿಕರ ಅಹವಾಲುಗಳನ್ನು ದಾಖಲಿಸುವುದಷ್ಟೇ ಅಲ್ಲ, ಅವುಗಳ ಪರಿಹಾರ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನೂ ವಹಿಸಿಕೊಳ್ಳಲಿದೆ ಎಂಬುದು ವಿಶೇಷ.

ಈ ಇಲಾಖೆಗೆ ಒಬ್ಬರು ಸಚಿವರು ಹಾಗೂ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸುವ ಯೋಜನೆ ಸರ್ಕಾರದ ಗಂಭೀರತೆಯನ್ನು ತೋರಿಸುತ್ತದೆ. ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಸಚಿವರು ಮತ್ತು ಸ್ಥಳೀಯ ಶಾಸಕರು ವಾರಕ್ಕೊಮ್ಮೆ ಸಭೆ ನಡೆಸಿ, ಜನರ ಅಹವಾಲುಗಳನ್ನು ಆಲಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ. ಜನರು ರಾಜಧಾನಿಗೆ ಬರುವ ಅಗತ್ಯವಿಲ್ಲದೆ ತಮ್ಮ ಕ್ಷೇತ್ರದಲ್ಲೇ ಸಮಸ್ಯೆಗಳನ್ನು ಮಂಡಿಸಲು ಅವಕಾಶ ಸಿಗುವುದು ಈ ಯೋಜನೆಯ ಪ್ರಮುಖ ಅಂಶವಾಗಿದೆ. ಆದರೆ, ಯಾವುದೇ ಹೊಸ ವ್ಯವಸ್ಥೆಯ ಯಶಸ್ಸು ಅದರ ಘೋಷಣೆಯಲ್ಲಿ ಅಲ್ಲ, ಅನುಷ್ಠಾನದಲ್ಲಿ ಅಡಗಿದೆ. 'ಪ್ರಜಾಸೇವೆ' ಇಲಾಖೆ ಮತ್ತೊಂದು ಆಡಳಿತಾತ್ಮಕ ಹಂತವಾಗಿ ಪರಿಣಮಿಸದೆ, ನಿಜವಾಗಿಯೂ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವೇದಿಕೆಯಾಗಬೇಕಿದೆ. ಸಾರ್ವಜನಿಕರು ಸಲ್ಲಿಸುವ ಅರ್ಜಿಗಳಿಗೆ ನಿಗದಿತ ಅವಧಿಯಲ್ಲಿ ಸ್ಪಂದನೆ ನೀಡುವುದು, ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು ಮತ್ತು ಪರಿಹಾರದ ಪ್ರಗತಿಯನ್ನು ಪಾರದರ್ಶಕವಾಗಿ ತಿಳಿಸುವುದು ಅತ್ಯಗತ್ಯ. ಇಲ್ಲವಾದರೆ ಜನರ ನಿರೀಕ್ಷೆಗಳು ಹುಸಿಯಾಗುವ ಸಾಧ್ಯತೆಯೂ ಇದೆ.

ಇತ್ತೀಚಿನ ದಿನಗಳಲ್ಲಿ ವಿವಿಧ ಬೇಡಿಕೆಗಳಿಗಾಗಿ ಪ್ರತಿಭಟನೆಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನ ಸೆಳೆದಿದೆ. ಪ್ರತಿಭಟನೆಗಳ ಹಿಂದಿರುವ ಅಸಮಾಧಾನವನ್ನು ಅರಿತು, ಸಮಸ್ಯೆಗಳಿಗೆ ಮುಂಚಿತವಾಗಿ ಸ್ಪಂದಿಸುವ ವ್ಯವಸ್ಥೆಯನ್ನು ರೂಪಿಸುವುದು ಉತ್ತಮ ಆಡಳಿತದ ಲಕ್ಷಣವಾಗಿದೆ. ಈ ದೃಷ್ಟಿಯಿಂದ 'ಪ್ರಜಾಸೇವೆ' ಇಲಾಖೆಯ ಪರಿಕಲ್ಪನೆ ಮಹತ್ವ ಪಡೆದುಕೊಳ್ಳುತ್ತದೆ.

ಒಟ್ಟಾರೆ, 'ಪ್ರಜಾಸೇವೆ' ಇಲಾಖೆ ಜನರ ಸಮಸ್ಯೆಗಳನ್ನು ನೇರವಾಗಿ ಸರ್ಕಾರದ ಗಮನಕ್ಕೆ ತಂದು, ಪರಿಹಾರದ ಪ್ರಕ್ರಿಯೆಯನ್ನು ವೇಗಗೊಳಿಸುವ ಸಾಮರ್ಥ್ಯ ಹೊಂದಿದೆ. ರಾಜಕೀಯ ಘೋಷಣೆಯಾಗಿ ಉಳಿಯದೆ, ಜನಸೇವೆಯ ಪರಿಣಾಮಕಾರಿ ಸಾಧನವಾಗಿ ರೂಪುಗೊಂಡರೆ, ಇದು ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ ಜನಸ್ಪಂದನಕ್ಕೆ ಹೊಸ ಮಾನದಂಡವನ್ನು ಸ್ಥಾಪಿಸಬಹುದು.

'ಬಾಲ್ಕನೀಕರಣ'ದ ಅಪಾಯಗಳು

ಭಾರತವನ್ನು ದುರ್ಬಲಗೊಳಿಸಲು ಕಟಿಬದ್ಧರಾಗಿರುವವರು ವಿದೇಶಿ ಶಕ್ತಿಗಳೊಡನೆ ಕೈಜೋಡಿಸಿ, ದೇಶವನ್ನು ಬಾಲ್ಕನೀಕರಣಗೊಳಿಸುವ ಪಿತೂರಿ ಮಾಡುತ್ತಿದ್ದಾರೆ.

▸ ಗುರುಪ್ರಸಾದ ಭಟ್ ಉಡುಪಿ

ಆಂತರಿಕ ಬಿರುಕುಗಳನ್ನು ಸೃಷ್ಟಿಸಿ, ತನ್ಮೂಲಕ ಸದೃಢ ರಾಷ್ಟ್ರಗಳನ್ನು ಹೇಗೆ ವಿಭಜಿಸಬಹುದು ಎಂದು ಲೆಕ್ಕಾಚಾರ ಮಾಡಿ, ಅದಕ್ಕೆ ಬೇಕಾಗುವ ಸೈದ್ಧಾಂತಿಕ ಮತ್ತು ಧನ ಸಮರ್ಥನೆ ನೀಡಿ ಅವುಗಳನ್ನು ಕೆಡವುದರ ಹಿಂದೆ ಅದೆಷ್ಟೋ ಅಗೋಚರ ಅಂತಾರಾಷ್ಟ್ರೀಯ ಶಕ್ತಿಗಳ ಹುನ್ನಾರವಿದೆ.

ವಿಶ್ವದ ಇತಿಹಾಸವನ್ನು ಗಮನಿಸಿದರೆ, ರಾಷ್ಟ್ರಗಳು ಯಾವಾಗಲೂ ವಿದೇಶಿ ಆಕ್ರಮಣಗಳಿಂದ ಮಾತ್ರ ವಿಭಜನೆಯಾಗುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅನೇಕ ಬಾರಿ ಒಂದು ದೇಶವನ್ನು ದುರ್ಬಲಗೊಳಿಸುವ ಅತ್ಯಂತ ಪರಿಣಾಮಕಾರಿ ವಿಧಾನವೆಂದರೆ ಅದರೊಳಗೇ ಇರುವ ಬಿರುಕುಗಳನ್ನು ಬಳಸಿಕೊಳ್ಳುವುದು. ಭಾಷೆ, ಜನಾಂಗ, ಧರ್ಮ, ಮತ, ಪ್ರದೇಶ, ಬುಡಕಟ್ಟು, ವರ್ಗ ಅಥವಾ ಸೈದ್ಧಾಂತಿಕ ಭಿನ್ನತೆಗಳು ಕ್ರಮೇಣ ಒಂದು ಸದೃಢ ರಾಷ್ಟ್ರವನ್ನು ಸಣ್ಣ-ಸಣ್ಣ ರಾಜಕೀಯ ಘಟಕಗಳಾಗಿ ಒಡೆಯುವ ಸಾಧನಗಳಾಗುತ್ತವೆ. ಈ ಪ್ರಕ್ರಿಯೆಯನ್ನೇ ಬಾಲ್ಕನೀಕರಣ (Balkanization) ಎಂದು ಕರೆಯಲಾಗುತ್ತದೆ.

ಈ ಪದವು ಆಗ್ನೇಯ ಯುರೋಪಿನ 'ಬಾಲ್ಕನ್' ಪ್ರದೇಶದಿಂದ ಬಂದಿದೆ. 19ನೇ ಮತ್ತು 20ನೇ ಶತಮಾನಗಳಲ್ಲಿ ಅಲ್ಲಿ ಬೃಹತ್ ರಾಜಕೀಯ ಸಾಮ್ರಾಜ್ಯಗಳು ಮತ್ತು ಒಕ್ಕೂಟಗಳು ಅನೇಕ ಸಣ್ಣಸಣ್ಣ ರಾಷ್ಟ್ರಗಳಾಗಿ ವಿಭಜನೆಯಾದವು. ಇಂದು ಈ ಪದವನ್ನು ವಿಶಾಲ ಅರ್ಥದಲ್ಲಿ ಬಳಸಲಾಗುತ್ತಿದ್ದು, ಒಂದು ದೇಶವು ಅನೇಕ ಸಣ್ಣ, ಪರಸ್ಪರ ಸ್ಪರ್ಧಾತ್ಮಕ ಅಥವಾ ದುರ್ಬಲ ಘಟಕಗಳಾಗಿ ಒಡೆಯುವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಯಾವುದೇ ಒಂದು ರಾಷ್ಟ್ರವನ್ನು ವಿಭಜನೆ ಮಾಡುವ ಮೊದಲು ಅಲ್ಲಿನ ಜನತೆಯ ಮನಸ್ಸಿನಲ್ಲಿ ವಿಷಬೀಜವನ್ನು ಬಿತ್ತಲಾಗುತ್ತದೆ, ಒಂದಾಗಿ ಬಾಳುವ ಸಮಾಜವನ್ನು ಜಾತಿ, ಧರ್ಮ-ಮತ, ಭಾಷೆ, ಬಲ್ಲಿದ-ಬಡವ ಇತ್ಯಾದಿ ಕಾರಣಗಳನ್ನೊಡ್ಡಿ ಒಡೆಯಲಾಗುತ್ತದೆ. ಸಮಾಜದ ಒಂದು ನಿರ್ದಿಷ್ಟ ಗುಂಪಿನಲ್ಲಿ 'ನಮ್ಮನ್ನು ಬಲಿಪಶು ಮಾಡಲಾಗಿದೆ' (Victimisation ಅಥವಾ ಶೋಷಣೆಗೆ ಒಳಪಡಿಸಲಾಗಿದೆ) ಎಂಬ ಕಹಿ ಭಾವನೆಯನ್ನು ಹುಟ್ಟುಹಾಕುವುದು, ಅವರನ್ನು ಸಮಾಜದ ಇತರರಿಂದ ಬೇರ್ಪಡಿಸುವ, ಮತ್ತು ಆ ಮೂಲಕ ರಾಜಕೀಯ ಲಾಭಕ್ಕಾಗಿ ಆ ಭಿನ್ನತೆಯನ್ನು ಬಳಸಿಕೊಳ್ಳುವ ಪ್ರಕ್ರಿಯೆ ವಿಭಜನೆಯ ಮೊದಲ ಹೆಜ್ಜೆಯಾಗಿದೆ.

ಜಿನ್ನಾ ನಾವು ಮುಸ್ಲಿಮರು, ನಮಗೆ ಹಿಂದೂಗಳ ಜೊತೆಗೆ ಇರಲು ಸಾಧ್ಯವಿಲ್ಲ ನಮಗೆ ಪ್ರತ್ಯೇಕ ದೇಶ ಬೇಕು ಎಂದು ಪಟ್ಟು ಹಿಡಿದು, 1926 ರಲ್ಲಿ ಮುಸ್ಲಿಂ ಲೀಗ್ ಬಿತ್ತಿದ್ದ ವಿಷಬೀಜ 1947ರ ಹೊತ್ತಿಗೆ ಹೆಮ್ಮರವಾಗಿ, ಕೊನೆಗೆ ಭಾರತ ಇಬ್ಭಾಗವಾಯಿತು. ಈ ವಿಭಜನೆ ಮಾಡುವ ಪ್ರಕ್ರಿಯೆ 1947 ಕ್ಕೇ ಕೊನೆಯಾಗಲಿಲ್ಲ. ಸ್ವಾತಂತ್ರ್ಯ ಲಭಿಸಿ 78 ವರ್ಷಗಳು ಕಳೆದರೂ ದೇಶದ ಒಳ-ಹೊರಗಿನ ಶತ್ರುಗಳು ದೇಶವನ್ನು ದುರ್ಬಲಗೊಳಿಸಲು, ಅರಾಜಕತೆ ಸೃಷ್ಟಿಸಲು ಇಂತಹ 'ಬಾಲ್ಕನೀಕರಣ' ಸಬೂಬುಗಳನ್ನು ನಿರಂತರವಾಗಿ ಹುಟ್ಟುಹಾಕುತ್ತಲೇ ಇರುತ್ತಾರೆ.

ವಿಶ್ವಾದ್ಯಂತ ಇಂತಹ ಕೆಲವೊಂದು ಬಾಲ್ಕನೀಕರಣಗಳು ನಡೆದವು. ಉದಾಹರಣೆಗೆ ಪೂರ್ವ ಐರೋಪ್ಯ ಭಾಗದಲ್ಲಿದ್ದ ಯುಗೊಸ್ಲಾವಿಯ ಮತ್ತು ಜೆಕೊಸ್ಲೊವಾಕಿಯಾ ದೇಶಗಳು. ಇವುಗಳು ಅದೆಷ್ಟು ಬಾರಿ ತುಂಡರಿಸಲ್ಪಟ್ಟಿವೆ ಎಂದರೆ, ಅದರ ಮೂಲ ಸ್ವರೂಪವೇ ಊಹಿಸಿಕೊಳ್ಳಲಾಗದಷ್ಟು ಬದಲಾಗಿವೆ. ಒಂದಾಗಿ ಬಲಿಷ್ಠವಾಗಿದ್ದ ದೇಶ, ಬಾಲ್ಕನೀಕರಣಕ್ಕೊಳಪಟ್ಟು, ಪರಸ್ಪರ ಕಚ್ಚಾಡಿಕೊಂಡು, ಈಗ ಪರಾವಲಂಬಿಗಳಾಗಿವೆ.

ಬಾಲ್ಕನೀಕರಣ ಹೇಗೆ ನಡೆಯುತ್ತದೆ?

ಒಂದು ದೇಶವು ಒಂದೇ ದಿನದಲ್ಲಿ ವಿಭಜನೆಯಾಗುವುದಿಲ್ಲ. ಈ ಪ್ರಕ್ರಿಯೆ ಸಾಮಾನ್ಯವಾಗಿ ಹಲವು ಹಂತಗಳಲ್ಲಿ ನಡೆಯುತ್ತದೆ. ಮೊದಲಿಗೆ, ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾಜಿಕ, ಭಾಷಿಕ, ಧಾರ್ಮಿಕ ಅಥವಾ ಜನಾಂಗೀಯ ಭಿನ್ನತೆಗಳನ್ನು ಹೆಚ್ಚಾಗಿ ಪ್ರಚೋದಿಸಲಾಗುತ್ತದೆ. ದೀರ್ಘಕಾಲ ಒಟ್ಟಾಗಿ ಬದುಕಿದ್ದ ಜನರು ತಮ್ಮನ್ನು ಮೊದಲು ರಾಷ್ಟ್ರದ ಪ್ರಜೆಗಳೆಂದು ಅಲ್ಲ, ಬದಲಾಗಿ ತಮ್ಮ ಸಣ್ಣ ಗುಂಪಿನ ಸದಸ್ಯರೆಂದು ಗುರುತಿಸಿಕೊಳ್ಳಲು ಆರಂಭಿಸುತ್ತಾರೆ. ಉದಾಹರಣೆಗೆ: ಅಹಿಂದ, ಬ್ರಾಹ್ಮಣ, ದ್ರಾವಿಡ-ಆರ್ಯ, ಅಲ್ಪ-ಸಂಖ್ಯಾತರು, ಮತಾಂತರವಾದಿಗಳು, ಭಾಷಾಂಧತೆ, ಇತ್ಯಾದಿ. ಒಂದು ಬಣಕ್ಕೆ ಶಸ್ತ್ರಾಸ್ತ್ರ ನೀಡಿ ಇನ್ನೊಂದು ಬಣದ ವಿರುದ್ಧ ಹಿಂಸಾಚಾರಕ್ಕೆ ಇಂಬು ನೀಡಲಾಗುತ್ತದೆ. ಅವರು ಪ್ರತಿಕ್ರಿಯಿಸಿದಾಗ, ಗಲಭೆ ಉಲ್ಬಣಗೊಳ್ಳುತ್ತದೆ. ಆ ಬೆಂಕಿಯಲ್ಲಿ ಆಂತರಿಕ ಶತ್ರುಗಳು ಮೈಕಾಯಿಸಿಕೊಳ್ಳುವುದಲ್ಲದೆ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಜನಸಾಮಾನ್ಯರ ಜೀವನ ಅಸ್ತವ್ಯಸ್ತವಾಗಿ, ಸಮಾಜ ಅಲ್ಲೋಲಕಲ್ಲೋಲವಾಗುತ್ತದೆ.

ಎರಡನೆಯದಾಗಿ, ಐತಿಹಾಸಿಕ ಅನ್ಯಾಯಗಳು, ಅಸಮಾಧಾನಗಳು ಮತ್ತು ಪ್ರಾದೇಶಿಕ ಭಾವನೆಗಳನ್ನು ಆಧರಿಸಿದ ರಾಜಕೀಯ ಚಳುವಳಿಗಳು ಉದಯಿಸುತ್ತವೆ. ಇವು ಸ್ವಾಯತ್ತತೆ, ವಿಶೇಷ ಹಕ್ಕುಗಳು, ಪ್ರತ್ಯೇಕ ಆಡಳಿತ ಅಥವಾ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಗಳನ್ನು ಮುಂದಿಡುತ್ತವೆ.

ಮೂರನೆಯದಾಗಿ, ರಾಷ್ಟ್ರೀಯ ಸಂಸ್ಥೆಗಳ ಮೇಲಿನ ನಂಬಿಕೆ ಕುಗ್ಗುವಂತೆ ಜನರ 'ಬ್ರೇನ್‌ವಾಶಿಂಗ್' ಮಾಡುವುದು. ಜನರು ರಾಷ್ಟ್ರದ ನಾಯಕರಿಗಿಂತ ತಮ್ಮ ಸ್ಥಾನೀಯ, ಭಾಷೀಯ, ವರ್ಗೀಯ, ಮತೀಯ, ಪ್ರಾದೇಶಿಕ, ಧಾರ್ಮಿಕ, ಅಥವಾ ಜನಾಂಗೀಯ ನಾಯಕರೊಂದಿಗೆ ಹೆಚ್ಚು ಗುರುತಿಸಿಕೊಳ್ಳಲು ಆರಂಭಿಸುತ್ತಾರೆ. ಮತಭೇದದಿಂದ ಪ್ರಾರಂಭಗೊಳ್ಳುವ ಈ ಪ್ರಕ್ರಿಯೆ ಮನಭೇದಕ್ಕೆ ತಿರುಗಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ: ವಿಫಲಗೊಂಡ ವೋಟ್-ಚೋರಿ ಆಪಾದನೆ, ಸಾಂವಿಧಾನಿಕ ಕೇಂದ್ರೀಯ ಸ್ವಾಯತ್ತತೆ ಸಂಸ್ಥೆಗಳ ಮೇಲೆ ಆರೋಪ, ಕಲ್ಪಿತಕತೆಗಳ ಸೃಷ್ಟಿ ಮತ್ತು ಸುಳ್ಳನ್ನೇ ನಿಜವೆಂದು ತಿಳಿಸುವ ವ್ಯಾಪಾರೀ-ಮಾಧ್ಯಮಗಳ ಮೂಲಕ ಮಾಡುವ ವ್ಯಾಪಕ ಪ್ರಚಾರ.

ಕೊನೆಯ ಹಂತದಲ್ಲಿ ರಾಜಕೀಯ ವಿಭಜನೆ ಸಂಭವಿಸುತ್ತದೆ. ಇದು ಕೆಲವೊಮ್ಮೆ ಮಾತುಕತೆ ಮತ್ತು ಒಪ್ಪಂದಗಳ ಮೂಲಕ ಶಾಂತಿಯುತವಾಗಿ ನಡೆಯಬಹುದು; ಮತ್ತೆ ಕೆಲವೊಮ್ಮೆ ಹಿಂಸಾಚಾರ, ಗಲಭೆಗಳು ಅಥವಾ ಆಂತರಿಕ ಯುದ್ಧದ ಸ್ವರೂಪವನ್ನು ಪಡೆಯಬಹುದು.

ಯುಗೊಸ್ಲಾವಿಯಾದ ಉದಾಹರಣೆ

ಆಧುನಿಕ ಯುಗದಲ್ಲಿ ಬಾಲ್ಕನೀಕರಣದ ಅತ್ಯಂತ ಸ್ಪಷ್ಟ ಉದಾಹರಣೆ ಯುಗೊಸ್ಲಾವಿಯಾ ರಾಷ್ಟ್ರ. ದ್ವಿತೀಯ ಮಹಾಯುದ್ಧದ ನಂತರ ಯುಗೊಸ್ಲಾವಿಯಾ ಹಲವು ಗಣರಾಜ್ಯಗಳು ಮತ್ತು ವೈವಿಧ್ಯಮಯ ಸಮಾಜ ಮತ್ತು ಜನಾಂಗಗಳನ್ನು ಒಳಗೊಂಡ ಒಂದು ಒಕ್ಕೂಟ ರಾಷ್ಟ್ರವಾಗಿತ್ತು. ಹೊರಗೆ ಅದು ಏಕೀಕೃತ ದೇಶದಂತೆ ಕಂಡರೂ, ಅದರೊಳಗೆ ಜನಾಂಗೀಯ, ಧಾರ್ಮಿಕ ಮತ್ತು ಐತಿಹಾಸಿಕ ಭಿನ್ನತೆಗಳು ಜೀವಂತವಾಗಿಯೇ ಇದ್ದವು. ಅವೆಲ್ಲವನ್ನು ಒಂದು ಸೂತ್ರದಲ್ಲಿ ಕಟ್ಟುವ ವ್ಯವಸ್ಥೆ - "ನಾವೆಲ್ಲ ಒಂದು" ಎನ್ನುವ ಅಚಲ ದೇಶಪ್ರೇಮ - ಅಲ್ಲಿ ಪ್ರಾಯಶಃ ಉತ್ಕಟವಾಗಿರಲಿಲ್ಲ. ಅದೇ ಅದರ ಪ್ರಮುಖ ದೌರ್ಬಲ್ಯವೆಂದು ಸಾಬೀತಾಯಿತು.

20ನೇ ಶತಮಾನದ ಕೊನೆಯ ಭಾಗದಲ್ಲಿ ಕೇಂದ್ರೀಯ ಸರ್ಕಾರದ ಪ್ರಭಾವ ಮತ್ತು ಹಿಡಿತ ದುರ್ಬಲವಾಗುತ್ತಿದ್ದಂತೆ, ಅನೇಕ ಪ್ರಾದೇಶಿಕ ರಾಷ್ಟ್ರೀಯತೆಯ ಚಳುವಳಿಗಳು ಬಲಗೊಂಡವು. 1990ರ ದಶಕದಿಂದ ಆರಂಭವಾಗಿ ಯುಗೊಸ್ಲಾವಿಯಾ ಕ್ರಮೇಣ ಅನೇಕ ರಾಷ್ಟ್ರಗಳಾಗಿ ವಿಭಜನೆಯಾಯಿತು. ಯುದ್ಧ, ರಕ್ತಪಾತ, ವೈಮನಸ್ಯಗಳ ನಡುವೆ ಒಂದೇ ರಾಷ್ಟ್ರವಾಗಿದ್ದ ಯುಗೊಸ್ಲಾವಿಯಾ ಈಗ ಹರಿದು ಹಂಚಿ ಅನೇಕ ಸ್ವತಂತ್ರ ದೇಶಗಳಾಗಿವೆ. ಸ್ಲೋವೇನಿಯಾ, ಕ್ರೊಯೇಷಿಯಾ, ಬೋಸ್ನಿಯಾ-ಹರ್ಜೆಗೋವಿನಾ, ಉತ್ತರ ಮ್ಯಾಸಿಡೋನಿಯಾ, ಸರ್ಬಿಯಾ, ಮಾಂಟೆನೆಗ್ರೊ ಹಾಗೂ ಕೊಸೊವೊ ಎಂಬ ಏಳು ಪ್ರತ್ಯೇಕ ಘಟಕಗಳಾಗಿ ಮಾರ್ಪಟ್ಟಿತು! ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ನಖಶಿಖಾಂತ ಅಲರ್ಜಿ.

ಪರಿಣಾಮ

ಈ ಬಾಲ್ಕನೀಕರಣ ಪ್ರಕ್ರಿಯೆಯಲ್ಲಿ ಅಸಂಖ್ಯ ಆಂತರಿಕ ಯುದ್ಧಗಳು, ಜನಾಂಗೀಯ ಘರ್ಷಣೆಗಳು, ಆರ್ಥಿಕ ಕುಸಿತ ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ ಅಸಂಖ್ಯ ಅಮಾಯಕ ಪ್ರಜೆಗಳ ಮಾರಣಹೋಮ ಜರುಗಿತು. ಶತಮಾನಗಳಿಂದ ನೆಲೆಸಿದ್ದ ಜನರು ಭಾಷೆ, ಜನಾಂಗ, ಮತಗಳ ಆಧಾರದ ಮೇಲೆ ಗುಳೆ ಎದ್ದು ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು. ಸುಮಾರು 150,000 ಜನರು ಸಾವಿಗೀಡಾದರು. ಪುರುಷರು ಯುದ್ಧ ಘರ್ಷಣೆಯಲ್ಲಿ ಮಡಿದರೆ, ಸ್ತ್ರೀಯರು ಮತ್ತು ಮಕ್ಕಳು ಅನಾಥರಾದರು. ರೋಗರುಜಿನಗಳು ಉಲ್ಬಣಗೊಂಡವು. ಒಮ್ಮೆ ಪ್ರಭಾವಶಾಲಿಯಾಗಿದ್ದ ಯುಗೊಸ್ಲಾವಿಯಾದ ಭೌಗೋಳಿಕ ಮತ್ತು ರಾಜಕೀಯ ಶಕ್ತಿ ಸಂಪೂರ್ಣವಾಗಿ ನಾಶವಾಯಿತು. ಇಂದು ಬಲಹೀನ ತುಂಡು ರಾಷ್ಟ್ರಗಳಾಗಿ, ಇತರ ಹಿರಿಯಣ್ಣರ ಮರ್ಜಿಯಂತೆ ನಡೆಯಬೇಕಾದ ದುಸ್ಥಿತಿ ಬಂದೊದಗಿದೆ.

ಅಂತೆಯೇ, ಜೆಕೊಸ್ಲೋವಾಕಿಯಾದ ಕಥೆ ಕೂಡ. ಯುಗೊಸ್ಲಾವಿಯಾದಂತೆ ಹಿಂಸಾಚಾರದ ಮೂಲಕ ಅಲ್ಲ, ಶಾಂತಿಯುತ ಮಾತುಕತೆಗಳ ಮೂಲಕ ಈ ದೇಶ ವಿಭಜನೆಯಾಯಿತು. ಸೋವಿಯೆತ್ ಕಮ್ಯುನಿಸ್ಟ್ ಆಡಳಿತದ ಪತನದ ನಂತರ ಜೆಕ್ ಮತ್ತು ಸ್ಲೋವಾಕ್ ಜನಾಂಗದ ನಾಯಕರು ಪ್ರತ್ಯೇಕ ರಾಷ್ಟ್ರಗಳಾಗಿರುವುದೇ ತಮ್ಮ ಜನರ ಹಿತಕ್ಕೆ ಅನುಕೂಲಕರ ಎಂದು ನಿರ್ಧರಿಸಿದರು. 1993 ರಲ್ಲಿ ಜೆಕೊಸ್ಲೋವಾಕಿಯಾ ಶಾಂತಿಯುತವಾಗಿ ಎರಡು ರಾಷ್ಟ್ರಗಳಾಗಿ ವಿಭಜನೆಯಾಯಿತು- ಜೆಕ್ ಗಣರಾಜ್ಯ ಮತ್ತು ಸ್ಲೋವಾಕಿಯಾ. ಈ ಘಟನೆಯನ್ನು 'ಮಕಮಲ್ಲು ವಿಚ್ಛೇದನ' (Velvet Divorce) ಎಂದು ಹೆಸರಿಸಿ, ಬಾಲ್ಕನೀಕರಣವನ್ನು ಪ್ರಚೋದಿಸಿ ಸಮರ್ಥಿಸುವ ವಿಶ್ವನಾಯಕರು ಚಪ್ಪಾಳೆ ತಟ್ಟಿದರು.

ವಿಭಜನೆಗೆ ಸಾಮಾನ್ಯವಾಗಿ ಬಳಸಲಾಗುವ 6 ಪ್ರಮುಖ ಬಿರುಕುಗಳು

ಜನಾಂಗೀಯ ಭಿನ್ನತೆ, ಧಾರ್ಮಿಕ ಭಿನ್ನತೆ, ಭಾಷಾಧಾರಿತ ಅಸ್ಮಿತೆ, ಪ್ರಾದೇಶಿಕ ಆರ್ಥಿಕ ಅಸಮಾನತೆ, ಐತಿಹಾಸಿಕ ಅಸಮಾಧಾನಗಳು, ಬುಡಕಟ್ಟು ಅಥವಾ ಸಮುದಾಯ ಗುರುತು ಮತ್ತು ಸೈದ್ಧಾಂತಿಕ ಧ್ರುವೀಕರಣ.

ಇವುಗಳಲ್ಲಿ, ಯಾವುದಾದರೂ ಮೂರ್ನಾಲ್ಕು ಬಿರುಕುಗಳು ರಾಷ್ಟ್ರೀಯ ಗುರುತಿಗಿಂತ ಪ್ರಬಲವಾಗಲು ಆರಂಭಿಸಿದಾಗ, ರಾಷ್ಟ್ರದ ಏಕತೆಗೆ ದುಷ್ಪರಿಣಾಮ ಬೀರುತ್ತದೆ. ಅದರ ಆರ್ಥಿಕ ಸಂಪನ್ಮೂಲಗಳು, ವಿಶಾಲ ಮಾರುಕಟ್ಟೆ, ಬಲಿಷ್ಠ ಸೇನೆ ಮತ್ತು ಹೆಚ್ಚಿನ ರಾಜತಾಂತ್ರಿಕ ಪ್ರಭಾವಗಳು ಕ್ರಮೇಣ ದುರ್ಬಲವಾಗುತ್ತವೆ. ಒಂದು ಬಲಿಷ್ಠ ರಾಷ್ಟ್ರ ಅನೇಕ ಸಣ್ಣ ಘಟಕಗಳಾಗಿ ವಿಭಜನೆಯಾದರೆ, ಅದರ ಒಟ್ಟಾರೆ ಶಕ್ತಿ ಕುಗ್ಗುತ್ತದೆ. ತುಂಡರಿಸಲ್ಪಟ್ಟ ಸಣ್ಣ ಸಣ್ಣ ರಾಷ್ಟ್ರಗಳು ಸೇನಾ ಸುರಕ್ಷತೆ, ಆಂತರಿಕ ಭದ್ರತೆ, ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಹೂಡಿಕೆಗಳಿಗಾಗಿ ಹೊರಗಿನ ಶಕ್ತಿಗಳ ಪರಾವಲಂಬಿತವಾಗುವ ಸಾಧ್ಯತೆ ಹೆಚ್ಚುತ್ತದೆ. ಈ ಕಾರಣದಿಂದಲೇ ರಾಷ್ಟ್ರೀಯ ಏಕತೆ ಮತ್ತು ಸಾಮೂಹಿಕ ಗುರುತನ್ನು ಅನೇಕ ರಾಜಕೀಯ ಚಿಂತಕರು ರಾಷ್ಟ್ರದ ದೀರ್ಘಕಾಲೀನ ಶಕ್ತಿಯ ಮೂಲವೆಂದು ಪರಿಗಣಿಸುತ್ತಾರೆ.


ಬಾಲ್ಕನೀಕರಣಗೊಂಡ ಈ ಎರಡೂ ಐರೋಪ್ಯ ರಾಷ್ಟ್ರಗಳು ಭಾರತಕ್ಕೆ ಒಂದು ಪ್ರಮುಖ ಪಾಠವನ್ನು ಕಲಿಸುತ್ತವೆ. ದೇಶವನ್ನು ಆಳುವ ಪಕ್ಷವನ್ನು ವಿರೋಧಿಸುತ್ತಲೇ, ಅದರ ನಾಯಕ ಹಾಗೂ ಪ್ರಧಾನ ಮಂತ್ರಿಯನ್ನು ದ್ವೇಷಿಸುತ್ತಲೇ, ಬಹುತೇಕ ಎಲ್ಲ ರಾಜಕೀಯ ವಿರೋಧ ಪಕ್ಷಗಳು ಇಂದು ಹಿಂದೂ ವಿರೋಧಿ ಹಾಗೂ ದೇಶ ವಿರೋಧಿ ಕಾರ್ಯವನ್ನೆಸಗಲು ಹಿಂಜರಿಯುತ್ತಿಲ್ಲ.

ಭಾರತವನ್ನು ದುರ್ಬಲಗೊಳಿಸಲು ಕಂಕಣಬದ್ಧರಾಗಿರುವ ಇವರು ವಿದೇಶಿ ಶಕ್ತಿಗಳೊಡನೆ ಖುಲ್ಲಂಖುಲ್ಲಾ ಕೈಜೋಡಿಸಿ, ದೇಶವನ್ನು ಬಾಲ್ಕನೀಕರಣದತ್ತ ಸಾಗಿಸಬೇಕೆನ್ನುವ ಪಿತೂರಿ ನಿರಂತರವಾಗಿ ಮಾಡುತ್ತಿದ್ದಾರೆ. ಇದು ದೇಶದ ಮೇಲೆ ದುಷ್ಪರಿಣಾಮ ಬೀರದಂತೆ ತಡೆಯಲು ಪ್ರತಿಯೊಬ್ಬ ದೇಶಭಕ್ತನೂ ಎಚ್ಚರಿಕೆಯಿಂದಿರಬೇಕು.

ಆಂತರಿಕ ಸಾಮರಸ್ಯವೇ ರಾಷ್ಟ್ರದ ಬಲ. ಕೇವಲ ಗಡಿಗಳಲ್ಲಿ ಮಾತ್ರ ಇರುವುದಿಲ್ಲ; ಅದರ ಜನರನ್ನು ಒಗ್ಗೂಡಿಸುವ ಸಾಮೂಹಿಕ ಚೇತನ ಮತ್ತು ಏಕತೆಯಲ್ಲಿಯೂ ಅಡಗಿದೆ. ಇಂದು ಭಾರತದಲ್ಲಿ ಯಾವುದಾದರೂ ಒಂದು ಸಂಸ್ಥೆ "ನಾವೆಲ್ಲ ಒಂದು" - ಎಂಬ ಕಾರ್ಯವನ್ನು ನಿಸ್ವಾರ್ಥತೆಯಿಂದ ನಿರ್ವಹಿಸುತ್ತೆಂದರೆ, ಅದು ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾತ್ರ.

ಹರೆಯದವರು ಮತ್ತು ಲೈಂಗಿಕ ವಿಜ್ಞಾನ -2

ನಮ್ಮ ಸಮಾಜದಲ್ಲಿ ಲೈಂಗಿಕತೆಯ ಅರಿವು ಮೂಡಿಸುವ ಪದ್ಧತಿ ಮೂರನೇ ಶತಮಾನದಲ್ಲೇ ರೂಢಿಯಲ್ಲಿತ್ತು. ಇದಕ್ಕೆ ಉದಾಹರಣೆ ವಾತ್ಸಾಯನ ಅವರ ಕಾಮಸೂತ್ರ.



ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com

ಹಿಂದಿನ ಲೇಖನದಲ್ಲಿ ಹರೆಯದವರಿಗೆ ಲೈಂಗಿಕ ವಿಜ್ಞಾನ ಅವಶ್ಯವೇ ಎಂಬ ಚರ್ಚೆಗಳು ನಡೆದ ಕುರಿತು ವಿವರಿಸಿದೆ. ಪ್ರಸ್ತುತ ಹರೆಯದವರಿಗೆ ಲೈಂಗಿಕ ವಿಜ್ಞಾನ ಅಗತ್ಯ ಎಂಬುದನ್ನು ಮನಗಂಡ ತಜ್ಞರು ಲೈಂಗಿಕ ವಿಜ್ಞಾನದ ವಿಷಯವನ್ನು ಪಠ್ಯಪುಸ್ತಕದಲ್ಲಿ ಸೇರಿಸಿ ಅದಕ್ಕೆ 'ಲೈಂಗಿಕ ಶಿಕ್ಷಣ' ಎಂದು ಕರೆಯಲಾಯಿತು. ಲೈಂಗಿಕ ಶಿಕ್ಷಣಕ್ಕೆ 'ಆರೋಗ್ಯ ಲೈಂಗಿಕ ಶಿಕ್ಷಣ', 'ಲೈಂಗಿಕತೆ ಮತ್ತು ಸಂಬಂಧಗಳು' ಅಥವಾ 'ಲೈಂಗಿಕತೆ ಮತ್ತು ಸಂತಾನೋತ್ಪತ್ತಿ ವ್ಯವಸ್ಥೆ' ಎಂದೂ ಕರೆಯುತ್ತಾರೆ. ಓದುಗರಿಗೆ ಇಷ್ಟವಾಗುತ್ತದೆಂದು 'ಆರೋಗ್ಯ ಲೈಂಗಿಕ ಶಿಕ್ಷಣ' ಎಂದು ಬರೆಯುತ್ತಿದ್ದೇನೆ. ಲೈಂಗಿಕ ಶಿಕ್ಷಣದ ಪರಿಕಲ್ಪನೆಯು ಲೈಂಗಿಕತೆಯ ಹಲವು ಆಯಾಮಗಳನ್ನು ಹೊಂದಿರುತ್ತದೆ. ಆರೋಗ್ಯ ಲೈಂಗಿಕತೆ ಕುರಿತು ಸರಿಯಾದ ಜ್ಞಾನ ಗಳಿಸುವುದು, ಸಕಾರಾತ್ಮಕ ಮನಸ್ಥಿತಿಯನ್ನು ಬೆಳೆಸಿಕೊಳ್ಳುವುದು ಮತ್ತು ಹರೆಯದವರಿಗೆ ಸ್ಪಷ್ಟಪಡಿಸುವುದು ಅಗತ್ಯ. ಲಿಂಗಭೇದವನ್ನು ಅರಿತುಕೊಂಡು ಮಾನವೀಯ ಸಂಬಂಧದ ಕುರಿತು ಮಾಹಿತಿ ನೀಡಬೇಕು. ನಿಕಟ ಪುರುಷ ಸ್ತ್ರೀ ಲಿಂಗದ ಸಂಬಂಧಗಳು ಮತ್ತು ಪಾತ್ರಗಳನ್ನು ಕುರಿತು, ಗರ್ಭನಿರೋಧಕ ವಿಧಗಳ ಕುರಿತಾದ ಅರಿವು, ಹೆಚ್.ಐ.ವಿ. ಮತ್ತು ಲೈಂಗಿಕ ಸೋಂಕು ರೋಗಗಳ ತಡೆಗಟ್ಟುವಿಕೆ ಕುರಿತಾದ ಅಂಶಗಳೇ ಆರೋಗ್ಯ ಲೈಂಗಿಕ ಶಿಕ್ಷಣದ ಪರಿಕಲ್ಪನೆ. ಈ ಅಂಶಗಳ ಅರಿವನ್ನು ಮೂಡಿಸಿದಾಗ ಹರೆಯದವರು ಆರೋಗ್ಯಕರ ಲೈಂಗಿಕ ಜ್ಞಾನಗಳಿಸಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಶಕ್ತರಾಗುತ್ತಾರೆ. ಭವಿಷ್ಯದಲ್ಲಿ ಆತ್ಮವಿಶ್ವಾಸದಿಂದ ಸಾಧನೆಗೈಯಲು ಮತ್ತು ಮಾನವೀಯ ಸಂಬಂಧಗಳನ್ನು ರೂಢಿಸಿಕೊಂಡು ಆತ್ಮೀಯ ದಾಂಪತ್ಯ ಜೀವನ ಸಾಧಿಸುವುದರಲ್ಲಿ ಯಶಸ್ವಿಯಾಗಬೇಕೆಂಬುದೇ ಲೈಂಗಿಕ ಆರೋಗ್ಯ ಶಿಕ್ಷಣ.

ಇನ್ನೊಂದು ಅಂಶವನ್ನು ಓದುಗರು ಗಮನಿಸಬೇಕು. 'ಆರೋಗ್ಯ ಲೈಂಗಿಕ ಶಿಕ್ಷಣ'ವನ್ನು ಈಗ 'ಕುಟುಂಬ ಜೀವನ ಶಿಕ್ಷಣ'(Family life education) ಎಂದೂ ಕರೆಯುತ್ತಾರೆ. ಕುಟುಂಬ ಮತ್ತು ಸಮಾಜದ ಕುರಿತು, ಮೌಲ್ಯಗಳು, ಧೋರಣೆಗಳು ಮತ್ತು ಆರೋಗ್ಯಕರ ನಡವಳಿಕೆಗಳ ಕುರಿತಾದ ವ್ಯಕ್ತಿತ್ವವನ್ನು ರೂಪಿಸುವುದು ಲೈಂಗಿಕ ಶಿಕ್ಷಣದ ಮತ್ತೊಂದು ಉದ್ದೇಶ. ಲೈಂಗಿಕ ಶಿಕ್ಷಣವು ಹರೆಯದವರಿಗೆ, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅವರ ಜವಾಬ್ದಾರಿಗಳು, ಸಾಮಾಜಿಕ ಧೋರಣೆಗಳು, ಕುಟುಂಬ ಮತ್ತು ಸಮಾಜದ ನಂಟು, ಗಂಡು ಹೆಣ್ಣಿನ ಪರಸ್ಪರ ಸಂಬಂಧಗಳು ಹೀಗೆ ಹಲವಾರು ಅಂಶಗಳನ್ನು 'ಕುಟುಂಬ ಜೀವನ ಶಿಕ್ಷಣ'ವು ತಿಳಿಸುತ್ತದೆ.



ವಾತ್ಸಾಯನ

ಆರೋಗ್ಯ ಲೈಂಗಿಕ ಶಿಕ್ಷಣದ ಅರಿವನ್ನು ಹರೆಯದವರಲ್ಲಿ ಮೂಡಿಸುವುದರಿಂದ, ಲೈಂಗಿಕ ಸಂಬಂಧಗಳು, ಲೈಂಗಿಕತೆಗೆ ಅವಶ್ಯವಿರುವ ಕೌಶಲಗಳು, ಭವಿಷ್ಯದ ಲೈಂಗಿಕ ಜೀವನದ ಕುರಿತು ತೆಗೆದುಕೊಳ್ಳಬೇಕಾದ ತೀರ್ಮಾನಗಳು, ಭವಿಷ್ಯದಲ್ಲಿ ಸುಖೀ ದಾಂಪತ್ಯ, ಸಂತಾನೋತ್ಪತ್ತಿ ವ್ಯವಸ್ಥೆ, ಮತ್ತು ಸಾಮಾಜಿಕ ಬದ್ಧತೆ ಇತ್ಯಾದಿಗಳ ಅರಿವು ಉಂಟಾಗುತ್ತದೆ. ಲೈಂಗಿಕತೆ ಕುರಿತಾದ ಭಾವನೆಗಳ ಹಿಡಿತ ಸಾಧಿಸಲು, ಹೆಣ್ಣುಮಕ್ಕಳು ಹರೆಯದಲ್ಲಿ ಗರ್ಭಧರಿಸುವಿಕೆ, ಅದರಿಂದ ಆಗುವ ದುಷ್ಪರಿಣಾಮಗಳು, ದಾಂಪತ್ಯದಲ್ಲಿ ಅವಶ್ಯವಾದ ಪರಸ್ಪರ ಲೈಂಗಿಕ ಸಂಬಂಧ ಇವುಗಳನ್ನರಿಯುವುದು ಲೈಂಗಿಕ ಶಿಕ್ಷಣದ ಉದ್ದೇಶ.

ಲೈಂಗಿಕ ಶಿಕ್ಷಣದಿಂದ ಆಗುವ ಉಪಯೋಗಗಳು ವ್ಯಾಪಕವಾಗಿವೆ. ಲೈಂಗಿಕ ಶಿಕ್ಷಣದಿಂದ ಹರೆಯದವರಲ್ಲಿ ತಮ್ಮ ಕುರಿತು ದೈಹಿಕ ಚಿತ್ರಣವು (Body image) ಉಂಟಾಗುತ್ತದೆ. ತಮ್ಮ ಬಗ್ಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಪರಿಣಾಮಕಾರಿ ಸಂವಹನ ಸಾಮರ್ಥ್ಯವನ್ನು ಗಳಿಸಲು ಲೈಂಗಿಕ ಶಿಕ್ಷಣವು ಪೂರಕ. ಲೈಂಗಿಕ ಶಿಕ್ಷಣವು ಅನುಭೂತಿಯ ಗುಣವನ್ನು ರೂಢಿಸಿಕೊಳ್ಳಲು, ಹರೆಯದವರು ತಮ್ಮ ನಡವಳಿಕೆಯನ್ನು ಕುರಿತು ನೈತಿಕವಾಗಿ ಹಿಡಿತ ಸಾಧಿಸಬಹುದು. ಹರೆಯದ ಅವಧಿಯಲ್ಲಿ ಲಿಂಗ ಗುರುತಿಸಿ ತನ್ನಲ್ಲುಂಟಾಗುವ ಸಂದೇಹಗಳನ್ನು ದೂರಮಾಡಿಕೊಳ್ಳಲು ಅವಶ್ಯವಿರುವುದು ಲೈಂಗಿಕ ಶಿಕ್ಷಣ. ಹಿಂಸಾತ್ಮಕ ನಡವಳಿಕೆಗಳನ್ನು ದೂರವಿಟ್ಟು, ಮಾನಸಿಕ ನೆಮ್ಮದಿ ಸಾಧಿಸಲು ಲೈಂಗಿಕ ಶಿಕ್ಷಣವು ಅವಶ್ಯ. ಲೈಂಗಿಕ ಶಿಕ್ಷಣದಿಂದ ಸೋಂಕು ರೋಗಗಳು ಮತ್ತು ಎಚ್.ಐ.ವಿ. ಅಂತಹ ಅತಿ ಅಪಾಯದ ಕಾಯಿಲೆಗಳಿಂದ ದೂರವಿರಬಹುದು. ಅನೈತಿಕ ಲೈಂಗಿಕತೆ, ಸಲಿಂಗ ಕಾಮ ಮತ್ತು ಲೈಂಗಿಕ ಹಿಂಸಾಚಾರಗಳನ್ನು ತಡೆಗಟ್ಟಬಹುದು. ಹರೆಯದ ಹೆಣ್ಣು ಮಕ್ಕಳ ಭವಿಷ್ಯದಲ್ಲಿ ಡೋಲಾಯಮಾನ ಉಂಟು ಮಾಡುವ ಹರೆಯದವರ ಗರ್ಭಧಾರಣೆ, ಅದರಿಂದ ಗರ್ಭಪಾತವಾಗುವುದನ್ನು ತಡೆಗಟ್ಟಬಹುದು. ಲೈಂಗಿಕತೆಯ ಕುರಿತು ಹರೆಯದವರನ್ನು ತಪ್ಪು ಕಲ್ಪನೆಗಳು ಮತ್ತು ಅದರಿಂದ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು. ಜೀವನ ಕೌಶಲಗಳಾದ ಸಮಸ್ಯೆಗಳ ಪರಿಹಾರ, ಸಮಗ್ರವಾಗಿ ಆಲೋಚಿಸುವುದು, ಸೃಜನಶೀಲತೆ, ಅನುಭೂತಿ, ಮಾನವೀಯ ಸಂಬಂಧಗಳು, ಒತ್ತಡ ನಿವಾರಣೆ ಇವು ಲೈಂಗಿಕ ಶಿಕ್ಷಣದಿಂದ ವೃದ್ಧಿಗೊಳ್ಳುತ್ತವೆ ಎಂಬುದು ಅಧ್ಯಯನಗಳ ಅಂಬೋಣ. ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಮಾಜದಲ್ಲಿ ಒಳ್ಳೆಯ ಸಂಸ್ಕಾರದಿಂದ ಕೂಡಿದ ಪ್ರಜ್ಞಾವಂತ ಪ್ರಜೆಯಾಗಿ ಆರೋಗ್ಯಕರ ಸಮಾಜವನ್ನು ಕಟ್ಟುವಲ್ಲಿ ಲೈಂಗಿಕ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ.

ನಮ್ಮ ಸಮಾಜದಲ್ಲಿ ಲೈಂಗಿಕತೆಯ ಅರಿವು ಮೂಡಿಸುವ ಪದ್ಧತಿ ಮೂರನೇ ಶತಮಾನದಲ್ಲೇ ರೂಢಿಯಲ್ಲಿತ್ತು. ಇದಕ್ಕೆ ಉದಾಹರಣೆ ವಾತ್ಸಾಯನ ಅವರ ಕಾಮಸೂತ್ರ. ತತ್ವಜ್ಞಾನಿಯಾಗಿದ್ದ ವಾತ್ಸಾಯನ ಆ ಕಾಲದಲ್ಲೇ 'ಕಾಮಸೂತ್ರ'ವೆಂಬ ಗ್ರಂಥವನ್ನು ಬರೆದು ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಅವರು ಆರೋಗ್ಯ ಲೈಂಗಿಕ ಶಿಕ್ಷಣದಿಂದ ಆಗುವ ಉಪಯೋಗಗಳ ಕುರಿತು ಆಳವಾದ ಚಿಂತನೆ ನಡೆಸಿದ್ದರು ಎನ್ನುವುದು ಹೆಮ್ಮೆಯ ಸಂಗತಿ. ಆದರೆ ವರ್ಷಗಳು ಕಳೆದಂತೆ ಲೈಂಗಿಕತೆ ಕುರಿತು ಮಡಿವಂತಿಕೆ ಮತ್ತು ನಕಾರಾತ್ಮಕ ಧೋರಣೆಗಳನ್ನು ತಳೆಯಲಾಯಿತು. ಇದಕ್ಕೆ ಉದಾಹರಣೆಯಾಗಿ, ಹೆಸರಾಂತ ವೈದ್ಯ ಸಾಹಿತಿ ದಿ. ಡಾ. ವೆಂಕಟರಾವ್ ದೊಡ್ಡೇರಿಯವರು ಕಳೆದ ಶತಮಾನದ ನಲವತ್ತನೇ ದಶಕದಲ್ಲಿ ಬರೆದ 'ದಾಂಪತ್ಯ ದೀಪಿಕಾ' ಎಂಬ ಕೃತಿಯನ್ನು ಸಾರ್ವಜನಿಕರು ವಿರೋಧಿಸಿದರು. ಅದಕ್ಕೆ ಬೆಂಬಲವಾಗಿ ಸರ್ಕಾರವು ಅದನ್ನು ಮುಟ್ಟುಗೋಲು ಹಾಕಿಕೊಂಡಿತು ಎನ್ನುವುದು ವಿಷಾದಕರ.

ಕಳೆದ ಶತಮಾನದ ಎಂಭತ್ತನೇ ದಶಕದಲ್ಲಿ ಅಮೆರಿಕದ ಲೈಂಗಿಕ ತಜ್ಞರಾದ ಮಾಸ್ಟರ್ಸ್ ಮತ್ತು ಜಾನ್‌ಸನ್ (Masters and Johnson) ಎಂಬುವರು ಲೈಂಗಿಕತೆ ಕುರಿತು ಕೃತಿ ರಚಿಸಿದಾಗ ನಮ್ಮವರೂ ಸೇರಿದಂತೆ ವಿಶ್ವದ ಅನೇಕ ಮನಃಶಾಸ್ತ್ರಜ್ಞರು, ಮನೋವೈದ್ಯರು ಅವರನ್ನು ಹಾಡಿ ಹೊಗಳಿದರು. ಆದರೆ ಎರಡನೇ ಶತಮಾನದಲ್ಲಿ ಕಾಮಸೂತ್ರ ಬರೆದ ನಮ್ಮ ದೇಶದ ತತ್ವಜ್ಞಾನಿಯಾದ ವಾತ್ಸಾಯನರ ಕುರಿತು ಯಾರೂ ಹೆಚ್ಚಿನ ಗಮನವೀಯಲಿಲ್ಲ ಎಂಬುದು ವಿಪರ್ಯಾಸ. ಇನ್ನೊಂದು ಹೆಮ್ಮೆಯ ಸಂಗತಿಯನ್ನು ಓದುಗರೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಡಾ. ಟಿ.ಎಸ್. ಸತ್ಯನಾರಾಯಣ್ ರಾವ್‌ರವರು ಹೆಸರಾಂತ ಮನೋವೈದ್ಯರು. ಪ್ರಸ್ತುತ ಡಾ.ಟಿ.ಎಸ್.ಎಸ್.ರಾವ್‌ರವರು ಮೈಸೂರಿನ ಜೆ.ಎಸ್.ಎಸ್.ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ 'ಪ್ರೊಫೆಸರ್ ಎಮಿರೆಟಸ್' ಆಗಿ ಕರ್ತವ್ಯ ನಿರತರಾಗಿದ್ದಾರೆ. ಡಾ|| ರಾವ್‌ರವರು ಭಾರತೀಯ ಮನೋವೈದ್ಯಕೀಯ ಸಂಘ (IPS)ದ ಗೌರವಾಧ್ಯಕ್ಷರೂ ಆಗಿದ್ದಾರೆ. ಇವರು ಲೈಂಗಿಕ ವಿಜ್ಞಾನ ಕುರಿತು ಆಳವಾದ ಸಂಶೋಧನೆ ಕೈಗೊಂಡು ಸಮಗ್ರ ಆರೋಗ್ಯವನ್ನು ಕಾಪಾಡಿಕೊಳ್ಳಲು ಲೈಂಗಿಕ ಜ್ಞಾನವು ಎಷ್ಟು ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಎಳೆ ಎಳೆಯಾಗಿ ವಿವರಿಸಿದ್ದಾರೆ. 'ದಾಂಪತ್ಯ ವೈದ್ಯಶಾಸ್ತ್ರ' ಎಂಬ ಕೃತಿಯು ಸೇರಿದಂತೆ ಆರೆಂಟು ಕೃತಿಗಳನ್ನು ರಚಿಸಿದ್ದಾರೆ ಎಂಬುದು ಹೆಮ್ಮೆಯ ವಿಷಯ.

(ಮುಂದುವರೆಯುವುದು....)

ಅಲಾರಾಂ ನಾಮ!



ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com

ಸುಮ್ಮನೆ ಹೀಗೊಮ್ಮೆ ಊಹಿಸಿಕೊಳ್ಳಿ. ಬೆಳ್ಳಂಬೆಳಗ್ಗೆ ಯಾರಾದರೂ ನಿಮ್ಮ ತಲೆಗೊಮ್ಮೆ ಮೊಟಕಿದರೆ ನಿಮ್ಮ ಪ್ರತಿಕ್ರಿಯೆ ಹೇಗಿರಬಹುದು? ಅದರಲ್ಲೂ ನೀವು ಯಾರಿಗೋಸ್ಕರ ಕೆಲಸ ಮಾಡಿದಿರೋ ಅವರೇ ಮೊಟಕಿದರೆ, ಅಷ್ಟೇ ಏಕೆ, ಹೀಗೆ ಹೀಗೆ ಮಾಡು ಎಂದು ಕೆಲಸ ಹಚ್ಚಿ, ಕೊನೆಗೆ ಆ ಕೆಲಸವನ್ನು ಅಂತೆಯೇ ಬದ್ಧತೆಯಿಂದ ಮಾಡಿ ಮುಗಿಸಿದ ನಂತರವೂ, ಕೆಲಸ ಹಚ್ಚಿದವರೇ ತಲೆಗೆ ಮೊಟಕಿದರೆ...? ಯಾರದ್ದೇ ಆದರೂ ಪಿತ್ತ ನೆತ್ತಿಗೇರದೇ ಇರದಲ್ಲವೇ? ಎಷ್ಟೇ ತಾಳ್ಮೆ, ಸಂಯಮ, ಸಮಾಧಾನ ಎಂದೆಲ್ಲ ಹೇಳಿದರೂ ಇದನ್ನು ಸಹಿಸಿಕೊಂಡು, ಏನೂ ಪ್ರತಿಕ್ರಿಯೆ ನೀಡದೇ, ಮೌನವಾಗಿ ಇರುವುದು ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. ಆದರೆ ನೂರಾರು ವರ್ಷಗಳ ಕಾಲ ಹೀಗೊಂದು ದೌರ್ಜನ್ಯವನ್ನು, ಅನ್ಯಾಯವನ್ನು ನುಂಗಿಕೊಂಡು, ತನ್ನ ಕೆಲಸವನ್ನು ತಾನು ಪರಮ ನಿಯತ್ತಿನಿಂದ, ನಿರಂತರವಾಗಿ ಮುಂದುವರಿಸಿಕೊಂಡು ಬಂದಿರುವುದಕ್ಕೆ ಉದಾಹರಣೆ ಅಂತ ಇದ್ದರೆ ಅದು ಅಲಾರಾಂ ಕ್ಲಾಕ್. ತಲೆಯ ಈ ಭಾಗಕ್ಕೆ ಮೊಟಕಿದರೆ, ಇನ್ನೊಂದು ದಿವಸ ತಲೆಯ ಆ ಭಾಗಕ್ಕೆ ಮೊಟಕಲು ಅವಕಾಶ ಕೊಡುವಷ್ಟೂ ಅದರದ್ದು ಸಾಧು ಸ್ವಭಾವವೇ ಸರಿ. ಅದೂ ಕೂಡಾ 'ಒಂದು ಕೆನ್ನೆಗೆ ಬಾರಿಸಿದರೆ, ಇನ್ನೊಂದನ್ನು ತೋರಿಸು' ನೀತಿಯನ್ನು ಅನುಸರಿಸುತ್ತಿದೆಯೇ ಎಂಬ ಅನುಮಾನ ಮೂಡುತ್ತದೆ.

ಮನುಷ್ಯರು ಶತ ಶತಮಾನಗಳಿಂದಲೂ ಬೆಳಗ್ಗೆ ಒಂದು ನಿಗದಿತ ಅಥವಾ ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ನಿದ್ರೆಯಿಂದ ಎದ್ದೇಳಲು ಕೋಳಿಯ ಕೂಗು, ದೇವಸ್ಥಾನದ ಗಂಟೆ, ಚರ್ಚ್‌ನ ಬೆಲ್, ಸೂರ್ಯೋದಯ ಇನ್ನಿತ್ಯಾದಿಗಳನ್ನು ಅವಲಂಬಿಸುತ್ತಲೇ ಬಂದಿದ್ದಾರೆ. ಈಗಿನ ಈ ಎಲ್ಲಾ ಆಧುನಿಕ ಅಲಾರಾಂ ಸಾಧನಗಳ ಪರಿಕಲ್ಪನೆ ಇನ್ನೂ ಹರಳುಗಟ್ಟುವ ಮೊದಲು, ಬೆಳಗ್ಗೆ ಬೇಗ ಎಬ್ಬಿಸಲೆಂದೇ ಸಹಾಯಕರಂತೆ ಕೆಲವರು ಇರುತ್ತಿದ್ದರು. ಅವರದು ಬಡಿದು-ಎಬ್ಬಿಸುವ ಕೆಲಸ. ಆ ಕಾಯಕವನ್ನು ನಿಭಾಯಿಸುವ ವ್ಯಕ್ತಿಗಳು ಬೀದಿಯಲ್ಲಿ ತಿರುಗಾಡುತ್ತಾ, ಯಾರನ್ನೆಲ್ಲಾ ಎಬ್ಬಿಸಬೇಕೋ ಆಯಾ ವ್ಯಕ್ತಿಗಳ ಮನೆಯ ಹತ್ತಿರಕ್ಕೆ ಹೋಗಿ, ಅವರು ಮಲಗಿರುವ ಕೊಠಡಿಯ ಕಿಟಕಿ ಬಾಗಿಲುಗಳನ್ನು ಬಡಿಯುವ ಮೂಲಕ ಎಬ್ಬಿಸಬೇಕಾಗಿತ್ತು. ಕಿಟಕಿಯನ್ನು ಬಡಿಯಲು, ಉದ್ದನೆಯ ಕೋಲು, ನಳಿಕೆ ಇತ್ಯಾದಿ ಬಳಸಲಾಗುತ್ತಿತ್ತು. ಕೊಂಚ ದೂರದಿಂದ ಆ ನಳಿಕೆಯ ಮೂಲಕ ಒಣ ಬಟಾಣಿ ಕಾಳನ್ನು ತೂರಿಸಿ ಜೋರಾಗಿ ಊದಿ, ಅದು ನೇರ ಕಿಟಕಿಯ ಬಾಗಿಲ ಮೇಲೆ ಹೋಗಿ ಬಿದ್ದು ಸದ್ದು ಬರುವಂತೆ ಮಾಡುವ ಮೂಲಕವೂ ಬಡಿದು-ಎಬ್ಬಿಸುವ ಕೆಲಸ ನಡೆಯುತ್ತಿತ್ತು. ಆ ಕಿಟಕಿ ಮೇಲೆ ಬಿದ್ದ ಕಾಳಿನ ಸದ್ದಿಗೇ ಅವರು ಎಚ್ಚರಾಗುತ್ತಿದ್ದರು ಎಂದರೆ ಬಹುಶಃ ಅಂದಿನ ವ್ಯಕ್ತಿಗಳು ಸಣ್ಣ ಸದ್ದಿಗೂ ಎದ್ದು ಕೂರುವವರಾಗಿದ್ದರು ಎಂದೆನಿಸುತ್ತದೆ. ಆದ್ದರಿಂದ ಆ ಅಲಾರಾಂ ಮ್ಯಾನ್‌ಗಳ ಕೆಲಸ ಕೊಂಚ ಸುಲಭವೇ ಆಗಿತ್ತು ಎಂದೆನ್ನಬಹುದು. ಈಗ ಅದೇ ಕೆಲಸವನ್ನು ಮಾಡಲು ಮನುಷ್ಯರನ್ನು ನಿಯೋಜಿಸಿದ್ದರೆ ಅವರು ಆ ನಳಿಕೆಯ ಮೂಲಕ ಇನ್ನು ಅದೇನೇನನ್ನು ತೂರಬೇಕಿತ್ತೋ ಕಾಣೆ! ಈ ಅಕ್ಷರಶಃ ಬಡಿದು - ಎಬ್ಬಿಸುವವರು (ಛ್ಞಾಂ, ಮಲಗಿದವರನ್ನಲ್ಲ, ಅವರ ಕೊಠಡಿಯ ಕಿಟಕಿ ಬಾಗಿಲನ್ನು ನೆನಪಿರಲಿ) ಒಂದು ರೀತಿಯಲ್ಲಿ 'ನಡೆದಾಡುವ ಅಲಾರಾಂ' ಎಂಬ ಬಿರುದಿಗೆ ಭಾಜನರಾಗಲು ಅರ್ಹರೇ ಸರಿ.

ನಾವು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಈಗಿನ ಅಲಾರಾಂಗಳು ಒಂದೇ ಸಮನೆ ಕೂಗುವ ಮೂಲಕ, ಮಲಗಿದವರನ್ನು ಎಬ್ಬಿಸುವ ಪ್ರಯತ್ನ ಮಾಡುತ್ತವೆ. ಅದನ್ನು ಪ್ರಯತ್ನ ಅನ್ನುವುದಕ್ಕಿಂತಲೂ ಎಷ್ಟೋ ಸಲ ವಿಫಲ ಪ್ರಯತ್ನ ಅನ್ನುವುದೇ ಸೂಕ್ತವೇನೋ ಎಂದೆನಿಸುತ್ತದೆ. ಏಕೆಂದರೆ ಆ ಮಟ್ಟಿಗೆ ಜನ ಅಲಾರಾಂನ ಕೂಗನ್ನು ತಾತ್ಸಾರ ಭಾವದಿಂದ ಕಾಣುವುದು, ಅಲ್ಲಲ್ಲ ಕೇಳುವುದಿದೆ. ಆದರೆ ತುಂಬಾ ಹಿಂದೆ ಜನರಿಗೆ ಅಲಾರಾಂನ ವಿಷಯದಲ್ಲಿ ಹೀಗೊಂದು ಆಯ್ಕೆಯೇ ಇರಲಿಲ್ಲವಂತೆ. ಆರಂಭದಲ್ಲಿ ಅಂದರೆ ಇಂಥದ್ದೊಂದು ಸಾಧನವನ್ನು ಕಂಡುಹಿಡಿದ ಮೊದ ಮೊದಲ ದಿನಗಳಲ್ಲಿ, ಅಲಾರಾಂನ್ನು ಸಿದ್ಧಪಡಿಸುವಾಗ ಯಾವ ಸಮಯವನ್ನು ನಿಗದಿಪಡಿಸಲಾಗಿತ್ತೋ ಆ ಸಮಯಕ್ಕೆ ಸರಿಯಾಗಿ ಅದು ಹೊಡೆದುಕೊಳ್ಳುತ್ತಿತ್ತು, ಜನರು ಅದನ್ನು ಕೇಳಿ ಎದ್ದೇಳಬೇಕಾಗಿತ್ತೇ ಹೊರತು ಅವರಿಗೆ ತಮ್ಮಿಚ್ಛೆಯಂತೆ, ಬೇಕಾದ ಸಮಯಕ್ಕೆ ಅಲಾರಾಂನ್ನು ಸೆಟ್ ಮಾಡುವ ಅವಕಾಶವೇ ಇರಲಿಲ್ಲವಂತೆ. ಅಂದರೆ ಆ ಕಾಲದಲ್ಲಿ ಅಲಾರಾಂ ಹೇಳಿದಂತೆ ಜನರು ಕೇಳಬೇಕಾಗಿತ್ತು. ಆದರೆ ಈಗ ಜನರು ಹೇಳಿದಂತೆ, ಅವರ ನಿಶ್ಚಯಕ್ಕೆ ತಕ್ಕಂತೆ, ಅವರ ಮನಸ್ಸಿಗೆ ತೋಚಿದ ಸಮಯದ ಪರಿವೆಗೆ ಅನುಗುಣವಾಗಿ ಅಲಾರಾಂಗಳು ವರ್ತಿಸಬೇಕಾದ ಅನಿವಾರ್ಯತೆ ಅವುಗಳದ್ದು. ಆಗ "ನೋಡಿ ನಾನು ಹೇಗೆ ಇವರನ್ನೆಲ್ಲಾ ಆಡಿಸುತ್ತೇನೆ" ಎಂದು ಬೀಗುತ್ತಿದ್ದ ಅದೇ ಅಲಾರಾಂಗಳು ಈಗ, "ಅಯ್ಯೋ ಇವರ ತಾಳಕ್ಕೆ ತಕ್ಕಂತೆ ಕುಣಿದು ನನಗಂತೂ ಸಾಕು ಸಾಕಾಗಿ ಹೋಗಿದೆಯಪ್ಪ" ಎಂದು ಅದೆಷ್ಟು ರೋಸಿ ಹೋಗಿವೆಯೋ?

ಈಗಿನ ಅಲಾರಾಂಗಳಿಗೆ ಹಿಂದಿನ ಕಾಲದಲ್ಲಿ ಇದ್ದಂತೆ ಒಂದು ಸ್ವತಂತ್ರ ಅಸ್ತಿತ್ವ ಇರುವುದು ಬಹಳ ಕಡಿಮೆ. ಅವುಗಳು ತಮ್ಮ ಭೌತಿಕ ರೂಪವನ್ನು ಕಳೆದುಕೊಂಡು, ಸ್ಮಾರ್ಟ್ ರೂಪಕ್ಕೆ ತಿರುಗಿ, 'ಆ್ಯಪ್'ನ ಮಾರುವೇಷದಲ್ಲಿ ಮೊಬೈಲ್‌ನಲ್ಲಿ ಆಶ್ರಯ ಪಡೆದು ಕುಳಿತಿವೆ. ಹಾಗೆ ನೋಡಿದರೆ ಈ ಬದಲಾವಣೆಯಿಂದ ಅವುಗಳಿಗೂ ಕೆಲವೊಂದಷ್ಟು ಪ್ರಯೋಜನಗಳಿವೆ. ಈಗ ಅವು ಬೆಳ್ಳಂಬೆಳಗ್ಗೆ ದನಿ ಹೊರಡಿಸಿದ್ದಕ್ಕೆ ಪ್ರತಿಯಾಗಿ ಮೊದಲಿನಂತೆ ಪದೆ ಪದೆ ತಲೆಗೆ ಮೊಟಕಿಸಿಕೊಳ್ಳಬೇಕಿಲ್ಲ. ಇಡೀ ಮೊಬೈಲ್‌ನ ಮೇಲೆಯೇ ಆ ಏಟಿನ ಬಿರುಸು ಬೀಳುವ ಸಂಭವವೇ ಹೆಚ್ಚಾದರೂ, ಈಗ ಅದು ಒಂದು ನಯವಾದ ಟಚ್, ಕ್ಲಿಕ್‌ನಿಂದಲೂ ಸಾಧ್ಯವಾಗುವುದರಿಂದ ಮೊಟಕಿಸಿಕೊಳ್ಳಬೇಕಾದ ಅನಿವಾರ್ಯತೆ ಏನಿಲ್ಲ. ಪ್ರತ್ಯೇಕವಾಗಿ ಬ್ಯಾಟರಿ, ಕೀ ತಿರುಪಿಸಿಕೊಳ್ಳಬೇಕಾದ ಅಗತ್ಯವೂ ಈಗಿಲ್ಲ. ಕೊಂಚ ಪರಾವಲಂಬಿ ಅನಿಸಿಕೊಳ್ಳುವುದು ಹೌದಾದರೂ ಮೊಬೈಲ್‌ನ ಚಾರ್ಜ್‌ನ್ನೇ ಇದೂ ತಿಂದುಂಡು ಸುಖವಾಗಿ ಇರುವುದು ಸಾಧ್ಯವಾಗುತ್ತಿದೆ. ಅದಕ್ಕೆ ಪೂರಕವೆಂಬಂತೆ ಈಗಿನ ಅದರ ಕೆಲಸ ಕೇವಲ ಎಬ್ಬಿಸುವುದಕ್ಕಷ್ಟೇ ಸೀಮಿತವಾಗಿರದೇ ಸಮಯ ನಿಗದಿಪಡಿಸುವುದು, ಟಿಕ್ ಟಿಕ್ ಸ್ಟಾಪ್ ವಾಚ್ ಆಗಿ ಕರ್ತವ್ಯ ನಿರ್ವಹಿಸುವುದು, ಸರದಿಯಂತೆ ಐದು-ಹತ್ತು ನಿಮಿಷ ಬಿಟ್ಟು ಎಬ್ಬಿಸುವುದು (ಸ್ನೂಝ್), ನಿಗದಿಯಾದ ಶೆಡ್ಯೂಲ್‌ಗಳ ಸೂಚನೆಗೆ ಅನುಗುಣವಾಗಿ ಬಳಕೆದಾರರನ್ನು ಎಚ್ಚರಿಸುವ ಕೆಲಸ, ಬೇರೆ ಬೇರೆ ಸ್ವರದಲ್ಲಿ ಸುಶ್ರಾವ್ಯವಾಗಿ ರಿಂಗಣ ಮೂಡಿಸುವ ಕಲೆ - ಇವೆಲ್ಲವನ್ನೂ ಕರಗತ ಮಾಡಿಕೊಳ್ಳಬೇಕಾಗಿದೆ.

ಹೊತ್ತು ಗೊತ್ತಿನ ಪರಿವೆಯೇ ಇಲ್ಲದೆ ತಡ ರಾತ್ರಿಯವರೆಗೂ ಹಾಗೂ ಬೆಳಗ್ಗಿನ ಸೂರ್ಯ ಇನ್ನೂ ಕಣ್ಣು ಬಿಡಲೇ ಬಹಳ ಹೊತ್ತು ಬಾಕಿ ಇರುವಾಗಲೇ ಕೆಲವರು ಮೊಬೈಲ್ ಪರದೆಯ ತೆರೆ ಮರೆಯಲ್ಲಿ ಜಾರಿ ಹೋಗಿರುತ್ತಾರೆ ಎಂದರೆ ಅದಕ್ಕೆ ಈ ಅಲಾರಾಂ ಕೂಡಾ ಕಾರಣವಾಗಿರುತ್ತದೆ. ರಾತ್ರಿ ಮಲಗುವ ಮುನ್ನಾ ಅಲಾರಾಂ ಸೆಟ್ ಮಾಡಲೆಂದು, ಬೆಳಗ್ಗೆ ಒಂದೇ ಸಮನೆ ಬಡಿದುಕೊಳ್ಳುವ ಅಲಾರಾಂನ ಬಾಯಿ ಮುಚ್ಚಿಸಲೆಂದು ಕೈಗೆತ್ತಿಕೊಳ್ಳುವ ಮೊಬೈಲ್ ಎಂದಿಗೂ ಅದಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಅಲಾರಾಂನಿಂದ ವಾಟ್ಸಾಪ್‌ಗೆ ಜಿಗಿದು, ಅಲ್ಲಿಂದ ಮೇಲ್ ಬಾಕ್ಸ್ ಮೇಲೆ ಕಣ್ಣಾಡಿಸಿ, ಫೇಸ್ ಬುಕ್‌ನಲ್ಲಿ ಮುಖ ತೂರಿಸಿ, ಅಲ್ಲಿಂದ ಇನ್ಸ್ಟಾಗ್ರಾಮ್(ಮ್)ದಲ್ಲಿ ಸುತ್ತಾಡಿ, ರೀಲ್ಸ್-ವೀಡಿಯೋ-ಪೋಸ್ಟ್‌ಗಳ ನಡುವೆ ಜೀಕುತ್ತಾ ಸಾಕಷ್ಟು ಕಾಲ ಅದರಲ್ಲೇ ವ್ಯರ್ಥ ಕಳೆದು, ಇನ್ನು ಸಾಕು ಎಂದು ಮೊಬೈಲ್‌ನ್ನು ಬದಿಗಿಡುವ ಹೊತ್ತಿಗೆ 'ಅಲಾರಾಂ'ನ ಕಾರಣಕ್ಕೆ ಮೊಬೈಲ್‌ನ್ನು ಕೈಗೆತ್ತಿಕೊಂಡ ವಿಷಯ ನೆನಪಾಗಿ ಅದು ಅಕ್ಷರಶಃ ಅಣಕಿಸುತ್ತಿರುತ್ತದೆ.

ಈಗಿನ ಆಧುನಿಕ ಮೊಬೈಲ್‌ಗಳಲ್ಲಿ ಇರಿಸಿರುವ 'snooze' ಆಯ್ಕೆ ಇದೆಯಲ್ಲ ಅದು ಮನುಷ್ಯ ದಿನ ದಿನವೂ ಅನುಭವಿಸುವ, ಮನಸ್ಸಿಗೆ ಪರಮ ನೆಮ್ಮದಿಯನ್ನು ಉಂಟು ಮಾಡುವ ಮಹತ್ವದ 'ಶಾಂತಿ ಒಪ್ಪಂದ'ವೇ ಸರಿ. ಅದೊಂದು ಇಲ್ಲದೇ ಹೋಗಿದ್ದರೆ ಈ ಮನುಷ್ಯ ಮಾತ್ರರು ಈ ಅಲಾರಾಂಗಳನ್ನು ಇನ್ನು ಅದೆಷ್ಟು ದೂಷಿಸುತ್ತಿದ್ದರೋ, ದ್ವೇಷಿಸುತ್ತಿದ್ದರೋ ಹೇಳಲಸಾಧ್ಯ. ತನ್ನ ಯಾವುದೇ ಕೆಲಸವನ್ನು ಸಾಧ್ಯವಾದಷ್ಟೂ ಮುಂದೂಡುವುದೇ ಮನುಷ್ಯನ ಚಾಳಿ ಎಂಬ ಮಾತಿಗೆ ಬಲವಾದ ಸಾಕ್ಷ್ಯವೆಂಬಂತೆ ಅಲಾರಾಂನ ಈ 'snooze' ಆಯ್ಕೆಯನ್ನು ನೋಡಬಹುದು. ಹಾಗೆಯೇ ಅದು ದಿನ ದಿನವೂ ಪಾಲನೆಯಾಗುತ್ತದೆ ಎನ್ನುವುದಕ್ಕೆ ಅಲಾರಾಂಗಳ ಅಂತರ್ಯದಲ್ಲಿ ಬೇಕಾದಷ್ಟು ಪುರಾವೆಗಳಿವೆ. ಬಹಳ ಆಧುನಿಕವೆನಿಸುವ ಅದೆಷ್ಟೇ ಅಲಾರಾಂಗಳು ಬಂದರೂ, "ಹೇಯ್ ಎದ್ದೇಳೋ" ಎಂದು ಕಿರುಚುವುದು, ಬೆಡ್ ಶೀಟ್‌ನ್ನು ಎಳೆದು ಬದಿಗೆ ಹಾಕುವುದು, ಫ್ಯಾನ್ ಆರಿಸುವುದು, ಲೈಟ್ ಆನ್ ಮಾಡುವುದು, ಬೆಳ್ಳಂಬೆಳಗ್ಗೆ ಜೋರಾಗಿ ಹಾಡು ಹಾಕುವುದು, ಪಾತ್ರೆ ಪಗಡೆಗಳಿಂದ ಭಾರೀ ಸದ್ದುಂಟು ಮಾಡುವುದು ಇತ್ಯಾದಿ ಮನೆ ಮನೆಯ ಪರ್ಯಾಯ ಅಲಾರಾಂಗಳಿವೆಯಲ್ಲ, ಅವುಗಳನ್ನು ಮೀರಿಸಲು ಎಂದಿಗೂ ಸಾಧ್ಯವಿಲ್ಲ!

ಓವರ್‌ಡೋಸ್: ಬೆಳ್ಳಂಬೆಳಗ್ಗೆ ಅಲಾರಾಂ ಹೊಡೆದಾಗ 'ಒಂದೈದು ನಿಮಿಷ' ಬಿಟ್ಟು ಎದ್ದೇಳ್ತೀನಿ ಅಂತಾರಲ್ಲ ಅದನ್ನು ಮನುಷ್ಯರ ಪಾಲಿನ ಅತ್ಯಂತ ಸುದೀರ್ಘವಾದ 'ಕಿರು ಅವಧಿ' ಎಂದು ಪರಿಗಣಿಸಬಹುದು!

ಕಿರುಸುದ್ದಿ

ಆದಿ ಉಡುಪಿ ಸಂತೆ ಮಾರ್ಕೆಟ್‌ನಲ್ಲಿ ಬೆಂಕಿ ಅವಘಡ

ಉಡುಪಿ: ಇಲ್ಲಿನ ಆದಿ ಉಡುಪಿ ಸಂತೆ ಮಾರ್ಕೆಟ್‌ನಲ್ಲಿರುವ ಹಣ್ಣಿನ ಅಂಗಡಿಯೊಂದರಲ್ಲಿ ಭಾನುವಾರ ಮುಂಜಾನೆ ಆಕಸ್ಮಿಕ ಬೆಂಕಿ ಕಾಣಿಸಿಕೊಂಡಿದ್ದು, ಅಂಗಡಿಯಲ್ಲಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಸಾಮಗ್ರಿಗಳು ನಾಶವಾಗಿವೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಸಂಭವಿಸಿದ ಕಾರಣ ಹಣ್ಣುಗಳನ್ನು ಸಂಗ್ರಹಿಸಿಡಲಾಗಿದ್ದ ಬಾಕ್ಸ್‌ಗಳಿಗೆ ಮೊದಲು ಬೆಂಕಿ ತಗುಲಿದೆ ಎನ್ನಲಾಗಿದೆ. ಕೆಲವೇ ನಿಮಿಷಗಳಲ್ಲಿ ಬೆಂಕಿ ಇಡೀ ಅಂಗಡಿಗೆ ವ್ಯಾಪಿಸಿದ್ದರಿಂದ ಒಳಗೆ ದಾಸ್ತಾನು ಇರಿಸಲಾಗಿದ್ದ ಭಾರಿ ಪ್ರಮಾಣದ ಹಣ್ಣು-ಹಂಪಲುಗಳು ಮತ್ತು ಪೀಠೋಪಕರಣಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ. ವಿಷಯ ತಿಳಿಯುತ್ತಿದ್ದಂತೆ ತಕ್ಷಣ ಕಾರ್ಯಪ್ರವೃತ್ತರಾದ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ ವಾಹನದೊಂದಿಗೆ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು. ಸಿಬ್ಬಂದಿಯ ಸಮಯೋಚಿತ ಮುಂಜಾಗ್ರತೆಯಿಂದಾಗಿ ಬೆಂಕಿ ಪಕ್ಕದ ಇತರ ವ್ಯಾಪಾರ ಮಳಿಗೆಗಳಿಗೆ ಹರಡುವುದು ತಪ್ಪಿದಂತಾಗಿದೆ. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲವಾದರೂ, ಭಾರಿ ಪ್ರಮಾಣದ ಆಸ್ತಿ ಹಾನಿಯಾಗಿದೆ. ಸ್ಥಳೀಯ ಪೊಲೀಸರು ಮತ್ತು ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮನಪಾ ವ್ಯಾಪ್ತಿಯಲ್ಲಿ ಶುದ್ಧೀಕರಿಸಿದ ನೀರು ಸರಬರಾಜು

ಮಂಗಳೂರು: ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಸಾರ್ವಜನಿಕರಿಗೆ ಕುಡಿಯುವ ನೀರನ್ನು ನೀರು ಶುದ್ಧೀಕರಣ ಘಟಕಗಳಲ್ಲಿ ಶುದ್ಧೀಕರಿಸಿ ನಂತರ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಮನೆಗಳಿಗೆ ನೀರು ಸರಬರಾಜನ್ನು ಮಾಡಲಾಗುತ್ತಿದೆ. ಎಲ್ಲಾ ವಾರ್ಡುಗಳಲ್ಲಿ ಕಾಲಕಾಲಕ್ಕೆ ಕುಡಿಯುವ ನೀರಿನ ಗುಣಮಟ್ಟವನ್ನು ಪರೀಕ್ಷಿಸಿ ಶುದ್ಧೀಕರಿಸಿದ ನೀರಿನ ಗುಣಮಟ್ಟವನ್ನು ಖಾತ್ರಿ ಪಡಿಸಿಕೊಳ್ಳಲಾಗುತ್ತಿದೆ. ಮಂಗಳೂರು ಮಹಾನಗರಪಾಲಿಕೆಯ ವಾರ್ಡು ನಂ. 31 ರ ನೋಡು ಲೇನ್ ಭಟ್ಟಗುಡ್ಡೆ 5ನೇ ಅಡ್ಡರಸ್ತೆ ಪ್ರದೇಶದ ಕೆಲವು ಮನೆಗಳಲ್ಲಿ ಕಲುಷಿತ ನೀರು ಬರುತ್ತಿರುವ ಬಗ್ಗೆ ಪಾಲಿಕೆಗೆ ದೂರುಗಳು ಬಂದಿವೆ. ಅದರಂತೆ ಮಂಗಳೂರು ಮಹಾನಗರಪಾಲಿಕೆಯ ಅಧಿಕಾರಿಗಳು ಪ್ರದೇಶವನ್ನು ಪರಿಶೀಲಿಸಲಾಗಿ ನೀರು ಸರಬರಾಜು ಕೊಳವೆಯಲ್ಲಿ ಉಂಟಾಗಿದ್ದ ಸೋರಿಕೆಯನ್ನು ಪತ್ತೆ ಹಚ್ಚಿಕೂಡಲೇಅದನ್ನು ದುರಸ್ತಿಪಡಿಸಲಾಗಿರುತ್ತದೆ. ಹಾಗೂ ಶುದ್ಧಕುಡಿಯುವ ನೀರನ್ನು ಎಲ್ಲಾ ರೀತಿಯ ಪರೀಕ್ಷೆಗಳನ್ನು ಕೈಗೊಂಡು ದೃಢೀಕರಿಸಿದ ನಂತರವೇ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಪಾಲಿಕೆಯು ಶುದ್ಧೀಕರಿಸಿದ ನೀರನ್ನು ಎಲ್ಲಾ ವಾರ್ಡುಗಳಿಗೆ ಸರಬರಾಜು ಮಾಡಲಾಗುತ್ತಿದ್ದು ಸಾರ್ವಜನಿಕರಿಗೆ ನೀರು ಸರಬರಾಜಿನಲ್ಲಿ ಯಾವುದೇ ಸಮಸ್ಯೆಗಳು ಉಂಟಾದರೆ ಪಾಲಿಕೆಯ ಸಹಾಯವಾಣಿ ಸಂಖ್ಯೆ: 0824– 2220303 ಯನ್ನು ಸಂಪರ್ಕಿಸಬಹುದು ಎಂದು ನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ. 30: ಲೀಡ್ ಬ್ಯಾಂಕ್ ಸಭೆ

ಮಂಗಳೂರು: ಲೀಡ್ ಬ್ಯಾಂಕ್ ವತಿಯಿಂದ ಜಿಲ್ಲಾ ಸಮಾಲೋಚನಾ ಸಮಿತಿ (ಡಿ.ಸಿ.ಸಿ) ಮತ್ತು ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ (ಡಿ.ಎಲ್.ಆರ್.ಸಿ) ಸಭೆ ಜೂನ್ 30ರಂದು ಲೋಕಸಭಾ ಸದಸ್ಯ ಕ್ಯಾ.ಬ್ರಿಜೇಶ್ ಚೌಟ ಅವರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 10.30 ಗಂಟೆಗೆ ದಕ್ಷಿಣ ಜಿಲ್ಲಾ ಪಂಚಾಯತ್ ನೇತ್ರಾವತಿ ಸಭಾಂಗಣದಲ್ಲಿ ನಡೆಯಲಿದೆ.

ಪಿಲಿಕುಳ ಪ್ರಾಧಿಕಾರ- ಅಲೋಶಿಯಸ್ ಕಾಲೇಜು ಒಪ್ಪಂದ

ಮಂಗಳೂರು: ಸಸ್ಯಗಳ ವೈವಿಧ್ಯತೆ, ಸಂರಕ್ಷಣೆ ಹಾಗೂ ಔಷಧೀಯ ಸಸ್ಯಶಾಸ್ತ್ರದ ಕುರಿತ ಅಧ್ಯಯನ ಮತ್ತು ಸಂಶೋಧನೆಯನ್ನು ಉತ್ತೇಜಿಸುವ ಉದ್ದೇಶದಿಂದ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು (ಪರಿಗಣಿತ ವಿಶ್ವವಿದ್ಯಾನಿಲಯ)ದ ಸಸ್ಯಶಾಸ್ತ್ರ ವಿಭಾಗ ಮತ್ತು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಸ್ಯಕಾಶಿ ವಿಭಾಗದ ನಡುವೆ ಪರಸ್ಪರ ಸಹಕಾರ ಒಪ್ಪಂದಕ್ಕೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರಾದೇಶಿಕ ವಿಜ್ಞಾನಕೇಂದ್ರದಲ್ಲಿ ಎರಡೂ ಸಂಸ್ಥೆಗಳ ಗಣ್ಯರ ಉಪಸ್ಥಿಯಲ್ಲಿ ಸಹಿ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಸಂತ ಅಲೋಶಿಯಸ್ ಕಾಲೇಜು ಪ್ರೊ. ಸಹ–ಕುಲಾಧಿಪತಿ ರೆ. ಫಾ.ಮೆಲ್ವಿನ್‌ಡಿಕುನ್ಹಾ, ಸಹಭಾಗಿತ್ವ ಘಟಕದ ಅಧ್ಯಕ್ಷ ಡಾ. ರೋಶನ್, ಸಸ್ಯಶಾಸ್ತ್ರ ವಿಭಾಗದ ಡಾ. ಜ್ಯೋತಿ ಮಿರಾಂಡ, ಶಿಲ್ಪಾ, ಸನಾ ಶೇಕ್ ಮತ್ತು ಅಕ್ಷತಾ ಆರ್. ಅಮಿನ್ ಹಾಗೂ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶ್ರೀಕಾಂತ್ ರಾವ್, ಆಡಳಿತಾಧಿಕಾರಿ ಡಾ. ಅಶೋಕ್ ಕೆ.ಆರ್., ವೈಜ್ಞಾನಿಕಾಧಿಕಾರಿ ರಾಮಕೃಷ್ಣ ಮರಾಟಿ, ಕ್ಯುರೇಟರ್ ಜಗನ್ನಾಥ್ ಹಾಗೂ ಕಮ್ಯುನಿಟಿ ಮೊಬಿಲೈಸರ್ ಶಿವರಾಮ್, ಹೃತಿಕ್, ವಿಕ್ಟರ್ ಉಪಸ್ಥಿತರಿದ್ದರು.

ಕಯ್ಯಾರ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅಭಿಮತ

ಕಯ್ಯಾರರ ಬದುಕು, ಕೊಡುಗೆ ಅತ್ಯಮೂಲ್ಯ

ಕುಂಬಳೆ: ಕವಿ ನಾಡೋಜ ಡಾ.ಕಯ್ಯಾರ ಕಿಂಞಣ್ಣ ರೈಗಳು ಕ್ರಾಂತಿ ಮತ್ತು ಕರೆಯ ಅನನ್ಯ ರೂಪಗಳಲ್ಲಿ ಕನ್ನಡ ಭಾಷೆಗೆ ಹೊಸ ವ್ಯಾಖ್ಯಾನ ಬರೆದವರು. ಸ್ವಾತಂತ್ರ್ಯ ಹೋರಾಟ, ಕನ್ನಡ ಏಕೀಕರಣ, ವಿಲೀನೀಕರಣ ಚಳುವಳಿ ಮುಂತಾದ ಬಹುವಿಧದ ಹೋರಾಟಗಳ ನೇತೃತ್ವ ವಹಿಸಿದ್ದ ಕರಾವಳಿಯ ಕನ್ನಡ ಪ್ರಜ್ಞೆಯ ಪ್ರತೀಕ ಕಯ್ಯಾರರ ಬದುಕು – ಕೊಡುಗೆಗಳು ಅತ್ಯಮೂಲ್ಯವಾದುದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಹೇಳಿದ್ದಾರೆ.



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಕಾಸರಗೋಡು, ಕಲ್ಕೂರ ಪ್ರತಿಷ್ಠಾನ ಮಂಗಳೂರು ಇವುಗಳ ಸಹಯೋಗದಲ್ಲಿ ಕಯ್ಯಾರು ಕೊಕ್ಕೆಚ್ಚಾಲು ಕಾಮಿಲ್ ಆಂಗ್ಲ ಮಾಧ್ಯಮ ಶಾಲಾ ವಠಾರದಲ್ಲಿ ಭಾನುವಾರ ನಡೆದ ನಾಡೋಜ ಡಾ.ಕಯ್ಯಾರ ಕಿಂಞಣ್ಣ ರೈ ಜನ್ಮ ದಿನಾಚರಣೆ, ಪ್ರಶಸ್ತಿ ಪ್ರದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಯ್ಯಾರರು ತಮ್ಮ ಸಾಹಿತ್ಯ ಪ್ರಜ್ಞೆಯ ಪ್ರತೀಕವಾಗಿ ಸಮಾಜ ಕಟ್ಟಿದವರು. ಹಿರಿಯ ಸಾಹಿತಿ, ಕವಿ, ರಾಜಕಾರಣಿ, ಅತ್ಯುತ್ತಮ ಶಿಕ್ಷಕ, ಕೃಷಿಕರಾಗಿ ಅವರು ಕಟ್ಟಿಕೊಟ್ಟ ಮಾರ್ಗ ಅಚ್ಚರಿ ತರುವಂತದ್ದು. ಅವರ ಕೊಡುಗೆಗಳು ಸಾರ್ವಕಾಲಿಕ ಮೌಲ್ಯದ್ದಾಗಿದ್ದು, ಐಕ್ಯಗಾನವೆಂಬ ಅವರ ಒಂದು ಕವಿತೆ ಇದಕ್ಕೊಂದು ಉದಾಹರಣೆಯಾಗಿದೆ. ಜೊತೆಗೆ ಬೆಂಕಿ ಬಿದ್ದಿದೆ ಮನೆಗೆ ಎಂಬಂತಹ ಜನರನ್ನು ಉದ್ದೇಶಿಸಿ ಆಶಯ ರೂಪದ ತಪ್ತ ಜೀವದೊಳಗೆ ಕುದಿವ ಹೃದಯದ ಮೂಲಕ ಮೂಡಿದ ಕವಿತೆಗಳು ನೈಜತೆಯ ಚಿತ್ರಣಗಳಾಗಿ ಬೆರಗು ನೀಡುತ್ತವೆ. ನೆಲ, ಜಲ, ಧನ, ಸಂಸ್ಕೃತಿಗಳನ್ನು ಬೆಸೆದು ಬದುಕಿದ ಕನ್ನಡದ ಕವಿ ರಾಷ್ಟ್ರದ ವಿಶಾಲ ದೃಷ್ಟಿಯ ಮುತ್ತಿನ ಮಣಿಯಾಗಿದ್ದವರು. ಅವರ ನೆನಪಲ್ಲಿ ನೀಡಲಾಗುವ ಪ್ರಶಸ್ತಿ ಬಸವರಾಜ್ ಎಸ್. ಹೊರಟ್ಟಿ ಹಾಗೂ ಎಟಿಎಸ್ ಆಡಳಿತ ನಿರ್ದೇಶಕ ಡಾ.ಮೂಡಂಬೈಲು ರವಿ ಶೆಟ್ಟಿ ದೋಣಿಂಜೆಗುತ್ತು ಅವರಿಗೆ ಪ್ರದಾನಗೈಯ್ಯುತ್ತಿರುವುದು ಶ್ರೇಷ್ಠ ಕಾರ್ಯ ಎಂದವರು ತಿಳಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಇದರ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಎಸ್. ಹೊರಟ್ಟಿ ಹಾಗೂ ಎಟಿಎಸ್ ಆಡಳಿತ ನಿರ್ದೇಶಕ ಡಾ.ಮೂಡಂಬೈಲು ರವಿ ಶೆಟ್ಟಿ ದೋಣಿಂಜೆಗುತ್ತು ಅವರಿಗೆ ಕಯ್ಯಾರ ಕಿಂಞಣ್ಣ ರೈ ಜನ್ಮ ದಿನೋತ್ಸವ 2026 ಪ್ರಶಸ್ತಿ ಪ್ರದಾನಗೈಯ್ಯಲಾಯಿತು.

ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಮಾತನಾಡಿ, ಕನ್ನಡ ಭಾಷೆ, ಸಂಸ್ಕೃತಿಯ ಪ್ರೇಮ ತನ್ನಲ್ಲಿ ಒಡಮೂಡಲು ಪದವಿ ತರಗತಿಯಲ್ಲಿ ಅಧ್ಯಯನ ನಡೆಸಿದ್ದ ಕಯ್ಯಾರರ ವಿವಿಧ ಸಾಹಿತ್ಯ ಬರಹಗಳೇ ಕಾರಣ. ಹೋರಾಟಗಾರರಾಗಿ ನ್ಯಾಯಯುತ ಹಕ್ಕುಗಳಿಗೆ ಅವರು ತೋರಿಸಿದ್ದ ಧೀಮಂತಿಕೆಯ ಧೈರ್ಯವೇ ತನಗೂ ಈಗ ವಿಧಾನಸಭೆಯಲ್ಲಿ ಕನ್ನಡದಲ್ಲಿ ಪ್ರಮಾಣ ವಚನ ಹಾಗೂ ಬಸವಣ್ಣನವರ ವಚನಗಳನ್ನು ಉಲ್ಲೇಖಿಸಲು ಪ್ರೇರಣೆಯಾಯಿತು ಎಂದು ಹೇಳಿದರು.

ಕರ್ನಾಟಕಕಕ್ಕೂ ಮಾದರಿ

ಕಾಸರಗೋಡಿನ ಕನ್ನಡ ಅಸ್ಮಿತೆ ನಿಜವಾಗಿಯೂ ಸ್ತುತ್ಯರ್ಹವಾದುದು. ಇಲ್ಲಿಯ ಜನರ ಶುದ್ಧ ಭಾಷಾಪ್ರೇಮ ಅಸದೃಶ್ಯವಾಗಿ ಕರ್ನಾಟಕಕಕ್ಕೂ ಮಾದರಿಯಾಗುವಂತದ್ದು. ನಾಡೋಜ ಕಯ್ಯಾರರ ಹೆಸರಲ್ಲಿ ತನಗೆ ಬಂದಿರುವ ಪ್ರಶಸ್ತಿ ಭಾಷಾ ಸೇವೆಗೆ ತನ್ನನ್ನು ಪ್ರೇರೇಪಿಸಲು ದಾರಿಮಾಡಿಕೊಟ್ಟಿದೆ

■ ಬಸವರಾಜ್ ಎಸ್.ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

ಡಾ.ಮೂಡಂಬೈಲು ರವಿ ಶೆಟ್ಟಿ ದೋಣಿಂಜೆಗುತ್ತು ಮಾತನಾಡಿ, ಕನ್ನಡ ಭಾಷೆ, ಸಂಸ್ಕೃತಿಗಳ ಮಹತ್ವ, ಮೌಲ್ಯಗಳು ವಿದೇಶದಲ್ಲಿದ್ದಾಗ ಹೆಚ್ಚು ಹೃದಯಕ್ಕೆ ಹತ್ತಿರವಾಗುತ್ತವೆ. ಕಯ್ಯಾರರಂತಹ ಸಾಧಕರ ಪ್ರೇರಣದಾಯಿ ಬರಹಗಳು ಜನರ ಉಸಿರಾದಾಗ ನಾಡು ಸುಭಿಕ್ಷವಾಗುತ್ತದೆ ಎಂದರು.

ಶಿವಾನಂದ ಕೋಟ್ಯಾನ್ ಕಟಪಾಡಿ ರಚಿಸಿದ ಪರಂಪರೆಯ ಪಯಣ ಕೃತಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಬಿಡುಗಡೆಗೊಳಿಸಿದರು. ಡಾ.ಪ್ರಸನ್ನ ರೈ ಕಲ್ಲಕಳಯ ಅವರು ಕಯ್ಯಾರರ ಹಾಡುಗಳ ಗಾಯನ ನಡೆಸಿದರು.

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

ನಾಡಗೀತೆ, ಕನ್ನಡ ಗೀತೆಗಳ ಗಾಯನ, ಸಮೂಹ ಶಾಸ್ತ್ರೀಯ ಭರತನಾಟ್ಯ, ಕಥಕ್ ನೃತ್ಯ, ಜಾನಪದ ನೃತ್ಯ, ಶಾಸ್ತ್ರೀಯ ನೃತ್ಯ ಪ್ರದರ್ಶನಗೊಂಡಿತು. ಗ್ರೀನ್ ಸ್ಟಾರ್ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್ ಕಯ್ಯಾರು, ಕೊಕ್ಕೆಚ್ಚಾಲು ಫ್ರೆಂಡ್ಸ್ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್, ಫ್ರೆಂಡ್ಸ್ ಕಯ್ಯಾರು, ಮುಂಡತ್ತಾಯ ಯುವಕ ವೃಂದ ಕಯ್ಯಾರು, ಲಿಟ್ಲ್ ಬ್ರದರ್ಸ್ ಕೊಕ್ಕೆಚ್ಚಾಲು, ನೇತಾಜಿ ಫ್ರೆಂಡ್ಸ್ ಅಶ್ವತ್ಥಕಟ್ಟೆ, ಕುಟುಂಬಶ್ರೀ ಘಟಕಗಳು ಸಹಕಾರ ನೀಡಿದ್ದವು.

ಕಯ್ಯಾರು ಚರ್ಚ್‌ನ ಧರ್ಮಗುರು ರೆ.ಫಾ. ವಿಶಾಲ್ ಮೋನಿಶ್, ಪೈವಳಿಕೆ ಗ್ರಾ.ಪಂ. ಅಧ್ಯಕ್ಷೆ ಬದರುನ್ನೀಸಾ ಸಲೀಂ, ಜಿ.ಪಂ. ಸದಸ್ಯ ಸೋಮಶೇಖರ ಜೆ.ಎಸ್., ಕರ್ನಾಟಕ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ, ಮಂಜೇಶ್ವರ ಬ್ಲಾಕ್ ಪಂ. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಮೋಹನ್ ರೈ, ಸದಸ್ಯೆ ಚಂದ್ರಾವತಿ ಶೆಟ್ಟಿ, ಪೈವಳಿಕೆ ಗ್ರಾ.ಪಂ. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಸುನೀನಾ ಝಡ್ .ಎ.ಕಯ್ಯಾರು, ಗ್ರಾ.ಪಂ. ಸದಸ್ಯೆ ಪ್ರಿನ್ಸಿ ಡಿಸೋಜಾ, ಕನ್ನಡ ಸಾಹಿತ್ಯ ಪರಿಷತ್‌ನ ಕೇರಳ ಗಡಿನಾಡ ಘಟಕ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಮುಖ್ಯ ಅತಿಥಿಗಳಾಗಿದ್ದರು.

ಸಾಮಾಜಿಕ ಕಾರ್ಯಕರ್ತ ದೀಪಕ್ ವಿ.ಕೆ., ಜಾನಪದ ಕಲಾವಿದ ಸೋಮಯ್ಯ ಅಶ್ವತ್ಥಕಟ್ಟೆ, ಪ್ರಗತಿಪರ ಕೃಷಿಕ ರಾಮಣ್ಣ ಅತ್ತಾರ್, ನಾಟಿ ವೈದ್ಯ ಮೊಹಮ್ಮದ್ ಪರಂಬಳ ಅವರಿಗೆ ಗೌರವಿಸಲಾಯಿತು.

ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್.ಸುಬ್ಬಯ್ಯಕಟ್ಟೆ, ಕರ್ನಾಟಕ ಗಮಕ ಕಲಾ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ತೆಕ್ಕೆಕೆರೆ ಶಂಕರನಾರಾಯಣ ಭಟ್, ಮಂಜೇಶ್ವರ ಬ್ಲಾಕ್ ಪಂ. ಮಾಜಿ ಸದಸ್ಯರಾದ ಬೇಬಿ ಶೆಟ್ಟಿ, ಪ್ರಸಾದ್ ರೈ ಕಯ್ಯಾರು, ಕಾಮಿಲ್ ಆಂಗ್ಲ ಮಾಧ್ಯಮ ಶಾಲೆ ಅಧ್ಯಕ್ಷ ಮೊಯ್ದೀನ್ ಕುಂಞಿ ಮಾಸ್ತರ್ ಉಪಸ್ಥಿತರಿದ್ದರು.

ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ಚನಿಯಪ್ಪ ನಾಯ್ಕ ಸ್ವಾಗತಿಸಿ, ಪುರುಷೋತ್ತಮ ಭಟ್ ಕೆ. ವಂದಿಸಿದರು. ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು ನಿರೂಪಿಸಿದರು.

ಕೆನರಾ ಕಾಲೇಜಿನಲ್ಲಿ ಶೈಕ್ಷಣಿಕ ಸಾಲಿನ ನೂತನ ವಿದ್ಯಾರ್ಥಿಗಳಿಗೆ ಓರಿಯೆಂಟೇಷನ್ ಕಾರ್ಯಕ್ರಮ

ಮಂಗಳೂರು: ಕೆನರಾ ಕಾಲೇಜು (ಸ್ವಾಯತ್ತ) ಮಂಗಳೂರು, ವಿದ್ಯಾರ್ಥಿ ಕ್ಷೇಮ ಪಾಲನ ಸಮಿತಿ ಹಾಗೂ ಐಕ್ಯೂಎಸಿ ಆಶ್ರಯದಲ್ಲಿ 2026–27ನೇ ಶೈಕ್ಷಣಿಕ ಸಾಲಿನ ನೂತನ ವಿದ್ಯಾರ್ಥಿಗಳಿಗಾಗಿ ಓರಿಯೆಂಟೇಷನ್ ಕಾರ್ಯಕ್ರಮ ಟಿ.ವಿ. ರಮಣ ಪೈ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಿತು.



ಮುಖ್ಯ ಅತಿಥಿಗಳಾದ ವೃತ್ತಿ ಮಾರ್ಗದರ್ಶಕಿ, ಟೀನ್ ಪೇರೆಂಟಿಂಗ್ ಮೆಂಟರ್ ರಾಜೇಶ್ವರಿ ಡಿ. ಶೆಟ್ಟಿ, ಕಾಲೇಜಿನ ಸಂಚಾಲಕ ಸಿಎ. ಎಂ. ಜಗನ್ನಾಥ ಕಾಮತ್ ಹಾಗೂ ವ್ಯವಸ್ಥಾಪಕ ಕೆ. ಶಿವಾನಂದ ಶೆಣೈ ಕಾರ್ಯಕ್ರಮ ಉದ್ಘಾಟಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಪ್ರೇಮಲತಾ ವಿ. ಕಾಲೇಜಿನ ನೀತಿ ನಿಯಮಗಳು, ವಿವಿಧ ಶೈಕ್ಷಣಿಕ ವಿಭಾಗಗಳು, ವಿದ್ಯಾರ್ಥಿಗಳಿಗೆ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಐಕ್ಯೂಎಸಿ ಚಟುವಟಿಕೆಗಳು, ವಿಭಾಗ ಕಾರ್ಯ ಚಟುವಟಿಕೆಗಳು, ರಾಷ್ಟ್ರೀಯ ಸೇವಾ ಯೋಜನೆ, ಯೂತ್ ರೆಡ್ ಕ್ರಾಸ್, ರೋವರ್ ರೇಂಜರ್, ಪರೀಕ್ಷಾ ವಿಧಾನ, ಸಾಂಸ್ಕೃತಿಕ ಸಂಘ, ವೃತ್ತಿ ಮಾರ್ಗದರ್ಶನ ಕೇಂದ್ರ ಸೇರಿದಂತೆ ವಿವಿಧ ಕಾರ್ಯಸಂಘಗಳ ಚಟುವಟಿಕೆಗಳ ಕುರಿತು ಆಯಾ ವಿಭಾಗದ ಸಂಯೋಜಕರು ಮಾಹಿತಿ ನೀಡಿದರು.

ಬೆಳಗ್ಗಿನ ಅಧಿವೇಶನದಲ್ಲಿ ಮಾತನಾಡಿದ ರಾಜೇಶ್ವರಿ ಡಿ. ಶೆಟ್ಟಿ, ವೈಫಲ್ಯಗಳನ್ನು ಸೋಲಾಗಿ ಪರಿಗಣಿಸದೆ, ಅವುಗಳನ್ನು ಯಶಸ್ಸಿನ ಮೆಟ್ಟಿಲುಗಳಾಗಿ ಸ್ವೀಕರಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನೊಳಗಿನ ಪ್ರತಿಭೆಯನ್ನು ಗುರುತಿಸಿ, ಆತ್ಮವಿಶ್ವಾಸ ಮತ್ತುಸಕಾರಾತ್ಮಕಮನೋಭಾವದೊಂದಿಗೆ ಜೀವನದ ಗುರಿಯತ್ತ ಮುನ್ನಡೆಯಬೇಕು ಎಂದರು.

ಮಧ್ಯಾಹ್ನದ ಅಧಿವೇಶನದಲ್ಲಿ ವಾಗ್ಮಿ ಎನ್. ಆರ್. ದಾಮೋದರ ಶರ್ಮ ಮಾತನಾಡಿ, ಜೀವನದಲ್ಲಿ ಯಾವುದೇ ರೀತಿಯ ಕೀಳರಿಮೆ ಹೊಂದದೆ ತಮ್ಮ ಸಾಮರ್ಥ್ಯದ ಮೇಲೆ ವಿಶ್ವಾಸವಿರಬೇಕು. ಉನ್ನತ ಹುದ್ದೆಗಳನ್ನು ಅಲಂಕರಿಸಿದರೂ ವಿನಯ,ಶಿಸ್ತುಮತ್ತುಮಾನವೀಯಮೌಲ್ಯಗಳನ್ನು ಮರೆಯಬಾರದು. ಯೌವನದ ಉತ್ಸಾಹದಲ್ಲಿ ಭಾವೋದ್ವೇಗಗಳಿಗೆ ಬಲಿಯಾಗದೆ, ಸಂಕಷ್ಟದ ಸಂದರ್ಭಗಳಲ್ಲಿಯೂಸ್ಥಿಮಿತವನ್ನುಕಾಪಾಡಿಕೊಳ್ಳುವ ಗುಣ ಬೆಳೆಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಸಂಚಾಲಕ ಸಿಎ. ಎಂ. ಜಗನ್ನಾಥ ಕಾಮತ್ ಶುಭ ಹಾರೈಸಿದರು. ವಿದ್ಯಾರ್ಥಿಗಳಾದ ಗೋಕುಲ್ ಗಡಿಯಾರ, ಪ್ರತೀಕ್ಷಾ ಕೋಟ್ಯಾನ್ ಕಾಲೇಜಿನ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಆಡಳಿತಾಧಿಕಾರಿ ಡಾ. ದೀಪ್ತಿನಾಯಕ್, ಐಕ್ಯೂಎಸಿ ಸಂಯೋಜಕಿ ಡಾ. ಮೇಘ ಉಪಸ್ಥಿತರಿದ್ದರು.

ವಿದ್ಯಾರ್ಥಿ ಕ್ಷೇಮಪಾಲನಾ ಸಮಿತಿ ಸಂಯೋಜಕ ಡಾ. ಗಣೇಶ್ ಶೆಟ್ಟಿ ಸ್ವಾಗತಿಸಿದರು. ಐಕ್ಯೂಎಸಿ ಸಂಯೋಜಕಿ ಸೀಮಾ ಪ್ರಭು, ಉಪನ್ಯಾಸಕ ಪ್ರದೀಪ್ ಬಿ. ಅತಿಥಿ ಪರಿಚಯ ಮಾಡಿದರು. ಸಹಾಯಕ ಪ್ರಾಧ್ಯಾಪಕಿ ರೂಪಶ್ರೀ ಹಾಗೂ ಡಾ. ಸವಿತಾ ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಸುಷ್ಮಾ ಆರ್. ಶೆಟ್ಟಿ, ಸೌಜನ್ಯ ಕಾರ್ಯಕ್ರಮವನ್ನು ನಿರೂಪಿಸಿದರು.

ಬ್ರಹ್ಮಾವರದಲ್ಲಿ ಜೆಎಂಎಫ್‌ಸಿ ನ್ಯಾಯಾಲಯ ಸ್ಥಾಪನೆಗೆ ರಾಜ್ಯ ಸರ್ಕಾರ ಅಸ್ತು: ರೆನೋಲ್ಡ್

ಬ್ರಹ್ಮಾವರ: ಬ್ರಹ್ಮಾವರ ಸೇರಿದಂತೆ ರಾಜ್ಯದಲ್ಲಿ ಹೊಸದಾಗಿ ರಚಿಸಲಾದ 38 ತಾಲೂಕುಗಳ ಪೈಕಿ ಐದು ಕಡೆ ಹೊಸ ಮತ್ತು ಪೂರ್ಣ ಪ್ರಮಾಣದ ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯಗಳನ್ನು ಸ್ಥಾಪಿಸಲು ರಾಜ್ಯ ಉಚ್ಚ ನ್ಯಾಯಾಲಯ ಶಿಫಾರಸ್ಸಿನ ಮೇಲೆ ಕರ್ನಾಟಕ ಸರಕಾರ ಜೂ. 18ರಂದು ಈ ಬಗ್ಗೆ ಆದೇಶ ಹೊರಡಿಸಿದೆ.

ಬ್ರಹ್ಮಾವರದಲ್ಲಿ ಸದ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದ ಸಂಚಾರಿ ಪೀಠ ಕಾರ್ಯಾಚರಿಸುತ್ತಿದೆ. ಬ್ರಹ್ಮಾವರದಲ್ಲಿ ಇದು ವಾರದಲ್ಲಿ ನಾಲ್ಕು ದಿನಗಳ ಕಾಲ ಕಾರ್ಯನಿರ್ವಹಿಸುತ್ತಿದೆ.

ಸರಕಾರದ ಆದೇಶವನ್ನು ಸ್ವಾಗತಿಸಿರುವ ಉಡುಪಿ ವಕೀಲರ ಸಂಘದ ಅಧ್ಯಕ್ಷ ರೆನೋಲ್ಡ್ ಪ್ರವೀಣ್ ಕುಮಾರ್, ಇದರಿಂದ ಪ್ರಸ್ತುತ ವಾರಕ್ಕೆ 4 ದಿನ ಸಂಚಾರಿ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುತ್ತಿರುವ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯವನ್ನು ಉಡುಪಿಯಲ್ಲಿಯೇ ಶಾಶ್ವತವಾಗಿ ಉಳಿಸಿಕೊಳ್ಳಲು ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಉಡುಪಿ ವಕೀಲರ ಸಂಘದ ಬಲವಾದ ಆಕ್ಷೇಪಣೆಗಳ ಹೊರತಾಗಿಯೂ, ಕರ್ನಾಟಕದ ಉಚ್ಚ ನ್ಯಾಯಾಲಯವು 2025ರ ಮೇ 12ರಂದು ಪತ್ರವೊಂದರ ಮೂಲಕ ಉಡುಪಿಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯವನ್ನು ಬ್ರಹ್ಮಾವರಕ್ಕೆ ಶಾಶ್ವತವಾಗಿ ಸ್ಥಳಾಂತರಿಸಲು ರಾಜ್ಯ ಸರಕಾರಕ್ಕೆ ಶಿಫಾರಸು ಮಾಡಿತ್ತು.

ಉಡುಪಿಯಲ್ಲಿ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮತ್ತು ಜೆಎಂಎಫ್‌ಸಿ ನ್ಯಾಯಾಲಯ 65 ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿತ್ತು. ಸರಕಾರದ ಆದೇಶವೊಂದರ ಮೂಲಕ ಅದು 1961ರ ಜುಲೈ 17ರಿಂದ ಕಾರ್ಯಾರಂಭ ಮಾಡಿತ್ತು. ಅಂದಿನಿಂದ, ಅದು ಉಡುಪಿಯ ಜನತೆಗೆ ನ್ಯಾಯ ನೀಡುವ ವಿಷಯದಲ್ಲಿ ಸಾಕಷ್ಟು ಕೆಲಸದ ಹೊರೆಯೊಂದಿಗೆ, ಉಡುಪಿ ಜಿಲ್ಲಾ ನ್ಯಾಯಾಂಗದ ಅವಿಭಾಜ್ಯ ಅಂಗವಾಗಿ ಕಾರ್ಯಾಚರಿಸುತ್ತಿತ್ತು.

ಈ ನಿಟ್ಟಿನಲ್ಲಿ, ಉಡುಪಿ ವಕೀಲರ ಸಂಘದ ಅಧ್ಯಕ್ಷ ರೆನೊಲ್ಡ್ ಅವರು ಉಡುಪಿಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮತ್ತು ಜೆಎಂಎಫ್‌ಸಿ ನ್ಯಾಯಾಲಯವನ್ನು ಬ್ರಹ್ಮಾವರಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆಯನ್ನು ಕೈಬಿಟ್ಟು, ಬ್ರಹ್ಮಾವರದಲ್ಲಿ ಪ್ರತ್ಯೇಕ ಮತ್ತು ಹೊಸ ಸಿವಿಲ್ ನ್ಯಾಯಾಧೀಶ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವನ್ನು ಸ್ಥಾಪಿಸುವಂತೆ ಪ್ರಾರ್ಥಿಸಿ, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಅದು ವಿಲೇವಾರಿಗೆ ಬಾಕಿ ಇರುವಾಗಲೇ, ರಿಟ್ ಅರ್ಜಿ ಸಲ್ಲಿಕೆಯ ಫಲಶ್ರುತಿ ಎಂಬಂತೆ ಸರಕಾರವು ಬ್ರಹ್ಮಾವರದಲ್ಲಿ ಹೊಸ ನ್ಯಾಯಾಲಯ ಸ್ಥಾಪನೆಗೆ ಆದೇಶಿಸಿದ್ದು, ಉಡುಪಿಯಿಂದ ಬ್ರಹ್ಮಾವರಕ್ಕೆ ನ್ಯಾಯಾಲಯ ಸ್ಥಳಾಂತರ ಪ್ರಕ್ರಿಯೆಯು ಸ್ಥಗಿತಗೊಂಡಂತಾಗಿದೆ.

ಮಂಗಳೂರಿನ ವಿಧಾನ ಪರಿಷತ್ ಸದಸ್ಯ ಐವಾನ್ ಡಿಸೋಜ ಅವರ ಸತತ ಪ್ರಯತ್ನ ಮತ್ತು ಸಕಾಲಿಕ ಬೆಂಬಲದಿಂದ ರಾಜ್ಯ ಸರಕಾರ ಬ್ರಹ್ಮಾವರದಲ್ಲಿ ಹೊಸ ಹಾಗೂ ಪೂರ್ಣಪ್ರಮಾಣದ ಸಿವಿಲ್ ನ್ಯಾಯಾಧೀಶ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಸ್ಥಾಪನೆಗೆ ಮಂಜೂರಾತಿ ನೀಡಿದೆ ಎಂದು ರೆನೋಲ್ಡ್ ತಿಳಿಸಿದ್ದಾರೆ.

ಇದರೊಂದಿಗೆ ಬ್ರಹ್ಮಾವರದಲ್ಲಿ ವಾರದಲ್ಲಿ ನಾಲ್ಕು ದಿನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಸಂಚಾರಿ ಪೀಠವಾಗಿ ಕಾರ್ಯಾಚರಿಸುತಿದ್ದ ಪೀಠ ಇನ್ನು ಮುಂದೆ ಶಾಶ್ವತವಾಗಿ ಉಡುಪಿಯಲ್ಲಿ ಕಾರ್ಯಾಚರಿಸಲಿದೆ ಎಂದು ಅವರು ಹೇಳಿದ್ದಾರೆ.

ಆನೆಗುಡ್ಡೆ ದೇವಳಕ್ಕೆ ಮಾಜಿ ಸಚಿವ ಸಿ.ಟಿ. ರವಿ ಭೇಟಿ

ಕೋಟ: ಕುಂಭಾಶಿಯ ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನಕ್ಕೆ ವಿಧಾನಪರಿಷತ್ ಸದಸ್ಯ ಮಾಜಿ ಸಚಿವ ಸಿ.ಟಿ. ರವಿ ಅವರು ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಅವರನ್ನು ಆಡಳಿತ ಮಂಡಳಿಯ ಪರವಾಗಿ ಆಡಳಿತ ಧರ್ಮದರ್ಶಿ ಕೆ. ರಮಣ ಉಪಾಧ್ಯಾಯ ಬರಮಾಡಿಕೊಂಡು ಗೌರವಿಸಿದರು. ಪರ್ಯಾಯ ಅರ್ಚಕರಾದ ಕೆ. ಸೂರ್ಯನಾರಾಯಣ ಉಪಾಧ್ಯಾಯ ಶ್ರೀದೇವರ ಪ್ರಸಾದವನ್ನು ನೀಡಿ ಆಶೀರ್ವದಿಸಿದರು. ಧರ್ಮದರ್ಶಿ ಕೆ. ಪದ್ಮನಾಭ ಉಪಾಧ್ಯಾಯರು,



ಆಡಳಿತ ಹಾಗೂ ಅರ್ಚಕ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಿ.ಟಿ. ರವಿ ಅವರು ದೇವಸ್ಥಾನದ ಪರಿಸರ, ಸ್ವಚ್ಛತೆ ಹಾಗೂ ಅಭಿವೃದ್ಧಿಯನ್ನು ಕಂಡು ಶ್ಲಾಘಿಸಿದರು.

ಹೋಂಸ್ಟೇ: ಪ್ರವಾಸಿಗರ ಸುರಕ್ಷತೆ ಆದ್ಯತೆ

ಸುಂಟಿಕೊಪ್ಪ: ಸುಂಟಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹೋಂಸ್ಟೇ ನಡೆಸುವವರು ಮೊದಲಿಗೆ ಪ್ರವಾಸಿಗರ ಸುರಕ್ಷತೆಗೆ ಆದ್ಯತೆ ನೀಡಬೇಕು, ಅಲ್ಲದೆ ತಮ್ಮ ನೆರೆಯವರಿಗೆ ತೊಂದರೆಯಾಗದಂತೆ ನಿರ್ವಹಿಸುವುದು ಮುಖ್ಯವೆಂದು ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಮೋಹನ್ ರಾಜ್ ಹೋಂಸ್ಟೆ ಮತ್ತು ರೇಸಾರ್ಟ್ ಮಾಲೀಕರಿಗೆ ಮಾಹಿತಿ ನೀಡಿದರು.

ಗುರುವಾರದಂದು ಸಂಜೆ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಆಯೋಜಿಸಲಾದ ಹೋಂಸ್ಟೆ ಹಾಗೂ ರೆಸಾರ್ಟ್ ಮಾಲೀಕರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಸರಕಾರದ ಮಾರ್ಗಸೂಚಿ, ಪೊಲೀಸ್ ಇಲಾಖೆಯ ನಿಯಮ, ಪ್ರವಾಸೋದ್ಯಮ ಇಲಾಖೆಯ ಅಧಿಕೃತ ಮಾರ್ಗಸೂಚಿಗಳನ್ವಯ ಪ್ರವಾಸಿಗಾರ ಸುರಕ್ಷತೆ ಕಡ್ಡಾಯ ನೊಂದಾಣಿಗೊಂಡಿರಬೇಕು. ಸಿಸಿಟಿವಿ ಅಳವಡಿಕೆ, ಸಿಬ್ಬಂದಿಗಳ ನೇಮಕಾತಿಗೊಂಡಾಗ ಅವರ ಸಂಪೂರ್ಣ ದಾಖಲಾತಿ ಹಾಗೂ ಪೊಲೀಸ್ ಇಲಾಖೆ ಮಾಹಿತಿ ನೀಡಿ ಪರಿಶೀಲನೆ ಆದ್ಯತೆ ನೀಡಬೇಕೆಂದರು. ಅಲ್ಲದೆ ಹೋಂಸ್ಟೆ ಮತ್ತು ರೇಸಾರ್ಟ್ ನಡೆಸುವವರು ಹಗಲು ಮತ್ತು ರಾತ್ರಿಯ ಸಮಯಪಾಲನೆಗೆ ಆದ್ಯತೆ ನೀಡಬೇಕು. ನೆರೆ ಹೊರೆಯವರಿಗೆ ತೊಂದರೆಯಾಗದಂತೆ ಎಚ್ಚರವಹಿಸಬೇಕು. ಹೋಂಸ್ಟೆ ಮತ್ತು ರೆಸಾರ್ಟ್‌ಗಳಲ್ಲಿ ಉತ್ಪತಿಯಾಗುವ ತ್ಯಾಜ್ಯವನ್ನು ನಿರ್ವಹಣೆ ಸೇರಿದಂತೆ ಸರಕಾರದ ಎಲ್ಲಾ ಮಾರ್ಗಸೂಚಿ ಹಾಗೂ ಆದೇಶದ ಬಗ್ಗೆ ಮಾಹಿತಿ ನೀಡಿದರು. ಎಲ್ಲಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದರು.

ಉಳಿ ಗ್ರಾಮದ ಕಕ್ಯಬೀಡು ಶ್ರೀ ಪಂಚದುರ್ಗಾ ಪ್ರೌಢಶಾಲೆಗೆ ಶ್ರೀ ಪಂಚದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ದಾನಿಗಳಿಂದ ಕೊಡುಗೆ

ಸಮವಸ್ತ್ರ, ಲೇಖನ ಸಾಮಗ್ರಿ ವಿತರಣೆ, ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಬಂಟ್ವಾಳ: ತಾಲೂಕಿನ ಉಳಿ ಗ್ರಾಮದ ಕಕ್ಯಬೀಡು ಶ್ರೀ ಪಂಚದುರ್ಗಾ ಪ್ರೌಢಶಾಲೆಗೆ ಶ್ರೀ ಪಂಚದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಹಾಗೂ ದಾನಿಗಳು ಕೊಡಮಾಡಿದ ಸಮವಸ್ತ ಮತ್ತು ಲೇಖನ ಸಾಮಾಗ್ರಿ ವಿತರಣೆ ಮತ್ತು ಎಸ್ಸೆಸೆಲ್ಸಿ ಸಾಧಕರಿಗೆ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಸಮ್ಮಾನ ಕಾರ್ಯಕ್ರಮ ಶನಿವಾರ ಶಾಲಾ ಸಭಾಂಗಣದಲ್ಲಿ ನಡೆಯಿತು.



ಗುರುವಾಯನಕೆರೆ ಎಕ್ಸೆಲ್ ಸಮೂಹ ಸಂಸ್ಥೆಯ ಅಧ್ಯಕ್ಷ ಸುಮಂತ್ ಕುಮಾರ್ ಜೈನ್ ಬಿ. ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯೆಯಿಂದ ಜ್ಞಾನ, ಗೌರವ ಹಾಗೂ ಉತ್ತಮ ಜೀವನ ಸಾಧ್ಯವಾಗುತ್ತದೆ. ಆದುದರಿಂದ ಮಕ್ಕಳು ಉತ್ತಮ ಶಿಕ್ಷಣವನ್ನು ಪಡೆದು ಉತ್ತಮ ಪ್ರಜೆಗಳಾಗಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದು ಹೇಳಿದರು.

ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡಾ. ಸತ್ಯಶಂಕರ ಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶಿಕ್ಷಣದ ಸರ್ವ ಸೌಲಭ್ಯಗಳನ್ನು ಒದಗಿಸಿ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ವಿದ್ಯಾರ್ಥಿಗಳು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಉತ್ತಮ ನಡತೆಯನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಶಾಲಾ ಸಂಚಾಲಕ ಉಳಿ ದಾಮೋದರ ನಾಯಕ್ ಅವರು ಮಾತನಾಡಿ, ದಿ.ಜಾರಪ್ಪ ಶೆಟ್ಟಿ ಅವರ ದೂರದೃಷ್ಟಿಯಿಂದ ಸ್ಥಾಪಿತವಾದ ಕಕ್ಯಬೀಡು ಪ್ರೌಢಶಾಲೆಯಿಂದಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರಕುವಂತಾಗಿದೆ. ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲು ಸಾಧಕರನ್ನು ಗೌರವಿಸಲಾಗುತ್ತಿದೆ ಎಂದರು.

ಯಕ್ಷಧ್ರುವ ಪಟ್ಲ ಫೌಂಡೇಶನ್ ಬೆಳ್ತಂಗಡಿ ಘಟಕದ ಗೌರವಾಧ್ಯಕ್ಷ ಭುಜಬಲಿ ಕಂಬಳಿ, ಬಾಚಕೆರೆ ದೇವಸ್ಥಾನದ ಧರ್ಮದರ್ಶಿ ದೇಜಪ್ಪ ಬಾಚಕೆರೆ, ಶಾಲಾ ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಕೆ.ರಾಜೇಂದ್ರ ಕಕ್ಯಪದವು, ಉಳಿ ಪ್ರಾ. ಕೃ. ಸ. ಸಂಘದ ಅಧ್ಯಕ್ಷ ಸುರೇಶ್ ಮೈರ, ಉಳಿ ಯುವಕ ಮಂಡಲ ಅಧ್ಯಕ್ಷ ವಸಂತ ಸಾಲ್ಯಾನ್ ರಾಮನಗರ, ಉಳಿಬಲು ಸ.ಹಿ.ಪ್ರಾ.ಶಾಲಾ ಶಿಕ್ಷಕ ಅಕ್ಬರ್ ಅಲಿ, ಉಳಿ ಕಕ್ಯಪದವು ಸ.ಹಿ.ಪ್ರಾ.ಶಾಲೆ ಮುಖ್ಯ ಶಿಕ್ಷಕ ಪ್ರಶಾಂತ್ ಅವರು ಶುಭ ಹಾರೈಸಿದರು.

ಕಕ್ಯಪದವು ಗರೊಡಿ ಅಧ್ಯಕ್ಷ ಕೆ. ಮಾಯಿಲಪ್ಪ ಸಾಲ್ಯಾನ್, ನಿವೃತ್ತ ಕೋರ್ಟ್ ಸಿಬಂದಿ ರಘು ಶೆಟ್ಟಿ ನಡುವಲಚ್ಚಿಲ್, ಕಕ್ಯಪದವು ಹಾ.ಉ.ಸಂಘದ ಅಧ್ಯಕ್ಷ ಚೇತನ್ ಹೂರ್ದೊಟ್ಟು, ಕಜೆಕಾರು ಪ್ರಾ.ಕೃ.ಸ.ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುಧಾಕರ ಎಚ್., ಶಾಲಾಭಿವೃದ್ಧಿ ಸಮಿತಿ ಸದಸ್ಯರಾದ ವಿಶ್ವನಾಥ ಸಾಲ್ಯಾನ್ ಬಿತ್ತ, ಉಪನ್ಯಾಸಕಿ ವಿದ್ಯಾಶ್ರೀ, ಪ್ರಮುಖರಾದ ಮುತ್ತಪ್ಪ ಗೌಡ ಅಗಲ, ವೀರೇಂದ್ರ ಕುಮಾರ್ ಜೈನ್, ಜಗನ್ನಾಥ ಶೆಟ್ಟಿ, ಯತೀಂದ್ರ ಚೌಟ, ಬಾಲಕೃಷ್ಣ ಮಡಿವಾಳ, ವೃಷಭರಾಜ್ ಜೈನ್, ಶಾಲಾಭಿವೃದ್ಧಿ, ದೇವಸ್ಥಾನದ ಜೀರ್ಣೋದ್ಧಾರ ಸಮಿತಿ, ಸತ್ಯ ಸಾಯಿ ಸೇವಾ ಸಮಿತಿ, ಹಳೆ ವಿದ್ಯಾರ್ಥಿ ಸಂಘದ ಸದಸ್ಯರು, ಶಿಕ್ಷಕ ವೃಂದ, ಪೋಷಕರು ಉಪಸ್ಥಿತರಿದ್ದರು.

ಶಾಲಾ ಸಂಚಾಲಕ ಉಳಿ ದಾಮೋದರ ನಾಯಕ್ ಸ್ವಾಗತಿಸಿ, ಪ್ರಸ್ತಾವಿಸಿದರು. ಶ್ರೀ ಸತ್ಯಸಾಯಿ ಸೇವಾ ಸಮಿತಿ ಸಂಚಾಲಕ ಯೋಗೀಶ್ ಕುಮಾರ್ ವಂದಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಪುರುಷೋತ್ತಮ ಸಮ್ಮಾನ ಪತ್ರ ವಾಚಿಸಿದರು. ಶಿಕ್ಷಕ ಚಂದ್ರಹಾಸ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಪಂಚದುರ್ಗಾ ಪ್ರಶಸ್ತಿ ಪ್ರದಾನ

ರತ್ನದೇವ್ ಪುಂಜಾಲಕಟ್ಟೆ (ರಂಗಭೂಮಿ, ಪತ್ರಿಕೆ), ಲಕ್ಷ್ಮಣ ಭಂಡಾರಿ ಪುಣ್ಕೆದಡಿ (ಬೀಡಿ ಉದ್ಯಮ), ಸದಾಶಿವ ಆಚಾರ್ಯ ಕುರುವರಗೋಳಿ (ಕಾಷ್ಠ ಶಿಲ್ಪ), ಡಿ. ಚಂದ್ರ ಯಾನೆ ಕೊರಗಪ್ಪ ಪೂಜಾರಿ (ಕೃಷಿ), ರಾಜೀವಿ (ಅಡುಗೆ ಸಿಬಂದಿ) ಅವರಿಗೆ ಪಂಚದುರ್ಗಾ ಪ್ರಶಸ್ತಿ ಪ್ರದಾನ ಮಾಡಲಾಯಿತು.ಎಸ್ಸೆಸೆಲ್ಸಿ ಸಾಧಕರನ್ನು ಹಾಗೂ ದಾನಿಗಳನ್ನು ಸಮ್ಮಾನಿಸಲಾಯಿತು. ಎಲ್ಲ ವಿದ್ಯಾರ್ಥಿಗಳಿಗೆ ಲೇಖನ ಪುಸ್ತಕ, ಲೇಖನ ಸಾಮಗ್ರಿ, ಕೊಡೆ, ಬ್ಯಾಗ್ ಮತ್ತು ಸಮವಸ್ತ್ರ ವಿತರಿಸಲಾಯಿತು.

» ವಿದ್ಯೆಯಿಂದ ಜ್ಞಾನ, ಗೌರವ ಹಾಗೂ ಉತ್ತಮ ಜೀವನ ಸಾಧ್ಯವಾಗುತ್ತದೆ.

» ಮಕ್ಕಳು ಉತ್ತಮ ಶಿಕ್ಷಣವನ್ನು ಪಡೆದು ಉತ್ತಮ ಪ್ರಜೆಗಳಾಗಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು

ಮಹಾರಾಷ್ಟ್ರದಲ್ಲಿ ಅಡಿಕೆ ಲಾರಿಗಳಿಗೆ ತಡೆ : ಪುತ್ತೂರು ಅಡಿಕೆ ವರ್ತಕರ ಸಂಘದ ಖಂಡನೆ

ಪುತ್ತೂರು: ಕರ್ನಾಟಕದಿಂದ ಅಡಿಕೆ ಸಾಗಿಸುತ್ತಿದ್ದ ಲಾರಿಗಳನ್ನು ರಾಸಾಯನಿಕ ಬೆರೆಸಿರುವ ಆರೋಪದಲ್ಲಿ ಮಹಾರಾಷ್ಟ್ರದಲ್ಲಿ ಅಲ್ಲಿನ ಅಧಿಕಾರಿಗಳು ತಡೆದಿರುವುದರಿಂದ ಅಡಿಕೆ ಮಾರುಕಟ್ಟೆಗೆ ಹೊಡೆತ ಬಿದ್ದಿರುವ ಹಿನ್ನೆಲೆಯಲ್ಲಿ ಪುತ್ತೂರು ಅಡಿಕೆ ವರ್ತಕರ ಸಂಘದವರು ಎಪಿಎಂಸಿ ರೈತ ಭವನದಲ್ಲಿ ಸಭೆ ನಡೆಸಿ, ಮುಂದಿನ 2–3 ದಿನಗಳಲ್ಲಿ ಸಮಸ್ಯೆ ಪರಿಹಾರವಾಗದೇ ಇದ್ದರೆ ಜೂ. 24 ರಿಂದ ಅಡಿಕೆ ವರ್ತಕರು ವ್ಯಾಪಾರ ಬಂದ್ ಮಾಡುವ ತೀರ್ಮಾನ ಕೈಗೊಳ್ಳುವ ಕುರಿತು ಚರ್ಚಿಸಿದರು.



ಪುತ್ತೂರು ಅಡಿಕೆ ವರ್ತಕರ ಸಂಘದ ಅಧ್ಯಕ್ಷ ರವೀಂದ್ರನಾಥ ರೈ ಬಳ್ಳಮಜಲು ಮಾತನಾಡಿ, ಅಡಿಕೆಗೆ ರಾಸಾಯನಿಕ ಬೆರೆಸಿರುವ ಆರೋಪದಲ್ಲಿ ಅಲ್ಲಿನ ಅಧಿಕಾರಿ ವರ್ಗ ಲಾರಿಗಳನ್ನು ತಡೆದು ಅವರ ಸ್ಯಾಂಪಲ್‌ಗಳನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಅದರ ವರದಿಯ ಆಧಾರದಲ್ಲಿ ತೀರ್ಮಾನ ತೆಗೆದುಕೊಳ್ಳಲಿದ್ದಾರೆ. ಅಡಿಕೆ ವರ್ತಕರು ಸರಕಾರಕ್ಕೆ ನ್ಯಾಯಬದ್ಧ ತೆರಿಗೆ ಪಾವತಿಸಿ ವ್ಯಾಪಾರ ಮಾಡುತ್ತಿದ್ದರೂ, ಅಧಿಕಾರಿ ವರ್ಗ ತಾವು ಖಡಕ್ ಎಂದು ತೋರಿಸಿಕೊಳ್ಳಲು ತೊಂದರೆ ನೀಡುತ್ತಿದ್ದಾರೆ. ಅಡಿಕೆ ಲಾರಿಗಳನ್ನು ತಡೆದ ಪರಿಣಾಮ ಧಾರಣೆ ಕುಸಿದು ಕೃಷಿಕರಿಗೂ ತೊಂದರೆಯಾಗುವ ಜತೆಗೆ ರಾಜ್ಯದ ಆರ್ಥಿಕ ಪರಿಸ್ಥಿತಿಗೂ ಹೊಡೆತ ಬೀಳಲಿದೆ. ಹೀಗಾಗಿ ಇಂತಹ ಸಮಸ್ಯೆಯನ್ನು ನಾವು ಒಗ್ಗಟ್ಟಿನಿಂದ ಎದುರಿಸುವುದು ಅಗತ್ಯವಾಗಿದೆ ಎಂದರು.

ಮಾಜಿ ಅಧ್ಯಕ್ಷ ಶಕೂರ್ ಹಾಜಿ ಮಾತನಾಡಿ, ಈ ವಿಚಾರವನ್ನು ಪ್ರತಿಯೊಬ್ಬ ವರ್ತಕನೂ ಗಂಭೀರವಾಗಿ ಪರಿಗಣಿಸಬೇಕಿದ್ದು, ಇದರಿಂದ ಕೃಷಿಕರಿಗೂ ತೊಂದರೆಯಾಗಲಿರುವುದರಿಂದ ಅವರ ಸಹಕಾರವೂ ಬೇಕಾಗುತ್ತದೆ. ನಾವು ಸಂಘಟಿತವಾಗಿದ್ದಾಗ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದರು.

ಲಾರಿಗಳನ್ನು ತಡೆದಿರುವುದರಿಂದ ಅಡಿಕೆ ವರ್ತಕರ ಜತೆಗೆ ಕ್ಯಾಂಪ್ಕೋ ಸಂಸ್ಥೆಗೂ ತೊಂದರೆಯಾಗಲಿದ್ದು, ವರ್ತಕರ ನಿಯೋಗ ಅವರನ್ನೂ ಭೇಟಿಯಾಗಿ ಮಾತುಕತೆ ನಡೆಸುವಂತೆ ಸದಸ್ಯರು ಸಲಹೆ ನೀಡಿದರು. ಜತೆಗೆ ವರ್ತಕರ ಜಿಲ್ಲಾ ಸಂಘದ ಜತೆ ಚರ್ಚಿಸಿಕೊಂಡು ಅವರು ಬಂದ್ ಮಾಡುವುದಾದರೆ ಜತೆಯಾಗಿ ಮಾಡೋಣ, ಇಲ್ಲದೇ ಇದ್ದರೆ ಜೂ. 22, 23ರಂದು ಕಾದು 24ರಂದು ಬಂದ್ ಮಾಡುವ ಕುರಿತು ತೀರ್ಮಾನ ಕೈಗೊಳ್ಳೋಣ. ಶಾಸಕರು, ಸಂಸದರನ್ನು ಕೂಡ ಭೇಟಿ ಮಾಡಿ ಸಮಸ್ಯೆ ಹೇಳಿ ಪರಿಹಾರಕ್ಕೆ ಒತ್ತಾಯಿಸೋಣ ಎಂದು ವರ್ತಕ ಸದಸ್ಯರು ಸಲಹೆ ನೀಡಿದರು.

ಸಂಘದ ಗಂಗಾಧರ ಗೌಡ ಅವರು ವೇದಿಕೆಯಲ್ಲಿದ್ದರು. ಪ್ರಧಾನ ಕಾರ್ಯದರ್ಶಿ ಕೆ.ಎ.ಸಿದ್ದೀಕ್ ಕಾರ್ಯಕ್ರಮ ನಿರ್ವಹಿಸಿದರು.

ಯುವವಾಹಿನಿ ಸಂಸ್ಥೆಯ ಶಿಸ್ತು, ಸಂಘಟನಾ ಸಾಮರ್ಥ್ಯ ಅನುಕರಣೀಯ : ಭುವನೇಶ್

ಬಂಟ್ವಾಳ : ಯುವವಾಹಿನಿ ಸಂಸ್ಥೆಯ ಶಿಸ್ತು, ಸಂಘಟನಾ ಸಾಮರ್ಥ್ಯ ಹಾಗೂ ಸಮಾಜಮುಖಿ ಕಾರ್ಯಚಟುವಟಿಕೆಗಳು ಅನುಕರಣೀಯವಾಗಿವೆ ಎಂದು ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ ಹೇಳಿದರು.



ಬಿ.ಸಿ.ರೋಡ್‌ನ ಬ್ರಹ್ಮಶ್ರೀ ನಾರಾಯಣಗುರು ಸಭಾಭವನದಲ್ಲಿ ಭಾನುವಾರ ನಡೆದ ಯುವವಾಹಿನಿ ಬಂಟ್ವಾಳ ಘಟಕದ 2026–27ನೇ ಸಾಲಿನ ನೂತನ ಕಾರ್ಯಕಾರಿ ಸಮಿತಿಯ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಯುವವಾಹಿನಿ ಬಂಟ್ವಾಳ ಘಟಕವು ಇತರ ಘಟಕಗಳಿಗೆ ಮಾದರಿಯಾಗಿದೆ ಎಂದು ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಎನ್. ಅಶೋಕ್ ಕುಮಾರ್ ಪಡ್ಪು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಅವರು 2026–27ನೇ ಸಾಲಿನ ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ದ.ಕ ಸಂಸದರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಆಗಮಿಸಿ ನೂತನ ತಂಡಕ್ಕೆ ಶುಭ ಹಾರೈಸಿದರು. ಸಮಿತಿಯ ಸಂಚಾಲಕ ದಿನೇಶ್ ಸುವರ್ಣ ರಾಯಿ ನೂತನ ಕಾರ್ಯಕಾರಿ ಸಮಿತಿಯನ್ನು ಸಭೆಗೆ ಪರಿಚಯಿಸಿದರು.

ಡಾ. ಉಜ್ವಲ್ ಯು. ಸುವರ್ಣ ಹಾಗೂ ಬಿ.ಸಿ.ರೋಡ್ ಶ್ರೀ ರಕ್ತೇಶ್ವರಿ ದೇವಸ್ಥಾನದ ಮಾಜಿ ಅಧ್ಯಕ್ಷ ವಿಶ್ವನಾಥ ಬಿ. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಯುವವಾಹಿನಿ ಕೇಂದ್ರ ಸಮಿತಿಯ ಸಂಘಟನಾ ಕಾರ್ಯದರ್ಶಿ ನಾಗೇಶ್ ಪೂಜಾರಿ ಕೊಂಕಣಪದವು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಯುವವಾಹಿನಿ ಬಂಟ್ವಾಳ ಘಟಕದ ಕಚೇರಿಗೆ ಸ್ಥಳಾವಕಾಶ ಒದಗಿಸಿ ಸಹಕರಿಸಿದ ಯುವವಾಹಿನಿ ಕೇಂದ್ರ ಸಮಿತಿಯ ಮಾಜಿ ಅಧ್ಯಕ್ಷ ರಾಜೇಶ್ ಬಿ. ಅವರನ್ನು ಅಭಿನಂದಿಸಲಾಯಿತು. ಹಾಗೆಯೇ ಘಟಕದ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು, ಕಾರ್ಯದರ್ಶಿ ಮಧುಸೂದನ್ ಮದ್ದ ಹಾಗೂ ಕೋಶಾಧಿಕಾರಿ ನವೀನ್ ಪೂಜಾರಿ ಅವರನ್ನು ಗೌರವಿಸಲಾಯಿತು.

ಕಾರ್ಯದರ್ಶಿ ಮಧುಸೂದನ್ ಮದ್ದ ವಾರ್ಷಿಕ ವರದಿ ವಾಚಿಸಿದರು. ನಾಗೇಶ್ ಪೂಜಾರಿ ನೈಬೇಲು ಪ್ರಸ್ತಾವಿಸಿ, ಸ್ವಾಗತಿಸಿದರು. ನೂತನ ಕಾರ್ಯದರ್ಶಿ ಗೀತಾ ಜಗದೀಶ್ ವಂದಿಸಿದರು. ಮಲ್ಲಿಕಾ ಜ್ಯೋತಿಗುಡ್ಡೆ ಕಾರ್ಯಕ್ರಮ ನಿರೂಪಿಸಿದರು.

ವಿವಿಧ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ನೂತನ ಕಾರ್ಯಕಾರಿ ಸಮಿತಿಗೆ ಶುಭ ಹಾರೈಸಿದರು.

ರವಿ ನಾಯ್ಕಾಪುಗೆ ನಿರೂಪಣಾ ಕೌಸ್ತುಭ ಪ್ರಶಸ್ತಿ: ಜೂ. 28ರಂದು ಮುಂಬಯಿಯಲ್ಲಿ ಪ್ರದಾನ

ಕಾಸರಗೋಡು: ನಿರೂಪಕ, ಸಂಘಟಕ, ಲೇಖಕ ರವಿ ನಾಯ್ಕಾಪು ಅವರನ್ನು ನಿರೂಪಣಾ ಕೌಸ್ತುಭ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ನಿರೂಪಣಾ ಕ್ಷೇತ್ರದ ಅವರ ಬಹುಮುಖ ಸಾಧನೆ, ಸಾಮರ್ಥ್ಯವನ್ನು ಪರಿಗಣಿಸಿ ಮುಂಬಯಿಯ ಅಂಧೇರಿ ಕರ್ನಾಟಕ ಸಂಘವು ಈ ಪ್ರಶಸ್ತಿ ಘೋಷಿಸಿದೆ.



ಜೂ.28ರಂದು ಅಂಧೇರಿ ಕರ್ನಾಟಕ ಸಂಘದ ಆಶ್ರಯದಲ್ಲಿ ಮುಂಬಯಿಯ ಕುರ್ಲಾ ಬಂಟರ ಭವನದಲ್ಲಿ ಜರಗಲಿರುವ ಹೊರನಾಡ ಕನ್ನಡ ಸಂಸ್ಕೃತಿ ಸಂಭ್ರಮ 2026 ಕಾರ್ಯಕ್ರಮದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಸಂಸ್ಥಾಪಕ ಕೃಷ್ಣ ಬಿ.ಶೆಟ್ಟಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪತ್ರಕರ್ತ, ಲೇಖಕ, ಸಂಘಟಕ, ಕನ್ನಡ ಕಾರ್ಯಕ್ರಮಗಳ ನಿರೂಪಕರಾಗಿರುವ ರವಿ ನಾಯ್ಕಾಪು ಅವರು ದಾನಗಂಗೆ, ಸ್ನೇಹಗಂಗೆ, ಗಾನಗಂಗೆ, ಸಾವಿರದ ಸಾಧಕ, ಸಮಾಜ ಸಂಪದ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಈ ಪೈಕಿ ಸ್ನೇಹಗಂಗೆ ಕೃತಿಯು ಈಗಾಗಲೇ ಎರಡು ಮುದ್ರಣಗಳನ್ನು ಕಂಡಿದ್ದು, ಕೃತಿಯ ಸಂಕ್ಷಿಪ್ತ ರೂಪವು ಮಂಗಳೂರು ವಿಶ್ವವಿದ್ಯಾನಿಲಯದ ಬಿಸಿಎ ನಾಲ್ಕನೇ ಸೆಮಿಸ್ಟರ್ ಕನ್ನಡ ಪಠ್ಯ ಪುಸ್ತಕದಲ್ಲಿ ಒಳಪಟ್ಟಿರುವುದು ಗಮನಾರ್ಹವಾಗಿದೆ.

ಕಥೆ, ಕವನಗಳು, ಸಾಮಾಜಿಕ ಸ್ಪಂದನದ ಮಾನವೀಯ ಕಳಕಳಿಯ ನೂರಾರು ಬರಹಗಳು, ಪರಿಸರ ಸಂಬಂಧ ಲೇಖನಗಳು ಕನ್ನಡದ ವಿವಿಧ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ಅನೇಕ ಸ್ಮರಣ ಸಂಚಿಕೆಗಳ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಕಳೆದ ಎರಡೂವರೆ ದಶಕಗಳಿಂದ ಪೂರ್ಣಕಾಲಿಕ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕರ್ನಾಟಕ ಜಾನಪದ ಪರಿಷತ್‌ನ ಕೇರಳ ಗಡಿನಾಡ ಘಟಕದ ಪ್ರಧಾನ ಕಾರ್ಯದರ್ಶಿ, ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಹಿತ ಅನೇಕ ಸಾಮಾಜಿಕ, ಸಾಹಿತ್ಯಕ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದಾರೆ.

ಟಿಕೆಟ್ ಇಲ್ಲದೆ ರೈಲಿನಲ್ಲಿ ಪ್ರಯಾಣಿಸಿದರೆ 500 ರೂ. ದಂಡ

ಕಾಸರಗೋಡು: ರೈಲುಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸುವವರಿಗೆ ಹೇರಲಾಗುವ ಕನಿಷ್ಠ ದಂಡವನ್ನು 250 ರೂ.ನಿಂದ 500 ರೂ.ಗೆ ಹೆಚ್ಚಿಸಲಾಗಿದೆ ಎಂದು ಕಾಸರಗೋಡು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ರೈಲು ಪ್ರಯಾಣ ವೇಳೆ ಟಿಕೆಟ್ ಇಲ್ಲದಿದ್ದರೆ ಲಾಸ್ಟ್ ಟಿಕೆಟ್ ಚೆಕ್ಕಿಂಗ್ ಪಾಯಿಂಟ್‌ನ ನಂತರದ ಮೊತ್ತ ಹಾಗೂ ಅದರೊಂದಿಗೆ 500 ರೂ. ದಂಡ ಪಾವತಿಸಬೇಕಾಗಿ ಬರಲಿದೆ. ದಂಡ ಪಾವತಿಸದಿದ್ದಲ್ಲಿ 6 ತಿಂಗಳ ವರೆಗೆ ಜೈಲು ಶಿಕ್ಷೆ ಅಥವಾ ದಂಡ ಸಹಿತ ಸಜೆ ಅನುಭವಿಸಬೇಕಾಗಿ ಬರಲಿದೆ. ಜುಲೈ 1ರಿಂದ ಈ ಕಾನೂನು ಜಾರಿಗೆ ಬರಲಿದೆ. ಜನ್ ವಿಶ್ವಾಸ್ ಆ್ಯಕ್ಟ್ ಪ್ರಕಾರ ಈ ಕ್ರಮಕ್ಕೆ ರೈಲ್ವೆ ಇಲಾಖೆಯು ಮುಂದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾದಚಾರಿಗೆ ವಾಹನ ಡಿಕ್ಕಿ

ಕುಂದಾಪುರ: ಕುಂದಾಪುರ ತಾಲೂಕಿನ ವಡೇರಹೋಬಳಿ ಗ್ರಾಮದ ನೆಹರೂ ಮೈದಾನ ಎದುರು ರಾ.ಹೆ. 66 ರಲ್ಲಿ ರಸ್ತೆ ದಾಟುತ್ತಿದ್ದ ಬಸವರಾಜ ದೊಡ್ಡಪ್ಪ ಗುಂಡಗಟ್ಟಿ ಎಂಬವರಿಗೆ ಕೋಟೇಶ್ವರ ಕಡೆಯಿಂದ ಕುಂದಾಪುರ ಕಡೆಗೆ ಹೋಗುತ್ತಿದ್ದ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಬಸವರಾಜ ದೊಡ್ಡಪ್ಪ ಗುಂಡಗಟ್ಟಿ ಗಂಭೀರವಾಗಿ ಗಾಯಗೊಂಡು ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಅತ್ತಾವರ ಕೆ.ಎಂ.ಸಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರುಡ್ ಸೆಟ್ ತರಬೇತಿ ಸಮಾರೋಪ

ಬೆಳ್ತಂಗಡಿ : ಗ್ರಾಮೀಣ ಸಮುದಾಯಗಳಿಗೆ ಆರ್ಥಿಕ ಸಾಕ್ಷರತೆ ಹಾಗೂ ಬ್ಯಾಂಕಿಂಗ್ ಸೇವೆಗಳನ್ನು ಪರಿಣಾಮಕಾರಿಯಾಗಿ ತಲುಪಿಸಲು ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ಎನ್‌ಆರ್‌ಎಲ್‌ಎಂ ವಿಭಾಗದ ಜಿಲ್ಲಾ ಯೋಜನಾ ವ್ಯವಸ್ಥಾಪಕ ಹರಿಪ್ರಸಾದ್ ಅವರು ಹೇಳಿದರು.



ಅವರು ರುಡ್‌ಸೆಟ್ ಸಂಸ್ಥೆ, ಸಿದ್ಧವನ, ಉಜಿರೆಯಲ್ಲಿ ಆಯೋಜಿಸಲಾದ ಹಣಕಾಸು ಸಾಕ್ಷರತಾ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ತರಬೇತಿ ಪೂರ್ಣಗೊಳಿಸಿದ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ಹಾಗೂ ತರಬೇತಿ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ಸುನೀಲ್ ನಾಯಕ್ ಅವರು ಅತಿಥಿಗಳನ್ನು ಸ್ವಾಗತಿಸಿ, ತರಬೇತಿ ಕಾರ್ಯಕ್ರಮದ ಉದ್ದೇಶ ಹಾಗೂ ಮಹತ್ವದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ಎನ್‌ಆರ್‌ಎಲ್‌ಎಂ ವಿಭಾಗದ ಜಿಲ್ಲಾ ವ್ಯವಸ್ಥಾಪಕಿ ಶಕುಂತಲಾ ತರಬೇತಿದಾರರೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಕೆಲವು ಶಿಬಿರಾರ್ಥಿಗಳು ತಮ್ಮ ಕಲಿಕೆಯ ಅನುಭವಗಳನ್ನು ಹಂಚಿಕೊಂಡು, ಗುಣಮಟ್ಟದ ತರಬೇತಿ ಮತ್ತು ಮಾರ್ಗದರ್ಶನ ನೀಡಿದ ರುಡ್‌ಸೆಟ್ ಸಂಸ್ಥೆ ಹಾಗೂ ಎನ್‌ಆರ್‌ಎಲ್‌ಎಂ ಇಲಾಖೆಗೆ ಕೃತಜ್ಞತೆ ಸಲ್ಲಿಸಿದರು.

ಸಂಸ್ಥೆಯ ಹಿರಿಯ ಉಪನ್ಯಾಸಕ ಕರುಣಾಕರ್ ಕೆ. ಜೈನ್ ಅವರು ಕಾರ್ಯಕ್ರಮ ನಿರ್ವಹಿಸಿದರು. ಸುಳ್ಯ ತಾಲೂಕು ಪಂಚಾಯತ್‌ನ ಎನ್‌ಆರ್‌ಎಲ್‌ಎಂ ತಾಲೂಕು ಯೋಜನಾ ವ್ಯವಸ್ಥಾಪಕಿ ಶ್ವೇತಾ ವಂದಿಸಿದರು.

ಎಸ್.ಡಿ.ಎಂ. ಕಾನೂನು ಕಾಲೇಜು ಉದ್ಯೋಗ ಮೇಳ
ಔದ್ಯೋಗಿಕ ಅವಕಾಶಗಳನ್ನು ಬಳಸಿಕೊಳ್ಳಿ

ಮಂಗಳೂರು: ಕಾರ್ಪೊರೇಟ್ ಜಗತ್ತಿನಲ್ಲಿ ಲಭ್ಯವಿರುವ ಎಲ್ಲಾ ರೀತಿಯ ಉದ್ಯೋಗ ಅವಕಾಶಗಳನ್ನು ಕಾನೂನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಬೆಂಗಳೂರಿನ ಎ.ಟಿ.ವಿ. ಲೀಗಲ್ ಸಂಸ್ಥೆಯ ಆಡಳಿತ ಪಾಲುದಾರ ತಿಮ್ಮಣ್ಣ ಪಿ. ಪಿ. ಹೇಳಿದರು.



ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನಲ್ಲಿ ಎರಡು ದಿನಗಳ ಕಾಲ ನಡೆದ ಬೃಹತ್ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಡಾ.ತಾರಾನಾಥ ಅಧ್ಯಕ್ಷತೆ ವಹಿಸಿದ್ದರು. ಎಸ್. ಡಿ. ಎಂ. ಸಮೂಹ ಸಂಸ್ಥೆಗಳ ನೇಮಕಾತಿ ಅಧಿಕಾರಿ ಡಾ.ಸಂತೋಷ್ ಸಿ.ಎಸ್. ಅತಿಥಿಗಳಾಗಿದ್ದರು. ಕಾರ್ಯಕ್ರಮ ಸಂಯೋಜಕಿ ಡಾ.ಶಾರಿಕಾ ರೈ, ವಿದ್ಯಾರ್ಥಿ ಸಂಯೋಜಕಿ ಜ್ಯೋತಿಕಾ ಪ್ರವೀಣ್ ಉಪಸ್ಥಿತರಿದ್ದರು. ನೇಮಕಾತಿ ಮತ್ತು ತರಬೇತಿ ವಿಭಾಗದ ಸಂಚಾಲಕಿ ಭೂಮಿಕಾ ಸ್ವಾಗತಿಸಿ, ಇನ್ನೋರ್ವ ಸಂಚಾಲಕಿ ವೈಷ್ಣವಿ ವಂದಿಸಿದರು. ಮಾಳವಿಕಾ ನಿರೂಪಿಸಿದರು.

ಎರಡು ದಿನಗಳ ಕಾಲ ನಡೆದ ಈ ಮೇಳದಲ್ಲಿ ರಾಜ್ಯದ ಪ್ರತಿಷ್ಠಿತ 20 ಕಂಪೆನಿಗಳು ಪಾಲ್ಗೊಂಡಿದ್ದವು. ರಾಜ್ಯದ ವಿವಿಧ ಕಾನೂನು ಕಾಲೇಜುಗಳಿಂದ ಸುಮಾರು 150ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಸಂದರ್ಶನದಲ್ಲಿ ಪಾಲ್ಗೊಂಡಿದ್ದರು.

ಬದುಕಿನಲ್ಲಿ ಶಿಸ್ತು ಅತೀ ಮುಖ್ಯ: ಬ್ರಾಯನ್ ಪಿರೇರಾ

ಮಂಗಳೂರು: ಸಂತ ಅಲೋಶಿಯಸ್ ಗೊನ್ಸಾಗ ಅವರ ತತ್ವಗಳಾದ ನಿಸ್ವಾರ್ಥ ಸೇವೆ, ಪರಿಶುದ್ಧತೆ ಮತ್ತು ದೇವರ ಮೇಲಿನ ಭಕ್ತಿಯನ್ನು ಅನುಸರಿಸುತ್ತಾ, ವಿದ್ಯಾರ್ಥಿಗಳು ಕನಸು, ಸಮರ್ಪಣೆ ಹಾಗೂ ಶಿಸ್ತು- ಈ ಮೂರು ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದುಸಂತ ಅಲೋಶಿಯಸ್ ಸಂಸ್ಥೆಯ ರೆಕ್ಟರ್ ಫಾ. ಬ್ರಾಯನ್ ಪಿರೇರಾ ಹೇಳಿದರು.



ಅವರು ಶನಿವಾರ ಮಂಗಳೂರಿನ ಸಂತ ಅಲೋಶಿಯಸ್ ಗೊನ್ಸಾಗ ಶಾಲೆಯ ಸಭಾಂಗಣದಲ್ಲಿ ಜರಗಿದ ಸಂತ ಅಲೋಶಿಯಸ್ ಗೊನ್ಸಾಗರವರ ಸಂಸ್ಮರಣಾ ಹಬ್ಬಕ್ಕೆ ಸರ್ವಧರ್ಮ ಪ್ರಾರ್ಥನೆಯ ಮೂಲಕ ಚಾಲನೆ ನೀಡಿ ಮಾತನಾಡಿದರು .

ಶಾಲೆಯ ಪ್ರಿನ್ಸಿಪಾಲ್ ಫಾ.ರೋಹನ್ ಡಿಅಲ್ಮೇಡಾ ಅವರು, ಸಂತ ಅಲೋಶಿಯಸ್ ಗೊನ್ಸಾಗ ಅವರ ನಿಸ್ವಾರ್ಥ ಸೇವೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಾ, ಸಂತ ಅಲೋಶಿಯಸ್ ಗೊನ್ಸಾಗ ಅವರಂತೆ ಪ್ರತಿಯೊಬ್ಬರೂ ಮಾನವಕುಲಕ್ಕೆ ಸೇವೆಸಲ್ಲಿಸುವುದನ್ನೇ ತಮ್ಮ ಜೀವನದ ಗುರಿಯನ್ನಾಗಿಸಬೇಕು ಎಂದರು.

ಸಂತ ಅಲೋಶಿಯಸ್ ಸಂಸ್ಥೆಯ ನೂತನ ರೆಕ್ಟರ್ ಆಗಿ ಆಯ್ಕೆಯಾದ ಫಾ. ಬ್ರಾಯನ್ ಪಿರೇರಾ ಅವರನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ ಅವರನ್ನು ಗೌರವಿಸಲಾಯಿತು. ಸಾಧಕ ವಿದ್ಯಾರ್ಥಿ ಶೌರ್ಯ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ವೈಸ್ ಪ್ರಿನ್ಸಿಪಾಲ್ ಲಾರೆಲ್ ಡಿಸೋಜಾ ಹಾಗೂ ಸುರೇಶ್‌ಅರ್ಪಣಾಸುರೇಶ್, ಶಾಲಾ ಶೈಕ್ಷಣಿಕ ಸಂಯೋಜಕರಾದ ದೀಪ ಕರ್ಕಡಾ,ದೀಪ್ತಿ ಕರ್ಕಡಾ ಹಾಗೂ ಕ್ಯಾರೆಲ್ ರಾಡ್ರಿಗಸ್ ಹಾಗೂ ರಕ್ಷಕ-ಶಿಕ್ಷಕ ಕಾರ್ಯಕಾರಿ ಸಮಿತಿ ಉಪಾಧ್ಯಕ್ಷರಾದ ರೀನಾ ನೊರೋನ್ಹಾ, ಕಾರ್ಯದರ್ಶಿ ಕ್ವೀನಿ ಫರ್ನಾಂಡೀಸ್ ಉಪಸ್ಥಿತರಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-60) ಡ್ರಾ ಜೂನ್ 21ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MN 784074 (IRINJALAKKUDA)
Consolation Prize Rs.5,000/-
MO 784074 MP 784074 MR 784074 MS 784074
MT 784074 MU 784074 MV 784074 MW 784074
MX 784074 MY 784074 MZ 784074
2nd Prize Rs.25,00,000/- [25 Lakhs]
MR 120629 (PAYYANNUR)
3rd Prize Rs. 5,00,000/- [5 Lakhs]
MU 282023 (IRINJALAKKUDA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0176 0300 0462 0676 0870 1366 1544 1676 2673 3114
3707 4728 5443 5904 6359 6594 9425 9706 9720
5th Prize Rs.2,000/-
2870 6626 6867 8183 8529 8698
6th Prize Rs.1,000/-
0103 1090 1320 1531 1542 1552 1784 1885 2747 2925
3046 3240 3541 4603 6778 6819 7654 7939 8772 8955
8964 9033 9037 9040 9570
7th Prize Rs.500/-
0061 0184 0213 0478 0546 0693 0847 0988 0991 1055
1094 1190 1221 1267 1495 1566 1687 1718 1929 1961
2166 2229 2572 2620 2678 2952 3241 3277 3490 3502
3653 3884 4130 4136 4226 4317 5032 5152 5385 5513
5545 5851 5862 5987 6023 6113 6233 6657 6659 6680
6743 6985 7257 7383 7642 7671 7900 8181 8467 8561
8573 8591 8646 8811 8909 8924 9019 9054 9136 9303
9381 9384 9495 9508 9566 9995
8th Prize Rs.200/-
0052 0072 0113 0211 0433 0606 0608 0668 0801 1091
1296 1481 1643 1708 1944 2034 2077 2214 2282 2472
2510 2649 2677 2750 3080 3103 3192 3300 3446 3652
3883 3888 4100 4224 4384 4398 4637 4646 4711 4818
4868 4950 5100 5579 5673 5756 5788 5864 5989 6014
6210 6255 6301 6303 6325 6383 6426 6507 6535 6591
6666 6770 7008 7066 7274 7278 7292 7399 7499 7602
7636 7664 7779 7783 7803 8037 8214 8252 8460 8517
8664 8881 8886 8985 8999 9091 9106 9174 9466 9582
9640 9886
9th Prize Rs.100/-
0084 0395 0553 0575 0719 0799 0913 1034 1139 1162
1236 1313 1331 1334 1489 1556 1600 1652 1697 1871
1903 1936 2068 2091 2311 2313 2461 2493 2540 2569
2593 2598 2602 2615 2740 2763 2802 2835 2914 3347
3397 3496 3523 3532 3576 3585 3594 3698 3732 3750
3773 3946 4084 4112 4140 4182 4201 4249 4356 4417
4498 4515 4593 4634 4664 4721 4723 4754 4882 4890
4894 4962 5245 5263 5276 5278 5402 5484 5491 5705
5724 5852 5891 6060 6094 6180 6382 6471 6494 6525
6527 6631 6660 6704 6855 6926 6931 7056 7089 7105
7181 7216 7290 7306 7458 7474 7479 7496 7549 7609
7634 7791 7861 7895 7971 7982 8010 8022 8053 8215
8220 8316 8400 8468 8518 8631 8665 8703 8717 8921
8926 8984 9063 9099 9188 9201 9235 9316 9330 9383
9480 9580 9584 9687 9764 9788 9811 9828 9914 9919

ಕೇಂದ್ರ ಜಲ ಜೀವನ್ ಮಿಷನ್ ಯೋಜನೆ: ಕೊಡಗಿನಲ್ಲಿ ರೂ. 245.85 ಕೋಟಿ ವೆಚ್ಚ

ಮಡಿಕೇರಿ: ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಜಲ ಜೀವನ್ ಮಿಷನ್ ಯೋಜನೆಯನ್ನು ಕೊಡಗು ಜಿಲ್ಲೆಯಲ್ಲಿ ಸುಮಾರು ರೂ. 353.74 ಕೋಟಿ ವೆಚ್ಚದಲ್ಲಿ ಮೂರು ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, 457 ಕಾಮಗಾರಿಗಳ ಪೈಕಿ 370 ಕಾಮಗಾರಿಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ.


(ಸಾಂದರ್ಭಿಕ ಚಿತ್ರ)

ಪ್ರಸ್ತುತ 85 ಕಾಮಗಾರಿಗಳು ಪ್ರಗತಿಯಲ್ಲಿದ್ದು, 2 ಕಾಮಗಾರಿಯನ್ನು ಕೈಬಿಡಲಾಗಿದೆ. ಪೂರ್ಣಗೊಂಡ ಯೋಜನೆಗಳಲ್ಲಿ 236 ಕಾಮಗಾರಿಯನ್ನು ಈಗಾಗಲೇ ಸಾರ್ವಜನಿಕ ಬಳಕೆಗೆ ಹಸ್ತಾಂತರಿಸಲಾಗಿದೆ. ಸೋಮವಾರಪೇಟೆಯ ಒಟ್ಟು 245 ಕಾಮಗಾರಿಗಳಲ್ಲಿ 229 ಪೂರ್ಣ (ಅತಿ ಹೆಚ್ಚು ಪ್ರಗತಿ)ವಾಗಿದ್ದು, ವೀರಾಜಪೇಟೆ ತಾಲೂಕಿನಲ್ಲಿ 122 ಕಾಮಗಾರಿಗಳಲ್ಲಿ 81, ಮಡಿಕೇರಿ ತಾಲೂಕಿನ 90 ಕಾಮಗಾರಿಗಳಲ್ಲಿ 60 ಕಾಮಗಾರಿ ಪೂರ್ಣಗೊಂಡಿವೆ. ಜಿಲ್ಲೆಯಲ್ಲಿ ಈ ಯೋಜನೆಯಡಿ ಇದುವರೆಗೆ ಒಟ್ಟು ರೂ.245.85 ಕೋಟಿ ಹಣವನ್ನು ಖರ್ಚು ಮಾಡಲಾಗಿದೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಆರ್.ಭಾಸ್ಕರ್ ಅವರು ತಿಳಿಸಿದ್ದಾರೆ.

ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಡಿಕೇರಿ, ವೀರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕುಗಳ ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರು ಒದಗಿಸಲು 2025–26ನೇ ಸಾಲಿನಲ್ಲಿ 8 ಪ್ರಮುಖ ತುರ್ತು ಕಾಮಗಾರಿ ಗುರುತಿಸಲಾಗಿದೆ. ಅಲ್ಲದೆ ಹೊಸ ಕೊಳವೆ ಬಾವಿಗಳನ್ನು ಕೊರೆಯುವುದು, ಪಂಪ್ ಹಾಗೂ ಮೋಟಾರ್ ಅಳವಡಿಸುವುದು ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಸಂಪರ್ಕ ಕಲ್ಪಿಸಲಾಗಿದೆ.

ಪ್ರಸಕ್ತ (2026–27ನೇ) ಹಣಕಾಸು ವರ್ಷದಲ್ಲಿ ಜೂನ್ 18ರವರೆಗೆ ಜಿಲ್ಲೆಯ 288 ಹಳ್ಳಿಗಳಿಂದ 1,022 ನೀರಿನ ಮಾದರಿ ಸಂಗ್ರಹಿಸಿ ತಪಾಸಣೆ ನಡೆಸಲಾಗಿದೆ.

ಕಲುಷಿತ ಮುಕ್ತ ನೀರನ್ನು ಖಚಿತಪಡಿಸಲು ಪ್ರಯೋಗಾಲಯ ಸ್ಥಾಪನೆ

ಜಿಲ್ಲೆಯಲ್ಲಿ ಕಲುಷಿತ ಮುಕ್ತ ನೀರನ್ನು ಖಚಿತಪಡಿಸಲು ಕೊಡಗು ವಿಭಾಗ ಮತ್ತು ಪೊನ್ನಂಪೇಟೆ ಉಪ ವಿಭಾಗದಲ್ಲಿ ಒಟ್ಟು ಎರಡು ಪ್ರಯೋಗಾಲಯಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ.

ಕೊಡಗು ವಿಭಾಗದಲ್ಲಿ ಪರೀಕ್ಷಿಸಲಾದ ಮಾದರಿಗಳಲ್ಲಿ 2 ನೀರಿನ ಮಾದರಿಗಳು ಕಲುಷಿತಗೊಂಡಿರುವುದು ಪತ್ತೆಯಾಗಿದ್ದು, ಅಧಿಕಾರಿಗಳು ತಕ್ಷಣವೇ ಸೂಕ್ತ ಪರಿಹಾರ ಕ್ರಮ ಕೈಗೊಂಡಿರುವುದಾಗಿ ಅವರು ಮಾಹಿತಿ ನೀಡಿದ್ದಾರೆ.

ವರ್ಷದ ಒಟ್ಟು ಗುರಿ 6 ಸಾವಿರ ಮಾದರಿಗಳಾಗಿದ್ದು, ಪ್ರಸ್ತುತ ಶೇ.17.03 ರಷ್ಟು ಪ್ರಗತಿ ಸಾಧಿಸಲಾಗಿದೆ. ಗ್ರಾಮೀಣ ಮಟ್ಟದ ಕ್ಷೇತ್ರ ಪರೀಕ್ಷಾ ಕಿಟ್‌ಗಳ ಮೂಲಕ 2,487 ನೀರಿನ ಮಾದರಿ ಪರೀಕ್ಷಿಸಿ, ಶೇ.53.34 ರಷ್ಟು ಗುರಿ ತಲುಪಲಾಗಿದೆ. ಏಪ್ರಿಲ್ 1ರಿಂದ ಜೂನ್ 18ರವರೆಗಿನ ಮೂರು ತಿಂಗಳ ಅವಧಿಗೆ 1,500 ಮಾದರಿಗಳ ಗುರಿ ಹೊಂದಲಾಗಿತ್ತು, ಆದರಲ್ಲಿ 1,022 ಮಾದರಿ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ ಎಂದರು.

ಜೂನ್ 1 ರಿಂದ ಜೂನ್ 18 ರವರೆಗಿನ ಅವಧಿಯಲ್ಲಿ ಒಟ್ಟು ಪರೀಕ್ಷಿಸಲಾದ 113 ಮಾದರಿಗಳಲ್ಲಿ, 69 ಮಾದರಿಗಳನ್ನು ಜಿಲ್ಲಾ ಲ್ಯಾಬ್‌ನಲ್ಲಿ ಮತ್ತು 44 ಮಾದರಿಗಳನ್ನು ತಾಲೂಕು ಲ್ಯಾಬ್‌ನಲ್ಲಿ ಪರೀಕ್ಷಿಸಲಾಗಿದೆ. ಮಡಿಕೇರಿಯಲ್ಲಿ ಅತ್ಯಂತ ಹೆಚ್ಚು (43), ವೀರಾಜಪೇಟೆಯಲ್ಲಿ 28 ಮತ್ತು ಕುಶಾಲನಗರದಲ್ಲಿ 17 ಮಾದರಿಗಳನ್ನು ಸಂಗ್ರಹಿಸಲಾಗಿದೆ.

ಒಟ್ಟಾರೆಯಾಗಿ, ಕೊಡಗು ಜಿಲ್ಲೆಯು ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಹಾಗೂ ನೀರಿನ ಸುರಕ್ಷತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪ್ರಗತಿಯ ಹೆಜ್ಜೆ ಇಡುತ್ತಿದೆ ಎಂದು ತಿಳಿಸಿದರು.


ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದ ಮುಂಭಾಗದಲ್ಲಿ ಯೋಗ ದಿನದ ಕಾರ್ಯಕ್ರಮದಲ್ಲಿ ನೂರಾರು ಕಾರ್ಯಕರ್ತರಿಂದ ಯೋಗಾಸನ.


ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕಂಠೀರವ ಸ್ಟೇಡಿಯಂನಲ್ಲಿ ಸಾವಿರಾರು ಯೋಗಪಟುಗಳು ಯೋಗಾಸನ ಮಾಡಿ ಗಮನ ಸೆಳೆದರು.


ಮಲ್ಲೇಶ್ವರದ ಜಿಬಿಎ ಆಟದ ಮೈದಾನದಲ್ಲಿ ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ ಕಾರ್ಯಕರ್ತರಿಂದ ಯೋಗಾಸನ.


ವಿಧಾನಸೌಧದ ಭವ್ಯ ಮೆಟ್ಟಿಲಿನ ಮುಂಭಾಗದಲ್ಲಿ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನಿಂದ ಯೋಗಾಸನ.

ಚಿತ್ರಗಳು: ಮೋಹನ್ ಕುಮಾರ್ ಬಿ.ಎನ್.

ವಿವಿಧ ಸಂಘ ಸಂಸ್ಥೆ, ಯೋಗ ತರಬೇತಿ ಕೇಂದ್ರ, ಆಯುಷ್ ಇಲಾಖೆಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಯೋಗಾಭ್ಯಾಸದಲ್ಲಿ ಮುಳುಗೆದ್ದ ನಗರವಾಸಿಗಳು

ಬೆಂಗಳೂರು: ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಗರವಾಸಿಗಳು ನಸುಕಿನಲ್ಲಿಯೇ ಸಾಮೂಹಿಕವಾಗಿ ಯೋಗಾಭ್ಯಾಸ ಮಾಡಿ ಸಂಭ್ರಮಿಸಿದರು. ಆ ಮೂಲಕ ಸಿಲಿಕಾನ್ ಸಿಟಿ ಬೆಳಗ್ಗೆ ಸಂಪೂರ್ಣವಾಗಿ ಯೋಗಮಯವಾಗಿತ್ತು.

ವಿವಿಧ ಸಂಘ ಸಂಸ್ಥೆ, ಯೋಗ ತರಬೇತಿ ಕೇಂದ್ರ, ಸರ್ಕಾರದಿಂದ ವಿವಿಧ ಉದ್ಯಾನವನ, ಆಟದ ಮೈದಾನ ಸೇರಿದಂತೆ ನಾನಾ ಕಡೆಗಳಲ್ಲಿ ಹಮ್ಮಿಕೊಳ್ಳಲಾದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ ಸಾವಿರಾರು ನಗರವಾಸಿಗಳು ವಿವಿಧ ಆಸನಗಳನ್ನು ಮಾಡುವ ಮೂಲಕ ಎಲ್ಲರ ಗಮನ ಸೆಳೆದರು.



ಡ್ರ್ಯಾಗನ್ ಬೋಟ್ ಮೇಲೆ ಯೋಗ ಪ್ರದರ್ಶನ

ಫಿಟ್‌ನೆಸ್ ಮತ್ತು ಜಲಕ್ರೀಡೆಗಳ ವಿಶಿಷ್ಟ ಸಮ್ಮಿಲನದೊಂದಿಗೆ ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಿದ ಕರ್ನಾಟಕದ ಕಯಾಕಿಂಗ್ ಮತ್ತು ಕ್ಯಾನೋಯಿಂಗ್ ಕ್ರೀಡಾಪಟುಗಳು, ಎಲೆ ಮಲ್ಲಪ್ಪ ಶೆಟ್ಟಿ ಕೆರೆಯಲ್ಲಿ ತೇಲುವ ಪಾಂಟೂನ್ ಹಾಗೂ ಡ್ರ್ಯಾಗನ್ ಬೋಟ್ ಮೇಲೆ ಯೋಗ ಪ್ರದರ್ಶಿಸಿದರು.



ವಿವಿಧ ಸಂಸ್ಥೆಗಳಿಂದ ಯೋಗ ದಿನಾಚರಣೆ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಮಾಜ ಸೇವಾ ಸಮಿತಿ, ಪತಂಜಲಿ ಯೋಗ ಸಮಿತಿ, ಯೋಗ ಗಂಗೋತ್ರಿ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ಸಂಯುಕ್ತ ಆಶ್ರಯ ದಲ್ಲಿ ಕಂಠೀರವ ಸ್ಟೇಡಿಯಂನಲ್ಲಿ ಅಂತಾ ರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಸಾವಿರಾರು ಯೋಗ ಪಟುಗಳು ಭಾಗವಹಿಸಿದ್ದರು.



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭಾಗಿ

ಜೆ.ಸಿ.ನಗರದ ದೂರದರ್ಶನ ಕೇಂದ್ರದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ಸ್ವಯಂಸೇವಕರು, ಐಟಿ ವೃತ್ತಿಪರರು, ಬಿಎಸ್‌ಎಫ್ ಯೋಧರು, ಜಿಬಿಎ ಕಾರ್ಮಿಕರು, ವೈದ್ಯರು ಭಾಗವಹಿಸಿದರು.

ರಾಜ್ಯಪಾಲ, ಸಚಿವರಿಂದ ಯೋಗಾಸನ

ಆಯುಷ್ ಇಲಾಖೆಯ ವತಿಯಿಂದ ವಿಧಾನಸೌಧದ ಮುಂಭಾಗದಲ್ಲಿ ಆಯೋಜಿಸಲಾದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್, ಆರೋಗ್ಯ ಸಚಿವ ಯು.ಟಿ ಖಾದರ್, ನಟಿಯರಾದ ಸುಧಾರಾಣಿ, ಹರಿಪ್ರಿಯಾ, ನಟ ವಶಿಷ್ಠ ಸಿಂಹ, ವಿ.ಪ.ಸದಸ್ಯ ಟಿ.ಎ.ಶರವಣ ಮುಂತಾದವರಿದ್ದರು.



ಶುಭ ಹಾರೈಸಿದ ಅಶ್ವಿನಿ ಪುನೀತ್ ರಾಜ್‌ಕುಮಾರ್



ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ ಸದಾಶಿವನಗರ ವತಿಯಿಂದ ಮಲ್ಲೇಶ್ವರದ ಜಿಬಿಎ ಆಟದ ಮೈದಾನದಲ್ಲಿ ಹಮ್ಮಿಕೊಳ್ಳಲಾದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್ ಕುಮಾರ್ ಅವರು ಯೋಗ ದಿನಾಚರಣೆಗೆ ಶುಭ ಹಾರೈಸಿದರು. ಈ ವೇಳೆ ಮಾತನಾಡಿದ ಆರ್‌ಎಸ್‌ಎಸ್ ಬೆಂಗಳೂರು ಮಹಾನಗರ ಕಾರ್ಯವಾಹ ಡಾ.ಕರುಣಾಕರ ರೈ, ಈ ವರ್ಷದ ಅಂತಾರಾಷ್ಟ್ರೀಯ ಯೋಗ ದಿನದ ಥೀಮ್ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗವಾಗಿದ್ದು, ನಾವು ಬೆಳೆಯುತ್ತಿದ್ದಂತೆ ವಯಸ್ಸು ಆಗುತ್ತಿದೆ ಅನಿಸುತ್ತದೆ. ಆದರೆ ವಯಸ್ಸಾದರೂ ಆರೋಗ್ಯವಾಗಿರಬಹುದು ಎಂಬುದನ್ನು ಯೋಗ ನಮಗೆ ಹೇಳುತ್ತದೆ ಎಂದರು.



ಶಾಸಕ, ಬಿಜೆಪಿ ಕಾರ್ಯಕರ್ತರಿಂದ ಯೋಗ

ವಿಶ್ವ ಯೋಗ ದಿನಾಚರಣೆ ಅಂಗವಾಗಿ ಯಲಹಂಕದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್, ಯೋಗ ತರಬೇತುದಾರರು, ಬಿಜೆಪಿ ಕಾರ್ಯಕರ್ತರು ಹಾಗೂ ನೂರಾರು ಸಾರ್ವಜನಿಕರು ಭಾಗವಹಿಸಿ ವಿಶ್ವ ಯೋಗ ದಿನವನ್ನು ಸಂಭ್ರಮದಿಂದ ಆಚರಿಸಿಸಲಾಯಿತು.



ಹೃದ್ರೋಗಿಗಳಿಂದ ಯೋಗಾಭ್ಯಾಸ

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ನಿರ್ದೇಶಕ ಡಾ.ಬಿ.ದಿನೇಶ್ ರವರ ಮಾರ್ಗದರ್ಶನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹೃದ್ರೋಗಿಗಳು, ಅವರ ಆರೈಕೆದಾರರು ಹಾಗೂ ವಿದ್ಯಾರ್ಥಿಗಳು ಮುಂತಾದವರು ಯೋಗಾಭ್ಯಾಸ ಮಾಡಿದರು.

ಎಸ್‌ಎಂವಿಟಿ ಆವರಣದಲ್ಲಿ ಯೋಗ ದಿನಾಚರಣೆ

ಸಹಜ ಯೋಗ ಕರ್ನಾಟಕ ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಯುಕ್ತ ಆಶ್ರಯದಲ್ಲಿ ಎಸ್‌ಎಂವಿಟಿ ಆವರಣದಲ್ಲಿ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ದಿ ಲೈಫ್ ಎಟರ್ನಲ್ ಟ್ರಸ್ಟ್ ಬೆಂಗಳೂರು ಅಧ್ಯಕ್ಷ ಡಾ. ಮನೋಜ್ ಕುಮಾರ್, ಸಂಗೀತ ಕಲಾವಿದರಾದ ರಮ್ಯಾ ವಸಿಷ್ಠ, ಎಚ್. ಎಸ್. ವೇಣುಗೋಪಾಲ್, ಪಂಡಿತ್ ಇಮಾನ್‌ದಾಸ್ ಹಾಗೂ ಡಾ.ಜಯಂತ್ ಕುಮಾರ್‌ದಾಸ್ ಅವರಿಂದ ವಿಶೇಷ ಸಂಗೀತ ಕಾರ್ಯಕ್ರಮ ನಡೆಯಿತು.



ಆರ್‌ಎಸ್‌ಎಸ್ ವತಿಯಿಂದ ಯೋಗ ಕಾರ್ಯಕ್ರಮ

ಕೆಂಗೇರಿ ವಾರ್ಡ್‌ನ ವಿಜಯಶ್ರೀ ಲೇಔಟ್‌ನಲ್ಲಿ ಆರ್‌ಎಸ್‌ಎಸ್ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ನಗರಸಭೆ ಮಾಜಿ ಸದಸ್ಯ ಮೈಲಸಂದ್ರ ಮುನಿರಾಜು, ಕೆ.ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮುನಿಸ್ವಾಮಿ, ಬಿಜೆಪಿ ವಾರ್ಡ್ ಅಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ಕೆ.ಎಂ. ಶಾಂತಕುಮಾರ್, ಚಂದ್ರಣ್ಣ ಬಸವರಾಜ್ ರೂಪ, ವಸಂತ ಹಾಗೂ ಬಿಜೆಪಿ ಮುಖಂಡರು ಪಾಲ್ಗೊಂಡಿದ್ದರು.





ಕೆಎಸ್‌ಆರ್‌ಟಿಸಿ ಶಿವಕುಮಾರ್ ಕೆ.ಬಿ. ಅವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ. ಪ್ರಭಾರದಲ್ಲಿದ್ದ ಸಾರಿಗೆ ಇಲಾಖೆ ಆಯುಕ್ತ ಡಾ.ಸೆಲ್ವಮಣಿ ಆರ್. ಅಧಿಕಾರವನ್ನು ಹಸ್ತಾಂತರಿಸಿ, ಶುಭ ಕೋರಿದರು.

ರೌಡಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ

ಬೆಂಗಳೂರು: ಬೆಂಗಳೂರು ನಗರ ಉತ್ತರ ವಿಭಾಗದ 13 ಪೊಲೀಸ್ ಠಾಣೆಗಳಲ್ಲಿನ ರೌಡಿ ನಿಗ್ರಹ ಪಡೆಯು ರೌಡಿಗಳ ಮನೆಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ, ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆ ಮತ್ತು ಅಪರಾಧಗಳಲ್ಲಿ ಭಾಗಿಯಾಗದಂತೆ ರೌಡಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದೆ.



ಬೆಂಗಳೂರು ನಗರ ಉತ್ತರ ವಿಭಾಗದ 13 ಪೊಲೀಸ್ ಠಾಣೆಗಳಲ್ಲಿನ ರೌಡಿ ನಿಗ್ರಹ ಪಡೆಗಳಿಂದ ಶನಿವಾರ ತಡರಾತ್ರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಸೇರಿದಂತೆ ವಿಶೇಷ ಕಾರ್ಯಾಚರಣೆಯನ್ನು ನಡೆಸಿ, 13 ಪೊಲೀಸ್ ಠಾಣಾ ಸರಹದ್ದುಗಳಲ್ಲಿನ 97 ರೌಡಿಗಳ ಮನೆಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ ಪರಿಶೀಲನೆ ಕೈಗೊಂಡರು. ಪ್ರಸ್ತುತ ನಿರ್ವಹಿಸುತ್ತಿರುವ ಕೆಲಸದ ಬಗ್ಗೆ ಮಾಹಿತಿ ಸಂಗ್ರಹಿಸಿ, ರೌಡಿಗಳ ವಿರುದ್ಧ ಈ ಹಿಂದೆ ದಾಖಲಾಗಿರುವ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗುತ್ತಿರುವ ಬಗ್ಗೆ ಹಾಗೂ ಪ್ರಕರಣಗಳಲ್ಲಿ ವಿಚಾರಣೆಗೆ ಹಾಜರಾಗದೇ ವಾರೆಂಟ್, ಪ್ರೋಕ್ಲಮೇಷನ್, ಎಲ್.ಪಿ.ಆರ್ ಆಗಿರುವ ಬಗ್ಗೆ ಪರಿಶೀಲನೆ ಮಾಡಿದರು. ನ್ಯಾಯಾಲಯದ ವಿಚಾರಣೆ ವೇಳೆ ತಪ್ಪದೇ ಹಾಜರಾಗಬೇಕು ಹಾಗೂ ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆ ಮತ್ತು ಅಪರಾಧಗಳಲ್ಲಿ ಭಾಗಿಯಾಗದಂತೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಗಿದೆ.

ವ್ಯಕ್ತಿತ್ವ ವಿಕಾಸಕ್ಕೆ ಆತ್ಮವಿಶ್ವಾಸ, ಶಿಸ್ತು ಅತ್ಯಗತ್ಯ

ಸ್ನೇಹ ಸೇವಾ ಟ್ರಸ್ಟ್ ಶ್ರೀನಿವಾಸ್ ಗುಪ್ತ ಹೇಳಿಕೆ

ಬೆಂಗಳೂರು: ಮೊದಲು ನಮ್ಮನ್ನು ನಾವು ಜಯಿಸಿ ಕೊಳ್ಳಬೇಕು. ಆಗ ಇಡೀ ಪ್ರಪಂಚವೇ ನಮ್ಮ ಕೆಲಸಗಳಿಗೆ ಸಹಕಾರ ನೀಡುತ್ತದೆ. ವ್ಯಕ್ತಿತ್ವ ವಿಕಾಸಕ್ಕೆ ಆತ್ಮವಿಶ್ವಾಸ ಮತ್ತು ಶಿಸ್ತು ಅತ್ಯಗತ್ಯ ಎಂದು ಸ್ನೇಹ ಸೇವಾ ಟ್ರಸ್ಟ್ ಶ್ರೀನಿವಾಸ್ ಗುಪ್ತ ಹೇಳಿದರು.

ಮಕ್ಕಳಲ್ಲಿ ದೇಶಭಕ್ತಿ, ಸಂಸ್ಕಾರ, ಶಿಸ್ತು ಹಾಗೂ ಉತ್ತಮ ನಾಗರಿಕ ಗುಣಗಳನ್ನು ಬೆಳೆಸುವ ಉದ್ದೇಶದಿಂದ ಸ್ನೇಹ ಸೇವಾ ಟ್ರಸ್ಟ್ ವತಿಯಿಂದ ನಗರದ ವಿ.ವಿ.ಪುರದ ಶ್ರೀ ವಾಸವಿ ದೇವಸ್ಥಾನದಲ್ಲಿ ಆಯೋಜಿಸಲಾಗಿದ್ದ ಸಂಸ್ಕಾರ ಕೇಂದ್ರವನ್ನು ಉದ್ಘಾಟನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಟ್ರಸ್ಟ್, ಆರಂಭದಲ್ಲಿ ಕೇವಲ ಎರಡು-ಮೂರು ಮಕ್ಕಳೊಂದಿಗೆ ಕಾರ್ಯಾರಂಭ ಮಾಡಿದ್ದು, ಇಂದು ಸುಮಾರು 400 ಮಕ್ಕಳ ಪಾಲನೆ, ಪೋಷಣೆ ಮತ್ತು ಶಿಕ್ಷಣದ ಜವಾಬ್ದಾರಿ ಯನ್ನು ನಿರ್ವಹಿಸುತ್ತಿದೆ. ಉತ್ತಮ ಸಂಸ್ಕಾರ ಹೊಂದಿದ ಸತ್ಪ್ರಜೆಗಳನ್ನು ರೂಪಿಸುವುದೇ ಸಂಸ್ಥೆಯ ಮುಖ್ಯ ಉದ್ದೇಶ ವಾಗಿದೆ ಎಂದು ತಿಳಿಸಿದರು.



ಜೀವನದಲ್ಲಿ ಆಯ್ಕೆಗಳು ಮುಖ್ಯ: ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಮಾರ್ಗದರ್ಶಕಿ ರಶ್ಮಿ ಮಾತನಾಡಿ, ಒಂದು ಮನೆಯ ನಿರ್ಮಾಣಕ್ಕೆ ಅಡಿಪಾಯ ಎಷ್ಟು ಮುಖ್ಯವೋ, ಜೀವನವನ್ನು ರೂಪಿಸಿಕೊಳ್ಳಲು ಸಂಸ್ಕಾರವೂ ಅಷ್ಟೇ ಮುಖ್ಯ. ಬಾಲ್ಯದಿಂದಲೇ ಸಮಾಜಕ್ಕೆ ಉಪಕಾರಿಯಾಗುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು. ಕರ್ನಾಟಕ ಚಿನ್ಮಯಿ ಮಿಶನ್‌ನ ಬಿ.ಕೃಷ್ಣಕುಮಾರ್ ಇತರರಿದ್ದರು.

ಸಂಸ್ಕಾರ ಕೇಂದ್ರದ ವಿಶೇಷತೆ

ಸಂಸ್ಕಾರ ಕೇಂದ್ರದಲ್ಲಿ ಮಕ್ಕಳಿಗೆ ಪ್ರತಿದಿನ ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯವರೆಗೆ ದೇಶಭಕ್ತಿ ಗೀತೆಗಳು, ಯೋಗ ಮತ್ತು ಧ್ಯಾನ, ಆಟೋಟ ಚಟುವಟಿಕೆಗಳು, ಪೂಜೆ ಮಾಡುವ ವಿಧಾನ, ನೈತಿಕ ಮೌಲ್ಯಗಳು, ಭಾರತೀಯ ಸಂಸ್ಕೃತಿ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿದ ತರಬೇತಿಗಳನ್ನು ನೀಡಲಾಗುತ್ತದೆ. ಮಕ್ಕಳಲ್ಲಿ ಮಾನವೀಯ ಮೌಲ್ಯಗಳು, ಸಾಮಾಜಿಕ ಹೊಣೆಗಾರಿಕೆ ಮತ್ತು ರಾಷ್ಟ್ರಪ್ರೇಮವನ್ನು ಬೆಳೆಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸಲಾಗುವುದು.

ಫ್ಲೋರಿಡಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ. ವಸುಧಾ ನಾರಾಯಣನ್

ವಿಷ್ಣುವಿನ ಶಯನ ಭಂಗಿ ಜಾಗೃತ ನಿದ್ರೆ ಸಂಕೇತ

ಬೆಂಗಳೂರು: ವಿಷ್ಣುವಿನ ಈ ಶಯನ ಭಂಗಿಯು ಕೇವಲ ನಿದ್ರೆಯಲ್ಲ, ಬದಲಿಗೆ ಸೃಷ್ಟಿ, ಸ್ಥಿತಿ ಮತ್ತು ಲಯದ ನಡುವಿನ ಯೋಗ ನಿದ್ರೆ ಅಥವಾ ಜಾಗೃತ ನಿದ್ರೆಯಾಗಿದೆ ಎಂದು ಫ್ಲೋರಿಡಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ. ವಸುಧಾ ನಾರಾಯಣನ್ ಅಭಿಪ್ರಾಯಪಟ್ಟರು.



ಬೆಂಗಳೂರು-ಇಂಟಾಕ್ ಬೆಂಗಳೂರು ಚಾಪ್ಟರ್ ಮತ್ತು ಮಿಥಿಕ್ ಸೊಸೈಟಿ ಜಂಟಿಯಾಗಿ ಭಾನುವಾರ ಆಯೋಜಿಸಿದ್ದ ಪ್ರೊ. ಎಂ.ಪಿ.ಎಲ್. ಶಾಸ್ತ್ರಿ ದತ್ತಿ ಉಪನ್ಯಾಸದಲ್ಲಿ ಭಾರತ ಮತ್ತು ಕಾಂಬೋಡಿಯಾದ ಕಲೆ ಗಳಲ್ಲಿನ ಅನಂತಶಾಯಿ (ಶೇಷಶಯನ ವಿಷ್ಣು) ಪರಿಕಲ್ಪನೆಯ ಕುರಿತು ಮಾತನಾಡಿದರು.

ಆರಂಭಿಕ ಸಂಸ್ಕೃತ ಮತ್ತು ತಮಿಳು ಸಾಹಿತ್ಯದಲ್ಲಿ ವಿಷ್ಣು ಕೇವಲ ನೀರಿನ ಮೇಲೆ ಮಲಗಿರುವಂತೆ ಚಿತ್ರಿಸಲಾಗುತ್ತಿತ್ತು; ಕಾಲಕ್ರಮೇಣ ಅಶ್ವತ್ಥ ಎಲೆ, ಶೇಷನಾಗ, ಲಕ್ಷ್ಮಿ ಮತ್ತು ಬ್ರಹ್ಮನ ಚಿತ್ರಣಗಳು ಈ ಕಲೆಗೆ ಸೇರ್ಪಡೆ ಯಾದವು. 9 ರಿಂದ 12ನೇ ಶತಮಾನದ ನಡುವಿನ ಮಧ್ಯ ಭಾರತದ ಶಿಲ್ಪಗಳಲ್ಲಿ ವಿಷ್ಣುವಿನ ಕೆಳಗೆ ಶೇಷನಾಗನ ಕುದುರೆಯ ಚಿತ್ರಣವಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಇದು ವೈದಿಕ ಕಾಲದ ಸಮುದ್ರದಿಂದ ಕುದುರೆಯ ಉಗಮದ ಕಥೆಯನ್ನು ನೆನಪಿಸುತ್ತದೆ ಎಂದು ವಿವರಿಸಿದರು.

ಕರ್ನಾಟಕದ ಬಾದಾಮಿಯಲ್ಲಿರುವ ಶಿಲ್ಪಗಳಲ್ಲಿ ದಶಾವತಾರದ ಚಿತ್ರಣವಿದೆ. ದಶಾವತಾರದ ಚಿತ್ರಣ ಇಲ್ಲಿಂದ ಪ್ರಾರಂಭವಾದವು. ಕರ್ನಾಟಕ ಮತ್ತ ತಮಿಳುನಾಡಿನ ಕಾವೇರಿ ನದಿ ತೀರದಲ್ಲಿ ವಿಷ್ಣುವಿನ ಹಲವಾರು ದೇವಾಲಯಗಳಿವೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಕೇರಳ ರಾಜ್ಯಗಳಲ್ಲಿನ ದೇವಾಲಯಗಳಲ್ಲಿ ಪವಡಿಸಿದ ಭಂಗಿಯ ವಿಷ್ಣುವಿನ ವಿಗ್ರಹಗಳಿವೆ ಎಂದು ತಿಳಿಸಿದರು.

ಕಾಂಬೋಡಿಯಾ ದೇಶದ ಕಲೆಯ ಕುರಿತು ಮಾತನಾಡುತ್ತಾ, ಅಲ್ಲಿನ ಪಶ್ಚಿಮ ಮೆಬೋನ್ ದೇವಾಲಯದಲ್ಲಿ ಪತ್ತೆಯಾದ 15 ಅಡಿ ಎತ್ತರದ ಬೃಹತ್ ಕಂಚಿನ ವಿಷ್ಣು ವಿಗ್ರಹದ ವಿಶೇಷತೆಯನ್ನು ವಿವರಿಸಿದರು. ಅಲ್ಲಿನ ನದಿ ಪಾತ್ರದ ಅಡಿಯಲ್ಲಿ ಕೆತ್ತಲಾದ ವಿಷ್ಣುವಿನ ಚಿತ್ರಣಗಳು ಮತ್ತು ಹಾವಿನ ಬದಲು ಬಳಸಿರುವ ಮಕರ ಸಂಕೇತಗಳು ಭಾರತೀಯ ಕಲೆಗಿಂತ ಭಿನ್ನವಾಗಿವೆ ಎಂದು ಅವರು ಹೇಳಿದರು.

ಅನಂತ ಶಯನದ ವಿಗ್ರಹಗಳ ತಲೆಯು ಸಾಮಾನ್ಯವಾಗಿ ಉತ್ತರಕ್ಕೆ ಇರುವುದಿಲ್ಲ. ಆದರೆ, ಕೆಲವು ಕಡೆ ಬಲಗೈ ಮೇಲೆ ಇನ್ನು ಕೆಲವು ಕಡೆ ಎಡಗೈ ಮೇಲೆ ವಿಶ್ರಮಿಸುವ ರೀತಿಯ ಭಂಗಿಯಲ್ಲಿವೆ ಎಂದು ಡಾ. ವಸುಧಾ ವಿವರಿಸಿದರು.

ಮಿಥಿಕ್ ಸೊಸೈಟಿಯ ಅಧ್ಯಕ್ಷ ವಿ. ನಾಗರಾಜ್ ಉಪಸ್ಥಿತರಿದ್ದರು.

ಕೆರೆ ವಿಸ್ತೀರ್ಣ ಸರ್ವೇ ಮಾಡಲು ಸರ್ವೇಯರ್‌ಗಳಿಗೆ ಸೂಚನೆ

ಕೆರೆಗೆ ತ್ಯಾಜ್ಯ: ಪಾಲಿಕೆ ಆಯುಕ್ತರಿಂದ ಪರಿಶೀಲನೆ

ಬೆಂಗಳೂರು: ಇಟ್ಟಮಡು ಕೆರೆ (ಚಿಕ್ಕಲಸಂದ್ರ ಕೆರೆ) ಕೆರೆ ಪ್ರದೇಶ ದಲ್ಲಿ ಕಸ ಸುರಿಯುತ್ತಿರುವ ಬಗ್ಗೆ ಸಾರ್ವ ಜನಿಕ ದೂರುಗಳ ಹಿನ್ನೆಲೆಯಲ್ಲಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತರಾದ ಡಾ. ರಾಜೇಂದ್ರ ಕೆ.ವಿ. ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕೆರೆ ವಿಸ್ತೀರ್ಣವನ್ನು ಸರ್ವೇ ಮಾಡು ವಂತೆ ಸರ್ವೇಯರ್‌ಗಳಿಗೆ ಸೂಚಿಸಿದ ಆಯುಕ್ತರು, ಕೆರೆ ಸ್ವಚ್ಛ ಗೊಳಿಸಿ, ಅಭಿವೃದ್ಧಿಪಡಿಸಿ ಕೆರೆಗೆ ಸುತ್ತ ಬೇಲಿ ಹಾಕಿ, ಬೆಳಕಿನ ವ್ಯವಸ್ಥೆ ಮಾಡಿ. ದಿನದ 24 ಗಂಟೆಯೂ ಮಾರ್ಷಲ್‌ಗಳು ನಿಗಾ ವಹಿಸುವಂತೆ, ಸಿಸಿಟಿವಿ ಕೂಡ ಅಳವಡಿಸಿ ನಿಗಾ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ಪಾದಚಾರಿ ಮಾರ್ಗ ಪರಿಶೀಲನೆ: ಪಾಲಿಕೆ ವ್ಯಾಪ್ತಿಯಲ್ಲಿ ಒಂದು ತಿಂಗಳ ಅವಧಿಯಲ್ಲಿ ಪ್ರತಿ ವಾರ್ಡ್‌ನಲ್ಲಿ 10 ಕಿ.ಮೀ. ಪಾದಚಾರಿ ಮಾರ್ಗ ಅಭಿವೃದ್ಧಿಪಡಿಸಲು ಅಧಿಕಾರಿಗಳಿಗೆ ನೀಡಿದ್ದ ಸೂಚನೆ ಹಿನ್ನೆಲೆಯಲ್ಲಿ ಯಡಿಯೂರು ಮತ್ತು ಬಸವನಗುಡಿ ವಾರ್ಡ್‌ಗಳಲ್ಲಿ ಪಾದಚಾರಿ ಮಾರ್ಗ ಪರಿಶೀಲಿಸಿದರು. ಪಾದಚಾರಿ ಮಾರ್ಗಗಳು ರಸ್ತೆ ಮಟ್ಟಕ್ಕಿಂತ ಹೆಚ್ಚು ಎತ್ತರವಾಗಿದ್ದು, ಮಕ್ಕಳು, ವೃದ್ಧರಿಗೆ ಹತ್ತಲು,ಇಳಿಯಲು ಕಷ್ಟವಾಗುವ ರೀತಿ ಇರುವಂತಿದ್ದಲ್ಲಿ ಅಂತಹ ಸ್ಥಳಗಳಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಿ, ಆ ಮೂಲಕ ಪಾದಚಾರಿಗಳಿಗೆ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಈ ವೇಳೆ ಮುಖ್ಯ ಅಭಿಯಂತರ ಬಸವರಾಜ ಕಬಾಡೆ, ವಾಕಲೂರು ಎನ್‌ಜಿಒ ಸ್ಥಾಪಕ ಅರುಣ್ ಪೈ ಮತ್ತು ಇತರ ಅಧಿಕಾರಿಗಳು ಉಪಸ್ಥಿತ ರಿದ್ದರು.



ಬಿಜಿಎಸ್ ಆಸ್ಪತ್ರೆಗೆ ಪಾಲಿಕೆ ಆಯುಕ್ತ ದಿಢೀರ್ ಭೇಟಿ

ರವರು ಇಂದು ಗೋವಿಂದರಾಜನಗರದ ಬಿಜಿಎಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿ ಆಸ್ಪತ್ರೆಯಲ್ಲಿನ ಸೌಲಭ್ಯಗಳು ಮತ್ತು ಸೇವೆಗಳ ಬಗ್ಗೆ ಪರಿಶೀಲಿಸಿದರು. ಹೊರರೋಗಿ ಮತ್ತು ಒಳರೋಗಿ ವಿಭಾಗಗಳಿಗೆ ಭೇಟಿ ನೀಡಿ, ರೋಗಿಗಳೊಂದಿಗೆ ಸಂವಾದ ನಡೆಸಿದರು.

ಪಾದಚಾರಿಗೆ ಕಾರು ಡಿಕ್ಕಿ

ಕುಂದಾಪುರ : ಗುಜ್ಜಾಡಿ-ಬೆಣ್ಗೇರೆ ರಸ್ತೆಯ ಮಾರಿಕಾಂಬಾ ದೇವಸ್ಥಾನದ ತಿರುವಿನಲ್ಲಿ ಮಣ್ಣು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಶೇಖರ ಪೂಜಾರಿ ಎಂಬವರಿಗೆ ಕಾರು ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಶೇಖರ ಪೂಜಾರಿ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹೊಳೆಯಲ್ಲಿ ಮುಳುಗಿ ಸಾವು

ಉಡುಪಿ: ಯಡ್ತರೆ ಗ್ರಾಮದ ಅಂಕಣಹೊಳೆಗೆ ಮೀನು ಹಿಡಿಯಲು ಹೋಗಿದ್ದ ಮೀನುಗಾರ ಡಿ. ನಾರಾಯಣ ಖಾರ್ವಿ (64) ಎಂಬವರು ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಜೈನ ಮಠದಲ್ಲಿ ಯೋಗ

• **ಮೂಡುಬಿದಿರೆ:** ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಧವಳತ್ರಯ ಜೈನ ಕಾಶಿ ಟ್ರಸ್ಟ್ ಹಾಗೂ ಶ್ರೀ ಜೈನ ಮಠದ ಸಂಯುಕ್ತ ಆಶ್ರಯದಲ್ಲಿ ಎರಡು ದಿನಗಳ ಯೋಗ ಶಿಬಿರವು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯ ಪಟ್ಟಾಚಾರ್ಯ ವರ್ಯ ಮಹಾಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆಯಿತು. ಜೂನ್ 20ರಂದು ಸ್ವಸ್ತಿಶ್ರೀ ಜೈನ ವಸತಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸ್ವಸ್ತಿಶ್ರೀ ಭಟ್ಟಾರಕ ಭವನದಲ್ಲಿ ಬೆಳಗ್ಗೆ 9 ಗಂಟೆಯಿಂದ ಒಂದು ಗಂಟೆ ಕಾಲ ನಡೆದ ಯೋಗ ಶಿಬಿರದಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು ಹಾಗೂ ಅಧ್ಯಾಪಕ ವೃಂದವೂ ಯೋಗಾಭ್ಯಾಸದಲ್ಲಿ ಪಾಲ್ಗೊಂಡರು. ಜೂನ್ 21ರಂದು ಬೆಳಗ್ಗೆ 9 ಗಂಟೆಯಿಂದ ದೆಹಲಿ, ಬೆಂಗಳೂರು ಸೇರಿದಂತೆ ವಿವಿಧ ಭಾಗಗಳಿಂದ ಆಗಮಿಸಿದ್ದ ಯಾತ್ರಾರ್ಥಿಗಳು ಮಹಾಸ್ವಾಮೀಜಿಗಳೊಂದಿಗೆ ಯೋಗಾಭ್ಯಾಸ ನಡೆಸಿದರು. ಈ ವೇಳೆ ಸ್ವಾಮೀಜಿಗಳು ಯೋಗದ ಮಹತ್ವವನ್ನು ವಿವರಿಸುತ್ತಾ ಪದ್ಮಾಸನ, ಪರ್ವತಾಸನ, ಅನುಲೋಮ-ವಿಲೋಮ ಮೊದಲಾದ ಮೂಲಭೂತ ಆಸನಗಳ ಕುರಿತು ಮಾಹಿತಿ ನೀಡಿದರು. ಇದಲ್ಲದೆ, ಮಯೂರಾಸನ, ಗೋರಕ್ಷಾಸನ, ಗರುಡಾಸನ, ಬ್ರಹ್ಮಚರ್ಯಾಸನ, ಆಸನಗಳ ರಾಜನೆಂದು ಕರೆಯಲ್ಪಡುವ ಶೀರ್ಷಾಸನ ಹಾಗೂ ಸರ್ವಾಂಗಾಸನದ ಭಂಗಿಗಳನ್ನು ಪ್ರಾತ್ಯಕ್ಷಿಕೆ ಮೂಲಕ ಪ್ರದರ್ಶಿಸಿ ಅವುಗಳ ಪ್ರಯೋಜನಗಳನ್ನು ವಿವರಿಸಿದರು. ಪ್ರತಿಯೊಬ್ಬರೂ ಪ್ರತಿದಿನ ಕನಿಷ್ಠ 10 ನಿಮಿಷಗಳಾದರೂ ಯೋಗ ಮತ್ತು ವ್ಯಾಯಾಮವನ್ನು ಅಭ್ಯಾಸ ಮಾಡುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಅವರು ಕರೆ ನೀಡಿದರು. ಈ ಯೋಗ ಶಿಬಿರದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ವಿವಿಧ ಭಾಗಗಳಿಂದ ಆಗಮಿಸಿದ್ದ ಯಾತ್ರಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು.



ದೈಹಿಕ, ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿ

ಶಾರದಾ ವಿದ್ಯಾಲಯದಲ್ಲಿ



• **ಮಂಗಳೂರು:** ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ ಎಂಬ ಘೋಷಣಾ ನುಡಿಯೊಂದಿಗೆ ವಿಶ್ವಾದ್ಯಂತ ಆಚರಿಸಲಾದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಗರದ ಕೊಡಿಯಾಲಬೈಲಿನ ಶಾರದಾ ವಿದ್ಯಾಲಯದಲ್ಲೂ ಆಚರಿಸಲಾಯಿತು.

ಮುಖ್ಯ ಅತಿಥಿ ದೇವನಗರ ತಲಪಾಡಿಯ ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕಾಲೇಜು ಉಪ ವೈದ್ಯಕೀಯ ಅಧೀಕ್ಷಕರು ಮತ್ತು ಸಹ ಪ್ರಾಧ್ಯಾಪಕರಾದ ಡಾ. ಭಾವನ ಎಂ.

ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಯೋಗದ ಮಹತ್ವದ ಕುರಿತಾಗಿ ಮತ್ತು ದಿನನಿತ್ಯ ಯೋಗ ಮಾಡುವುದರಿಂದ ಹೇಗೆ ಬೌದ್ಧಿಕ ಸಾಮರ್ಥ್ಯ ಮತ್ತು ಆರೋಗ್ಯ ಪಡೆಯಬಹುದು ಎಂಬುದನ್ನು ವಿವರಿಸಿದರು.

ಶಾರದಾ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಪ್ರದೀಪ ಕುಮಾರ ಕಲ್ಕೂರ ಅಧ್ಯಕ್ಷತೆವಹಿಸಿದ್ದು, ಬದುಕಿನೊಂದಿಗೆ ಯೋಗವಿದ್ದರೆ ಭಾಗ್ಯವಿದೆ. ಯೋಗವು ಅಧ್ಯಯನಕ್ಕೂ ಪ್ರೇರಣಾದಾಯಕವಾಗಿದೆ. ಯೋಗಭ್ಯಾಸದಿಂದ ಶಾರೀರಿಕ, ಮಾನಸಿಕ, ಬೌದ್ಧಿಕ ಹಾಗೂ ಭಾವನಾತ್ಮಕ ವಿಕಾಸವಾಗುವುದರಿಂದ ವಿದ್ಯಾರ್ಥಿಗಳು ಸದೃಢ ಶರೀರ, ದೃಢಚಿತ್ತ ಗಳಿಸಲು ಸಹಕಾರಿಯಾಗಿದೆ ಎಂದರು.

ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಟ್ರಸ್ಟಿ ಸುಧಾಕರ ರಾವ್ ಪೇಜಾವರ, ಶಾರದಾ ವಿದ್ಯಾ ಸಂಸ್ಥೆಗಳ ಪ್ರಾಂಶುಪಾಲರುಗಳು ಹಾಗೂ ಉಪ-ಪ್ರಾಂಶುಪಾಲರುಗಳು ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಧನ್ಯ ಆನಂದ ಯಾಜಿ ಸ್ವಾಗತಿಸಿದಳು. ಪ್ರೇರಣಾ ಶರ್ಮ ವಂದನಾರ್ಪಣೆಗೈದಳು. ಆದಿತ್ರಿ ರಾವ್ ಕಾರ್ಯಕ್ರಮ ನಿರೂಪಣೆಗೈದಳು. ವಿದ್ಯಾಲಯದ ಯೋಗ ಗುರುಗಳಾದ ಉಮಾವತಿ ಅವರ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹಾಗೂ ಶಾರದಾ ಪ್ರಕೃತಿ ಚಿಕಿತ್ಸಾ ಯೋಗ ತಂಡದಿಂದ ಸಾಮೂಹಿಕ ಯೋಗ ಪ್ರದರ್ಶನ ನೆರವೇರಿತು.

ಶಕ್ತಿ ವಿದ್ಯಾ ಸಂಸ್ಥೆಯಲ್ಲಿ



• **ಮಂಗಳೂರು:** ಶಕ್ತಿನಗರದಲ್ಲಿರುವ ಶಕ್ತಿ ವಿದ್ಯಾ ಸಂಸ್ಥೆಯ ರೇಷ್ಮಾ ಮೆಮೋರಿಯಲ್ ಸಭಾಂಗಣದಲ್ಲಿ ಕ್ರೀಡಾ ಭಾರತಿ ಮಂಗಳೂರು ಮತ್ತು ಶಕ್ತಿ ವಿದ್ಯಾ ಸಂಸ್ಥೆಯ ಸಹಭಾಗಿತ್ವದಲ್ಲಿ ಸಾಮೂಹಿಕವಾಗಿ ಯೋಗಾಸನಗಳನ್ನು ಅಭ್ಯಾಸಮಾಡುವಮೂಲಕ ವಿಶ್ವಯೋಗ ದಿನವನ್ನುಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಯೆನಪೋಯ ವಿಶ್ವವಿದ್ಯಾನಿಲಯದ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯರೂ ಆಗಿರುವ ಐಶ್ವರ್ಯ ಶೆಟ್ಟಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಇಂದು ವಿಶ್ವದಲ್ಲಿ 177 ಕ್ಕೂ ಹೆಚ್ಚಿನ ದೇಶಗಳು ಯೋಗ ದಿನಾಚರಣೆಯನ್ನುಆಚರಿಸುತ್ತಿವೆ.ಪ್ರಧಾನಿ ನರೇಂದ್ರ ಮೋದಿಯವರ ನಿರ್ಧಾರದಿಂದ ಭಾರತಕ್ಕೆ ಮಾತ್ರ ಸೀಮಿತವಾಗಿದ್ದ ಯೋಗ ಇಂದು ವಿಶ್ವವೇ ಆಚರಿಸುವಂತೆ ಆಗಿದೆ. ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಚೆನ್ನಾಗಿರಬೇಕು ಅಂದರೆ ನಾವು ವಿವಿಧ ಯೋಗಾಸನಗಳನ್ನು ಅಭ್ಯಾಸ ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳಾದ ನಾವು ನಮ್ಮ ದಿನನಿತ್ಯಜೀವನದಲ್ಲಿ ಯೋಗಾಸನಗಳನ್ನು ಅಭ್ಯಾಸ ಮಾಡಬೇಕು. ಪ್ರತಿ ದಿನ ಪ್ರಯತ್ನದೊಂದಿಗೆ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಸಿಗುವ ಹಾಗೆ ದಿನನಿತ್ಯ ಯೋಗಭ್ಯಾಸದಿಂದ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಹೆಚ್ಚಾಗುತ್ತದೆ. ದೈಹಿಕ ದೃಢತೆ ಇರುತ್ತದೆ ಎಂದರು.

ಶಕ್ತಿ ವಿದ್ಯಾ ಸಂಸ್ಥೆಯ ಪ್ರಧಾನ ಸಲಹೆಗಾರ ರಮೇಶ ಕೆ. ಮಾತನಾಡಿ ,ಶಕ್ತಿ ವಿದ್ಯಾ ಸಂಸ್ಥೆಯ ವಸತಿ ನಿಲಯದಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ಬೆಳಗ್ಗಿನ ಅವಧಿಯಲ್ಲಿ ಪ್ರತಿನಿತ್ಯ ಯೋಗಾವನ್ನು ಅಭ್ಯಾಸ ಮಾಡುತ್ತಾರೆ. ಇದರಿಂದ ಅವರ ಕಲಿಯುವಿಕೆಗೆ ಹೆಚ್ಚು ಅನುಕೂಲಕರವಾಗಿದೆ ಎಂದರು.

ಶಕ್ತಿ ವಿದ್ಯಾ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ 5ನೇ ತರಗತಿಯಿಂದ ಪಿಯುಸಿವರೆಗಿನ ಎಲ್ಲಾ ವಿದ್ಯಾರ್ಥಿಗಳು ಏಕಕಾಲದಲ್ಲಿ ಪವನ ಮುಕ್ತಾಸನ, ಮಕರಾಸನ, ತಾಡಾಸನ, ಭುಜಂಗಾಸನ, ವೃಕ್ಷಾಸನ ವಿವಿಧ ಯೋಗಾಸನಗಳನ್ನು ಮಾಡುವ ಮೂಲಕ ಯೋಗಾಭ್ಯಾಸವನ್ನು ನಡೆಸಿದರು. ಯೋಗತರಬೇತುಧಾರರಾದ ವೀಣಾ ಮತ್ತು ಸುಭದ್ರಾ ಅವರು ಯೋಗಭ್ಯಾಸದ ತರಬೇತಿ ನಡೆಸಿಕೊಟ್ಟರು.

ಕ್ರೀಡಾಭಾರತಿ ಕರ್ನಾಟಕ ದಕ್ಷಿಣ ಪ್ರಾಂತ ಇದರ ಉಪಾಧ್ಯಕ್ಷ ಕಾರಿಯಪ್ಪ ರೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಆತ್ಮರಕ್ಷಕ ಪ್ರಮುಖ್ ಆಗಿರುವ ಎ. ಕೃಷ್ಣ ಶೆಟ್ಟಿ ತಾರೆಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಕ್ತಿ ವಸತಿ ಶಾಲೆ ಪ್ರಾಂಶುಪಾಲೆ ಸುರೇಖಾ ಭಟ್ ಸ್ವಾಗತಿಸಿ, ಕನ್ನಡ ಶಿಕ್ಷಕ ಶರಣಪ್ಪ ಕಾರ್ಯಕ್ರಮ ನಿರೂಪಿಸಿದರು.

ಕಿರು ಸುದ್ದಿ


ನಾಳೆ ಕೊಡಗು ಜಿಲ್ಲೆಗೆ ಹೊರಟ್ಟಿ ಭೇಟಿ

ಮಡಿಕೇರಿ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಜೂ.23ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಅಂದು ಪೂರ್ವಾಹ್ನ ಕುಶಾಲನಗರದ ರೈತ ಸಹಕಾರ ಭವನದಲ್ಲಿ ನಡೆಯುವ ಕೊಡಗು ಜಿಲ್ಲಾ ಪ್ರಥಮ ಶರಣ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿರುವ ಅವರು, ನಂತರ ಮಧ್ಯಾಹ್ನ 1.30 ಗಂಟೆಗೆ ಕೊಡಗು ವಿಶ್ವವಿದ್ಯಾಲಯದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಭಾಪತಿ ಅವರ ಕಾರ್ಯದರ್ಶಿ ಎಚ್.ಡಿ.ಪಾಟೀಲ ಅವರು ತಿಳಿಸಿದ್ದಾರೆ.

ನಿಧನ ಸುದ್ದಿ

ಯು.ಕೆ. ಗೋಪಾಲಕೃಷ್ಣ ರಾವ್

ಉಡುಪಿ: ನಿವೃತ್ತ ಸ್ವಾತಂತ್ರ್ಯ ಯೋಧ ಯು.ಕೆ. ಗೋಪಾಲಕೃಷ್ಣ ರಾವ್ (92) ಜೂ. 19ರಂದು ಸ್ವಗೃಹದಲ್ಲಿ ನಿಧನ ಹೊಂದಿದರು, ಇವರು ಭಾರತೀಯ ಸೇನೆಯ ಅಂಗ ಸಂಸ್ಥೆ ಜಿ.ಆರ್.ಇ.ಎ.ಎಫ್ (ಬಿ.ಆರ್.ಓ.) ಇಲ್ಲಿ ಫಾರ್ಮಸಿಸ್ಟ್ ವೃತ್ತಿಯನ್ನು ಸುಮಾರು 24 ವರ್ಷ ಸೇವೆ ಸಲ್ಲಿಸಿದ್ದರು. ಉತ್ತರ ಭಾರತದ ಜೋಶಿ ಮಠ, ಅರುಣಾಚಲ ಪ್ರದೇಶ, ಸಿಕ್ಕಿಂ, ಅಂಡಮಾನ್ ನಿಕೋಬಾರ್ ಹಾಗೂ ನೆರೆ ರಾಷ್ಟ್ರ ಭೂತಾನ್‌ನಲ್ಲಿ ತಮ್ಮ ವೃತ್ತಿ ಜೀವನ ನಡೆಸಿದ್ದರು. ಇವರ ಉತ್ತಮ ಸೇವೆಯನ್ನು ಗುರುತಿಸಿ ಭಾರತೀಯ ಸೇನೆಯು ಸಂಗ್ರಾಮ್ ಸೇವಾ ಮೆಡೆಲ್ ಮತ್ತು ವಿದೇಶ್ ಸೇವಾ ಮೆಡಲ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಹಾಗೂ ಉಡುಪಿ ಪಲಿಮಾರು ಮಠದ ವಿದ್ಯಾದೀಶ ಶ್ರೀಪಾದರು ಅವರ ಪರ್ಯಾಯ ಸಮಯದಲ್ಲಿ ಶ್ರೀಕೃಷ್ಣಾನುಗ್ರಹ ಅಭಿನಂದನಾ ಪ್ರಶಸ್ತಿಯನ್ನು ನೀಡಿದ್ದರು. ಮೃತರು ಪತ್ನಿ ಶಾಂತಾ ಜಿ. ರಾವ್, ಐದು ಪುತ್ರಿಯರು, ಅಳಿಯಂದಿರು ಮೊಮ್ಮಕ್ಕಳು, ಮರಿಮಕ್ಕಳನ್ನು ಆಗಲಿದ್ದಾರೆ.



ಪಡುಬಿದ್ರಿ, ಯೋಗೀಶ್ ಶೆಣೈ

ಮಂಗಳೂರು: ನಗರದ ಏರ್‌ಪೋರ್ಟ್ ರಸ್ತೆ ಕಾವೂರು ನಿವಾಸಿ ಡಾ. ಪಡುಬಿದ್ರಿ ಯೋಗೀಶ್ ಶೆಣೈ (77) ಅವರು ಅಲ್ಪಕಾಲದ ಅಸೌಖ್ಯದಿಂದ ಜೂ.20ರಂದು ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ದಿ. ಪಡುಬಿದ್ರಿ ಸದಾನಂದ ಶೆಣೈ ಅವರ ಪುತ್ರರಾದ ಡಾ. ಪಡುಬಿದ್ರಿ ಯೋಗೀಶ್ ಶೆಣೈ ಅವರು ಕೆಎಂಸಿ ಆಸ್ಪತ್ರೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಕುಟುಂಬ ವೈದ್ಯ ಹಾಗೂ ಸ್ತ್ರೀರೋಗ ತಜ್ಞರಾಗಿದ್ದರು. ನೈಜಿರಿಯಾದಲ್ಲೂ ಕರ್ತವ್ಯ ನಿರ್ವಹಿಸಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳನ್ನು ಆಗಲಿದ್ದಾರೆ.



ಸರೋಜಿನಿ ಅಮ್ಮ

ಮುಳ್ಳೇರಿಯ: ಮುನ್ನಾಡು ಚೇವಿರಿ ಕುಂಞಿಕಣ್ಣನ್ ನಾಯರ್ ಅವರ ಪತ್ನಿ ಕರಿಚ್ಚೇರಿ ಸರೋಜನಿ ಅಮ್ಮ (75) ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಓರ್ವೆ ಪುತ್ರಿಯನ್ನು ಆಗಲಿದ್ದಾರೆ.

ಕೊಡಗು ಜಿಲ್ಲೆಯಾದ್ಯಂತ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

• **ಮಡಿಕೇರಿ:** ಕೊಡಗು ಜಿಲ್ಲೆಯಾದ್ಯಂತ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.



ನಗರದ ಕಾವೇರಿ ಹಾಲ್‌ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಆಯುಷ್ ಇಲಾಖೆ ಸಹಯೋಗದೊಂದಿಗೆ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ವಿಷಯದಡಿ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ನಗರಸಭೆಯ ಅಧ್ಯಕ್ಷೆ ಪಿ.ಕಲಾವತಿ ಅವರು, ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿಯಾಗಿದೆ ಎಂದು ಹೇಳಿದರು.

ಯೋಗ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗದೆ, ಪ್ರತಿನಿತ್ಯ ಜೀವನದಲ್ಲಿ ಯೋಗ ಅಭ್ಯಾಸ ಮಾಡುವ ಮೂಲಕ ಯೋಗ ದಿನಾ ಆಚರಣೆಯಾಬೇಕು. ಪ್ರಸ್ತುತ ದಿನದಲ್ಲಿ ದೈಹಿಕ ಆರೋಗ್ಯ ಶಕ್ತಿ ಮತ್ತು ಫಿಟ್ನೆಸ್ ಹೆಚ್ಚಿಸಿಕೊಳ್ಳಲು ವ್ಯಾಯಾಮ ಶಾಲೆಗಳಿಗೆ ತೆರಳದೆ ಮನೆಯಲ್ಲಿಯೇ ನಿಯಮಿತವಾಗಿ ಯೋಗಾಭ್ಯಾಸ ಮಾಡುವುದರಿಂದ ರಕ್ತದೊತ್ತಡ, ಮಧುಮೇಹ ನಿಯಂತ್ರಣಕ್ಕೆ ಹಾಗೂ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಅವರು ಹೇಳಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ. ಶೈಲಜಾ ಅವರು ಮಾತನಾಡಿ ಯೋಗ/ ವ್ಯಾಯಾಮ ಮಾಡುವುದರಿಂದ ಪ್ರತಿನಿತ್ಯ ಚಟುವಟಿಕೆಯಿಂದ ಇರಲು ಸಾಧ್ಯ. ಆ ನಿಟ್ಟಿನಲ್ಲಿ ಉತ್ತಮ ಆರೋಗ್ಯಕ್ಕೆ ಯೋಗ ಮತ್ತು ವ್ಯಾಯಾಮ ಮಾಡುವುದು ಅತ್ಯಗತ್ಯ ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಸನತ್ ಕುಮಾರ್ ಅವರು ಮಾತನಾಡಿ, ಇಂದಿನ ಪೀಳಿಗೆಗೆ ಯೋಗ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸಬೇಕು. ಯೋಗದ ಮಹತ್ವವನ್ನು ಎಲ್ಲರಿಗೂ ಪರಿಚಯ ಮಾಡಿಸಬೇಕು ಮತ್ತು ದಿನ ನಿತ್ಯ ಯೋಗಾಭ್ಯಾಸ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಸಹನಾ.ಎಸ್.ಹಾದಿಮನಿ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಯೋಗ ತರಬೇತುದಾರರಾದ ಕೆ.ಕೆ. ಮಹೇಶ್ ಕುಮಾರ್, ಕೌಶಿಕ್ ಆಯುಷ್, ನೀಮಾ ಸಂಸ್ಥೆಯ ಡಾ.ರಾಜಾರಾಮ್, ಸಹಾಯಕ ಆಡಳಿತ ಅಧಿಕಾರಿ ಕೆ.ಟಿ.ಕಾವೇರಪ್ಪ, ಶಾಲಾ ಶಿಕ್ಷಣ ಇಲಾಖೆಯ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಬಾಲಚಂದ್ರ, ಪತಂಜಲಿ ಯೋಗ ಶಿಕ್ಷಣ ಸಮಿತಿಯ ಲಿಂಗಪ್ಪ, ಮಾರ್ನಿಂಗ್ ಸ್ಟಾರ್ ಯೋಗ ಸಂಸ್ಥೆಯ ಕವನ್, ಸ್ಕೌಟ್ ಗೈಡ್ ಶಿಕ್ಷಕಿ ದಮಯಂತಿ ಮತ್ತಿತರರು ಇದ್ದರು.

ವೈದ್ಯಾಧಿಕಾರಿಗಳಾದ ಡಾ. ಪಿ.ಜಿ.ಅರುಣ್ ನಿರೂಪಿಸಿದರೆ, ಡಾ.ಪಲ್ಲವಿ ಸ್ವಾಗತಿಸಿ, ಡಾ.ಸರಸ್ವತಿ ವಂದಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕೊಡಗು ವೈದ್ಯಕೀಯ ಶಿಕ್ಷಣ, ಜಿಲ್ಲಾ ಪೊಲೀಸ್, ಯುವ ಸಬಲೀಕರಣ ಮತ್ತು ಕ್ರೀಡೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಸಮಾಜ ಕಲ್ಯಾಣ, ಪದವಿ ಪೂರ್ವ ಶಿಕ್ಷಣ, ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಘಟಕ, ನೆಹರು ಯುವ ಕೇಂದ್ರ, ಕೊಡಗು ಯುವ ಒಕ್ಕೂಟ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಯೋಗ ಭಾರತಿ, ಪ್ರಣವ ಯೋಗ ಕೇಂದ್ರ, ಪತಂಜಲಿ ಯೋಗ ಶಿಕ್ಷಣ, ಆರ್ಟ್ ಆಫ್ ಲಿವಿಂಗ್, ಸ್ಕೌಟ್ಸ್ ಮತ್ತು ಗೈಡ್ಸ್, ನೀಮಾ ಸಂಸ್ಥೆ ಹೀಗೆ ಸರ್ಕಾರಿ ಮತ್ತು ಸರ್ಕಾರೇತರ ವಿವಿಧ ಸಂಸ್ಥೆಗಳು ಸಹಕಾರ ನೀಡಿದ್ದವು.

ಶ್ರೀಕೃಷ್ಣಮಠದ ರಾಜಾಂಗಣದಲ್ಲಿ



12ನೇ ವಿಶ್ವ ಯೋಗ ದಿನವನ್ನು ಭಾನುವಾರ ಉಡುಪಿಯ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಉಡುಪಿ ಶ್ರೀಕೃಷ್ಣ ಮಠ, ಶಿರೂರು ಮಠ ಹಾಗೂ ಪತಂಜಲಿ ಯೋಗ ಪೀಠದ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮಕ್ಕೆ ಶಿರೂರು ಮಠದ ಪರ್ಯಾಯ ಪೀಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಸಾಮೂಹಿಕವಾಗಿ ವಿವಿಧ ಯೋಗಾಸನಗಳು ಮತ್ತು ಪ್ರಾಣಾಯಾಮಗಳನ್ನು ಅಭ್ಯಾಸ ಮಾಡಿದರು.

ನಾಗರಿಕತೆಯ ರಕ್ಷಣೆಯಲ್ಲಿ ಸಂಘ ವಿಶಿಷ್ಟ ಹೆಜ್ಜೆ: ಮುಕುಂದ ಸಿ.ಆರ್.

• **ಕಾಸರಗೋಡು:** ಕಳೆದ 100 ವರ್ಷಗಳಲ್ಲಿ ಸಂಘವು ನಿಶ್ಚಿತ ಹೆಜ್ಜೆಗಳಲ್ಲಿ ಸಾಗಿ ವಿಶಿಷ್ಟ ಪ್ರಯೋಗದ ಮೂಲಕ ನಾಗರಿಕತೆಯ ಸಂರಕ್ಷಣೆಯಲ್ಲಿ ಕೆಲಸ ಮಾಡುತ್ತಿದೆ ಎಂಬುದಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹರಾದ ಮುಕುಂದ ಸಿ.ಆರ್. ಹೇಳಿದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ 100ನೇ ವರ್ಷಾಚರಣೆಯಂಗವಾಗಿ ಭಾನುವಾರ ಸಂಜೆ ಕಾಸರಗೋಡಿನ ಆರ್.ಕೆ. ಮಾಲ್‌ನ ಗ್ರಾಂಡೋರ್ ಆಡಿಟೋರಿಯಂನಲ್ಲಿ ನಡೆದ ವಿಚಾರಗೋಷ್ಠಿ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಮ್ಮ ಮೂಲ ಸನಾತನ ಮೌಲ್ಯಗಳು ಇದರ ಆಳವಾದ ಅಧ್ಯಯನವನ್ನು ಕಂಡುಕೊಂಡ ಚಿಂತಕರು ನಾಗರಿಕತೆಯನ್ನು ಹೇಗೆ ಸಂರಕ್ಷಿಸಬೇಕೆಂಬ ಜಾಗೃತಿ ಮೂಡಿಸುವಲ್ಲಿಯೂ, ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರನಿರ್ಮಾಣ ಎಂಬ ಧ್ಯೇಯದೊಂದಿಗೆ ಸಮಾಜ ಪರಿವರ್ತನೆಯ ಎಲ್ಲಾ ವಲಯದಲ್ಲೂ ಸಂಘ ಬದಲಾವಣೆ ತರುವಲ್ಲಿ ಕೆಲಸ ಮಾಡಿದೆ. ಸಮಾಜದಲ್ಲಿ ತಳಮಟ್ಟದಲ್ಲಿ ಆಗುವ ಬದಲಾವಣೆಯ ಸಂಕಲಿತ ರೂಪವೇ ಹಿಂದು ಸಮಾಜದ ಪರಿವರ್ತನೆಯಲ್ಲಿ ಪ್ರಧಾನವಾಗಿದೆ. ರಾಷ್ಟ್ರದ ಬಗ್ಗೆ ಸಮಾಜದ ಬಗ್ಗೆ ನಮಗಿರುವ ಭಾವನೆಯೇ ನಮ್ಮ ಮೂಲ ತಳಹದಿಯಾಗಿದೆ. ಪ್ರಬುದ್ಧರಾದ ಎಲ್ಲಾ ಬಂಧುಗಳು ಜೊತೆಯಾಗಿ ಪರಿವರ್ತನೆಗಾಗಿ ಸಮಾಜದ ಶಕ್ತಿಯಾಗಿ, ಸಾಮಾಜಿಕವಾಗಿ ನಾಗರಿಕತೆಯನ್ನು ಉಳಿಸುವ ಕೆಲಸದಲ್ಲಿ ಕೈಜೋಡಿಸಬೇಕೆಂದರು.

ಸಂವಾದದಲ್ಲಿ ಸಂಘದ ನೋಂದಣಿ ಹಾಗೂ ಹಣಕಾಸು ವ್ಯವಹಾರದ ಬಗೆಗಿನ ಟೀಕೆ ಬಗ್ಗೆ ಉತ್ತರಿಸಿ, ಕಳೆದ 100 ವರ್ಷಗಳಲ್ಲಿ ಸಂಘವು ಯಾರ ಮುಂದೆಯೂ ಸಹಾಯಕ್ಕಾಗಿ ಕೈ ಚಾಚಿಲ್ಲ, ಗುರುದಕ್ಷಿಣೆಯಾಗಿ ಲಭಿಸುವ ಸಮರ್ಪಣೆಯೇ ಪ್ರಧಾನ ಆದಾಯವಾಗಿದೆ. ಸಮಾಜದ ಮಾಹಾಪಿಡುಗು ಮಾದಕ ವಸ್ತುಗಳ ಬಳಕೆಯನ್ನು ಅಳಿಸಿ ಹಾಕುವಲ್ಲಿ ಸಮಾಜವು ಜೊತೆಯಾಗಿ ಪ್ರಯತ್ನಿಸಬೇಕು ಎಂದರು.

ಪ್ರಬುದ್ಧ ಭಾರತ್ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ವಲಯದ ಗಣ್ಯರು, ಚಿಂತಕರು ಭಾಗವಹಿಸಿದರು.

ಕಣ್ಣೂರು ವಿಭಾಗ್ ಸಂಘಚಾಲಕ್ ನ್ಯಾಯವಾದಿ ಸಿ.ಕೆ. ಶ್ರೀನಿವಾಸನ್, ಜಿಲ್ಲಾ ಕಾರ್ಯವಾಹ್ ಪ್ರಭಾಕರನ್ ಮಾಸ್ಟರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಡಲನಗರಿಯಲ್ಲಿ 'ವಾಕಬಿಲಿಟಿ ಆಡಿಟ್'ಗೆ ಸಂಸದರ ಆಗ್ರಹ

ಮಂಗಳೂರು ಮಾಸ್ಟರ್ ಪ್ಲಾನ್‌ನಲ್ಲಿ ಪಾದಚಾರಿ ಸ್ನೇಹಿ ಯೋಜನೆಗೆ ಒತ್ತಾಯ: ಕ್ಯಾ. ಚೌಟ ಪತ್ರ

• **ಮಂಗಳೂರು:** ಮಂಗಳೂರು ನಗರದ ಮುಂಬರುವ ಮಾಸ್ಟರ್ ಪ್ಲಾನ್‌ನಲ್ಲಿ ಪಾದಚಾರಿಗಳ ಸುರಕ್ಷತೆ, ಸುಗಮ ಓಡಾಟಕ್ಕೆ ಆದ್ಯತೆ ನೀಡುವಂತೆ ಕೋರಿ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.



ದೇಶದಲ್ಲಿ ಪಾದಚಾರಿಗಳ ಹಕ್ಕುಗಳ ಕುರಿತು ಸುಪ್ರೀಂಕೋರ್ಟ್ ನೀಡಿದ ಮಹತ್ವದ ತೀರ್ಪನ್ನು ಉಲ್ಲೇಖಿಸಿ ಸಂಸದರು ಈ ಪತ್ರ ಬರೆದಿದ್ದು, ಅದರ ಪ್ರತಿಯನ್ನು ನಗರಾಭಿವೃದ್ಧಿ ಸಚಿವರು, ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಹಾಗೂ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಆಯುಕ್ತರಿಗೂ ಕಳುಹಿಸಿದ್ದಾರೆ.

ಸುರಕ್ಷಿತ ಪಾದಚಾರಿ ಮಾರ್ಗದಲ್ಲಿ ನಡೆಯುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಗುರುತಿಸಲಾಗಿದ್ದು, ಪಾದಚಾರಿ ಮೂಲಸೌಕರ್ಯ ಒದಗಿಸುವುದು ಮತ್ತು ನಿರ್ವಹಿಸುವುದು ಸ್ಥಳೀಯ ಸಂಸ್ಥೆಗಳು ಹಾಗೂ ಯೋಜನಾ ಪ್ರಾಧಿಕಾರಗಳ ಜವಾಬ್ದಾರಿ ಎಂದು ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಈ ಹಿನ್ನಲೆಯಲ್ಲಿ ಸಿಎಂಗೆ ಪತ್ರ ಬರೆದಿರುವ ಸಂಸದರು, ಭವಿಷ್ಯದ ಮಂಗಳೂರಿನ ಹಲವು ದಶಕಗಳ ಅಭಿವೃದ್ಧಿಗೆ ದಿಕ್ಸೂಚಿಯಾಗಿರುವ ಮಾಸ್ಟರ್ ಪ್ಲಾನ್‌ನಲ್ಲಿ ಪಾದಚಾರಿಗಳ ಸುರಕ್ಷತೆ, ಸುಗಮ ಸಂಚಾರಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು. ನಗರದಲ್ಲಿ ದಿನನಿತ್ಯದ ಸಂಚಾರಕ್ಕಾಗಿ ನಡಿಗೆಯನ್ನೇ ಅವಲಂಬಿಸಿರುವ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ನಿತ್ಯ ಪ್ರಯಾಣಕರು ಮತ್ತು ಕಾರ್ಮಿಕರ ಸಂಖ್ಯೆ ದೊಡ್ಡದಾಗಿದೆ. ನಗರವು ವಿಸ್ತರಣೆಗೊಳ್ಳುತ್ತಾ ವಾಹನ ದಟ್ಟಣೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಸುರಕ್ಷಿತ ಹಾಗೂ ಪಾದಚಾರಿ ಸ್ನೇಹಿ ಫುಟ್‌ಪಾತ್‌ಗಳ ನಿರ್ಮಾಣದ ತೀರಾ ಅಗತ್ಯವಿದೆ ಎಂದು ಹೇಳಿದ್ದಾರೆ.

ಮಾಸ್ಟರ್ ಪ್ಲಾನ್ ಅಂತಿಮಗೊಳಿಸುವ ಮೊದಲು ಮಂಗಳೂರು ನಗರದ ಸಮಗ್ರ 'ಪಾದಚಾರಿ ಮೂಲಸೌಕರ್ಯ ಮತ್ತು ವಾಕಬಿಲಿಟಿ ಆಡಿಟ್' ನಡೆಸುವಂತೆ ಸರ್ಕಾರವನ್ನು ಆಗ್ರಹಿಸಿದ್ದಾರೆ. ಯೋಜನೆ ರೂಪಿಸಲು ಜಿಲ್ಲಾಡಳಿತ, ಮುಡಾ ಹಾಗೂ ಸಂಬಂಧಿತ ಅಧಿಕಾರಿಗಳೊಂದಿಗೆ ಸಹಕರಿಸುವುದಾಗಿ ತಿಳಿಸಿದ್ದಾರೆ.

ಸಲಹೆ ಸೂಚನೆ

ಮಂಗಳೂರು ನಗರಕ್ಕೆ 'ಸಮಗ್ರ ಪಾದಚಾರಿ ಸಂಚಾರ ವ್ಯವಸ್ಥೆ'ಯನ್ನು ರೂಪಿಸುವಂತೆ ಅವರು ಒತ್ತಾಯಿಸಿದ್ದು, ಅಡೆತಡೆ ರಹಿತ ಫುಟ್‌ಪಾತ್‌ಗಳು, ಶಾಲೆ-ಕಾಲೇಜು, ಆಸ್ಪತ್ರೆ, ಮಾರುಕಟ್ಟೆ ಹಾಗೂ ಸಾರಿಗೆ ಕೇಂದ್ರಗಳ ಬಳಿ ಸುರಕ್ಷಿತ ರಸ್ತೆ ದಾಟುವ ವ್ಯವಸ್ಥೆ, ವಿಶೇಷಚೇತನರಿಗೆ ಅನುಕೂಲವಾಗುವ ಮೂಲಸೌಕರ್ಯ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯೊಂದಿಗೆ ಸಂಪರ್ಕ ಹಾಗೂ ಫುಟ್‌ಪಾತ್‌ಗಳ ಮೇಲಿನ ಅತಿಕ್ರಮಣ ಮತ್ತು ಅನಧಿಕೃತ ವಾಹನ ನಿಲುಗಡೆ ತಡೆಗೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಅಜ್ಜಾವರ ಹಾಲು ಉತ್ಪಾದಕರ ಸಹಕಾರ ಸಂಘ ಚುನಾವಣೆ | ಹಿಂದೆ ಸರಿದ ರಾಹುಲ್ ಬಳಗ

ಸಹಕಾರ ಭಾರತಿ ಅಧಿಕಾರ ಗದ್ದುಗೆಗೆ

• **ಸುಳ್ಯ:** ಅಜ್ಜಾವರ ಹಾಲು ಉತ್ಪಾದಕರ ಸಹಕಾರಿ ಸಂಘದ ಚುನಾವಣೆ ಭಾನುವಾರ ನಡೆದಿದ್ದು ಪ್ರಥಮ ಬಾರಿಗೆ ಸಹಕಾರ ಭಾರತಿ ಅಭ್ಯರ್ಥಿಗಳು ತಮ್ಮ ಪ್ರತಿಸ್ಪರ್ಧಿಗಳನ್ನು ಸೋಲುಣಿಸಿ ಅಧಿಕಾರದ ಗದ್ದುಗೆಗೆ ಏರಿದರು.



ಸಹಕಾರ ಭಾರತಿ ಅಭ್ಯರ್ಥಿಗಳಾಗಿ ಕೆ.ಕೇಶವ 32 ಮತ,ನಾರಾಯಣ ಬಂಟ್ರಬೈಲು 32, ಪರಮೇಶ್ವರ ಎಸ್. 31, ಬಾಲಕೃಷ್ಣ 31, ರಾಜ್ ಕುಮಾರ್ ಅತ್ಯಾಡಿ 31, ರೇಖಾ ಜಯರಾಮ 31, ಲವ ಕುಮಾರ 29 ಹಾಗೂ ಮಹಿಳಾ ಮೀಸಲು ಎರಡು ಸ್ಥಾನಗಳಲ್ಲಿ ಧನ್ಯ 33, ನಳಿನಾಕ್ಷಿ 32 ಮತಗಳನ್ನು ಪಡೆದು ಆಯ್ಕೆಯಾದರೆ, ಗುರುರಾಜ್ ಅಜ್ಜಾವರ ಹಾಗೂ ದಯಾನಂದ ಅಡ್ಪಂಗಾಯ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಸಹಕಾರ ಭಾರತಿ ಅಭ್ಯರ್ಥಿಗಳು ಗೆಲುವಿನ ಮೂಲಕ ಪ್ರಥಮ ಬಾರಿಗೆ ಅಧಿಕಾರದ ಗದ್ದುಗೆ ಏರಿದ್ದಾರೆ. ಪ್ರತಿಸ್ಪರ್ಧಿಗಳಾದ ಜನಾರ್ದನ, ಬಾಲಚಂದ್ರ, ಯತಿರಾಜ ಅಡ್ಪಂಗಾಯ, ರಾಹುಲ್ ಎ.ಕೆ, ಸುಲೋಚನ, ಶ್ವೇತ ಪುರುಷೋತ್ತಮ ಒಂದಂಕಿ ಮತಗಳನ್ನು ಪಡೆಯುವ ಮೂಲಕ ಸೋಲೊಪ್ಪಿಕೊಂಡರು.

» ಚುನಾವಣೆ ನಡೆದು ಸಹಕಾರ ಭಾರತಿ ಅಭ್ಯರ್ಥಿಗಳು ಗೆಲುವಿನ ನಗೆ ಬೀರುವ ಮೂಲಕ ಅಧಿಕಾರದ ಚುಕ್ಕಾಣಿಯನ್ನು ಪ್ರಥಮ ಬಾರಿಗೆ ಹಿಡಿದರು.

ಹಿಂದೆ ಸರಿದ ಆಡಳಿರೂಢ ಬಳಗ

ಚುನಾವಣೆ ದಿನಾಂಕ ಘೋಷಣೆ ಬಳಿಕ ನಾಮಪತ್ರ ಸಲ್ಲಿಕೆ ಪರಿಶೀಲನೆ, ನಾಮಪತ್ರ ಹಿಂಪಡೆಯುವ ಎಲ್ಲಾ ಸಂದರ್ಭದಲ್ಲಿ ಅಭ್ಯರ್ಥಿಗಳಾಗಿ ಕಣದಲ್ಲಿದ್ದು ಚುನಾವಣೆಗೆ ಎರಡು ದಿನಗಳು ಉಳಿಕೆಯಾಗಿರುವಂತೆಯೇ ರಾಹುಲ್ ಎ.ಕೆ ಬಳಗವು ಚುನಾವಣಾ ಸ್ಪರ್ಧೆಯಿಂದ ಸ್ವಯಂ ನಿವೃತ್ತಿ ಘೋಷಿಸಿ ಅವಿರೋಧ ಆಯ್ಕೆಗೆ ಒಮ್ಮತದ ನಿರ್ಧಾರ ಕೈಗೊಂಡು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದರು.



ಆದರೆ ಚುನಾವಣೆ ನಿಗದಿಯಾದ ಹಿನ್ನೆಲೆಯಲ್ಲಿ ನಿಯಮಗಳಂತೆ ಚುನಾವಣೆ ನಡೆದು ಸಹಕಾರ ಭಾರತಿ ಅಭ್ಯರ್ಥಿಗಳು ಗೆಲುವಿನ ನಗೆ ಬೀರುವ ಮೂಲಕ ಅಧಿಕಾರದ ಚುಕ್ಕಾಣಿಯನ್ನು ಪ್ರಥಮ ಬಾರಿಗೆ ಹಿಡಿದರು.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಉದ್ಯಮಿಯ ಕೊಡುಗೆ

ದೇವರಿಗೆ ನೂತನ ಬೆಳ್ಳಿಯ ರಥ ಸಮರ್ಪಣೆ

• **ಬೈಂದೂರು:** ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರಿಗೆ ಭಾನುವಾರ ಬೆಂಗಳೂರು ಪದ್ಮಶ್ರೀ ಆರ್.ಎಂ.ಬಿ ಆರಾಧ್ಯ ಟ್ರಸ್ಟ್‌ನ ವತಿಯಿಂದ ಸುಮಾರು ಮೂರುವರೆ ಕೋಟಿ ವೆಚ್ಚದಲ್ಲಿ ನಿರ್ಮಿಸಿದ ನೂತನ ಬೆಳ್ಳಿರಥವನ್ನು ಸಮರ್ಪಿಸಲಾಯಿತು.

ದೇವಳದ ತಂತ್ರಿ, ಪ್ರಧಾನ ಅರ್ಚಕ ಡಾ. ಕೆ. ರಾಮಚಂದ್ರ ಅಡಿಗ ಅವರು ಬೆಳಗ್ಗೆ 6.30ರಿಂದ ಸಂಕಲ್ಪದೊಂದಿಗೆ ಧಾರ್ಮಿಕ ವಿಧಿಗಳನ್ನು ಆರಂಭಿಸಿ ರಥಶುದ್ಧಿ ಹೋಮ, ರಥದಿಕ್ಪಾಲ ಬಲಿ, ಪೀಠಪೂಜೆ ನೆರವೇರಿಸಿ, ಶ್ರೀ ಮೂಕಾಂಬಿಕೆಗೆ ವಿಶೇಷ ಪೂಜೆ ಸಲ್ಲಿಸಿ 11 ಗಂಟೆಗೆ ನೂತನ ಬೆಳ್ಳಿರಥವನ್ನು ದೇವರಿಗೆ ಸಮರ್ಪಿಸಿದರು. ನಂತರ ದೇವಳದ ಒಳಪ್ರಾಂಗಣದಲ್ಲಿ ನೂತನ ರಥದಲ್ಲಿ ದೇವರ ಉತ್ಸವ ನೆರವೇರಿತು.



ದೇವಳದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ, ಸದಸ್ಯರಾದ ಆಲೂರು ರಘುರಾಮ ದೇವಾಡಿಗ, ಮಹಾಲಿಂಗ ನಾಯ್ಕ್ ಜೋಗಿಜೆಡ್ಡು, ಯು. ರಾಜೇಶ ಕಾರಂತ್, ಸುಧಾ ಕೆ., ಧನಾಕ್ಷಿ ವಿಶ್ವನಾಥ ಹಾಗೂ ಟ್ರಸ್ಟ್‌ನ ಪದಾಧಿಕಾರಿಗಳು, ಆರಾಧ್ಯ ಕುಟುಂಬ ಸದಸ್ಯರು ಇದ್ದರು.

ಸೋಮವಾರದ ಪಂದ್ಯಗಳು

ನಾರ್ವೆ-ಸೆನೆಗಲ್ (ಬೆಳಗ್ಗೆ 5:30)

ಜೋರ್ಡನ್-ಅಲ್ಜೀರಿಯಾ (ಬೆಳಗ್ಗೆ 8:30)

ಇಂಗ್ಲೆಂಡ್-ಘಾನಾ (ಮಧ್ಯರಾತ್ರಿ 1:30)

ಕಿರುಸುದ್ದಿ

ಅಭಯ್-ವೆಲವನ್‌ಗೆ ಪ್ರಶಸ್ತಿ

ಹೊಸದಿಲ್ಲಿ: ಭಾರತದ ಅಗ್ರ ಶ್ರೇಯಾಂಕಿತ ಜೋಡಿ ಅಭಯ್ ಸಿಂಗ್ ಮತ್ತು ವೆಲವನ್ ಸೆಂಥಿಲ್‌ಕುಮಾರ್, ಭಾನುವಾರ ಮಲೇಷ್ಯಾದ ಸರವಾಕ್‌ನಲ್ಲಿ ನಡೆದ ಏಷ್ಯನ್ ಡಬಲ್ಸ್ ಸ್ಕ್ವಾಷ್ ಚಾಂಪಿಯನ್‌ಶಿಪ್‌ನಲ್ಲಿ ಸತತ ಮೂರನೇ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಕಾಂಟಿನೆಂಟಲ್ ಗೇಮ್ಸ್‌ನಲ್ಲಿ ತಮ್ಮ ಪ್ರಾಬಲ್ಯವನ್ನು ವಿಸ್ತರಿಸಿದರು. ಒಂದು ಪಂದ್ಯದಲ್ಲಿ ಹಿನ್ನಡೆ ಅನುಭವಿಸಿದ ಭಾರತೀಯ ಜೋಡಿ, ಪಾಕಿಸ್ತಾನದ ಎರಡನೇ ಶ್ರೇಯಾಂಕದ ನಾಸಿರ್ ಇಕ್ಬಾಲ್ ಮತ್ತು ನೂರ್ ಜಮಾನ್ ಜೋಡಿಯನ್ನು 47 ನಿಮಿಷಗಳಲ್ಲಿ 7-11, 11-7, 11-2 ಸೆಟ್‌ಗಳಿಂದ ಸೋಲಿಸಿ ಪರಾಕ್ರಮ ಮೆರೆಯಿತು. ಈ ಗೆಲುವು ಅಭಯ್ ಮತ್ತು ವೆಲವನ್ ಅವರ ಪುರುಷರ ಡಬಲ್ಸ್ ಪ್ರಶಸ್ತಿಗಳ ಹ್ಯಾಟ್ರಿಕ್ ಅನ್ನು ಪೂರ್ಣಗೊಳಿಸಿತು.

300 ಮಂದಿಯಿಂದ 21 ಆಸನ: ಗಿನ್ನಿಸ್ ದಾಖಲೆ



ಬೆಂಗಳೂರು: 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ದ್ರಾವಿಡ್-ಪಡುಕೋಣೆ ಅಕಾಡೆಮಿಯಲ್ಲಿ ಅಕ್ಷರ್ ಯೋಗ ಕೇಂದ್ರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗಿನ್ನಿಸ್ ದಾಖಲೆಯೊಂದು ಆಯಿತು. ಒಟ್ಟು 21 ಆಸನಗಳನ್ನು ಸುಮಾರು 300 ಮಂದಿ ಸ್ಪರ್ಧಾಳುಗಳು ನಿರ್ವಹಿಸಿದ್ದು, ಒಂದೇ ದಿನ 21 ಆಸನಗಳು ಕೂಡ ಗಿನ್ನಿಸ್ ದಾಖಲೆಗೆ ಒಳಗಾಗಿವೆ. ಹಿಮಾಲಯನ್ ಸಿದ್ಧ ಅಕ್ಷರ್ ಗುರೂಜಿ ಸಾರಥ್ಯದಲ್ಲಿ ಯೋಗಾಸನ ಹಾಗೂ ತಾರಕ್ ಮೆಡಿಟೇಷನ್ ಮಾಡಲಾಗಿದ್ದು, ಅಧಿಕೃತ ಗಿನ್ನಿಸ್ ಸಂಸ್ಥೆಯ ಅಧಿಕಾರಿಗಳು ಈ ದಾಖಲೆಯನ್ನು ಅಧಿಕೃತವಾಗಿ ಪುಸ್ತಕದಲ್ಲಿ ಸೇರ್ಪಡೆಗೊಳಿಸಿದ್ದಾರೆ.

ಜೂ. ಜಿಮ್ನಾಸ್ಟಿಕ್: ಭಾರತಕ್ಕೆ 2 ಪದಕ

ಹೊಸದಿಲ್ಲಿ: ಚೀನಾದ ಜುನಿಯಲ್ಲಿ ಭಾನುವಾರ ನಡೆದ ಏಷ್ಯನ್ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಚಾಂಪಿಯನ್‌ಶಿಪ್‌ನ ಜೂನಿಯರ್ ಪುರುಷರ ವಾಲ್ಟ್ ಸ್ಪರ್ಧೆಯಲ್ಲಿ ಭಾರತೀಯ ಜಿಮ್ನಾಸ್ಟ್‌ಗಳಾದ ಹರ್ಷಿತ್ ದಾಮೋದರನ್ ಮತ್ತು ಅಕ್ಷತ್ ಬಜಾಜ್ ಚಿನ್ನ-ಬೆಳ್ಳಿ ಪದಕ ಗಳಿಸುವ ಮೂಲಕ ಇತಿಹಾಸ ಬರೆದರು. ಹರ್ಷಿತ್ 13.649 ಅಂಕಗಳೊಂದಿಗೆ ವೇದಿಕೆಯನ್ನು ಅಗ್ರಸ್ಥಾನದಲ್ಲಿಟ್ಟರೆ, ಅಕ್ಷತ್ 13.433 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ಹರ್ಷಿತ್ ಎರಡು ಸ್ಥಿರ ವಾಲ್ಟ್‌ಗಳನ್ನು ಪ್ರದರ್ಶಿಸಿದರು, ಅವರ ಮೊದಲ ಪ್ರಯತ್ನದಲ್ಲಿ 13.866 ಅಂಕಗಳನ್ನು ಗಳಿಸಿದರು, ಇದು 4.8 ರ ಕಷ್ಟದ (ಡಿ) ಸ್ಕೋರ್ ಮತ್ತು ಅವರ ಎರಡನೇ ವಾಲ್ಟ್‌ನಲ್ಲಿ 13.433 ಅಂಕಗಳನ್ನು ಗಳಿಸಿತು. ಅವರ ಪ್ರಯತ್ನವು ದೇಶವಾಸಿ ಅಕ್ಷತ್‌ಗಿಂತ ಮೊದಲು ಅಗ್ರ ಸ್ಥಾನವನ್ನು ಗಳಿಸಿತು.

ಬಾಕ್ಸಿಂಗ್: ಭಾರತಕ್ಕೆ 12 ಪದಕ

ಹೊಸದಿಲ್ಲಿ: ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವ ಭಾರತದ ಬಾಕ್ಸರ್‌ಗಳು ಎಂಟು ಚಿನ್ನ ಸೇರಿದಂತೆ 12 ಪದಕಗಳನ್ನು ಗೆದ್ದು, ಜೆಕಿಯಾದಲ್ಲಿ ನಡೆದ ಆಹ್ವಾನಿತ 56 ನೇ ಗ್ರ್ಯಾಂಡ್ ಪ್ರಿಕ್ಸ್ ಉಸ್ತಿ ನಾಡ್ ಲ್ಯಾಬೆಮ್‌ನಲ್ಲಿ ವಿಶ್ವಾಸ ಹೆಚ್ಚಿಸಿಕೊಂಡರು. ಐದು ಸದಸ್ಯರ ಮಹಿಳಾ ತಂಡವು ನಾಲ್ಕು ಚಿನ್ನದ ಪದಕಗಳು ಮತ್ತು ಒಂದು ಬೆಳ್ಳಿಯನ್ನು ಗೆಲ್ಲುವ ಮೂಲಕ ಮುನ್ನಡೆ ಸಾಧಿಸಿತು. ಒಲಿಂಪಿಕ್ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ (75 ಕೆಜಿ), ಹಾಲಿ ಏಷ್ಯನ್ ಚಾಂಪಿಯನ್ ಪ್ರೀತಿ ಪವಾರ್ (54 ಕೆಜಿ), ಸಾಕ್ಷಿ ಚೌಧರಿ (51 ಕೆಜಿ) ಮತ್ತು ಪ್ರಿಯಾ ಘಂಘಾಸ್ (60 ಕೆಜಿ) ಎಲ್ಲರೂ ತಮ್ಮ ಫೈನಲ್‌ಗಳಲ್ಲಿ ಸರ್ವಾನುಮತದ ಗೆಲುವು ಸಾಧಿಸುವ ಮೂಲಕ ಚಿನ್ನ ಗೆದ್ದರು. ಪರ್ವೀನ್ ಹೂಡಾ (65 ಕೆಜಿ) ಬೆಳ್ಳಿ ಪದಕವನ್ನು ಸೇರಿಸಿ ಮಹಿಳಾ ತಂಡದ ಪ್ರಭಾವಶಾಲಿ ಪ್ರದರ್ಶನವನ್ನು ಪೂರ್ಣಗೊಳಿಸಿದರು.

ಪುರುಷರ ತಂಡವು ನಾಲ್ಕು ಚಿನ್ನದ ಪದಕಗಳೊಂದಿಗೆ ಮಹಿಳೆಯರ ಯಶಸ್ಸನ್ನು ಸರಿಗಟ್ಟಿತು. ಜಾದುಮಣಿ ಸಿಂಗ್ (55 ಕೆಜಿ), ಸಚಿನ್ (60 ಕೆಜಿ), ಅಂಕುಶ್ (80 ಕೆಜಿ) ಮತ್ತು ನರೇಂದರ್ (+90 ಕೆಜಿ) ಆಯಾ ವಿಭಾಗಗಳಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಸ್ವೀಡನ್‌ಗೆ ಡಚ್ಚರ ಡಿಚ್ಚಿ!

ಹ್ಯೂಸ್ಟನ್: ಬ್ರಿಯಾನ್ ಬ್ರಾಬಿ ಹಾಗೂ ಕೋಡಿ ಗಾಕ್ಪೋ ತಲಾ ಎರಡು ಗೋಲುಗಳನ್ನು ದಾಖಲಿಸಿದ ಪರಿಣಾಮ ನೆದರ್ಲೆಂಡ್ಸ್ ತಂಡ ಸ್ವೀಡನ್ ವಿರುದ್ಧ 5-1 ಅಂತರದ ಭರ್ಜರಿ ಜಯ ಸಾಧಿಸಿದೆ. ಮೊದಲ ಪಂದ್ಯದಲ್ಲಿ ಜಪಾನ್ ವಿರುದ್ಧ 2-2 ಡ್ರಾ ಸಾಧಿಸಿ ನಿರಾಸೆ ಅನುಭವಿಸಿದ್ದ ಡಚ್ ಪಡೆ, ಈ ತನ್ನ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿದೆ. ಪಂದ್ಯದ 5ನೇ ನಿಮಿಷದಲ್ಲೇ ಕೋಡಿ ಗಾಕ್ಪೋ ನೀಡಿದ ಕ್ರಾಸ್‌ನ್ನು ಬ್ರಿಯಾನ್ ಬ್ರಾಬಿ ಗೋಲಾಗಿ ಪರಿವರ್ತಿಸಿ ತಂಡಕ್ಕೆ ಮುನ್ನಡೆ ತಂದರು. 17ನೇ ನಿಮಿಷದಲ್ಲಿ ಡೆಂಜೆಲ್ ಡಮ್‌ಫ್ರಿಸ್ ಅವರ ಕ್ರಾಸ್‌ಗೆ ಮತ್ತೊಮ್ಮೆ ಸ್ಪಂದಿಸಿದ ಬ್ರಾಬಿ, ಎರಡನೇ ಗೋಲು ದಾಖಲಿಸಿ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಎರಡನೇ ಅರ್ಧ ಆರಂಭವಾಗುತ್ತಿದ್ದಂತೆಯೇ ಗಾಕ್ಪೋ ಮಿಂಚಿದರು. 47ನೇ ನಿಮಿಷದಲ್ಲಿ ಡಮ್‌ಫ್ರಿಸ್ ಕ್ರಾಸ್‌ನಿಂದ ಗೋಲು ಬಾರಿಸಿದ ಅವರು, 54ನೇ ನಿಮಿಷದಲ್ಲಿ ಮತ್ತೊಂದು ಅದ್ಭುತ ಶಾಟ್ ಮೂಲಕ ಸ್ಕೋರ್ ಅನ್ನು 4-0ಕ್ಕೆ ಏರಿಸಿದರು. 59ನೇ ನಿಮಿಷದಲ್ಲಿ ಆಂಥನಿ ಎಲಾಂಗಾ ಸ್ವೀಡನ್ ಪರ ಏಕೈಕ ಗೋಲು ದಾಖಲಿಸಿ ಅಂತರ ಕಡಿಮೆ ಮಾಡಿದರೂ, ಅದು ಕೇವಲ ಸಮಾಧಾನದ ಗೋಲಾಗಿ ಉಳಿಯಿತು. ಪಂದ್ಯದ ಕೊನೆಯ ಕ್ಷಣದಲ್ಲಿ ಕ್ರಿಸೆನ್ಸಿಯೊ ಸಮ್ಮರ್‌ವಿಲ್ ಮತ್ತೊಂದು ಗೋಲು ದಾಖಲಿಸಿ ನೆದರ್ಲೆಂಡ್ಸ್ ಗೆಲುವಿಗೆ ಮೆರುಗು ತಂದರು.

ಗೋಲುಗಳ ವಿವರ

- 5ನೇ ನಿಮಿಷ: ಬ್ರಿಯಾನ್ ಬ್ರಾಬಿ (ನೆದರ್ಲೆಂಡ್ಸ್)
- 17ನೇ ನಿಮಿಷ: ಬ್ರಿಯಾನ್ ಬ್ರಾಬಿ (ನೆದರ್ಲೆಂಡ್ಸ್)
- 47ನೇ ನಿಮಿಷ: ಕೋಡಿ ಗಾಕ್ಪೋ (ನೆದರ್ಲೆಂಡ್ಸ್)
- 54ನೇ ನಿಮಿಷ: ಕೋಡಿ ಗಾಕ್ಪೋ (ನೆದರ್ಲೆಂಡ್ಸ್)
- 59ನೇ ನಿಮಿಷ: ಆಂಥನಿ ಎಲಾಂಗಾ (ಸ್ವೀಡನ್)
- 89ನೇ ನಿ : ಕ್ರಿಸೆನ್ಸಿಯೊ ಸಮ್ಮರ್‌ವಿಲ್ (ನೆದರ್ಲೆಂಡ್ಸ್)



ಜಪಾನ್‌ಗೆ ಜಯ

ಮಾಂಟೆರ್ರಿ (ಮೆಕ್ಸಿಕೊ): ಅಯಾಸಾ ಉಯೆಡಾ ಅವರ ಎರಡು ಗೋಲುಗಳ ನೆರವಿನಿಂದ ಜಪಾನ್ ತಂಡ ಟುನೀಶಿಯಾವನ್ನು 4-0 ಅಂತರದಿಂದ ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತದತ್ತ ಮತ್ತೊಂದು ಬಲಿಷ್ಠ ಹೆಜ್ಜೆ ಇಟ್ಟಿದೆ. ಈ ಗೆಲುವಿನೊಂದಿಗೆ ಜಪಾನ್ ನಾಲ್ಕು ಅಂಕಗಳೊಂದಿಗೆ ಗ್ರೂಪ್ ಎಫ್‌ನಲ್ಲಿ ನೆದರ್‌ಲ್ಯಾಂಡ್ಸ್‌ಗೆ ಸಮವಾಗಿದೆ. ಆದರೆ ಗೋಲುಗಳ ಅಂತರದಲ್ಲಿ ಡಚ್ ಪಡೆ ಅಗ್ರಸ್ಥಾನದಲ್ಲಿದೆ. ಇನ್ನೊಂದೆಡೆ ಸತತ ಎರಡನೇ ಸೋಲು ಕಂಡ ಟುನೀಶಿಯಾ ಟೂರ್ನಿಯಿಂದ ಅಧಿಕೃತವಾಗಿ ಹೊರಬಿದ್ದಿದೆ. ಜಪಾನ್ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿತು. ಪಂದ್ಯ ಆರಂಭವಾಗಿ ಕೇವಲ ನಾಲ್ಕು ನಿಮಿಷಗಳಲ್ಲೇ ಡೈಚಿ ಕಾಮಡಾ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ತಂದರು. ಕೈಟೋ ನಕಮುರಾ ನೀಡಿದ ಅದ್ಭುತ ಕ್ರಾಸ್ ಅನ್ನು ಕಾಮಡಾ ಸುಲಭವಾಗಿ ಗೋಲಾಗಿ ಪರಿವರ್ತಿಸಿದರು.

ಗೋಲುಗಳ ವಿವರ

- 4ನೇ ನಿಮಿಷ: ಡೈಚಿ ಕಾಮಡಾ (ಜಪಾನ್)
- 1ನೇ ನಿಮಿಷ: ಉಯೆಡಾ (ಜಪಾನ್)
- 69ನೇ ನಿಮಿಷ: ಜುನ್ಯಾ ಇಟೋ (ಜಪಾನ್)
- 83ನೇ ನಿಮಿಷ: ಉಯೆಡಾ (ಜಪಾನ್)

31ನೇ ನಿಮಿಷದಲ್ಲಿ ಅಯಾಸೆ ಉಯೆಡಾ ಮಧ್ಯಭಾಗದಿಂದ ಚೆಂಡನ್ನು ಮುನ್ನಡೆಸಿಕೊಂಡು ಬಂದು ಬಾಕ್ಸ್ ಹೊರಗಿನಿಂದ ಸಿಡಿಸಿದ ಅದ್ಭುತ ಶಾಟ್ ನೇರವಾಗಿ ಗೋಲಿನ ಎಡ ಮೂಲೆಗೆ ಸೇರಿತು. ಇದರಿಂದ ಜಪಾನ್ 2-0 ಮುನ್ನಡೆ ಪಡೆಯಿತು. 69ನೇ ನಿಮಿಷದಲ್ಲಿ ಉಯೆಡಾ ನೀಡಿದ ಫ್ಲಿಕ್ ಪಾಸ್‌ನ್ನು ಜುನ್ಯಾ ಇಟೋ ಗೋಲಾಗಿ ಪರಿವರ್ತಿಸಿ ಸ್ಕೋರ್ 3-0ಕ್ಕೆ ಏರಿಸಿದರು. 83ನೇ ನಿಮಿಷದಲ್ಲಿ ಉಯೆಡಾ ಅದ್ಭುತ ಹೆಡರ್ ಮೂಲಕ ತಮ್ಮ ಎರಡನೇ, ತಂಡದ ನಾಲ್ಕನೇ ಗೋಲು ದಾಖಲಿಸಿ ಜಪಾನ್‌ನ ಭರ್ಜರಿ ಗೆಲುವು ಖಚಿತ ಪಡಿಸಿದರು.

- ಕುರಕಾವೊ 0-0 ಇಕ್ವೆಡಾರ್
- ಎಲೋಯ್ ರೂಮ್‌ನಿಂದ 15 ಸೇವ್‌ಗಳು
- ಕುರಕಾವೊಗೆ ಮೊದಲ ವಿಶ್ವಕಪ್ ಅಂಕ

ಇಕ್ವೆಡಾರ್ ವಿರುದ್ಧ ಡ್ರಾ, ಗೋಲ್‌ಕೀಪರ್ ರೂಮ್ ಮಿಂಚು

ಕುರಕಾವೊ ಐತಿಹಾಸಿಕ ಸಾಧನೆ

ಕ್ಯಾನ್ಸಾಸ್ ಸಿಟಿ: ಮೊದಲ ಬಾರಿಗೆ ಆಡುತ್ತಿರುವ ಕುರಕಾವೊ ತಂಡ ತನ್ನ ಇತಿಹಾಸದ ಮೊದಲ ವಿಶ್ವಕಪ್ ಅಂಕವನ್ನು ಸಂಪಾದಿಸಿದೆ. ಗೋಲ್‌ಕೀಪರ್ ಎಲೋಯ್ ರೂಮ್ ಅವರ ಅಸಾಧಾರಣ ಪ್ರದರ್ಶನದ ನೆರವಿನಿಂದ ಬಲಿಷ್ಠ ಇಕ್ವೆಡಾರ್ ವಿರುದ್ಧ 0-0 ಗೋಲುರಹಿತ ಡ್ರಾ ಸಾಧಿಸಿತು. 37 ವರ್ಷದ ರೂಮ್ ಇಡೀ ಪಂದ್ಯದಲ್ಲಿ ಇಕ್ವೆಡಾರ್‌ನ ನಿರಂತರ ದಾಳಿಗಳನ್ನು ತಡೆಯುತ್ತಾ ಬರೋಬ್ಬರಿ 15 ಸೇವ್‌ಗಳನ್ನು ಮಾಡಿ ವಿಶ್ವಕಪ್ ಇತಿಹಾಸದ ಶ್ರೇಷ್ಠ ಗೋಲ್‌ಕೀಪಿಂಗ್ ಪ್ರದರ್ಶನಗಳಲ್ಲಿ ಒಂದನ್ನು ದಾಖಲಿಸಿದರು. 2014ರಲ್ಲಿ ಅಮೆರಿಕದ ಟಿಮ್ ಹೋವರ್ಡ್ ಮಾಡಿದ್ದ 16 ಸೇವ್‌ಗಳ ದಾಖಲೆಗೆ ಕೇವಲ ಒಂದು ಸೇವ್ ಕಡಿಮೆಯಾಯಿತು.



ಐವರಿ ಕೋಸ್ಟ್‌ಗೆ ಆಘಾತ, ನಾಕೌಟ್‌ಗೆ ಜರ್ಮನಿ

ಟೊರೊಂಟೊ: ಬದಲಿ ಆಟಗಾರ ಡೆನಿಸ್ ಉಂಡಾವ್ ಅವರ ಎರಡು ಗೋಲುಗಳ ನೆರವಿನಿಂದ ಜರ್ಮನಿ ತಂಡ ಐವರಿ ಕೋಸ್ಟ್ ವಿರುದ್ಧ 2-1 ಅಂತರದ ರೋಚಕ ಗೆಲುವು ದಾಖಲಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ.

ಮೊದಲಾರ್ಧದಲ್ಲಿ ಐವರಿ ಕೋಸ್ಟ್ ಮೇಲುಗೈ ಸಾಧಿಸಿತು. 30ನೇ ನಿಮಿಷದಲ್ಲಿ ನಾಯಕ ಫ್ರಾಂಕ್ ಕೆಸ್ಸಿಯೆ ಗೋಲು ಬಾರಿಸಿ ತಂಡಕ್ಕೆ 1-0 ಮುನ್ನಡೆ ತಂದುಕೊಟ್ಟರು. ಅಮಾದ್ ಡಿಯಾಲೊ ಅವರ ಪ್ರಯತ್ನವನ್ನು ಜರ್ಮನಿಯ ರಕ್ಷಣಾಪಡೆ ತಡೆದರೂ, ರೀಬೌಂಡ್ ಆದ ಚೆಂಡನ್ನು ಕೆಸ್ಸಿಯೆ ಖಾಲಿ ಗೋಲಿನೊಳಗೆ ತಳ್ಳಿದರು. ಜರ್ಮನಿಗೆ ಮೊದಲಾರ್ಧದಲ್ಲಿ ಎರಡು ಬಾರಿ ಗೋಲು ಸಿಕ್ಕರೂ ಎರಡನ್ನೂ ರೆಫರಿ ಅಮಾನ್ಯಗೊಳಿಸಿದರು. ಇದರಿಂದ ತಂಡ ಒತ್ತಡಕ್ಕೆ ಸಿಲುಕಿತು. ದ್ವಿತೀಯಾರ್ಧದಲ್ಲಿ ಕೋಚ್ ಮಾಡಿದ ಬದಲಾವಣೆ ಫಲ ನೀಡಿತು. 60ನೇ ನಿಮಿಷದಲ್ಲಿ ಮೈದಾನಕ್ಕಿಳಿದ ಡೆನಿಸ್ ಉಂಡಾವ್ 68ನೇ ನಿಮಿಷದಲ್ಲಿ ನಾಡಿಯಂ ಅಮಿರಿ ಅವರ ದೀರ್ಘ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿ ಸಮಬಲ ಸಾಧಿಸಿದರು. ಪಂದ್ಯ ಡ್ರಾಗೆ ಸಾಗುತ್ತಿದೆ ಎನ್ನುವಾಗ, ಹೆಚ್ಚುವರಿ ಸಮಯದ ನಾಲ್ಕನೇ ನಿಮಿಷದಲ್ಲಿ ಫೆಲಿಕ್ಸ್ ನೆಮ್ಚಾ ಅವರ ಪಾಸ್ ಸ್ವೀಕರಿಸಿದ ಉಂಡಾವ್ ಅದ್ಭುತ ಶಾಟ್ ಮೂಲಕ ಗೋಲು ಬಾರಿಸಿ ಜರ್ಮನಿಗೆ 2-1ರ ಗೆಲುವು ತಂದುಕೊಟ್ಟರು.

- ಜರ್ಮನಿ 2-1 ಐವರಿ ಕೋಸ್ಟ್
- ಡೆನಿಸ್ ಉಂಡಾವ್: 2 ಗೋಲು (68ನೇ ನಿ., 90+4ನೇ ನಿ.)
- ಫ್ರಾಂಕ್ ಕೆಸ್ಸಿಯೆ: (30ನೇ ನಿ.)

ಮಹಿಳೆಯರ ಎಫ್‌ಐಎಚ್ ನೇಷನ್ಸ್ ಕಪ್!

ಭಾರತ ಚಾಂಪಿಯನ್



ಆಕ್ಲೆಂಡ್: ಹಾಕಿ ಕ್ಷೇತ್ರದಲ್ಲಿ ಭಾರತ ಮತ್ತೊಮ್ಮೆ ಇತಿಹಾಸ ಬರೆಯಿತು. ವಿಶ್ವ ಹಾಕಿ ಸಂಸ್ಥೆ(ಎಫ್‌ಐಎಚ್) ನಡೆಸುವ ಪ್ರೊ ಲೀಗ್ ನೇಷನ್ಸ್ ಕಪ್ ಪಂದ್ಯಾವಳಿಯನ್ನು ಬಾಚಿಕೊಂಡ ಭಾರತ ಮಹಿಳಾ ಹಾಕಿ ತಂಡವು ದೇಶವೇ ಸಂಭ್ರಮ ಪಡುವಂತೆ ಮಾಡಿದೆ.

ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಭಾರತ ಭರ್ಜರಿ ಪ್ರದರ್ಶನ ನೀಡಿತು. ಆತಿಥೇಯರ ವಿರುದ್ಧವೇ ನಡೆದ ಪಂದ್ಯದಲ್ಲಿ 2-0ರಿಂದ ಪ್ರಾಬಲ್ಯ ಸಾಧಿಸಿತು. ನವನೀತ್ ಕೌರ್ 4ನೇ ನಿಮಿಷ, ಸುನೇಲಿತಾ 15ನೇ ನಿಮಿಷದ ವೇಳೆ ಗೋಲು ಮಾಡಿದರು.

ಪಂದ್ಯದಲ್ಲಿ ಮೊದಲಿನಿಂದಲೂ ಎದುರಾಳಿಗಳು ಬಾಲ್ ಮೇಲೆ ಹಿಡಿತ ಸಾಧಿಸಿದ್ದವು. ಆದರೆ ಮೊದಲ ಗೋಲು ಗಳಿಸಲು ಭಾರತಕ್ಕೆ ಕೇವಲ ಒಂದು ಅವಕಾಶ ಸಾಕಿತ್ತು. ಅದು ನಾಲ್ಕನೇ ನಿಮಿಷದ ವೇಳೆ ನವನೀತ್ ಕೌರ್‌ಗೆ ಸಿಕ್ಕೇಬಿಡ್ತು. ಮುಂದುವರಿಸುತ್ತಾ ಭಾರತ 15ನೇ ನಿಮಿಷದಲ್ಲಿ ಮುನ್ನಡೆಯನ್ನು ವಿಸ್ತರಿಸಿತು. ಪಂದ್ಯವಿಡೀ ಗೋಲು ಬಿಟ್ಟುಕೊಡದ ರಕ್ಷಣಾ ವಿಭಾಗ ಪಂದ್ಯದ ಗೆಲುವನ್ನು ಖಚಿತಪಡಿಸಿತು. ಲಾಲ್ರೆಮ್‌ಸಿಯಾಮಿ ಪಂದ್ಯಶ್ರೇಷ್ಠ ಆಟಗಾರ್ತಿ ಗೆದ್ದುಕೊಂಡರು. ದೀಪಿಕಾ ಪಂದ್ಯಾವಳಿಯ ಬೆಸ್ಟ್ ಸ್ಕೋರರ್‌ಗಳಲ್ಲಿ ಒಬ್ಬರಾದರು. 6 ಗೋಲಿನೊಂದಿಗೆ ಗಮನ ಸೆಳೆದರು. 2022ರಲ್ಲೇ ಶುರುವಾಗಿರುವ ಈ ನೇಷನ್ಸ್ ಕಪ್ ಪಂದ್ಯಾವಳಿಯಲ್ಲಿ ಭಾರತ ಎರಡನೇ ಬಾರಿ ಗೆದ್ದುಕೊಂಡಿದೆ. ಪಂದ್ಯಾವಳಿಯುದ್ದಕ್ಕೂ ಭಾರತ ಮಿಂಚುತ್ತಲೇ ಪ್ರದರ್ಶನ ನೀಡಿತು. ಮೊದಲಿಗೆ ಅಮೆರಿಕ ವಿರುದ್ಧ ಆಡಿದ್ದ ಸಲೀಮಾ ಬಳಗ, 3-2ರಿಂದ ಗೆದ್ದುಕೊಂಡಿತು. ನಂತರ ಜಪಾನ್ ತಂಡವನ್ನು ಎದುರಿಸಿತ್ತು. 2-1ರಿಂದ ಅವರನ್ನೂ ಮಣಿಸಿದ ಭಾರತ ನಂತರ ಉರುಗ್ವೆ 3-2ರಿಂದ ಗೆದ್ದುಕೊಂಡಿತ್ತು. ಎಲ್ಲದಕ್ಕೂ ಹೆಚ್ಚಾಗಿ ಭಾರತ ಸೆಮಿಫೈನಲ್ ಪಂದ್ಯದಲ್ಲಿ ಚಿಲಿ ತಂಡವನ್ನು 6-0ರಿಂದ ಸೋಲಿಸಿ ಆತ್ಮವಿಶ್ವಾಸ ಗಳಿಸಿತ್ತು. ಈ ಗೆಲುವಿನ ಬಳಿಕ ಭಾರತ ಹಾಕಿ ಸಂಸ್ಥೆಯು ತಂಡದ ಪ್ರತಿಯೊಬ್ಬರಿಗೂ ತಲಾ 3 ಲಕ್ಷ ರೂ. ಬಹುಮಾನ ಘೋಷಿಸಿದೆ. ಅಲ್ಲದೆ ಸಪೋರ್ಟಿಂಗ್ ಸ್ಟಾಫ್‌ಗೆ 1.5 ಲಕ್ಷ ರೂ. ನೀಡಲಿದೆ.

ಪ್ರಧಾನಿ ಮೋದಿ ಶ್ಲಾಘನೆ

ಗೆಲುವಿನ ಬಗ್ಗೆ ಖುಷಿ ವ್ಯಕ್ತ ಪಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ತಮ್ಮ ಎಕ್ಸ್ ಖಾತೆಯಲ್ಲಿ, ನೇಷನ್ಸ್ ಕಪ್ ಗೆದ್ದ ಭಾರತ ತಂಡಕ್ಕೆ ಅಭಿನಂದನೆಗಳು. ಪಂದ್ಯಾವಳಿಯುದ್ದಕ್ಕೂ ನೀಡಿದ ಅತ್ಯುತ್ತಮ ಪ್ರದರ್ಶನವೇ ಗೆಲುವಿಗೆ ಕಾರಣ. ತಂಡಕ್ಕೆ ಶುಭಹಾರೈಸುತ್ತೇನೆ. ಈ ಗೆಲುವು ಭಾರತದ ಹಾಕಿ ಆಟಗಾರರಿಗೆ ಪ್ರೇರಣೆ ನೀಡಲಿ ಎಂದು ಬರೆದುಕೊಂಡಿದ್ದಾರೆ.

ಕಾಪ್ ಅಬ್ಬರ, ಭಾರತಕ್ಕೆ ಸೋಲು

ಮ್ಯಾಂಚೆಸ್ಟರ್: ಮಹಿಳೆಯರ ಟಿ20 ವಿಶ್ವಕಪ್‌ನಲ್ಲಿನ ಭಾರತ ಗೆಲುವಿನ ಅಭಿಯಾನಕ್ಕೆ ದಕ್ಷಿಣ ಆಫ್ರಿಕಾ ತಡೆಯೊಡ್ಡಿದೆ. ಮಾರಿಝುನ್ ಕಾಪ್ ಅವರ 81★ ರನ್‌ಗಳ ಬ್ಯಾಟಿಂಗ್‌ನೊಂದಿಗೆ ಹರಿಣರು ಹ್ಯಾಟ್ರಿಕ್ ಗೆಲುವಿನ ಗುರಿಯೊಂದಿಗೆ ಆಡಿದ ಭಾರತವನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ಸಂಕ್ಷಿಪ್ತ ಸ್ಕೋರ್
ಭಾರತ 20 ಓವರ್‌ಗಳಲ್ಲಿ 158/7: ಶೆಫಾಲಿ 31, ದೀಪ್ತಿ 29; ಕಾಪ್ 27/2, ಇಸ್ಮೈಲ್ 28/2
ದ.ಆಫ್ರಿಕಾ 19.1 ಓವರ್‌ಗಳಲ್ಲಿ 161/4: ಕಾಪ್ 81★, ಬ್ರಿಟ್ಸ್ 40; ಚಾರಣಿ 24/3

ಬೌಲಿಂಗ್ ಪಿಚ್‌ನಲ್ಲಿ ಹರಿಣರೇ ಪ್ರಾಬಲ್ಯ ಸಾಧಿಸಿದರು. ಬ್ಯಾಟಿಂಗ್ ಆಹ್ವಾನ ಕೊಟ್ಟು 158 ರನ್‌ಗಳಿಗೆ ತಡೆಯೊಡ್ಡಿತು. ಶೆಫಾಲಿ ವರ್ಮಾ 31, ದೀಪ್ತಿ ಶರ್ಮ 27 ಮತ್ತು ಕೌರ್ 24 ರನ್ ಗಳಿಸಿದರು. ರಿಚಾ ಘೋಷ್ 15, ಸ್ಮೃತಿ ಮಂಧಾನ 17 ಗಣನೀಯ ಕೊಡುಗೆ ನೀಡಿ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ದ.ಆಫ್ರಿಕಾ ಆರಂಭಿಕ ಆಘಾತ ಎದುರಿಸಿತು. ಶ್ರೀ ಚಾರಣಿ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದರೂ, ಮಾರಿಝುನ್ ಕಾಪ್, ಬ್ರಿಟ್ಸ್ ಅವರ ಸಮಯೋಚಿತ ಬ್ಯಾಟಿಂಗ್‌ನೊಂದಿಗೆ ಮಿಂಚಿತು. ಗುರಿ ಬೆನ್ನತ್ತಿದ ದ.ಆಫ್ರಿಕಾ ಪಡೆಗೆ ಆರಂಭಿಕ ಆಘಾತವಾದರೂ ಮಾರಿಝುನ್ ಕಾಪ್ ತಾಳ್ಮೆಯುತ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಬ್ರಿಟ್ಸ್ ಸಾಥ್ ಪಡೆದು ಕೊನೆಯವರೆಗೂ ಕೊಂಡೊಯ್ದ ಅವರು, ಅಜೇಯ 81 ರನ್‌ನೊಂದಿಗೆ ಪಂದ್ಯ ಗೆಲ್ಲಿಸಿದರು. ದ.ಆಫ್ರಿಕಾ 19.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಪಂದ್ಯ ಗೆದ್ದಿದೆ.

ಮಳೆಯಿಂದ ಹುಬ್ಬಳ್ಳಿ-ಮಂಗಳೂರು ಪಂದ್ಯ ರದ್ದು

ಮೈಸೂರು: ಭಾನುವಾರ ಮಧ್ಯಾಹ್ನ ನಡೆಯಬೇಕಿದ್ದ ಹುಬ್ಬಳ್ಳಿ ಟೈಗರ್ಸ್ ಮತ್ತು ಕೋಸ್ಟಲ್ ಕಿಂಗ್ಸ್ ಮಂಗಳೂರು ನಡುವಿನ ಪಂದ್ಯವು ಒಂದೂ ಬಾಲ್ ಆಗದೇ ರದ್ದಾಯಿತು. ಮೈಸೂರಿನ ಶ್ರೀಕಂಠದತ್ತ ಒಡೆಯರ್ ಕ್ರೀಡಾಂಗಣದಲ್ಲಿ ಬಿಟ್ಟೂ ಬಿಡದೆ ಸುರಿದ ಮಳೆಯಿಂದಾಗಿ ಪಂದ್ಯ ರದ್ದಾಗಿದೆ. ಅಲ್ಲದೆ, ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಶಿವಮೊಗ್ಗ ನಡುವೆ ನಡೆಬೇಕಿದ್ದ ಪಂದ್ಯವೂ 14 ಓವರ್‌ಗೆ ಇಳಿಸಲಾಗಿತ್ತು. ಮತ್ತೊಂದೆಡೆ ಮೈಸೂರು ವಾರಿಯರ್ಸ್ ತಂಡವನ್ನು 100 ರನ್ ಮಾತ್ರಕ್ಕೆ ಆಲೌಟ್ ಮಾಡಿದ ಶಿವಮೊಗ್ಗ ತಂಡವು ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿತು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಲವನೀತ್ ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 190 ರನ್ ಗಳಿಸಿದ್ದ ಯೋಧಾಸ್ 14.5 ಓವರ್‌ಗಳಲ್ಲಿ 100 ರನ್‌ಗೆ ಮೈಸೂರು ವಾರಿಯರ್ಸ್ ಅನ್ನು ಆಲೌಟ್ ಮಾಡಿದೆ. ಯಶ್ ರಾಜ್ ಪೂಂಜಾ 30 ರನ್ ನೀಡಿ 4 ವಿಕೆಟ್ ಕಿತ್ತು ಪಂದ್ಯದ ಹೀರೋ ಅನಿಸಿಕೊಂಡರು.

ವೈಭವ್ ವಿಕ್ರಮ, ಭಾರತ ತ್ರಿವಿಕ್ರಮ!

ಡಂಬುಲ್ಲಾ: ವೈಭವ್ ಸೂರ್ಯವಂಶಿ ಅವರ ಬಗ್ಗೆ ನಡೆಯುವ ಚರ್ಚೆಗೆ ಇನ್ನಷ್ಟು ವಿಷಯ ಸಿಕ್ಕಾಗಿದೆ. ಭಾರತ ತಂಡಕ್ಕೆ ಆಯ್ಕೆಯಾಗಿದ್ದ 15 ವರ್ಷದ ವೈಭವ್ ತ್ರಿಕೋನ ಸರಣಿಯ ಫೈನಲ್‌ನಲ್ಲಿ ಹೊಸ ಕತೆ ಬರೆದರು. ಇದರೊಂದಿಗೆ ಭಾರತವು ಅಫ್ಘಾನಿಸ್ತಾನ ಮತ್ತು ಶ್ರೀಲಂಕಾ ಜತೆಗೆ ಆಡಿದ ಏಕದಿನ ತ್ರಿಕೋನ ಸರಣಿ ಬಾಚಿಕೊಂಡಿತು.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ಎ ತಂಡವನ್ನು 66 ರನ್‌ಗಳಿಂದ ಮಣಿಸಿದ ಯುವ ಭಾರತ, ಭವಿಷ್ಯದ ಭರವಸೆ ಮೂಡಿಸಿತು. ಮೊದಲು ಬ್ಯಾಟಿಂಗ್ ಮಾಡಿ 377 ರನ್ ಗಳಿಸಿದ ಭಾರತ ಎ ಶ್ರೀಲಂಕಾ ತಂಡವನ್ನು 311 ರನ್‌ಗಳಿಗೆ ಆಲೌಟ್ ಮಾಡಿ ಮೆರೆದಾಡಿತು.

ಪ್ರಮುಖ ಸುದ್ದಿಯಾದವರೆ ವೈಭವ್. ಆಡಿದ ಕೇವಲ 29 ಎಸೆತದಲ್ಲಿ 94ರನ್ ಬಾರಿಸಿ ಕ್ರಿಕೆಟ್ ಅಭಿಮಾನಿಗಳ ಹುಬ್ಬೇರುವಂತೆ ಮಾಡಿದರು. ಉತ್ತಮ ಬ್ಯಾಟಿಂಗ್ ಮಾಡಿದ ತಿಲಕ್(67), ರುತುರಾಜ್(40), ಕುಮಾರ್ (36) ಸ್ಕೋರ್ ಹಿಗ್ಗಿಸಿದರೆ, 15 ಬಾಲ್‌ಗಳಲ್ಲೇ 39 ರನ್ ದಂಡಿಸಿದ ಅನುಕುಲ್ ರಾಯ್ ಕಟ್ಟಿದ್ದ ಇನ್ನಿಂಗ್ಸ್ ಕಳಶ ಇಟ್ಟರು. ಶ್ರೀಲಂಕಾ ಪರ ವನುಜ ಶಹನ್ 62 ರನ್ ಗಳಿಸಿ ಹೋರಾಡಿದರು.

ವೈಭವ್ ವಿಸ್ಮಯ: ಸೂರ್ಯವಂಶಿಯ ಹವಾ ವಿಶ್ವದಲ್ಲೆಡೆ ಹರಡುತ್ತಿರುವಾಗಲೇ ಮತ್ತೊಂದು ಮಾಸ್ಟರ್‌ಕ್ಲಾಸ್ ಪ್ರದರ್ಶಿಸಿದ ವೈಭವ್ ಅಭಿಮಾನಿಗಳ ಮಧ್ಯೆ ಮತ್ತೆ ಮಿಂಚಿದರು. ಭಾರತ ಬ್ಯಾಟಿಂಗ್ ಆಯ್ದುಕೊಂಡರೆ ವೈಭವ್ ದಂಡಿಸುವ ತಂತ್ರ ಆರಿಸಿಕೊಂಡರು. ಮೊದಲನೇ ಬಾಲ್‌ನಿಂದಲೂ ದಂಡಿಸಲಾರಂಭಿಸಿ 10 ಬೌಂಡರಿ, 8 ಸಿಕ್ಸರ್ ಬಾರಿಸಿಬಿಟ್ಟರು. ಮುಖ್ಯವಾಗಿ 11 ಎಸೆತದಲ್ಲೇ ಅರ್ಧಶತಕ ಬಾರಿಸಿದರು. 29 ಬಾಲ್‌ಗಳಲ್ಲಿ 94 ರನ್ ಗಳಿಸಿ, ಎ ತಂಡಗಳ ಮಧ್ಯೆ ನಡೆಯುವ ಕ್ರಿಕೆಟ್‌ನ ಸರದಾರ ಅನಿಸಿದ್ದಲ್ಲದೆ ವಿಶ್ವ ದಾಖಲೆಗಳನ್ನೂ ಮಾಡಿದರು.

ಸಂಕ್ಷಿಪ್ತ ಸ್ಕೋರ್
ಭಾರತ ಎ 50 ಓವರ್‌ಗಳಲ್ಲಿ 377/9: ವೈಭವ್ 94, ತಿಲಕ್ 67, ಗಾಯಕ್ವಾಡ್ 40; ರವಿಂದು ಫರ್ನಾಂಡೊ 72/2
ಶ್ರೀಲಂಕಾ ಎ 47.1 ಓವರ್‌ಗಳಲ್ಲಿ 311/10: ವನುಜ 62, ಸದೀರ 52; ಯಶ್ 45/3, ವಿಪ್ರಾಜ್ 60/3

ಏಕದಿನ ತಂಡಕ್ಕೆ ಮರಳಿದ ಕಿಂಗ್ ಕೊಹ್ಲಿ

ಮುಂಬೈ: ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಏಕದಿನ ಸರಣಿಗೆ ತಂಡದ ಪ್ರಮುಖ ಆಟಗಾರ ಕಿಂಗ್ ವಿರಾಟ್ ಕೊಹ್ಲಿ ಮರಳಿದ್ದು, ಶನಿವಾರವಷ್ಟೇ ಅಫ್ಘಾನಿಸ್ತಾನ ವಿರುದ್ಧ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಶತಕ ಬಾರಿಸಿದ್ದ ಯಶಸ್ವಿ ಜೈಸ್ವಾಲ್ ಅವರಿಗೆ ಗೇಟ್‌ಪಾಸ್ ನೀಡಲಾಗಿದೆ.

ಮುಂದಿನ ತಿಂಗಳು ನಡೆಯಲಿರುವ ಏಕದಿನ ಸರಣಿ, ಏಕದಿನ ವಿಶ್ವಕಪ್ ತಯಾರಿಗಾಗಿ ತಂಡವನ್ನು ಪ್ರಕಟಿಸಲಾಗಿದ್ದು, ಅಭಿಮಾನಿಗಳ ಕಾಯುವಿಕೆಗೆ ತೆರೆ ಬಿದ್ದಿದೆ. ಯಾವ ಜನರನ್ನು ಮೈದಾನಕ್ಕೆ ತರುವ ವಿರಾಟ್ ಕೊಹ್ಲಿ ಅವರು ಫಿಟ್ ಆಗಿದ್ದು ತಂಡಕ್ಕೆ ಮರಳಿದ್ದಾರೆ. ಆದರೆ ಮತ್ತೊಂದು ಪ್ರಮುಖ ಸುದ್ದಿಯಲ್ಲಿ ಆರಂಭಿಕ ಜೈಸ್ವಾಲ್ ತಂಡದಿಂದ ಹೊರಬಿದ್ದಿದ್ದಾರೆ.

ವಿರಾಟ್ ಕೊಹ್ಲಿ ಅವರ ಆಗಮನದೊಂದಿಗೆ ಅಭಿಮಾನಿಗಳು ಹುಮ್ಮಸ್ಸಿನಲ್ಲಿದ್ದರೂ ತಂಡದಲ್ಲಿ ಅಚ್ಚರಿ ಆಯ್ಕೆಗಳ ಗಂಟುಗಳೇ ಹೆಚ್ಚಿವೆ. ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಮೊಹಮ್ಮದ್ ಶಮಿ ಅವರಿಗೆ ಕೊಕ್ ನೀಡಲಾಗಿದೆ. ಏಕದಿನ ತಂಡದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದ ಮೊಹಮ್ಮದ್ ಸಿರಾಜ್ ಅವರನ್ನೂ ಹೊರಗಿಡಲಾಗಿದೆ. ಅಫ್ಘಾನಿಸ್ತಾನ ವಿರುದ್ಧದ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಗುರ್ನೂರ್ ಬ್ರಾರ್ ಅವರಿಗೆ ಮತ್ತೊಂದು ಅವಕಾಶ ನೀಡಲಾಗಿದ್ದು, ತಂಡಕ್ಕೆ ಹರ್ಷಿತ್ ರಾಣಾ ಕಂಬ್ಯಾಕ್ ಮಾಡಿದ್ದಾರೆ.



ತಂಡದಿಂದಲೇ ಹೊರಬಿದ್ದ ಜಡ್ಡು?: ಕಳೆದ ಕೆಲವು ಸರಣಿಗಳಲ್ಲಿ ಭಾರತ ತಂಡದಿಂದಲೇ ಹೊರಬಿದ್ದಿರುವ ಹಿರಿಯ ಆಲ್‌ರೌಂಡರ್ ರವೀಂದ್ರ ಜಡೇಜಾಗೆ ಮತ್ತೆ ಕೊಕ್ ಕೊಡಲಾಗಿದ್ದು, ಆಯ್ಕೆಯಲ್ಲಿ ಪರಿಗಣಿಸಲಾಗಿಲ್ಲ. ಟೆಸ್ಟ್ ತಂಡದಿಂದಲೂ ಅವರನ್ನು ಹೊರಗಡಿಲಾಗಿದೆ. ಹಿಂದೆ ನಡೆದಿರುವ ಏಕದಿನ ಪಂದ್ಯಗಳಲ್ಲಿ ಕೊನೆಯ ಬಾರಿ ಕಾಣಿಸಿಕೊಂಡಿದ್ದು ಜನವರಿಯಲ್ಲಿ. ನಂತರ ಐಪಿಎಲ್ ಶುರುವಾದರೂ ಅಫ್ಘಾನಿಸ್ತಾನ ವಿರುದ್ಧದ ಪಂದ್ಯಕ್ಕೆ ಅವರನ್ನು ಆಯ್ಕೆ ಮಾಡಿರಲೇ ಇಲ್ಲ. ಇಂಗ್ಲೆಂಡ್ ಪಂದ್ಯಗಳಿಗೂ ಅವರನ್ನು ಆಯ್ಕೆಯಲ್ಲಿ ಪರಿಗಣಿಸಲಾಗಿಲ್ಲ. ಪರಿಣಾಮ ಅವರನ್ನು ತಂಡದಿಂದಲೇ ಹೊರಗಿಟ್ಟರೆ ಎಂಬ ಪ್ರಶ್ನೆ ಸಹಜವಾಗಿ ಬರುತ್ತಿದೆ.


ಭಾರತ ತಂಡ

ಶುಭಮನ್ ಗಿಲ್(ನಾಯಕ), ಶ್ರೇಯಸ್ ಅಯ್ಯರ್(ಉಪನಾಯಕ), ರೋಹಿತ್ ಶರ್ಮ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ಇಶಾನ್ ಕಿಶನ್(ವಿ.ಕೀ), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ನಿತೀಶ್‌ಕುಮಾರ್ ರೆಡ್ಡಿ, ಕುಲ್ದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಪ್ರಸಿದ್ಧ ಕೃಷ್ಣ, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಗುರ್ನೂರ್ ಬ್ರಾರ್.

- ಸಿರಾಜ್‌ಗೆ ಕೊಕ್
- ಹೊರಬಿದ್ದ ಪಂತ್
- ಅಕ್ಷರ್ ಪಟೇಲ್‌ಗೆ ಅವಕಾಶ
- ಬೂಮ್ರಾ ಕಂಬ್ಯಾಕ್

ಪದಬಂಧ 6022

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಕೈ-ಕಾಲಿಗೆ ಧರಿಸುವ ಗಟ್ಟಿಮುಟ್ಟಾದ ಆಭರಣ (3)
6.ದ್ವಾರಕೀಶ್-ವಿಷ್ಣುವರ್ಧನ್-ಮಂಜುಳಾ ಅಭಿನಯದ ಹಾಸ್ಯಚಿತ್ರ (5)
7.ಡೇಗೆ ಜಾತಿಯ ಬೇಟೆಯಾಡುವ ಹಕ್ಕಿ (3)
8.ಕರುವಿನ ನಡುವೆ ಒಪ್ಪಂದದ ಷರತ್ತುಗಳಿವೆ (3)
9.ಕಹಿ-ಒಗರು ರುಚಿಯುಳ್ಳದ್ದು (2)
10.ಒಳ್ಳೆಯ ಬಣ್ಣದ ಬಂಗಾರ (2)
11.ಮೂರು ಮೈಯುಳ್ಳ ಪಾರದರ್ಶಕ ಘನಾಕೃತಿ (3)
12.ಭರಣಿಯನ್ನು ಉಲ್ಟಾ ಇಟ್ಟಿದ್ದಾರೆ (3)
15. ಒಂದೇ ಕಾಲಘಟ್ಟಕ್ಕೆ ಸೇರಿದ ವ್ಯಕ್ತಿ (5)
17. ಬಣ್ಣದ ತಗಡು ಉಲ್ಟಾ ಕಾಣುತ್ತಿದೆ (3)

ಮೇಲಿನಿಂದ ಕೆಳಕ್ಕೆ
1.ಚಿನ್ನದ ಮೈ ಬಣ್ಣವುಳ್ಳವಳು (4)
2.ಹಿಂದಿನಂತೆ ನಡೆಯುವುದು-ಸಂಪ್ರದಾಯ ಪಾಲನೆ (6)
3.ಒಂದು ಇಂಚು ಅಳತೆಯ ಬೆರಳು (3)
4.ವಾರಣಾಸಿಯ ಮತ್ತೊಂದು ಹೆಸರು (2)
5.ಗಿಡಮೂಲಿಕೆಯನ್ನು ಹೀಗೂ ಹೇಳಬಹುದು (4)
8.ನಮ್ಮ ಭಾಷೆಯ ಘಮವನ್ನು ಸೂಚಿಸುವ ಶಬ್ದ (6)
11.ನಮ್ಮ ಉಸಿರಾದ ನಮ್ಮ ಸುತ್ತಲಿನ ವಾತಾವರಣ (4)
13. ಕಸುವಿನ ನಡುವೆ ತುಂಡು ಮಾಡುವಿಕೆಯಿದೆ (4)
14. ಮಿಥಿಲೆಯ ರಾಜ-ಸೀತೆಯ ತಂದೆ (3)
16. ಶಬ್ದ ಮತ್ತು ಅರ್ಥಗಳ ಸುಂದರ ಜೋಡಣೆಯ ಸಾಹಿತ್ಯ (2)

6021 ಉತ್ತರ

ಎಡದಿಂದ ಬಲಕ್ಕೆ:
:1.ಮಣಿಗಾರ
3.ಸಮದರ್ಶಿ 5.ಹಿಮ್ಮುಖ
6.ನವಜಾತ 8.ಸರದಿ
9.ಕಾಂತಾರ 11.ಗಣಪತಿ
13.ಸುಂದರ 14.ನಳಪಾಕ
15.ಗತಿಗೇಡಿ

ಮೇಲಿನಿಂದ ಕೆಳಕ್ಕೆ :
1.ಮಜ್ಜನ 2.ರಹಿತ 3.ಸಖ
4.ದಡ್ಡಕ್ಷರ 7.ಜಾಲಗಾರ
8.ಸಮರ್ಪಣ
10.ತಾಳಮೇಳ 11.ಗರಗ
12.ತಿಕಡಿ 13.ಸುಂಕ

ದಕ್ಷಿಣ ಕನ್ನಡ, ಉಡುಪಿ ಜಿಲ್ಲಾಡಳಿತದಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಯೋಗ ಸಾಂಸ್ಕೃತಿಕ ಪರಂಪರೆಗೆ ದೊರೆತ ಗೌರವ: ಸಂಸದ ಚೌಟ

ಮಂಗಳೂರು: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ಭಾರತದ ಸಾಂಸ್ಕೃತಿಕ ಪರಂಪರೆ ಮತ್ತು ಪ್ರಾಚೀನ ಜೀವನ ಶೈಲಿಗೆ ಜಾಗತಿಕ ಮಟ್ಟದಲ್ಲಿ ಸಿಕ್ಕ ಗೌರವವಾಗಿದೆ ಎಂದು ಲೋಕಸಭಾ ಸದಸ್ಯ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ





ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳು ವಿಶ್ವ ಯೋಗ ದಿನಾಚರಣೆಯ ದಿನವಾದ ಭಾನುವಾರ ಯೋಗಾಸನ ಮಾಡುವ ಮೂಲಕ ವಿಶ್ವ ಯೋಗ ದಿನಾಚರಣೆಯನ್ನು ಶ್ರೀ ಮಠದಲ್ಲಿ ಆಚರಿಸಿದರು.

ವತಿಯಿಂದ ನಗರದ ಪುರಭವನದಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯಯುತ ಜೀವನವನ್ನು ಹೇಗೆ ಪಡೆಯಬೇಕು ಎಂಬುದನ್ನು ಭಾರತವು ಜಗತ್ತಿಗೆ ಕಲಿಸಿದೆ. ಇಂದಿನ ಜಾಗತಿಕ ಪರಿಸ್ಥಿತಿಯನ್ನು ಅವಲೋಕಿಸಿದಾಗ ಯೋಗದ ಮಹತ್ವವು ಎಷ್ಟು ಅಗತ್ಯವಾಗಿದೆ ಎಂಬುದು ತಿಳಿದು ಬರುತ್ತದೆ ಎಂದು ಅವರು ಹೇಳಿದರು.

ಶಾಸಕ ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಜಿಲ್ಲಾ ಸರ್ಜನ್ ಡಾ. ಶಿವಪ್ರಕಾಶ್, ಉಪವಿಭಾಗಾಧಿಕಾರಿ ಮೀನಾಕ್ಷಿ ಆರ್ಯ, ಡಿಸಿಪಿ ರವಿಶಂಕರ್, ಎಎಸ್‌ಪಿ ಅನಿಲ್ ಕುಮಾರ್, ಬ್ರಹ್ಮಕುಮಾರಿ ಅಂಬಿಕಾ ಉಪಸ್ಥಿತರಿದ್ದರು.

ಯೋಗದಲ್ಲಿ ವಿಶ್ವ ದಾಖಲೆ ಮಾಡಿದ ಕಡಬ ತಾಲೂಕಿನ ಏನೆಕಲ್ಲು ನಿವಾಸಿ, 6 ನೇ ತರಗತಿ ವಿದ್ಯಾರ್ಥಿ ಅಕ್ಷಯ ಬಿ.ಎಂ. ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಜಿಲ್ಲಾ ಆಯುಷ್ ಅಧಿಕಾರಿ ಡಾ. ಮಣಿಕರ್ಣಿಕಾ ಸ್ವಾಗತಿಸಿದರು. ನಂತರ ಯೋಗ ಗುರು ಗೋಪಾಲಕೃಷ್ಣ ದೇಲಂಪಾಡಿ ಅವರ ನೇತೃತ್ವದಲ್ಲಿ ಸಾಮೂಹಿಕ ಯೋಗ ಕಾರ್ಯಕ್ರಮ ನಡೆಯಿತು.

ಯೋಗಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಬೇಕು: ಯಶ್‌ಪಾಲ್

ಉಡುಪಿ: ಜಗತ್ತು ಭಾರತದತ್ತ ತಿರುಗಿ ನೋಡುವಂತಹ ಹಲವಾರು ಕಾರ್ಯಕ್ರಮಗಳನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಾಡಿದ್ದಾರೆ ಅದರಲ್ಲಿ ಯೋಗ ದಿನಾಚರಣೆಯೂ ಒಂದು. ಭಾರತೀಯ ಆರೋಗ್ಯ ಪರಂಪರೆಯ ಪ್ರಾಚೀನ ಜ್ಞಾನವನ್ನು ವಿಶ್ವಕ್ಕೆ ನೀಡಿ ಎಲ್ಲರೂ ಉತ್ತಮ ಆರೋಗ್ಯ ಹೊಂದಬೇಕು ಎನ್ನುವ ದೃಷ್ಟಿಯಿಂದ ದೇಶ-ವಿದೇಶಗಳಲ್ಲಿ ಇಂದು ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಹಿರಿ-ಕಿರಿಯರ ಬೇಧವಿಲ್ಲದೆ ಎಲ್ಲರೂ ದಿನಕ್ಕೆ ಒಂದು ಘಂಟೆ ಯೋಗಾಭ್ಯಾಸ ಮಾಡಬೇಕು. ಜಿಲ್ಲೆಯಿಂದ ತಯಾರಾಗುವ ಯೋಗಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಬೇಕು ಎಂದು ಶಾಸಕ ಯಶ್ ಪಾಲ್ ಸುವರ್ಣ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ಉಡುಪಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ್, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಇಲಾಖೆ, ಹಾಗೂ ವಿವಿಧ ಯೋಗ ಸಂಸ್ಥೆಗಳ ಸಹಯೋಗದೊಂದಿಗೆ ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಘೋಷವಾಕ್ಯದೊಂದಿಗೆ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಘೋಷವಾಕ್ಯದೊಂದಿಗೆ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ನಿತ್ಯ ಯೋಗಾಭ್ಯಾಸದಿಂದ ಆರೋಗ್ಯವೃದ್ಧಿಯಾಗುತ್ತದೆ. ಭಾರತದ ಯೋಗವನ್ನು ಇಂದು ವಿಶ್ವದ ಎಲ್ಲ ರಾಷ್ಟ್ರಗಳೂ ಅನುಸರಿಸುತ್ತಿರುವುದು ನಮಗೆಲ್ಲರಿಗೂ ಹೆಮ್ಮೆ ತಂದಿದೆ. ಆಯುಷ್ಯ, ಆರೋಗ್ಯ ಮತ್ತು ಮಾನಸಿಕ ನೆಮ್ಮದಿಯನ್ನು ಯೋಗದಲ್ಲಿ ಕಂಡು ಕೊಳ್ಳಬಹುದು. ಪ್ರಧಾನಿ ಮೋದಿಯವರು ಇಳಿವ ಯಸ್ಸಿನಲ್ಲಿಯೂ ದಿನಕ್ಕೆ 18 ಗಂಟೆ ಕೆಲಸ ಮಾಡುತ್ತಾರೆ. ಯೋಗಾಭ್ಯಾಸವನ್ನು ದಿನನಿತ್ಯದ ಭಾಗವಾಗಿಸಿದಾಗ ಇದು ಸಾಧ್ಯ. ದಿನವಿಡಿ ಲವಲವಿಕೆಯಿಂದಿರಲು ಯೋಗಾಭ್ಯಾಸ ಮಾಡಿ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್, ಜಿ.ಪಂ. ಮುಖ್ಯ ಯೋಜನಾಧಿಕಾರಿ ಡಾ. ಉದಯಕುಮಾರ್ ಶೆಟ್ಟಿ, ಯುವ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ರೋಷನ್ ಕುಮಾರ್ ಶೆಟ್ಟಿ, ಡಯಟ್ ಪ್ರಾಂಶುಪಾಲ ಅಶೋಕ್ ಕಾಮತ್, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಆನಂದ ಜತ್ತನ್ನ ಮತ್ತಿತರರು ಉಪಸ್ಥಿತರಿದ್ದರು.

> **ಯೋಗವು ಒತ್ತಡ ನಿವಾರಣೆಗೆ ಸಹಕಾರಿ. ವಿದ್ಯಾರ್ಥಿ ಜೀವನದಲ್ಲಿ ಮಕ್ಕಳು ಅತಿ ಹೆಚ್ಚು ಒತ್ತಡ ಅನುಭವಿಸುತ್ತಾರೆ. ಯೋಗಾಭ್ಯಾಸ ಮಾಡುವುದರಿಂದ ಮನಸ್ಸು ಮತ್ತು ದೇಹವು ಸಮನ್ವಯದಿಂದ ಕಾರ್ಯನಿರ್ವಹಿಸುತ್ತದೆ. ನಾಳೆ ಮತ್ತು ನಿನ್ನೆಯ ನಡುವಿನ ಯೋಚನೆಗಳಿಂದ ಮನಸ್ಸು ಒತ್ತಡಕ್ಕೊಳಗಾಗುತ್ತದೆ. ಯೋಗವು ನಮಗೆ ವರ್ತಮಾನದಲ್ಲಿ ಬದುಕುವುದನ್ನು ಕಲಿಸುತ್ತದೆ. ಆರೋಗ್ಯಕರವಾಗಿ ವೃದ್ಧಾಪ್ಯವನ್ನು ಎದುರಿಸಲು ಯೋಗ ಮಾಡಬೇಕು. ಇದರಿಂದ ನಾವು ಮಾನಸಿಕ ಮತ್ತು ದೈಹಿಕವಾಗಿ ಆರೋಗ್ಯಯುತರಾಗುವ ಜೊತೆಗೆ ಕ್ರಿಯಾಶೀಲರಾಗಿ ವೃದ್ಧಾಪ್ಯವನ್ನು ಕಳೆಯಬಹುದು.**
>
> **ಪ್ರತೀಕ್ ಬಾಯಲ್,**
> **ಜಿ.ಪಂ. ಮುಖ್ಯಕಾರ್ಯ ನಿರ್ವಹಣಾಧಿಕಾರಿ**

ಆಯುಷ್ ಇಲಾಖೆ ಉಪ ನಿರ್ದೇಶಕ ಸತೀಶ್ ಆಚಾರ್ಯ ಸ್ವಾಗತಿಸಿ, ಹೇಮಲತಾ ವಂದಿಸಿದರು.

ಕಿರು ಸುದ್ದಿ

ರೈಲಿನಡಿಗೆ ಬಿದ್ದು ವ್ಯಕ್ತಿ ಸಾವು: ಅಪಘಾತದ ಸ್ಥಳದಲ್ಲಿ ಮುಕ್ಕಾಲು ಗಂಟೆ ನಿಂತ ರೈಲು

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಹಳೆಯಂಗಡಿ ಸಮೀಪದ ಕೊಪ್ಪಲ ರೈಲ್ವೇ ಗೇಟ್ ಬಳಿ ವ್ಯಕ್ತಿಯೊಬ್ಬ ರೈಲಿನಡಿಗೆ ಬಿದ್ದು ಸಾವನ್ನಪ್ಪಿದ್ದಾನೆ. ಸಾವನ್ನಪ್ಪಿದ ವ್ಯಕ್ತಿಯ ಗುರುತು ಇನ್ನೂ ಪತ್ತೆಯಾಗಿಲ್ಲ. ಭಾನುವಾರ ಮಧ್ಯಾಹ್ನ 3 ಗಂಟೆಗೆ ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿರುವ ರೈಲು ಹಳೆಯಂಗಡಿ ಸಮೀಪದ ಕೊಪ್ಪಲ ರೈಲ್ವೇ ಗೇಟ್ ತಲುಪುತ್ತಿದ್ದಂತೆ ಸುಮಾರು 55 ವರ್ಷ ಪ್ರಾಯದ ವ್ಯಕ್ತಿಯೋರ್ವ ರೈಲಿನಡಿಗೆ ಬಿದ್ದಿದ್ದಾನೆ. ಅಪಘಾತದ ನಡೆದ ಬಗ್ಗೆ ರೈಲು ಚಾಲಕನಿಗೆ ಕೂಡಲೇ ತಿಳಿದು ಮಂಗಳೂರಿನಿಂದ ಉಡುಪಿ ಕಡೆಗೆ ಹೋಗುತ್ತಿದ್ದ ಇನ್ನೊಂದು ರೈಲಿನ ಚಾಲಕನಿಗೆ ಮಾಹಿತಿ ನೀಡಿದ್ದು ಆದರ ಚಾಲಕ ರೈಲನ್ನು ಸುಮಾರು ಮುಕ್ಕಾಲು ಗಂಟೆ ಹೊತ್ತು ಅಪಘಾತ ನಡೆದ ನಿಲ್ಲಿಸಿ ರೈಲ್ವೇ ಹಳಿಯ ಮಧ್ಯದಲ್ಲಿ ಛಿದ್ರವಾಗಿದ್ದ ವ್ಯಕ್ತಿಯ ಶವವನ್ನು ಸ್ವತಃ ರೈಲು ಚಾಲಕ ಮತ್ತು ಸ್ಥಳೀಯ ಗ್ಯಾಂಗ್‌ಮೆನ್‌ರವರು ತೆಗೆದು ರೈಲ್ವೇ ಹಳಿಯ ಬದಿಯಲ್ಲಿ ಇರಿಸಿ ಮಾನವೀಯತೆ ಮೆರೆದಿದ್ದಾರೆ ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ. ಅಪಘಾತದ ತೀವ್ರತೆಗೆ ಮೃತ ವ್ಯಕ್ತಿಯ ಮುಖ ಜಜ್ಜಿ ಹೋಗಿದ್ದು ದೇಹ ಗುರುತು ಪತ್ತೆಯಾಗದ ಸ್ಥಿತಿಯಲ್ಲಿದೆ. ಸ್ಥಳಕ್ಕೆ ಮುಲ್ಕಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಕೋಟ: ಕಾರು ಡಿಕ್ಕಿಯಾಗಿ ವ್ಯಕ್ತಿ ಸಾವು

ಕೋಟ: ರಸ್ತೆ ದಾಟುತ್ತಿದ್ದ ವೇಳೆ ಕಾರೊಂದು ಡಿಕ್ಕಿ ಹೊಡೆದು ವ್ಯಕ್ತಿಯೋರ್ವ ಮೃತಪಟ್ಟ ಘಟನೆ ಭಾನುವಾರ ರಾಷ್ಟ್ರೀಯ ಹೆದ್ದಾರಿ 66ರ ಕೋಟ ಅಮೃತೇಶ್ವರೀ ಸರ್ಕಲ್‌ನಲ್ಲಿ ಸಂಭವಿಸಿದೆ. ಮೃತಪಟ್ಟ ವ್ಯಕ್ತಿ ಬ್ರಹ್ಮಾವರ ಆರೂರು ಮೂಲದ ಸತೀಶ್ ಆಚಾರ್ (45) ಎಂದು ಗುರುತಿಸಲಾಗಿದೆ. ಸತೀಶ್ ಆಚಾರ್ ಅವರು ಕೋಟದ ಅಮೃತೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ ಅಲ್ಲಿಂದ ಹಾಡಿಕೆರೆ ಹೋಗಲೆಂದು ರಾಷ್ಟ್ರೀಯ ಹೆದ್ದಾರಿ ದಾಟುತ್ತಿದ್ದ ವೇಳೆ ಈ ದುರಂತ ಸಂಭವಿಸಿದೆ. ಕುಂದಾಪುರ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಕಾರೊಂದು ಸತೀಶ್ ಆಚಾರ್ ಅವರಿಗೆ ನೇರ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ರಸ್ತೆಗೆ ಎಸೆಯಲ್ಪಟ್ಟ ಸತೀಶ್ ಅವರ ತಲೆ ಹಾಗೂ ಕಾಲಿಗೆ ಗಂಭೀರ ಗಾಯಗಳಾಗಿದ್ದವು. ತಕ್ಷಣ ಸ್ಥಳೀಯ ಆ್ಯಂಬುಲೆನ್ಸ್ ಮೂಲಕ ಸ್ಥಳೀಯರ ಸಹಕಾರದೊಂದಿಗೆ ಕೋಟೇಶ್ವರ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು ಆದರೆ ಆಸ್ಪತ್ರೆಗೆ ತಲುಪುವಷ್ಟರಲ್ಲೇ ಸತೀಶ್ ಆಚಾರ್ ಅವರು ಕೊನೆಯುಸಿರೆಳೆದಿದ್ದಾರೆ. ಕೋಟ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಧರ್ಮಸ್ಥಳದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಜಾಗತಿಕ ಮಟ್ಟದಲ್ಲಿ ಯೋಗಕ್ಕೆ ಹೆಚ್ಚಿನ ಪ್ರಚಾರ ಅಗತ್ಯ: ಪ್ರತಾಪಸಿಂಹ ನಾಯಕ್

ಉಜಿರೆ: ನಮ್ಮ ಸನಾತನ ಸಂಸ್ಕೃತಿ ಮತ್ತು ಪರಂಪರೆಯೊಂದಿಗೆ ವಿಶ್ವಕ್ಕೆ ಭಾರತ ನೀಡಿದ ಅಮೂಲ್ಯ ಕೊಡುಗೆ 'ಯೋಗ' ಆಗಿದ್ದು ಜಾಗತಿಕ ಮಟ್ಟದಲ್ಲಿ ಇದಕ್ಕೆ ಹೆಚ್ಚಿನ ಪ್ರಚಾರ ಅಗತ್ಯವಿದೆ ಎಂದು ವಿಧಾನ ಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ ಹೇಳಿದರು.

ಅವರು ಭಾನುವಾರ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ 12ನೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟನಾ ಸಮಾರಂಭದಲ್ಲಿ ಶುಭಾಶಂಸನೆ ಮಾಡಿದರು.

ನಮ್ಮ ಪಂಚೇಂದ್ರಿಯಗಳ ನಿಯಂತ್ರಣದೊಂದಿಗೆ ದೈಹಿಕ ಹಾಗೂ ಮಾನಸಿಕಆರೋಗ್ಯಭಾಗ್ಯರಕ್ಷಣೆಗೆಯೋಗ ಸಹಕಾರಿಯಾಗಿದೆ. ಆಧುನಿಕ ಜೀವನಶೈಲಿ, ಆಹಾರ-ವಿಹಾರ ವಿಧಾನದಿಂದಾಗಿ ನಾವು ಅನೇಕ ಒತ್ತಡಗಳಿಗೆ ಒಳಗಾಗುತ್ತಿದ್ದು ಸುಖ-ಶಾಂತಿ, ನೆಮ್ಮದಿಯ ಜೀವನಕ್ಕೆ ಯೋಗ ಸಹಕಾರಿಯಾಗಿದೆ. ಜಾಗತಿಕ ಮಟ್ಟದಲ್ಲಿ ಯೋಗಕ್ಕೆ ಪ್ರಚಾರ ನೀಡುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದರು.

ರಾಜೀವ್‌ಗಾಂಧಿ ಆರೋಗ್ಯ ವಿ.ವಿ. ಉಪಕುಲಪತಿ ಡಾ. ಭಗವಾನ್ ಬಿ.ಸಿ. ಆನ್‌ಲೈನ್ ಮೂಲಕ ಸಂದೇಶ ನೀಡಿ, ಯೋಗಾಭ್ಯಾಸ ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಬೇಕು ಎಂದು ಸಲಹೆ ನೀಡಿದರು.



ರಾಜೀವ್‌ಗಾಂಧಿ ಆರೋಗ್ಯ ವಿ.ವಿ.ಯ 400 ಕಾಲೇಜುಗಳಲ್ಲಿ 45000 ವಿದ್ಯಾರ್ಥಿಗಳು ಯೋಗಾಭ್ಯಾಸ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.


ರಾಜೀವ್‌ಗಾಂಧಿ ಆರೋಗ್ಯ ವಿ.ವಿ.ಯ ಪಠ್ಯಕ್ರಮ ಅಭಿವೃದ್ಧಿ ಕೇಂದ್ರದ ಪ್ರಭಾರ ನಿರ್ದೇಶಕ ಡಾ. ಷಣ್ಮುಖಪ್ಪ ಮಾತನಾಡಿ, ಉಜಿರೆಯ ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗವಿಜ್ಞಾನಗಳ ಕಾಲೇಜು ಆಶ್ರಯದಲ್ಲಿ ವರ್ಷಕ್ಕೊಂದು ಗ್ರಾಮವನ್ನು ದತ್ತು ತೆಗೆದುಕೊಂಡು ಗ್ರಾಮೀಣ ಪ್ರದೇಶದ ಜನರಿಗೆ ಯೋಗಾಭ್ಯಾಸದ ತರಬೇತಿ ನೀಡಬೇಕು ಎಂದು ಸಲಹೆ ನೀಡಿದರು.

ಉಜಿರೆಯ ಕಾಲೇಜಿನಲ್ಲಿ ಅನಸ್ತೇಶಿಯಾ ಮತ್ತು ಅಕ್ಯುಪಂಕ್ಚರ್‌ನಲ್ಲಿ ಸ್ನಾತಕೋತ್ತರ ಪದವಿ ತರಗತಿಗಳಿಗೆ ಅನುಮತಿ ಕೋರಿದ್ದು ಸದ್ಯದಲ್ಲೇ ಅನುಮೋದನೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ಬೆಂಗಳೂರಿನ ಚಿನ್ಮಯಿ ಅವರಿಗೆ 'ಯೋಗರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಾಮೂಹಿಕ ಯೋಗ ಪ್ರದರ್ಶನ ನಡೆಸಲಾಯಿತು.

ಶಾಂತಿವನ ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಶಿವಪ್ರಸಾದ ಶೆಟ್ಟಿ, ಶಾಲಾ-ಕಾಲೇಜುಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಯೋಗ ಶಿಬಿರ ನಡೆಸಿ, ಆರೋಗ್ಯ ರಕ್ಷಣೆ ಬಗ್ಗೆ ಅರಿವು, ಜಾಗೃತಿ ಮೂಡಿಸಲಾಗುತ್ತದೆ ಎಂದರು.

ಎಸ್.ಡಿ.ಎಂ. ಯೋಗವಿಜ್ಞಾನಗಳ ಮತ್ತು ಪ್ರಕೃತಿ ಚಿಕಿತ್ಸಾ ಕಾಲೇಜಿನ ಪ್ರಾಂಶುಪಾಲ ಡಾ. ಪ್ರಶಾಂತ ಶೆಟ್ಟಿ ಸ್ವಾಗತಿಸಿದರು. ಉಪಪ್ರಾಂಶುಪಾಲರಾದ ಡಾ. ಸುಜಾತ, ಕೆ.ಜೆ. ಧನ್ಯವಾದವಿತ್ತರು. ಡಾ. ಅನನ್ಯ ಕಾರ್ಯಕ್ರಮ ನಿರ್ವಹಿಸಿದರು.



ಆಳ್ವಾಸ್ ವಿದ್ಯಾಸಂಸ್ಥೆಯಲ್ಲಿ 1,500ಕ್ಕೂ ಅಧಿಕ ವಿದ್ಯಾರ್ಥಿಗಳ ಸಾಮೂಹಿಕ ಯೋಗಾಭ್ಯಾಸ



ಮೂಡುಬಿದಿರೆ: ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿವಿಧ ಶಿಕ್ಷಣ ಸಂಸ್ಥೆಗಳ 1,500ಕ್ಕೂ ಅಧಿಕ ವಿದ್ಯಾರ್ಥಿಗಳು ಭಾನುವಾರ ಬೆಳಿಗ್ಗೆ ಸಾಮೂಹಿಕ ಯೋಗಾಭ್ಯಾಸ ನಡೆಸುವ ಮೂಲಕ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೂಡುಬಿದಿರೆಯ ವಿದ್ಯಾಗಿರಿಯ ಆಳ್ವಾಸ್ ನುಡಿಸಿರಿ ವೇದಿಕೆಯಲ್ಲಿ ಆಳ್ವಾಸ್ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯದ ವತಿಯಿಂದ ಆಯೋಜಿಸಲಾದ ಕಾರ್ಯಕ್ರಮವನ್ನು ಆಳ್ವಾಸ್ ಫಾರ್ಮಸಿ ವ್ಯವಸ್ಥಾಪಕ ನಿರ್ದೇಶಕಿ ಡಾ. ಗ್ರೀಷ್ಮಾ ವಿವೇಕ್ ಆಳ್ವ ಉದ್ಘಾಟಿಸಿದರು. ಖ್ಯಾತ ಸಂಗೀತ ನಿರ್ದೇಶಕ ವಿ. ಮನೋಹರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿವಿಧ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು.

ಆಳ್ವಾಸ್ ಶಾಲೆ, ನರ್ಸಿಂಗ್ ಕಾಲೇಜು, ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜು, ಆಯುರ್ವೇದ ವೈದ್ಯಕೀಯ ಕಾಲೇಜು, ಹೋಮಿಯೋಪತಿ ವೈದ್ಯಕೀಯ ಕಾಲೇಜು, ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯ, ಆಳ್ವಾಸ್ ಶಿಕ್ಷಣ ಮಹಾವಿದ್ಯಾಲಯ ಹಾಗೂ ಫಿಸಿಯೋಥೆರಪಿ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸಾಮಾನ್ಯ ಯೋಗ ಪ್ರೋಟೋಕಾಲ್‌ಗೆ ಅನುಗುಣವಾಗಿ ವ್ಯಾಯಾಮ, ವಿವಿಧ ಆಸನಗಳು, ಪ್ರಾಣಾಯಾಮ ಹಾಗೂ ಧ್ಯಾನಾಭ್ಯಾಸಗಳನ್ನು ನಡೆಸಲಾಯಿತು. ಯೋಗಾಭ್ಯಾಸವು ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ಹಾಗೂ ಭಾವನಾತ್ಮಕ ಸಮತೋಲನ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂಬ ಸಂದೇಶವನ್ನು ಕಾರ್ಯಕ್ರಮವು ಪರಿಣಾಮಕಾರಿಯಾಗಿ ಸಾರಿತು.

ಆಳ್ವಾಸ್ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿ ಅನಂತ ಕೃಷ್ಣ ಮಾರ್ಗದರ್ಶನ ನೀಡಿದರು.


ಕಾರ್ಯಕ್ರಮವು ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ಪ್ರತಿಪಾದಿಸುವುದರೊಂದಿಗೆ ಯೋಗವನ್ನು ಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಳ್ಳುವ ಸಂಕಲ್ಪವನ್ನು ಮತ್ತಷ್ಟು ಬಲಪಡಿಸಿತು.

ಯೋಗಾಸನದಲ್ಲಿ ಸಿಂಚನ ಹೊಸ ದಾಖಲೆ

33 ನಿಮಿಷದಲ್ಲಿ 310 ಆಸನಗಳು

ಮಡಿಕೇರಿ: ಅಂತರಾಷ್ಟ್ರೀಯ ಯೋಗ ದಿನವಾದ ಭಾನುವಾರದಂದು ಮದೆನಾಡು ಬಿಜಿಎಸ್ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಡಿ.ಕೆ.ಸಿಂಚನ 33 ನಿಮಿಷದಲ್ಲಿ 310 ಆಸನಗಳು ಮಾಡುವ ಮೂಲಕ ಹೊಸ ದಾಖಲೆ ಬರೆದಿದ್ದಾಳೆ.

ಇಂಡಿಯನ್ ಬುಕ್ ಆಫ್ ರೆಕಾರ್ಡ್ ಮತ್ತು ಏಷ್ಯನ್ ಬುಕ್ ಆಫ್ ರೆಕಾರ್ಡ್ ಆನ್‌ಲೈನ್ ಮೂಲಕ ಆಯೋಜಿಸಿದ್ದ ಯೋಗ ಪ್ರದರ್ಶನದಲ್ಲಿ ಒಂದು ಗಂಟೆಯೊಳಗೆ 300 ಆಸನಗಳನ್ನು ಮಾಡಬೇಕಾಗಿತ್ತು. ಆದರೆ ಸಿಂಚನ ಕೇವಲ 33 ನಿಮಿಷಗಳಲ್ಲಿ 310 ಆಸನಗಳು ಮಾಡಿ ಪ್ರಶಸ್ತಿಗೆ ಭಾಜನರಾದರು. ಮುಂದಿನ ವಾರ ಡಿ.ಕೆ.ಸಿಂಚನಳಿಗೆ ಪದಕ ಮತ್ತು ಪ್ರಶಸ್ತಿ ಪತ್ರ ಸಿಗಲಿದೆ. ಈಕೆ ಬಿ.ಸಿ.ಕೀರ್ತಿ ಕುಮಾರ್ ಹಾಗೂ ಬಿ.ಎಸ್. ರೇಣುಕಾ ದಂಪತಿಯ ಪುತ್ರಿ.



ಮದೆ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಅಗೋಳಿಕಜೆ ಧನಂಜಯ, ನಿವೃತ್ತ ಶಿಕ್ಷಕರಾದ ಬಾರಿಯಂಡ ಜೋಯಪ್ಪ, ಎಂ.ಎಸ್. ಶಿವರಾಂ, ದೇವರಕೊಲ್ಲಿಯ ಶ್ರೀ ಚಾಮುಂಡೇಶ್ವರಿ ದೇವಾಲಯದ ಅಧ್ಯಕ್ಷ ಯಶೋಧರ, ಹಿರಿಯರಾದ ಬಿ.ಸಿ.ಚೆನ್ನಪ್ಪ, ಯೋಧ ಹಾಗೂ ಕ್ರೀಡಾಪಟು ಬಿ.ಸಿ.ತಿಲಕ್, ಸಹಕಾರ ಸಂಘದ ಕಾರ್ಯದರ್ಶಿ ಮೋಹಿನಿ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

ದುರಂತದ ಆಘಾತದಿಂದ ಚೇತರಿಸಿಕೊಳ್ಳದ ಆಲಂಕಾರು | ಮನೆಮಂದಿ ಆಶಯದಂತೆ ಸಿದ್ಧಕಟ್ಟೆಯಲ್ಲಿ ದಂಪತಿಯ ಅಂತ್ಯ ಸಂಸ್ಕಾರ | ಎಲ್ಲೆಡೆ ದುಃಖದ ಕರಿಛಾಯೆ

ಎಲ್ಲರ ಕಣ್ಣಾಲಿ ತೇವಗೊಳಿಸಿತು ಅಮ್ಮನಿಗಾಗಿ ಪುಟಾಣಿ ಧ್ರುವಿಯ ಹುಡುಕಾಟ...

ಸಾಕ್ಷಿ ಆಲಂಕಾರು

ಆಲಂಕಾರು : ಶನಿವಾರ ಮಧ್ಯಾಹ್ನದ ವೇಳೆ ಬೆಳಕಿಗೆ ಬಂದ ಆಲಂಕಾರು ಗ್ರಾಮದ ಕಜೆ ಎಂಬಲ್ಲಿ ನಡೆದ ಇಡೀ ಗ್ರಾಮವನ್ನೇ ಬೆಚ್ಚಿ ಬೀಳಿಸಿದೆ. ಆಲಂಕಾರು ಪೇಟೆಯ ಸಮೀಪವೇ ಘಟನೆ ಸಂಭವಿಸಿರುವುದರಿಂದ ಭಾನುವಾರವು ಆಲಂಕಾರು ಪೇಟೆಯಲ್ಲಿ ನೀರವ ಮೌನ ಆವರಿಸಿಕೊಂಡಿದೆ.

ಆಲಂಕಾರು ಪೇಟೆಯಲ್ಲಿ ಕಳೆದ ಒಂದು ವರ್ಷದಿಂದ ಹೊಟೇಲ್ ಉದ್ಯಮ ನಡೆಸುತ್ತಿದ್ದ ಬಜಗೋಳಿ ಮೂಲದ ದಿನೇಶ್ ಪೂಜಾರಿ (45) ತನ್ನ ಪತ್ನಿ ಸಂಗೀತಾ (39) ಎಂಬವರನ್ನು ಕೊಲೆ ಮಾಡಿ ಬಳಿಕ ಆತ್ಮಹತ್ಯೆಗೆ ಶರಣಾಗಿದ್ದು ಎರಡು ವರ್ಷದ ಪುಟ್ಟ ಮಗು ಧ್ರುವಿ ಅನಾಥವಾಗಿತ್ತು. ಇಂತಹ ಪ್ರಕರಣ ಆಲಂಕಾರಿನ ಇತಿಹಾಸದಲ್ಲೇ ಪ್ರಥಮವಾಗಿ ಘಟಿಸಿದ್ದು, ಇದರ ಆಘಾತದಿಂದ ಸಾರ್ವಜನಿಕವಾಗಿ ನಾನಾ ಊಹಾ ಪೋಹಗಳೊಂದಿಗೆ ಚರ್ಚೆಗಳು ಮುಂದುವರಿದಿದೆ. ಈ ದಂಪತಿ ಆಲಂಕಾರು ಗ್ರಾಮದವರು ಅಲ್ಲದಿದ್ದರೂ ಕಳೆದ ಒಂದು ವರ್ಷದಿಂದ ಆಲಂಕಾರು ಪೇಟೆಯಲ್ಲಿ ಪುಟ್ಟ ಕಂದಮ್ಮನೊಂದಿಗೆ ಹೊಟೇಲ್ ನಡೆಸಿಕೊಂಡು ಇದ್ದ ಕಾರಣ ಬಾಯಲ್ಲಿ ಪುಟ್ಟ ಕಂದಮ್ಮನ ತುಂಟಾಟ ತೊದಲು ನುಡಿಯ ಮಾತುಗಳೊಂದಿಗೆ ಸಾರ್ವಜನಿಕರಿಗೆ ಮಗುವಿನ ಭವಿಷ್ಯದ ಬಗ್ಗೆ ಚಿಂತೆಯಾಗಿದೆ.

ಶನಿವಾರ ಮಧ್ಯ ರಾತ್ರಿಯವರೆಗೆ ಶವ ಮಹಜರು

ಶನಿವಾರ ಮಧ್ಯಾಹ್ನದ ವೇಳೆಗೆ ದಂಪತಿಯ ಸಾವಿನ ಬಗ್ಗೆ ಕುಟುಂಬದವರಿಗೆ ಮಾಹಿತಿ ದೊರೆತರು ಗಂಡಸಿನ ಕಡೆಯ ಸಂಬಂಧಿಕರು ಸಕಾಲದಲ್ಲಿ ಘಟನಾ ಸ್ಥಳಕ್ಕೆ ಆಗಮಿಸದೆ ಇದ್ದ ಪರಿಣಾಮ ಶನಿವಾರ ಮಧ್ಯರಾತ್ರಿಯವರೆಗೆ ಮೃತ ದೇಹಗಳ ಮಹಜರು ಕಾರ್ಯ ಪೊಲೀಸರು ನಡೆಸ ಬೇಕಾಯಿತು. ದಿನೇಶ್‌ನ ಸಹೋದರರು ಬಜಗೋಳಿಯಿಂದ ರಾತ್ರಿ ಆಗಮಿಸಿದ ಕಾರಣ ರಾತ್ರಿ 11.30ರ ವೇಳೆಗೆ ಶವ ಮಹಜರು ನಡೆಸಿ ದೇರಳಕಟ್ಟೆ ಆಸ್ಪತ್ರೆಗೆ ಸಾಗಿಸಲಾಗಿತ್ತು.



ಎರಡು ಶವಗಳು ಪತ್ನಿಯ ಮನೆಗೆ ರವಾನೆ

ಭಾನುವಾರ ಮಧ್ಯಾಹ್ನ 2.30ರ ವೇಳೆಗೆ ಮರಣೋತ್ತರ ಪರೀಕ್ಷೆಗಳು ನಡೆದು ಶವವನ್ನು ಸಂಬಂಧಿಕರಿಗೆ ಬಿಟ್ಟು ಕೊಡಲಾಯಿತು. ಧರ್ಮದ ಸಂಸ್ಕಾರದ ಆಧಾರದಲ್ಲಿ ದಂಪತಿಯ ಶವಗಳನ್ನು ಒಟ್ಟಿಗೆ ಒಂದೇ ಕಡೆ ಅಂತ್ಯ ಸಂಸ್ಕಾರ ಮಾಡಬೇಕೆಂದಿರುವ ಕಾರಣ ಮೃತ ಮಹಿಳೆಯ ತವರು ಮನೆಯವರ ಬೇಡಿಕೆಯಂತೆ ಎರಡು ಶವಗಳನ್ನು ಸಂಗೀತಾಳ ತವರು ಮನೆ ಸಿದ್ಧಕಟ್ಟೆಗೆ ಸಾಗಿಸಿ ಅಂತ್ಯ ಸಂಸ್ಕಾರ ಮಾಡಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮ್ಮನಿಗಾಗಿ ಮಗುವಿನ ಹುಡುಕಾಟ ಆಕ್ರಂದನ

ಶನಿವಾರದಿಂದ ಮಗುವಿಗೆ ತಾಯಿಯ ಎದೆಹಾಲು, ಮುದ್ದಾಟ ಸಿಗದಿರುವುದು ಮಗುವಿನ ಮನಸ್ಸಿಗೆ ಭಾರಿ ಬೇಸರವನ್ನು ತಂದಿದೆ. ಆಗಾಗ ಅಜ್ಜಿ ಬಳಿ ಮಗು ತಾಯಿಯನ್ನು ಕೇಳುತ್ತಿದ್ದು ಹುಡುಕುತ್ತಾ ಮಗುವಿನ ಆಕ್ರಂದನ ಹೆಚ್ಚಾಗುತ್ತಿದೆ. ತಾಯಿಯ ಮೃತ ಶರೀರ ಮನೆಯೊಳಗಿದ್ದ ವೇಳೆ ತನ್ನ ತಂದೆ, ತಾಯಿ ಮಲಗಿದ್ದಾರೆ, ಅಲ್ಲಿಗೆ ಹೋಗುತ್ತೇನೆ ಎಂದು ತೊದಲಿಕೊಂಡು ಹಠ ಹಿಡಿದು ಹೇಳುವ ಮಾತು ಎಂತಹ ಕಲ್ಲು ಹೃದಯವನ್ನೂ ಕರಗಿಸುವಂತಿತ್ತು. ಸದ್ಯ ಮಗು ಸಂಗೀತಾಳ ತವರು ಮನೆಯಲ್ಲಿದ್ದು ಅಜ್ಜಿಯ ಆರೈಕೆಯಲ್ಲಿದೆ. ಮುಂದಿನ ಕ್ರಮದ ಬಗ್ಗೆ ಕೌಟುಂಬಿಕವಾಗಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಂಗೀತಾಳ ಕುಟುಂಬದ ಮೂಲಗಳು ತಿಳಿಸಿವೆ.

ದಿನೇಶನೇ ಕೊಲೆ ಮಾಡಿದ್ದಾನೆ ?

ಸಂಗೀತ 13 ವರ್ಷಗಳಿಂದ ಪತಿ ನೀಡುತ್ತಿದ್ದ ಹಿಂಸೆ ಸಹಿಸಿಕೊಂಡು ಜೀವನ ಸಾಗಿಸಿದ್ದಾಳೆ. ಅವಳು ಆತ್ಮಹತ್ಯೆ ಮಾಡಿಕೊಳ್ಳುವಂತಹ ಅಥವಾ ಗಂಡನನ್ನು ತೊರೆದು ಬಾಳುವ ಮಹಿಳೆಯಲ್ಲ. ಗಟ್ಟಿ ಮನಸ್ಸಿನ ಮಹಿಳೆ. ಎಷ್ಟೇ ಕಷ್ಟ ಬಂದರೂ ಗಂಡನ ಜೊತೆಗೆ ಇರುತ್ತೇನೆ, ನಮ್ಮ ಕುಟುಂಬದಲ್ಲಿ ಯಾರೂ ಗಂಡನನ್ನು ಬಿಟ್ಟವರಿಲ್ಲ ಎಂದು ಹೇಳುತ್ತಿದ್ದಳು. ದಿನೇಶನೇ ಕೊಲೆ ಮಾಡಿದ್ದಾನೆ, ಅವಳಿಗೆ ಆತನಿಂದ ತಪ್ಪಿಸಿಕೊಳ್ಳಲು ಆಗಿಲ್ಲ. ನನ್ನ ಮೇಲೆ ನಂಬಿಕೆ ಇಟ್ಟು ಈ ಊರಿಗೆ ಬಂದಿದ್ದಳು ಎಂದು ಸಂಗೀತಾಳ ಸಹೋದರಿ (ದೊಡ್ಡಮ್ಮನ ಮಗಳು) ಸುಮಲತಾ ಅವರು ಕಣ್ಣೀರು ಸುರಿಸುತ್ತಾ ಪತ್ರಿಕೆಯೊಂದಿಗೆ ಮಾಹಿತಿ ನೀಡಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 29° 24°
ಉಡುಪಿ 30° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 22, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 3
ಶ್ರೀ ಕ್ಷೇತ್ರ ಕಾರಿಂಜೇಶ್ವರದಲ್ಲಿ 'ಯೋಗ ವಿದ್ ಯೋಧ'


ಪುಟ 6
ಕೋಟ ಕಾರಂತ ಥೀಮ್ ಪಾರ್ಕ್‌ನಲ್ಲಿ ಚುಟುಕು ಸಾಹಿತ್ಯ ಸಮ್ಮೇಳನ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಪೊಲೀಸ್ ಕಣ್ಗಾವಲಿನ ನಡುವೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀಟ್ ಆಗಿ ನಡೆಯಿತು ಪರೀಕ್ಷೆ


ಎಂಬಿಬಿಎಸ್, ಬಿಡಿಎಸ್ ಸೇರಿದಂತೆ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಭಾನುವಾರ ದೇಶಾದ್ಯಂತ ನಡೆದ ನೀಟ್ ಯುಜಿ- 2026 ಭಾಗವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಯಶಸ್ವಿಯಾಗಿ ಪರೀಕ್ಷೆ ನಡೆಯಿತು. ಪರೀಕ್ಷಾ ಕೇಂದ್ರದ ವಠಾರದಲ್ಲಿ ಬಿಗು ಪೊಲೀಸ್ ಕಣ್ಗಾವಲಿತ್ತು. ಮಧ್ಯಾಹ್ನ ಎರಡು ಗಂಟೆಯಿಂದ ಸಂಜೆ ಐದು ಕಾಲು ಗಂಟೆಯ ತನಕ ಪರೀಕ್ಷೆ ನಡೆಯಿತು.

ಸುತ್ತಮುತ್ತ

ಕರಾವಳಿ ಜಿಲ್ಲೆಗಳಲ್ಲಿ ಮತ್ತೆ ಮಳೆ-ಮೋಡಗಳ ಕಣ್ಣಾಮುಚ್ಚಾಲೆ ಆರಂಭ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸಹಿತ ಕರಾವಳಿ ಭಾಗದಲ್ಲಿ ಮತ್ತೆ ಮೋಡ ಕವಿದ ವಾತಾವರಣ ಕಂಡುಬಂದಿದೆ. ಮುಂದಿನ ಮೂರು ದಿನಗಳ ಕಾಲ ವಿವಿಧ ಕಡೆಗಳಲ್ಲಿ ಸಾಧಾರಣದಿಂದ ಭಾರೀ ಮಳೆ ಬೀಳುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಆದರೆ ಮುಂಗಾರು ಚುರುಕಾಗುವ ಲಕ್ಷಣ ಕಂಡುಬಂದಿಲ್ಲ. ಜೂ.26ರ ಬಳಿಕ ಮಳೆ ಒಂದಿಷ್ಟು ಚುರುಕಾಗುವ ಸಾಧ್ಯತೆ ಇದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಉಡುಪಿಯಲ್ಲಿ ಮತ್ತೆ ಚುರುಕಾದ ಮುಂಗಾರು: ಹಲವೆಡೆಗಳಲ್ಲಿ ಜಡಿಮಳೆ

ಉಡುಪಿ: ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಸಂಪೂರ್ಣವಾಗಿ ಬಿಡುವು ನೀಡಿದ್ದ ಮುಂಗಾರು ಮಳೆ ಮತ್ತೆ ಸಕ್ರಿಯಗೊಂಡಿದೆ. ಭಾನುವಾರ ಮುಂಜಾನೆಯಿಂದಲೇ ಜಿಲ್ಲೆಯಾದ್ಯಂತ ಮೋಡ ಕವಿದ ವಾತಾವರಣ ನಿರ್ಮಾಣವಾಗಿದ್ದು, ಉಡುಪಿ ನಗರ ಸೇರಿದಂತೆ ಕಟಪಾಡಿ, ಶಿರ್ವ, ಬಂಟಕಲ್ಲು, ಕಾಪು, ಹಿರಿಯಡ್ಕ, ಕಾರ್ಕಳ, ಬ್ರಹ್ಮಾವರ, ಕೋಟ, ಮಲ್ಪೆ, ಮಣಿಪಾಲ ಭಾಗಗಳಲ್ಲಿ ಮುಂಜಾನೆಯಿಂದ ರಾತ್ರಿಯವರೆಗೂ ಬಿಟ್ಟು ಬಿಟ್ಟು ಮಳೆ ಸುರಿದಿದೆ.

ಬ್ರಹ್ಮಾವರ ಪರಿಸರದಲ್ಲಿ ಚಿರತೆ ಹಾವಳಿ: ಆತಂಕದಲ್ಲಿ ಸ್ಥಳೀಯ ನಾಗರಿಕರು

ಮಂಗಳೂರು: ಉಡುಪಿ ಜಿಲ್ಲೆಯ ಬ್ರಹ್ಮಾವರ ಸಮೀಪದ ಉಪ್ಪೂರು ಪರಿಸರದಲ್ಲಿ ಚಿರತೆ ಹಾವಳಿ ಕಂಡುಬಂದಿದ್ದು, ನಾಗರಿಕರು ಆತಂಕಕ್ಕೆ ಒಳಗಾಗಿದ್ದಾರೆ. ಇಲ್ಲಿನ ಕೊಳಲಗಿರಿ, ಪರಾರಿ ಪರಿಸರದಲ್ಲಿ ಪ್ರತ್ಯಕ್ಷವಾಗುತ್ತಿರುವ ಚಿರತೆ ಮನೆ ಆವರಣದಿಂದ ನಾಯಿ, ಕೋಳಿಗಳನ್ನು ಹೊತ್ತೊಯ್ಯುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ. ಅರಣ್ಯ ಇಲಾಖೆ ಈ ಬಗ್ಗೆ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

ಕಾಸರಗೋಡು ಜಿಲ್ಲೆ: ಇಂದು, ನಾಳೆ ಎಲ್ಲೋ ಅಲರ್ಟ್ ಘೋಷಣೆ

ಮಂಗಳೂರು: ಕಾಸರಗೋಡು ಜಿಲ್ಲೆಯಲ್ಲಿ ಇಂದು ಮತ್ತು ನಾಳೆ ಉತ್ತಮ ಮಳೆಯಾಗಲಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಹವಾಮಾನ ಇಲಾಖೆ ಎಲ್ಲೋ ಅಲರ್ಟ್ ಘೋಷಣೆ ಮಾಡಿದೆ.

ಆರಂಭದಲ್ಲಿಯೇ ಕೈಕೊಟ್ಟ ಮುಂಗಾರು
ಇಲ್ಲಿ 49%, ಅಲ್ಲಿ 47%
ಮಳೆ ಕೊರತೆಗೆ ಕಂಗಾಲಾದ ಕರಾವಳಿ


ಮಂಗಳೂರು: ಮುಂಗಾರು ಕಾಲಿಟ್ಟ ಮೊದಲೆರಡು ದಿನ ಭರ್ಜರಿ ಆರ್ಭಟಿಸಿದ ಮುಂಗಾರು ಬಳಿಕ ಮಂಕಾಗಿದೆ.

ಜೂ.1ರಿಂದ ಜೂ. 17ರವರೆಗಿನ ಅಂಕಿ ಅಂಶ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡಾ 49, ಉಡುಪಿ ಜಿಲ್ಲೆಯಲ್ಲಿ ಶೇಕಡಾ 47 ಮಳೆ ಕೊರತೆ ಯಾಗಿದ್ದು, ನೇರ ಪರಿಣಾಮ ಕೃಷಿ ಮೇಲಾಗಿದೆ.

ಈ ಬಾರಿ ಆರಂಭದಲ್ಲಿಯೇ ಮುಂಗಾರು ಕೈಕೊಟ್ಟಿದ್ದು, ಕೃಷಿಕರು ಅಕ್ಷರಶಃ ಕಂಗಾಲಾಗಿದ್ದಾರೆ. ಗದ್ದೆಯಲ್ಲಿ ಬೆಳೆದು ನಿಂತ ನೇಜಿ ಕೆಂಬಣಕ್ಕೆ ತಿರುಗಿದ್ದು, ಎಲ್ಲೆಡೆ ಆತಂಕದ ಸ್ಥಿತಿ ನಿರ್ಮಾಣವಾಗಿದೆ.

ಕೃಷಿ ಕ್ಷೇತ್ರಕ್ಕೆ ಭಾರೀ ಹೊಡೆತ

ಪ್ರತಿ ವರ್ಷ ಕರಾವಳಿಯಲ್ಲಿ ಮುಂಗಾರಿನ ಆರ್ಭಟ ಜೋರಾಗಿಯೇ ಇರುತ್ತದೆ. ಆದರೆ ಈ ಬಾರಿ ಮಾತ್ರ ಇಲ್ಲಿನ ಚಿತ್ರಣ ಬದಲಾಗಿದೆ. ನಿರೀಕ್ಷೆಯಂತೆ ಮಳೆ ಬಾರದಿರುವುದು ಈ ಕರಾವಳಿ ಭಾಗದ ಕೃಷಿಕರಿಗೆ ದೊಡ್ಡ ಹೊಡೆತವನ್ನು ನೀಡಿದೆ.



ದ.ಕ.ದಲ್ಲಿ 350 ಮನೆಗಳಿಗೆ ಹಾನಿ

ದ.ಕ.ದಲ್ಲಿ ಕಡಿಮೆ ಮಳೆ ಸುರಿದರೂ ಹಾನಿ ಪ್ರಮಾಣ ಹೆಚ್ಚಿದೆ. ಮೇ 1ರಿಂದ ಜೂ.19ರವರೆಗೆ ಪ್ರಾಕೃತಿಕ ವಿಕೋಪದಿಂದ ಒಟ್ಟು 350 ಮನೆಗಳಿಗೆ ಹಾನಿ, ಈ ಪೈಕಿ 5 ಮನೆಗೆ ಭಾರೀ ಹಾನಿಯಾಗಿದೆ. ಒಂದು ಮನೆ ಸಂಪೂರ್ಣ ಕುಸಿದಿದೆ.

ಎಲ್ಲಿ ಎಷ್ಟಾಗಬೇಕಿತ್ತು ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೂ.1ರಿಂದ ಜೂ.17ರವರೆಗೆ 217 ಮಿಲಿ ಮೀಟರ್ ಮಳೆಯಾಗಬೇಕಿತ್ತು. ಉಡುಪಿಯಲ್ಲಿ 280 ಮಿ.ಮೀ ಮಳೆಯಾಗಬೇಕಿತ್ತು. ಆದರೆ ಅಷ್ಟು ಮಳೆ ಸುರಿದಿಲ್ಲ. ಮುಂದಿನ ದಿನಗಳಲ್ಲಾದರೂ ಮಳೆ ಸುರಿದೀತು ಎಂಬ ನಿರೀಕ್ಷೆಯಲ್ಲಿ ಜನತೆ ಮತ್ತು ಕೃಷಿಕರಿದ್ದಾರೆ.

2875 ವಿದ್ಯುತ್ ಕಂಬ ಧರಾಶಾಹಿ

ದ.ಕ. ಜಿಲ್ಲೆಯಲ್ಲಿ ಒಟ್ಟು 2875 ವಿದ್ಯುತ್ ಕಂಬಗಳು ಧರಾಶಾಹಿಯಾಗಿದ್ದು, 14 ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿದೆ. 145.5 ಕಿ.ಮೀ. ಉದ್ದದ ವಿದ್ಯುತ್ ತಂತಿ ಹಾನಿಗೊಂಡಿವೆ.1.56 ಕಿ.ಮೀ ಉದ್ದದ ರಸ್ತೆಗಳು ಹಾನಿಗೊಂಡಿವೆ.

ಹಲವು ಜಿಲ್ಲೆಗಳಲ್ಲಿ ಕಾಡಿದೆ ಮಳೆ ಕೊರತೆ

ದಕ್ಷಿಣ ಕನ್ನಡ, ಉಡುಪಿ ಮಾತ್ರವಲ್ಲ. ರಾಜ್ಯದ ಇತರ ಹಲವು ಜಿಲ್ಲೆಗಳಲ್ಲಿ ಮಳೆ ಕೊರತೆ ಸ್ಪಷ್ಟವಾಗಿದೆ. ಕೊಡಗಿನಲ್ಲಿ ಇದೇ ಅವಧಿಯಲ್ಲಿ ಸರಾಸರಿ 125 ಮಿ.ಮೀ ಮಳೆಯಾಗಬೇಕಿದ್ದು, ಶೇ. 47ರಷ್ಟು ಮಳೆಯಾಗಿದೆ. ಹಾಸನದಲ್ಲಿ 63 ಮಿ.ಮೀ ಮಳೆಯಾಗಬೇಕಿದ್ದು ಶೇ. 23, ಚಿಕ್ಕಮಗಳೂರಿನಲ್ಲಿ 83 ಮಿ.ಮೀ ಮಳೆಯಾಗಬೇಕಿದ್ದು ಶೇ 43 ರಷ್ಟು ಮಳೆಯಾಗಬೇಕಿದೆ. ಆದರೆ ಈ ಬಾರಿ ಭಾರೀ ಪ್ರಮಾಣದಲ್ಲಿ ಮಳೆ ಇಳಿಮುಖವಾಗಿದೆ. ಈ ಅಂಕಿ ಅಂಶಗಳು ಕೃಷಿಕರನ್ನು ಮಾತ್ರವಲ್ಲ, ಜಿಲ್ಲೆಗಳ ನಾಗರಿಕರನ್ನೂ ಈಗ ಚಿಂತೆಗೀಡು ಮಾಡಿದೆ.

ಚಿಂದಿಯಾಗಿದೆ ಶೌಚಾಲಯ ಪೈಪ್
ತ್ರಾಸ ನೀಡುತ್ತಿದೆ ತ್ರಾಸಿಯ ಬೀಚ್!
ಪ್ರವಾಸಿಗರಿಗೆ ದುರ್ನಾತ ಸಂಕಷ್ಟ

ಬೈಂದೂರು ವಿಧಾನಸಭಾ ಕ್ಷೇತ್ರದ ಪ್ರಸಿದ್ಧ ತ್ರಾಸಿ ಬೀಚ್‌ನಲ್ಲಿರುವ ಸಾರ್ವಜನಿಕ ಶೌಚಾಲಯದ ಪೈಪ್‌ಲೈನ್ ಒಡೆದು ಹೋಗಿದ್ದು, ಶೌಚಾಲಯದ ಮಲಮೂತ್ರ ಸೋರಿಕೆಯಾಗಿ ಸಾರ್ವಜನಿಕ ಸ್ಥಳದಲ್ಲಿ ಭಾರೀ ದುರ್ನಾತ ಬೀರುತ್ತಿದೆ.

ಕುಂದಾಪುರ: ನಿತ್ಯ ಸಾವಿರಾರು ಪ್ರವಾಸಿಗರು ಆಗಮಿಸಿ ಮೋಜು ಮಸ್ತಿ ಮಾಡುವ ಸ್ಥಳ ತ್ರಾಸಿ ಬೀಚ್‌ಗೆ ಸರಕಾರ ಕೋಟಿಗಟ್ಟಲೆ ಹಣ ಬಿಡುಗಡೆ ಮಾಡಿ ಅಭಿವೃದ್ಧಿಗೆ ಮುಂದಾಗಿದ್ದು, ಬೀಚ್‌ನಲ್ಲಿ ಅವ್ಯವಸ್ಥೆ ಮಾತ್ರ ಕಡಿಮೆಯಾಗಿಲ್ಲ, ಬೀಚ್‌ನಲ್ಲಿರುವ ಶೌಚಾಲಯದ ಪೈಪ್ ಒಡೆದು ಹೋಗಿ ಅನೇಕ ದಿನಗಳು ಕಳೆದಿದ್ದರೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಥವಾ ಗುತ್ತಿಗೆದಾರರು ದುರಸ್ಥಿಗೆ ಮುಂದಾಗಿಲ್ಲ.

ಸಾರ್ವಜನಿಕ ಸ್ಥಳದಲ್ಲಿ ದುರ್ವಾಸನೆ

ಶೌಚಾಲಯದಿಂದ ಹೊರಬರುವ ಮಲ ಮೂತ್ರ ನೀರು ಸಾರ್ವಜನಿಕ ಸ್ಥಳಗಳಲ್ಲಿ ಹರಿದು ದುರ್ವಾಸನೆ ಬೀರುತ್ತಿದ್ದು, ಪ್ರವಾಸಿಗರು ಮೂಗು ಮುಚ್ಚಿಕೊಂಡೇ ಓಡಾಡುವ ಸ್ಥಿತಿ. ಶೌಚಾಲಯದ ಹಿಂದೆ ಶೇಖರಣೆಯಾದ ತ್ಯಾಜ್ಯ ನೀರಿನಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿದ್ದು, ಡೆಂಗ್ಯೂ, ಮಲೇರಿಯಾ, ಮೊದಲಾದ ರೋಗಗಳಿಗೆ ಆಹ್ವಾನ ನೀಡುತ್ತಿದೆ. ಪುಟ 6



ಆರೋಗ್ಯ ಚಿಂತೆ

ಶೌಚಾಲಯದ ತ್ಯಾಜ್ಯ ನೀರಿನಿಂದ ಪರಿಸರದಲ್ಲಿ ದುರ್ನಾತ ಬೀರುತ್ತಿದ್ದು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಸಂಬಂಧಪಟ್ಟವರು ಸಮಸ್ಯೆಯನ್ನು ತಕ್ಷಣ ಪರಿಹರಿಸಿ, ಶೌಚಾಲಯ ವ್ಯವಸ್ಥೆಯನ್ನು ಸುಧಾರಿಸಬೇಕು.

• ದಾಮೋದರ, ಸ್ಥಳೀಯ ನಿವಾಸಿ, ತ್ರಾಸಿ

ಕೆಸರುಗದ್ದೆಯಾದ ಮಂಜೇಶ್ವರ ಬೀಚ್ ರಸ್ತೆ | ಕಡತದಲ್ಲಿ ಭದ್ರವಾದ ದುರಸ್ತಿ ಮನವಿ
ಪ್ರವಾಸಿಗರ ಸ್ವರ್ಗಕ್ಕೆ ತೆರಳಲು ನರಕ ಸದೃಶ ಹಾದಿ!

ಮಂಜೇಶ್ವರ: ಇಲ್ಲಿನ ಪ್ರಮುಖ ಸಂಪರ್ಕ ರಸ್ತೆಗಳಲ್ಲಿ ಒಂದಾಗಿರುವ ಮಂಜೇಶ್ವರ ಬೀಚ್ ರಸ್ತೆ ಕಳೆದ ಎರಡು ವರ್ಷಗಳಿಂದ ಸಂಪೂರ್ಣ ಹದಗೆಟ್ಟಿದ್ದು, ಸ್ಥಳೀಯರು, ಪ್ರವಾಸಿಗರು ಸಂಕಷ್ಟವೆದುರಿಸುತ್ತಿದ್ದಾರೆ. ರಸ್ತೆ ದುರಸ್ತಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪರಿಣಾಮಕಾರಿ ಕ್ರಮವೇ ಆಗಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಚಾರ ಅಸಾಧ್ಯ ಎಂಬ ಸ್ಥಿತಿ ಇದೆ

ಮಂಜೇಶ್ವರ ಚರ್ಚ್ ಬೀಚ್ ರಸ್ತೆಯಿಂದ ಕಣ್ವತೀರ್ಥ ವರೆಗೆ ರಸ್ತೆ ಹಲವು ಕಡೆಗಳಲ್ಲಿ ಹೊಂಡ ಗುಂಡಿಗಳಿಂದ ತುಂಬಿದ್ದು, ಇಲ್ಲಿ ವಾಹನ ಸಂಚಾರಕ್ಕೆ ಅಸಾಧ್ಯವಾದ ಸ್ಥಿತಿಗೆ ತಲುಪಿದೆ. ಈ ನಡುವೆ ಇದೀಗ ಮಳೆಗಾಲ ಆರಂಭಗೊಂಡಿರುವುದರಿಂದ ರಸ್ತೆ ಹೊಂಡಗಳಲ್ಲಿ ಕೆಸರು ನೀರು ತುಂಬಿ ಮಾರ್ಗ ಪೂರ್ತಿ ಕೆಸರುಗದ್ದೆಯಾಗಿದೆ.



- ಕೆಸರುಗದ್ದೆಯಾದ ಮಂಜೇಶ್ವರ ಬೀಚ್ ರಸ್ತೆ
- ನಾಗರಿಕರ ಆಕ್ರೋಶಕ್ಕೆ ಕಾರಣವಾಗುತ್ತಿದೆ ನಿರ್ಲಕ್ಷ್ಯ
- ಕಳೆದ ಎರಡು ವರ್ಷಗಳಿಂದ ಹಾಳಾದ ರಸ್ತೆಗಿಲ್ಲ ದುರಸ್ತಿ
- ಮಳೆಗಾಲದಲ್ಲಿ ವಾಹನ ಸಂಚಾರ ಮತ್ತಷ್ಟು ದುಸ್ತರ

ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಪ್ರವಾಸೋದ್ಯಮಕ್ಕೂ ಹೊಡೆತ

ಮಂಜೇಶ್ವರ ಕಡಪ್ಪುರ, ಕಣ್ವತೀರ್ಥ, ಕುಂಡುಕೊಳಕೆ ಬೀಚ್ ಪ್ರದೇಶಗಳಿಗೆ ಪ್ರತಿದಿನ ನೂರಾರು ಮಂದಿ ಈ ದಾರಿಯಲ್ಲಿ ಭೇಟಿ ನೀಡುತ್ತಾರೆ. ಆದರೆ ರಸ್ತೆ ಹಾಳಾಗಿರುವುದರಿಂದ ಪ್ರವಾಸಿಗರು ಸಂಕಷ್ಟ ಪಡುವಂತಾಗಿದೆ. ಪುಟ 6

ಅಪಘಾತ ಭೀತಿ

ರಸ್ತೆ ದುಃಸ್ಥಿತಿಯಿಂದಾಗಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನ ಸವಾರರು ಅಪಾಯ ಆಹ್ವಾನಿಸುತ್ತಾ ಸಂಚರಿಸುವಂತಾಗಿದೆ. ಹೊಂಡಗಳಿಗೆ ವಾಹನಗಳು ಬಿದ್ದು ಸಣ್ಣಪುಟ್ಟ ಅಪಘಾತಗಳು ಪದೇಪದೇ ಸಂಭವಿಸುತ್ತಿವೆ.

ಕಾರಿಂಜ ಬೆಟ್ಟದಲ್ಲಿ ಯೋಗಾಯೋಗ!


ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಐತಿಹಾಸಿಕ ಶ್ರೀ ಕ್ಷೇತ್ರ ಕಾರಿಂಜೇಶ್ವರ ಬೆಟ್ಟದ ಆವರಣದಲ್ಲಿ ನಡೆದ 3ನೇ ಆವೃತ್ತಿಯ 'ಯೋಗ ವಿದ್ ಯೋಧ' ಬೃಹತ್ ಯೋಗಾಭ್ಯಾಸ ಕಾರ್ಯಕ್ರಮದಲ್ಲಿ ಪುಟಾಣಿ ಯೋಗಪಟುಗಳು ಎಲ್ಲರ ಗಮನಸೆಳೆದರು.


ಸಾಂಪ್ರದಾಯಿಕ ಮೀನುಗಾರಿಕೆಗೆ ಗ್ರಹಣ | ಕುಂದಾಪುರ, ಬೈಂದೂರುಗಳಲ್ಲಿ ಕಾಣಿಸುತ್ತಿಲ್ಲ ಸಂಚಲನ
ತೂಫಾನೇ ಇಲ್ಲ ಕಾಣೆ, ಕಡಲಿಗೆ ಇಳಿದಿಲ್ಲ ನಾಡದೋಣಿ...

ಕುಂದಾಪುರ: ಜೂನ್ ತಿಂಗಳಿನಲ್ಲಿ ನಿರೀಕ್ಷಿತ ಪ್ರಮಾಣದ ಮಳೆ ಇನ್ನೂ ಕೂಡಾ ಬಾರದೇ ಇರುವುದು, ಕಡಲಿನಲ್ಲಿ ತೂಫಾನ್ ಕೂಡಾ ಏಳದೇ ಇರುವುದು ಈ ಭಾಗದ ನಾಡದೋಣಿ ಮೀನುಗಾರಿಕೆಗೆ ಈ ಬಾರಿ ಬಲವಾದ ಹೊಡೆತವನ್ನೇ ನೀಡಿದೆ.

ಈ ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ನಾಡದೋಣಿ ಮೀನುಗಾರಿಕೆ ನಡೆಯುವುದು ಅನುಮಾನ ಎಂದೇ ಇಲ್ಲಿನ ಮೀನುಗಾರ ವಲಯ ಚರ್ಚಿಸುತ್ತಿದೆ.

ಜು.15ರ ಬಳಿಕವೇ ಕಡಲಿನಲ್ಲಿ ಮತ್ಸ್ಯ ಬೇಟೆ

ಹವಾಮಾನ, ಸಮುದ್ರದ ಪರಿಸ್ಥಿತಿ ನೋಡಿಕೊಂಡು ಜು.15ರ ನಂತರ ಕಡಲಿಗೆ ಇಳಿಯಲು ಕುಂದಾಪುರ, ಬೈಂದೂರು ಭಾಗದ ಮೀನುಗಾರರು ನಿರ್ಧರಿಸಿದ್ದಾರೆ.



- ನಾಡದೋಣಿ ಮೀನುಗಾರರಿಗೆ ಜೂನ್ ಮಳೆ ಕೊರತೆ ಸಂಕಷ್ಟ
- ತೂಫಾನ್ ಕಾಣಿಸಿಕೊಳ್ಳದೆ ಬಲೆಗೆ ಬೀಳದ ಮೀನುಗಳು
- ನಿರೀಕ್ಷೆಯಲ್ಲಿದ್ದಾರೆ ಕುಂದಾಪುರ, ಬೈಂದೂರಿನ ಮೀನುಗಾರರು
- ಹವಾಮಾನ ಪೂರಕವಾದರೆ ಮುಂದಿನ ತಿಂಗಳು ಮತ್ಸ್ಯ ಬೇಟೆ

ಕಡಲಿನಲ್ಲಿ ತೂಫಾನ್ ಅಗತ್ಯವೇ?

ಕಡಲಾಳದಲ್ಲಿ ತೂಫಾನ್ ಎದ್ದ ಬಳಿಕ ಕಡಲು ಪ್ರಕ್ಷುಬ್ಧಗೊಳ್ಳುತ್ತವೆ. ಇದರಿಂದ ನದಿ, ಹೊಳೆಗಳ ನೀರು, ಅದರೊಂದಿಗೆ ತ್ಯಾಜ್ಯವೆಲ್ಲ ಸಮುದ್ರಕ್ಕೆ ಸೇರುತ್ತದೆ. ಇದರಿಂದ ಆಹಾರಕ್ಕಾಗಿ ವಿವಿಧ ಜಾತಿಯ ಮೀನುಗಳು ಕಡಲ ತೀರದತ್ತ ಧಾವಿಸುತ್ತವೆ. ಆದರೆ ಜೂನ್ ಮಳೆಯಾಗದೇ, ತೂಫಾನ್ ಏಳದೇ ಮೀನುಗಾರರು ಕಡಲಿಗಿಳಿದರೂ ಪ್ರಯೋಜನವಾಗುತ್ತಿಲ್ಲ.

ಎಷ್ಟೆಷ್ಟಿವೆ ದೋಣಿಗಳು?

ಕುಂದಾಪುರ, ಬೈಂದೂರು ಭಾಗದ ಕೋಡಿ, ಗಂಗೊಳ್ಳಿ, ಬೆಣ್ಗೆರೆ, ಕಂಚುಗೋಡು, ಹೊಸಪೇಟೆ, ಮರವಂತೆ, ತ್ರಾಸಿ, ಕೊಡೇರಿ, ಉಪ್ಪುಂದದ ಮಡಿಕಲ್, ಅಳ್ವೆಗದ್ದೆಯಲ್ಲಿ ನಾಡದೋಣಿ ಮೀನುಗಾರರಿದ್ದಾರೆ. ಉಪ್ಪುಂದ ಭಾಗದಲ್ಲಿ 1,500 ನಾಡದೋಣಿಗಳಿದ್ದರೆ, ಗಂಗೊಳ್ಳಿಯಲ್ಲಿ 300 ಸಿಂಗಲ್, 35ಕ್ಕೂ ಮಿಕ್ಕಿ ಜೋಡಿ ದೋಣಿಗಳು ಸೇರಿದಂತೆ ಸುಮಾರು 600 ಕ್ಕೂ ಮಿಕ್ಕಿ ನಾಡದೋಣಿಗಳಿವೆ. ಮರವಂತೆಯಲ್ಲಿ 100 ಜೋಡಿ ದೋಣಿ, 150 ಕ್ಕೂ ಮಿಕ್ಕಿ ಸಿಂಗಲ್ ದೋಣಿಗಳಿವೆ.

ಸರ್ಕಾರ ಸಮಸ್ಯೆ ಪರಿಹಾರ ಮಾಡಲಿ

ಈ ಬಾರಿ ಮಳೆ ಕೊರತೆಯಿಂದ ಸಮುದ್ರದಲ್ಲಿ ಮೀನುಗಾರಿಕೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗಿಲ್ಲ, ಇನ್ನೊಂದೆಡೆ ಸೀಮೆಎಣ್ಣೆ ಸಮಸ್ಯೆ ಮೀನುಗಾರರಿಗೆ ಬಿಸಿತುಪ್ಪವಾಗಿ ಪರಿಣಮಿಸಿದೆ. ಮೀನುಗಾರರು ಬೀದಿಪಾಲಾಗುವ ಪರಿಸ್ಥಿತಿಯಿದೆ. ಸರಕಾರ ಮೀನುಗಾರರ ಸಮಸ್ಯೆ ಪರಿಹಾರಕ್ಕೆ ಮುಂದಾಗಬೇಕು.

• ಯಶವಂತ ಖಾರ್ವಿ, ಅಧ್ಯಕ್ಷರು, ಕರಾವಳಿ ಸಾಂಪ್ರದಾಯಿಕ ನಾಡದೋಣಿ ಮೀನುಗಾರರ ಸಂಘ ಗಂಗೊಳ್ಳಿ ವಲಯ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡಿತು ವಿಶ್ವ ಯೋಗ ದಿನಾಚರಣೆಯ ಸಂಭ್ರಮ 2
ಉಡುಪಿ ಜಿಲ್ಲೆಯಲ್ಲಿ ಯೋಗ ದಿನದ ಸಂಭ್ರಮ: ಎಲ್ಲೆಡೆ ಯೋಗಾಯೋಗ 3
ಪಾಲಿಕೆಯಿಂದಲೇ ಕುದ್ಮುಲ್ ರಂಗರಾವ್ ಜಯಂತಿ ನಡೆಯಲಿ: ಶಾಸಕ ಕಾಮತ್ 4

ಸುತ್ತಮುತ್ತ

ಮಂಗಳಾ ಫ್ರೆಂಡ್ಸ್ ಸರ್ಕಲ್ ಅಧ್ಯಕ್ಷರಾಗಿ ಶ್ರೀಧರ ಶೆಟ್ಟಿ ಪುನರಾಯ್ಕೆ

ಬಂಟ್ವಾಳ: ಬಿ.ಸಿ.ರೋಡಿಗೆ ಸಮೀಪದ ಆಲೆತ್ತೂರು ಮಂಗಳಾ ಫ್ರೆಂಡ್ಸ್ ಸರ್ಕಲ್ ವಾರ್ಷಿಕ ಮಹಾಸಭೆಯು ಭಾನುವಾರದಂದು ಆಲೆತ್ತೂರು ಮಂಗಳಾ ಭವನದಲ್ಲಿ ಗೌರವಧ್ಯಕ್ಷರಾದ ನೇಮಿರಾಜ ಶೆಟ್ಟಿ ಕೊಡಂಗೆ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ನೂತನ ಪದಾಕಾರಿಗಳ ಆಯ್ಕೆ ನಡೆಸಲಾಯಿತು. ನೂತನ ಅಧ್ಯಕ್ಷರಾಗಿ ಶ್ರೀಧರ್ ಶೆಟ್ಟಿ ಪುನರಾಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ



ನಾಗೇಶ್ ಕುಲಾಲ್, ಕಾರ್ಯದರ್ಶಿಯಾಗಿ ಲೋಹಿತ್ ಕರ್ಕೇರ, ಜೊತೆ ಕಾರ್ಯದರ್ಶಿಯಾಗಿ ಅಭಿಷೇಕ್ ಶೆಟ್ಟಿ, ಸಂಘಟನಾ ಕಾರ್ಯದರ್ಶಿಯಾಗಿ ಯಶವಂತ ಶೆಟ್ಟಿ, ಕ್ರೀಡಾ ಕಾರ್ಯದರ್ಶಿಯಾಗಿ ರಂಜಿತ್ ಪೂಜಾರಿ ಜೊತೆ ಕ್ರೀಡಾ ಕಾರ್ಯದರ್ಶಿಯಾಗಿ ನಿತಿನ್ ಶೆಟ್ಟಿ, ಪ್ರಚಾರ ಸಮಿತಿ ಸದಸ್ಯರಾಗಿ ವಿಜಯ್ ಸುವರ್ಣ, ಶರಣ್ ಕುಲಾಲ್, ಧನರಾಜ್, ಸ್ರಜನ್, ಪ್ರಜ್ವಲ್, ಪ್ರಶಾಂತ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಭಾಸ್ಕರ್ ಕುಲಾಲ್, ವಿಜಯ್ ಸುವರ್ಣ, ನಿತಿನ್ ಪೂಜಾರಿ, ಪ್ರಶಾಂತ್, ವಾಸುದೇವ ಆಲೆತ್ತೂರು, ವಿಶ್ವನಾಥ ಪೈ ಬಿ.ಸಿ.ರೋಡು, ದಿನೇಶ್ ಸುವರ್ಣ, ಉಮೇಶ್ ಬಂಗೇರ, ಸಂದೀಪ್ ಬಿ.ಸಿ.ರೋಡು ಆಯ್ಕೆಯಾದರು. ಈ ಸಂದರ್ಭದಲ್ಲಿ ಅತಿಥಿಗಳಾಗಿ ಪರಮೇಶ್ವರ ಶೆಟ್ಟಿ ಚಾವಡಿ ಮನೆ ಆಲೆತ್ತೂರು, ಮೋನಪ್ಪ ಪೂಜಾರಿ ಆಲೆತ್ತೂರು, ಅಶ್ವಥ್ ಶೆಟ್ಟಿ, ಹಿಮಕರ ಪೂಜಾರಿ, ನಾರಾಯಣ ಪೂಜಾರಿ ಇದ್ದರು.

ಕಕ್ಕೂರು: ಎಸ್‌ಡಿಎಂಸಿ ಸ್ಥಾನಕ್ಕೆ ಆಯ್ಕೆ

ನಿಡ್ಪಳ್ಳಿ: ಕಕ್ಕೂರು ದ.ಕ.ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿಯ ತೆರವಾದ ಸ್ಥಾನಕ್ಕೆ ಆಯ್ಕೆ ಪ್ರಕ್ರಿಯೆ ನಡೆಯಿತು. ಬೆಟ್ಟಂಪಾಡಿ ಗ್ರಾಮ



ಪಂಚಾಯತ್ ಆಡಳಿತ ಅಧಿಕಾರಿ ಡಾ. ಧರ್ಮಪಾಲ್ ಮತ್ತು ಕಾರ್ಯದರ್ಶಿ ಎಂ. ಶಿವರಾಮ ಮೂಲ್ಯ ಅವರ ಉಪಸ್ಥಿತಿಯಲ್ಲಿ ಆಯ್ಕೆ ನಡೆಸಲಾಯಿತು. ಅಧ್ಯಕ್ಷರಾಗಿ ಕುಶಾಲಪ್ಪ ಕೋಡಿ ಮತ್ತು ಉಪಾಧ್ಯಕ್ಷರಾಗಿ ಅನೀಸಾ ಹಾಗೂ ತೆರವಾದ ಸದಸ್ಯ ಸ್ಥಾನಕ್ಕೆ ಶಿವಪ್ರಸಾದ್, ಮಿಶ್ರಿಯ, ಸುಲೋಚನಾ ಅವರು ಆಯ್ಕೆಯಾದರು. ಶಾಲಾ ಮುಖ್ಯ ಶಿಕ್ಷಕಿ ಪಾರ್ವತಿ ಕಜೆ ಮತ್ತು ಸಹ ಶಿಕ್ಷಕಿಯರು ಸಹಕರಿಸಿದರು.

ಬಡಗನ್ನೂರು ಸ.ಉ.ಹಿ.ಪ್ರಾ. ಶಾಲಾ ಮಂತ್ರಿಮಂಡಲ ರಚನೆ

ಬಡಗನ್ನೂರು: ಬಡಗನ್ನೂರು ಸ.ಉ.ಹಿ.ಪ್ರಾ. ಶಾಲೆಯಲ್ಲಿ ಮಂತ್ರಿಮಂಡಲ ರಚಿಸಲಾಯಿತು. ಪ್ರಜಾಪ್ರಭುತ್ವ ಮಾದರಿಯಲ್ಲಿ ಚುನಾವಣಾ ಘೋಷಣೆ ಬಳಿಕ ಅಭ್ಯರ್ಥಿಗಳು ತಮ್ಮ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಿದರು. ಅಭ್ಯರ್ಥಿಗಳು ತಮ್ಮ ಗುರುತಿನ ಚಿಹ್ನೆಯೊಂದಿಗೆ ಚುನಾವಣಾ ಪ್ರಚಾರ ನಡೆಸಿದರು. ಇವಿಎಂ ಮೂಲಕ ಮತದಾನ ಕೇಂದ್ರದಲ್ಲಿ ಮತ ಚಲಾಯಿಸಿದರು. ಕೊನೆಯಲ್ಲಿ ಫಲಿತಾಂಶ ಘೋಷಣೆಯ ಮಾಡಲಾಯಿತು. ಶಾಲಾ ನಾಯಕನಾಗಿ ರೋಕ್ಷಿತ್ (8 ನೇ ತರಗತಿ), ಉಪನಾಯಕನಾಗಿ ದಾವೂದ್ ಇಫಾರ್ಝ್



(7 ನೇ)ಆಯ್ಕೆಯಾದರು. ಗೃಹಮಂತ್ರಿಯಾಗಿ ಶಯಾಪ್, ಉಪಗೃಹಮಂತ್ರಿಯಾಗಿ ಮುಹಮ್ಮದ್ ರಸ್ವಾನ್, ಶಿಕ್ಷಣ ಮತ್ತು ವಾರ್ತಾ ಮಂತ್ರಿಗಳಾಗಿ ಫಾತಿಮಾ ಫಝೀಲಾ, ಧೃತಿ, ನೀರಾವರಿ ಮಂತ್ರಿಗಳಾಗಿ ಆದಿತ್ಯ ಎಂ., ಜಿತೇಶ್ ಕುಮಾರ್, ಸಾಂಸ್ಕೃತಿಕ ಮಂತ್ರಿಗಳಾಗಿ ಸಿಂಚನಾ ಎ., ಶ್ರೇಯಾ ಕೆ., ಆರೋಗ್ಯ ಮಂತ್ರಿಗಳಾಗಿ ಜೀವಿತಾ ಕೆ., ಅನನ್ಯ ಬಿ.ವಿ, ಕ್ರೀಡಾಮಂತ್ರಿಗಳಾಗಿ ಮಹಮ್ಮದ್ ಹನಾನ್, ಮಹಮ್ಮದ್ ರಾಝಿಕ್, ಸ್ವಚ್ಛತಾ ಮಂತ್ರಿಗಳಾಗಿ ಲಾಸ್ಯ ಎಸ್. ಎನ್, ವಂದಿತಾ, ಕೃಷಿ ಮಂತ್ರಿಗಳಾಗಿ ಜನ್ನತ್ ಕೆ., ಪೂರ್ಣೇಶ್ ಎಂ., ಆಹಾರ ಮಂತ್ರಿಗಳಾಗಿ ಅನ್ಸ ಕೆ., ಝಿಯಾ ಫಾತಿಮಾ, ಶೋಧನಾ ಮಂತ್ರಿಗಳಾಗಿ ತ್ರಿಶಾನ್ ಕೆ.ಜಿ, ತ್ರಿಯಾನ್ ಕೆ.ಜಿ, ಸಭಾಪತಿಯಾಗಿ ಮಹಮ್ಮದ್ ಶಾಮಿಲ್ ಎಂ. ಆಯ್ಕೆಯಾದರು. ಆಯ್ಕೆಯಾದ ಎಲ್ಲಾ ಮಂತ್ರಿಗಳಿಗೂ ಮುಖ್ಯಗುರು ಕುಮಾರ್ ಕೆ.ಜೆ. ಅವರು ಪ್ರಮಾಣವಚನವನ್ನು ಬೋಧಿಸಿದರು. ಪದವೀಧರ ಶಿಕ್ಷಕಿ ವಿಜಯಲಕ್ಷ್ಮಿ ಚುನಾವಣಾ ಮಹತ್ವ ಮತ್ತು ಗೌಪ್ಯತೆ ಬಗ್ಗೆ ತಿಳಿಸಿದರು. ಶಿಕ್ಷಕಿಯರಾದ ಮಧುಶ್ರೀ ಎನ್., ಯಶಸ್ವಿನಿ, ಲಕ್ಷ್ಮೀ, ಸರಿತಾ ಕೆ. ಚುನಾವಣಾ ಅಧಿಕಾರಿಗಳಾಗಿ ಸಹಕರಿಸಿದರು.









ದ.ಕ. ಜಿಲ್ಲೆಯಲ್ಲಿ ವಿಶ್ವ ಯೋಗ ದಿನಾಚರಣೆ | ವಿದ್ಯಾರ್ಥಿಗಳು, ನಾಗರಿಕರು, ಸಂಘ-ಸಂಸ್ಥೆ ಸದಸ್ಯರು ಭಾಗಿ

ಯೋಗದ ಮಹತ್ವ, ಆರೋಗ್ಯಕರ ಜೀವನಶೈಲಿಯ ಜಾಗೃತಿ

ಮಂಗಳೂರು/ಸುಳ್ಯ/ಪುತ್ತೂರು/ಉಳ್ಳಾಲ/ಬಂಟ್ವಾಳ/ಮುಲ್ಕಿ: ದಕ್ಷಿಣ ಕನ್ನಡ ಜಿಲ್ಲಾದ್ಯಂತ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಜಿಲ್ಲೆಯಲ್ಲಿ ಶಾಲೆ-ಕಾಲೇಜು, ವಿವಿಧ ಸಂಘ-ಸಂಸ್ಥೆ ಸಹಿತ ವಿವಿಧ ಕಡೆಗಳಲ್ಲಿ ಯೋಗಾಭ್ಯಾಸವನ್ನು ಕೈಗೊಳ್ಳಲಾಯಿತು.

ಬ್ರಹ್ಮಕುಮಾರೀಸ್ ಈಶ್ವರೀಯ ವಿದ್ಯಾಲಯ

ಪ್ರಜಾಪಿತ ಬ್ರಹ್ಮಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯ ಮಂಗಳೂರು ವಿಶ್ವಶಾಂತಿ ಮಂದಿರದಲ್ಲಿ ಭಾನುವಾರ ಬೆಳಗ್ಗೆ ಯೋಗಾಭ್ಯಾಸ ಹಾಗೂ ರಾಜಯೋಗ ಧ್ಯಾನದ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಯೋಗಗುರು ಮಂಜುನಾಥ್ ಹಾಗೂ ರೋಹಿತ್ ವಿವಿಧ ಯೋಗಾಸನಗಳು, ಸೂರ್ಯ ನಮಸ್ಕಾರ ಮತ್ತು ಪ್ರಾಣಾಯಾಮಗಳನ್ನು ಪ್ರಾತ್ಯಕ್ಷಿಕೆಯೊಂದಿಗೆ ನಡೆಸಿಕೊಟ್ಟರು. ಬಳಿಕ ಎಲ್ಲರಿಗೂ ರಾಜಯೋಗ ಧ್ಯಾನದ ಅನುಭವವನ್ನು ನೀಡಲಾಯಿತು. ಬ್ರಹ್ಮಕುಮಾರೀಸ್ ಸದಸ್ಯರು, ಯೋಗಾಸಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಪಂಜ ಮಾದರಿ ಹಿರಿಯ ಪ್ರಾಥಮಿಕ ಶಾಲೆ

ಸುಳ್ಯ ತಾಲೂಕಿನ ಪಂಜದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆದಿತ್ಯವಾರ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯಿನಿ ಹಾಗೂ ಯೋಗ ಶಿಕ್ಷಕಿ ಲೀಲಾ ಕುಮಾರಿ ಟಿ. ವಿದ್ಯಾರ್ಥಿಗಳಿಗೆ ವಿವಿಧ ಆಸನಗಳನ್ನು ಮತ್ತು ಯೋಗಾಸನದ ಮಹತ್ವವನ್ನು ವಿವರಿಸಿದರು. ವಿದ್ಯಾರ್ಥಿಗಳೊಂದಿಗೆ ಸಹಶಿಕ್ಷಕರಾದ ನೇತ್ರಾವತಿ, ಕಮಲಾ, ಮಂಜುಳಾ, ಚೇತನಾ, ಮೋಹನ್, ಪ್ರಸಾದ್, ಶಿವಾನಂದ ಮತ್ತು ವಿನುತಾ ವಿವಿಧ ಆಸನಗಳನ್ನು ಮಾಡಿದರು.

ಬಿಜೆಪಿ ದಕ್ಷಿಣ ಕನ್ನಡ

ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ವತಿಯಿಂದ ಮಂಗಳೂರಿನ ಕದ್ರಿ ದೇವಸ್ಥಾನದಲ್ಲಿ ವಿಶ್ವ ಯೋಗ ದಿನಾಚರಣೆ ಭಾನುವಾರ ನಡೆಯಿತು.

ಕಾರ್ಯಕ್ರಮದಲ್ಲಿ ಯೋಗದ ಮಹತ್ವ ಹಾಗೂ ಆರೋಗ್ಯಕರ ಜೀವನಶೈಲಿಯ ಕುರಿತು ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಯೋಗ ತರಬೇತುದಾರ ಹಾಗೂ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯ ಮತ್ತು ಬಿಜೆಪಿ ಮುಲ್ಕಿ-ಮೂಡುಬಿದಿರೆ ಮಂಡಲದ ಕಾರ್ಯಕರ್ತ ಪ್ರಣೀಕ್ ಕಿನ್ನಿಗೋಳಿ ಅವರನ್ನು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅವರು ಗೌರವಿಸಿ, ಸನ್ಮಾನಿಸಿದರು. ಸಂಸದ ಕ್ಯಾ. ಬ್ರಿಜೇಶ್ ಚೌಟ,









ಶಾಸಕರಾದ ವೇದವ್ಯಾಸ ಕಾಮತ್, ಕಿಶೋರ್ ಕುಮಾರ್ ಪುತ್ತೂರು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಾನಂದ ಶೆಟ್ಟಿ, ಯತೀಶ್ ಆರ್ವಾರ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ರಾವ್, ಜಿಲ್ಲಾ ಒಬಿಸಿ ಮೋರ್ಚಾ ಅಧ್ಯಕ್ಷ ಮಹೇಶ್ ಜೋಗಿ, ಜಿಲ್ಲಾ ಉಪಾಧ್ಯಕ್ಷೆ ಪೂಜಾ ಪೈ, ಪ್ರಮುಖರಾದ ಸುರೇಖಾ ಹೆಗ್ಡೆ, ಸಂಜಯ ಪ್ರಭು, ಸುಜಿತ್ ಪ್ರತಾಪ್, ವಸಂತ್ ಜೆ. ಪೂಜಾರಿ ಇದ್ದರು.

ಚೇತನಾಶಾಲೆಯಲ್ಲಿ ಯೋಗದಿನಾಚರಣೆ

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ, ಸೇವಾಭಾರತಿ ಮಂಗಳೂರು ಇದರ ಅಂಗಸಂಸ್ಥೆಯಾದ ವಿ.ಟಿ.ರಸ್ತೆಯ ಚೇತನಾ ಬಾಲವಿಕಾಸ ಕೇಂದ್ರದಲ್ಲಿ ವಿಶೇಷ ಚೇತನ ಮಕ್ಕಳಿಂದ ಯೋಗ ಪ್ರದರ್ಶನ ನಡೆಯಿತು. ಯೋಗತರಬೇತುದಾರರಾದ ಲಕ್ಷ್ಮಿ ನಾಯಕ್ ಇವರು ನೇತೃತ್ವವಹಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕಿ ಸುಪ್ರೀತಾ, ಶಿಕ್ಷಕ ಶಿಕ್ಷಕೇತರ ವೃಂದದವರು, ಸ್ವಯಂಸೇವಕರು ಉತ್ಸಾಹದಿಂದ ಪಾಲ್ಗೊಂಡರು.

ಕೊಂಬೆಟ್ಟು ವಿದ್ಯಾರ್ಥಿಗಳಿಂದ ಪ್ರದರ್ಶನ

ಕೊಂಬೆಟ್ಟು ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದಲ್ಲಿ ವಿದ್ಯಾರ್ಥಿಗಳಿಂದ ಯೋಗ ಪ್ರದರ್ಶನ ನಡೆಯಿತು. ಶಾಲಾ ಪ್ರಭಾರ ಉಪಪ್ರಾಂಶುಪಾಲ ನಾಗರಾಜ್ ಭಟ್ ಪ್ರಾರ್ಥನಾ ಗೀತೆಯೊಂದಿಗೆ ಯೋಗ ಪ್ರದರ್ಶನಕ್ಕೆ ಚಾಲನೆ ನೀಡಿದರು. ಶಾಲಾ ದೈಹಿಕ ಶಿಕ್ಷಣ ಶಿಕ್ಷಕಿ ಗೀತಾಂಜಲಿ ಹಾಗೂ ಶಾಲಾ ಎನ್‌ಸಿಸಿ ಘಟಕದ ಮಾರ್ಗದರ್ಶಿ ಶಿಕ್ಷಕ ಗ್ರೆಗೊರಿ ರೋನಿ ಪಾಯಸ್ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡರು. ಭಾಷಣ ಹಾಗೂ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಭಾಸ್ಕರ ರಾವ್, ನಿವೃತ್ತ ಉಪಪ್ರಾಂಶುಪಾಲ ವಸಂತ ಮೂಲ್ಯ ಇದ್ದರು.

ಯೆನೆಪೋಯ ವಿವಿಯಲ್ಲಿ ಯೋಗ ದಿನ

ಉಳ್ಳಾಲ ತಾಲೂಕಿನ ದೇರಳಕಟ್ಟೆಯ ಯೆನೆಪೋಯ ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸಸ್ ಕಾಲೇಜು, ಯೆನೆಪೋಯ ಆಯುರ್ವೇದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ,ಯೆನೆಪೋಯ ಹೋಮಿಯೋಪಥಿಕ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಘಟಕ-1ರ ಸಹಯೋಗದಲ್ಲಿ ಯೆನೆಪೋಯ ವಿವಿ ಯೆಂಡ್ಯುರನ್ಸ್ ವಲಯದಲ್ಲಿ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು.

ಖ್ಯಾತ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವೆಲ್‌ನೆಸ್ ಸಲಹೆಗಾರ ಪ್ರೊ.ಡಾ.ಶ್ಯಾಮರಾಜ್ ನಿಡುಗಳ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಯೆನೆಪೋಯ ಪರಿಗಣಿತ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ.ಅಶ್ವಿನಿ ದತ್ತ್ ಆರ್. ಮಾತನಾಡಿದರು.

ಕಾರ್ಯಕ್ರಮದಲ್ಲಿ ಯೆನೆಪೋಯ ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸಸ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಪುನೀತ್ ರಾಘವೇಂದ್ರ ಕೆ.ಆರ್., ಯೆನೆಪೋಯ ಹೋಮಿಯೋಪಥಿಕ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ವಿಜಯೇಂದ್ರ ವಿ.ಇಟಗಿ ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮವು ಡಾ.ವಿನಯ ಕುಮಾರ್ ಟಿ ಅವರ ನೇತೃತ್ವದಲ್ಲಿ ಸಾಮಾನ್ಯ ಯೋಗಾಭ್ಯಾಸದೊಂದಿಗೆ ಆರಂಭವಾಯಿತು.ಸಾಮೂಹಿಕ ಯೋಗಾಭ್ಯಾಸದ ನಂತರ ವಿದ್ಯಾರ್ಥಿಗಳಿಂದ ಮನಮೋಹಕ ಯೋಗ ನೃತ್ಯ ಪ್ರದರ್ಶನ ನಡೆಯಿತು. ಕಾರ್ಯಕ್ರಮದಲ್ಲಿ 350 ಕ್ಕೂ ಅಧಿಕ ವಿದ್ಯಾರ್ಥಿಗಳು,ಅಧ್ಯಾಪಕರು,ಆರೋಗ್ಯ ವೃತ್ತಿಪರರು ಹಾಗೂ ಆಹ್ವಾನಿತ ಅತಿಥಿಗಳು ಭಾಗವಹಿಸಿದ್ದರು. ಯೋಗ ದಿನಾಚರಣೆಯ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಿತು. ಸಹ ಪ್ರಾಧ್ಯಾಪಕ ಡಾ. ಸಂಗೀತಲಕ್ಷ್ಮಿ ಸ್ವಾಗತಿಸಿದರು.ಪ್ರಾಧ್ಯಾಪಕ ಡಾ. ಸೌಮ್ಯ ವರದಿ ಮಂಡಿಸಿದರು. ಉಪನ್ಯಾಸಕ ಡಾ.ಅರ್ಪಿತ್ ವಂದಿಸಿದರು.

ಒಡ್ಡೂರು ಫಾರ್ಮ್‌ನಲ್ಲಿ ಯೋಗ ದಿನ

ಬಂಟ್ವಾಳ ತಾಲೂಕಿನ ಒಡ್ಡೂರು ಫಾರ್ಮ್ಸ್ ನಲ್ಲಿ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ನಡೆದ ವಿಶೇಷ ಯೋಗ ಕಾರ್ಯಕ್ರಮದಲ್ಲಿ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿಗುತ್ತು ಭಾಗವಹಿಸಿದರು.

ಯೋಗವನ್ನು ಪ್ರತಿದಿನದ ಜೀವನದ ಭಾಗವಾಗಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ಅವರು ಸಾರ್ವಜನಿಕರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಭರತ್ ಜೈನ್, ಮಂಗಳೂರು ಬಿಜೆಪಿ ನಗರ ಉತ್ತರ ಮಂಡಲದ ಕಾರ್ಯದರ್ಶಿ ಸಚಿನ್ ಅಡಪ, ಯಶವಂತ ಕೋಟ್ಯಾನ್ ರೋಹಿತ್ ಶೆಟ್ಟಿ ಮಿಜಾರ್,ಗೀತೇಶ್ ಉಪಸ್ಥಿತರಿದ್ದರು.

ಕೊಟ್ಟಾರ ಭರತಾಂಜಲಿ ನೃತ್ಯ ಸಂಸ್ಥೆ

ಭರತಾಂಜಲಿ ನೃತ್ಯ ಸಂಸ್ಥೆ ಕೊಟ್ಟಾರ ವತಿಯಿಂದ ವಿಶ್ವ ಯೋಗ ದಿನವನ್ನು ಗಣೇಶಪುರ ಶ್ರೀ ಮಹಾಗಣಪತಿ ದೇವಸ್ಥಾನದ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು ನೃತ್ಯ ಗುರುಗಳಾದ ವಿದುಷಿ ಪ್ರತಿಮಾ ಶ್ರೀಧರ್ ವಿದುಷಿ ಪ್ರಕ್ಷಿಲ ಜೈನ್, ನಿರ್ದೇಶಕ ಗುರು ಶ್ರೀಧರ ಹೊಳ್ಳ ಮೊದಲಾದವರು ಉಪಸ್ಥಿತರಿದ್ದರು.

ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆ

ಮುಲ್ಕಿ ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆಗಳ ವತಿಯಿಂದ ಶನಿವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು. ಸಂಸ್ಥೆಯ, ಕಾರ್ಯದರ್ಶಿ ಬಾಲಚಂದ್ರ ಸನಿಲ್ ಯೋಗ ದಿನಾಚರಣೆ ಬಗ್ಗೆ ಮಾತನಾಡಿ, ಯೋಗದ ಮಹತ್ವ ದೇಹ ಮತ್ತು ಮನಸ್ಸಿನ ಸಮತೋಲನ ಹಾಗೂ ಆರೋಗ್ಯಕರ ಜೀವನದಲ್ಲಿ ಯೋಗ ಅವಶ್ಯ ಎಂದರು. ಅಧ್ಯಕ್ಷತೆಯನ್ನು ಸಂಸ್ಥೆಯ ಸಂಚಾಲಕರಾದ ಹರೀಂದ್ರ ಸುವರ್ಣ ವಹಿಸಿದ್ದರು. ಶಾಲಾ ಪ್ರಾಂಶುಪಾಲ ಯತೀಶ್, ಆಡಳಿತಾಧಿಕಾರಿ ಮಂಜುಳಾ ಕೆ. ವಿ ಉಪಸ್ಥಿತರಿದ್ದರು. ಯೋಗ ತರಬೇತು ದಾರ ಜಯ ಕುಮಾರ್ ಕುಬೆವೂರು ರವರು ಯೋಗ ನಡೆಸಿದರು. ತೇಜಸ್ವಿನಿ ಸ್ವಾಗತಿಸಿದರು. ಶಿಕ್ಷಕ ಪೃಥ್ವಿರಾಜ್ ನಿರೂಪಿಸಿದರು. ಪ್ರಮೀಳಾ ವಂದಿಸಿದರು.

ಯೋಗ ಶರೀರ, ಮನಸ್ಸು, ಆತ್ಮದ ಒಕ್ಕೂಟ: ಪ್ರೊ. ಪ್ರಶಾಂತ್ ನಾಯ್ಕ್



ಕೊಣಾಜೆ: ಹರೇಕಳ ಶ್ರೀ ರಾಮಕೃಷ್ಣ ಅನುದಾನಿತ ಪ್ರೌಢಶಾಲೆ, ಸೌಜನ್ಯ ಸ್ಕೌಟ್ ದಳ, ಮಂಗಳೂರು ವಿವಿ ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಮತ್ತು ಧರ್ಮನಿಧಿ ಯೋಗಪೀಠ ಇವುಗಳ ಆಶ್ರಯದಲ್ಲಿ ಶ್ರೀ ರಾಮಕೃಷ್ಣ ಪ್ರೌಢಶಾಲಾ ಸಭಾಂಗಣದಲ್ಲಿ ನಡೆದ 12ನೇ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ವಿವಿಯ ಜೀವವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಪ್ರಶಾಂತ ನಾಯ್ಕ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ದೈಹಿಕ ಆರೋಗ್ಯ, ಮಾನಸಿಕ ಸ್ವಾಸ್ಥ್ಯ ಮತ್ತು ಆಧ್ಯಾತ್ಮಿಕ ಸಾಮರಸ್ಯವನ್ನು ಉತ್ತೇಜಿಸುವಲ್ಲಿ ಯೋಗದ ಅಪಾರ ಮೌಲ್ಯವನ್ನು ನಮಗೆ ನೆನಪಿಸುತ್ತದೆ. ಇದು ಶರೀರ, ಮನಸ್ಸು ಮತ್ತು ಆತ್ಮದ ಒಕ್ಕೂಟವನ್ನು ಸಂಕೇತಿಸುತ್ತದೆ. ಯೋಗವು ಕೇವಲ ಒಂದು ದೈಹಿಕ ವ್ಯಾಯಾಮವಲ್ಲ; ಇದು ನಮಗೆ ಸಮತೋಲನ, ಶಿಸ್ತು ಮತ್ತು ಆಂತರಿಕ ಶಾಂತಿಯನ್ನು ಸಾಧಿಸಲು ಸಹಾಯ ಮಾಡುವ ಒಂದು ಜೀವನ ವಿಧಾನವಾಗಿದೆ ಎಂದರು.

ಅಧ್ಯಕ್ಷತೆಯನ್ನು ಶಾಲಾ ಮುಖ್ಯ ಶಿಕ್ಷಕಿ ಮೋಹಿನಿ ವಹಿಸಿದ್ದರು. ಮಂಗಳೂರು ವಿವಿ ಯೋಗ ವಿಜ್ಞಾನ ವಿಭಾಗದ ಶೃತಿ ಪ್ರಮಿತ್, ರಂಜಿತ್ ಜಾನ, ರಾಜಶ್ರೀ ಗಣೇಶನ್, ಕೌಶಿಕ್ ಇವರುಗಳು ವಿದ್ಯಾರ್ಥಿಗಳಿಗೆ ಯೋಗ ಅಭ್ಯಾಸವನ್ನು ಮತ್ತು ಪ್ರಾಣಾಯಾಮವನ್ನು ಮಾಡಿಸಿದರು. ದೈಹಿಕ ಶಿಕ್ಷಣ ಶಿಕ್ಷಕರಾದ ತ್ಯಾಗಂ ಹರೇಕಳ ಯೋಗ ಅಭ್ಯಾಸದ ಮೌಲ್ಯವನ್ನು ತಿಳಿಸಿದರು. ಹಿರಿಯ ಶಿಕ್ಷಕ ಕೃಷ್ಣಶಾಸ್ತ್ರೀ ಸ್ವಾಗತಿಸಿದರು, ಶಿಕ್ಷಕ ಶಿವಕುಮಾರ್ ನಿರೂಪಿಸಿದರು. ಶಿಕ್ಷಕಿ ಸ್ಮಿತಾ ವಂದಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಯಶಸ್ವಿನಿ, ಭವ್ಯ ಸಹಕರಿಸಿದರು.

ಆರೋಗ್ಯಕ್ಕೆ, ನೆಮ್ಮದಿಗೆ ಪೂರಕ ವ್ಯವಸ್ಥೆ ಯೋಗ: ಸತೀಶ್ ಶಿವಗಿರಿ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆಯು ಮಧುಕರ ಸಭಾಂಗಣದಲ್ಲಿ ಭಾನುವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀರಾಮ ವಿದ್ಯಾಕೇಂದ್ರದ ಕೋಶಾಧಿಕಾರಿ ಸತೀಶ್ ಶಿವಗಿರಿ ಅವರು ಮಾತನಾಡಿ, ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಹಾಗೂ ನೆಮ್ಮದಿಗೆ ಪೂರಕ ವ್ಯವಸ್ಥೆ ಯೋಗ. ಪ್ರತಿದಿನವೂ ಶ್ರದ್ಧೆಯಿಂದ ಯೋಗದ ಅಭ್ಯಾಸ ಮಾಡಬೇಕೆಂದು ತಿಳಿಸಿದರು.

ಬಾಳ್ತಿಲ ಗ್ರಾಮ ಪಂಚಾಯತ್‌ನ, ಪಂಚಾಯತ್ ಅಭಿವೃದ್ಧಿ ಅಧಿ ಕಾರಿ ವಿಜಯಶಂಕರ ಆಳ್ವ ಅವರು, ಯೋಗದಿಂದ ದೇಹ ಮನಸ್ಸು ಆತ್ಮದ ಶುದ್ಧೀಕರಣ ಸಾಧ್ಯ ಹಾಗೂ ಆತ್ಮ ಪರಮಾತ್ಮನಿಗೆ ಸೇರುವಿಕೆಯ ಪ್ರಕ್ರಿಯೆ ಯೋಗ ಎಂದು ತಿಳಿಸಿದರು .

- ಪ್ರತಿದಿನವೂ ಶ್ರದ್ಧೆಯಿಂದ ಯೋಗದ ಅಭ್ಯಾಸ ಮಾಡಬೇಕು
- ಯೋಗದಿಂದ ದೇಹ ಮನಸ್ಸು ಆತ್ಮದ ಶುದ್ಧೀಕರಣ ಸಾಧ್ಯ
- ಆತ್ಮ ಪರಮಾತ್ಮನಿಗೆ ಸೇರುವಿಕೆಯ ಪ್ರಕ್ರಿಯೆ ಯೋಗ

ಶ್ರೀರಾಮ ವಿದ್ಯಾ ಕೇಂದ್ರದ ಆಡಳಿತ ಮಂಡಳಿಯ ಸದಸ್ಯ ಗೋಪಾಲ್ ಶೆಣೈ, ಶ್ರೀರಾಮ ಪ್ರೌಢಶಾಲೆಯ ಮುಖ್ಯ ಗುರು ಗೋಪಾಲ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಯುಕ್ತ ವಿದ್ಯಾರ್ಥಿಗಳಿಗೆ ಸಂಕಲ್ಪ ಪ್ರತಿಜ್ಞೆಯನ್ನು ಮಾಡಲಾಯಿತು. ಎಲ್ಲಾ ವಿದ್ಯಾರ್ಥಿಗಳಿಗೆ ಯೋಗ ಪ್ರಾತ್ಯಕ್ಷಿಕೆಯನ್ನು ಮಾಡಿಸಲಾಯಿತು. ರಾಜೇಶ್ವರಿ ನಿರೂಪಿಸಿದರು, ವರ್ಷಿಣಿ ಸ್ವಾಗತಿಸಿ, ಲಹರಿ ವಂದಿಸಿದರು.



ಕೊಲ್ಯದ ಶಾರದಾ ಮಂದಿರ ಸಭಾಂಗಣದಲ್ಲಿ ಉಳ್ಳಾಲ, ಸೋಮೇಶ್ವರ, ಕೋಟೆಕಾರು ಮಹಾಶಕ್ತಿ ಕೇಂದ್ರಗಳ ನೇತೃತ್ವದಲ್ಲಿ ಯೋಗದಿನಾಚರಣೆ ನಡೆಯಿತು. ಬಿಜೆಪಿ ಮಂಗಳೂರು ಮಂಡಲದ ಪ್ರಧಾನ ಕಾರ್ಯದರ್ಶಿ ದಯಾನಂದ ತೊಕ್ಕೊಟ್ಟು, ಉಪಾಧ್ಯಕ್ಷ ರವಿಶಂಕರ್ ಸೋಮೇಶ್ವರ, ಕಾರ್ಯಾಲಯ ಕಾರ್ಯದರ್ಶಿ ಸುಜಾತ ಶೆಟ್ಟಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಮಾಧವಿ ಉಳ್ಳಾಲ ಇದ್ದರು.



ಬಿಜೆಪಿ ಮಂಗಳೂರು ಮಂಡಲ ಹಿಂದುಳಿದ ವರ್ಗಗಳ ಮೋರ್ಚಾದ ವತಿಯಿಂದ ಸೋಮೇಶ್ವರ ಕಡಲ ಕಿನಾರೆಯಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಬಿಜೆಪಿ ರಾಜ್ಯ ಮೀನುಗಾರರ ಪ್ರಕೋಷ್ಠದ ಸಹ ಸಂಚಾಲಕ ಯಶವಂತ್ ಅಮೀನ್ ಯೋಗಾಭ್ಯಾಸ ನಡೆಸಿಕೊಟ್ಟರು. ಮಂಡಲ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ, ಪ್ರಭಾರಿ ಸುಮಲತಾ ಕೊಣಾಜೆ, ಪ್ರಧಾನ ಕಾರ್ಯದರ್ಶಿಗಳಾದ ಶೇಖರ್ ಕನೀರ್ ತೋಟ,ಗಣೇಶ್ ಕಾಪಿಕಾಡ್,ಕೋಶಾಧಿಕಾರಿ ಪ್ರವೀಣ್ ಬಗಂಬಿಲ ಇದ್ದರು.

ಎಸ್.ಪಿ.ವೈ.ಎಸ್.ಎಸ್. ಯೋಗ ಸಮಿತಿಯಿಂದ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ | 1500ಕ್ಕೂ ಮಿಕ್ಕಿದ ಯೋಗಪಟುಗಳು ಯೋಗಾಭ್ಯಾಸ

ಪ್ರಜಾಸೌಧದಿಂದ ಮಹಾವೀರ ವೃತ್ತದವರೆಗೆ ಯೋಗ ನಡಿಗೆ, ಸಾರ್ವಜನಿಕರಿಗೆ ಯೋಗ ಜಾಗೃತಿ

ಮಂಗಳೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ದ.ಕ.ಜಿಲ್ಲೆ ಹಾಗೂ ಶ್ರೀ ಪತಂಜಲಿ ಯೋಗ ಶಿಕ್ಷಣ ಫೌಂಡೇಶನ್ ಮತ್ತು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಕರ್ನಾಟಕ ಸಹಯೋಗದೊಂದಿಗೆ 'ಸಂಸ್ಕಾರ- ಸಂಘಟನೆ-ಸೇವೆ' ಎಂಬ ಧ್ಯೆಯೋದ್ದೇಶಗಳಿಗೆ ಪೂರಕವಾಗಿ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ' ಎಂಬ ವ್ಯಾಖ್ಯಾನದೊಂದಿಗೆ ನಗರದ ಪಡೀಲು ಜಿಲ್ಲಾಧಿಕಾರಿ ಕಚೇರಿ ಪ್ರಜಾಸೌಧದ ಹೊರಾಂಗಣದಲ್ಲಿ 12ನೇಯ ಅಂತಾರಾಷ್ಟ್ರೀಯ ಯೋಗದಿನಾಚರಣೆ ಭಾನುವಾರ ನೆರವೇರಿತು.

ಎಸ್‌ಪಿವೈಎಸ್‌ಎಸ್ ಜಿಲ್ಲಾ ಸಂಚಾಲಕ ನಾರಾಯಣ ಶಬರಾಯ, ಕಾರ್ಯಕ್ರಮದ ಸಂಚಾಲಕ ಪ್ರಜ್ವಲ್ ಕುಮಾರ್ ಕಂಕನಾಡಿ, ದ.ಕ. ಜಿಲ್ಲಾ ಆಯುಷ್





ಅಧಿಕಾರಿ ಡಾ. ಜೆ.ಎ. ಮಣಿಕರ್ಣಿಕ, ಜಿಲ್ಲಾ ಆಸ್ಪತ್ರೆ ವೈದ್ಯಾಧಿಕಾರಿ ಪ್ರಕಾಶ್ ಎ. ಜೆ., ವಲಯ ಸಂಯೋಜಕ ಜಯರಾಮ ಚೆಂಬುಗುಡ್ಡೆ ಕಾರ್ಯಕ್ರಮ ಉದ್ಘಾಟಿಸಿದರು.

ಮಾನಸಿಕ ಸಿದ್ದತೆ, ಶ್ವಾಸ ಕ್ರಿಯೆಯನ್ನು ಶಿಕ್ಷಕ ಜೀವನ್ ಪ್ರಸಾದ್ ಕಾವೂರು, ಆಯುಷ್ ಇಲಾಖೆಯ ಪಠ್ಯಕ್ರಮವನ್ನು ಸೌಮ್ಯ ಐಲ ಉಪ್ಪಳ ನಡೆಸಿಕೊಟ್ಟರು. 1500ಕ್ಕೂ ಮಿಕ್ಕಿದ ಯೋಗಪಟುಗಳು ಜಿಲ್ಲಾಧಿಕಾರಿ ಕಚೇರಿಯ ಹೊರಾಂಗಣದ ಮೂರು ಬದಿಗಳಲ್ಲಿ ಶಿಸ್ತುಬದ್ಧವಾಗಿ ಸಾಲಾಗಿ ಕುಳಿತು, ಉತ್ಸುಕತೆಯಿಂದ, ಲವಲವಿಕೆಯಲ್ಲಿ ಯೋಗಾಭ್ಯಾಸ ಮಾಡಿದರು.

ಯೋಗದಿನಾಚರಣೆಯ ಉದ್ದೇಶವನ್ನು ರಂಜಿನಿ ಕಾಸರಗೋಡು ತಿಳಿಸಿದರು. ಸುಮನಾ ನವೀನ್ ಸುರತ್ಕಲ್ ಸ್ವಾಗತಿಸಿದರು. ಲತಾ ಕಂಕನಾಡಿ ವಂದಿಸಿದರು. ಶಿಲ್ಪಾ ಉಳ್ಳಾಲ ನಿರೂಪಿಸಿದರು.

ಮುಂಜಾನೆ 5 ಗಂಟೆಗೆ ಭಜನೆ, ಅಮೃತವಚನ, ಪಂಚಾಂಗ ಪಠಣದೊಂದಿಗೆ ಯೋಗಾಭ್ಯಾಸ ಆರಂಭಿಸಲಾಯಿತು. ಬಳಿಕ ನಡೆದ 'ಯೋಗ ಪರಿಚಯ ಪರಿಕ್ರಮ' ಪ್ರಜಾಸೌಧದಿಂದ ಮಹಾವೀರ ವೃತ್ತದವರೆಗೆ ನಡೆದ ಯೋಗ ನಡಿಗೆ ಕಾರ್ಯಕ್ರಮಕ್ಕೆ ಕಂಕನಾಡಿ ನಗರ ಠಾಣೆ ಪೊಲೀಸ್ ನಿರೀಕ್ಷಕ ಕೃಷ್ಣಾನಂದ ಜಿ. ನಾಯಕ್, ಉಪ ನಿರೀಕ್ಷಕ ಶಿವಕುಮಾರ್ ಹಾಗೂ ವಲಯ ಚಿಂತನಾಕೂಟ ಪ್ರಮುಖ ಪ್ರತಾಪ್ ಕೆ.ಎಸ್. ಚಾಲನೆ ನೀಡಿದರು. ಯೋಗಪಟುಗಳು ಯೋಗನಡಿಗೆ ಮೂಲಕ ಸಾರ್ವಜನಿಕರಲ್ಲಿ ಯೋಗ ಜಾಗೃತಿ ಮೂಡಿಸಿದರು. ಯೋಗ ನಡಿಗೆ ಸಮಾರೋಪದಲ್ಲಿ ಜೈನ್ ಮಿಲನ್ ಅಧ್ಯಕ್ಷ ಸಚಿನ್ ಜೈನ್, ಮಂಗಳೂರು ಜೈನ್ ಸೊಸೈಟಿ ಅಧ್ಯಕ್ಷ ಪುಷ್ಪರಾಜ್ ಜೈನ್, ಜೈನ್ ಮಿಲನ್ ನಿರ್ದೇಶಕ ಸುಕುಮಾರ್ ಬಳ್ಳಾಲ್, ವಲಯ ಸಂಚಾಲಕ ಅಶೋಕ್ ಜೈನ್ ಭಾಗವಹಿಸಿದ್ದರು.

ಸಂಘಟನಾ ವಿಭಾಗದ ಪ್ರಾಂತ ಸಂಚಾಲಕ ಹರೀಶ್ ಕೋಟ್ಯಾನ್, ಪ್ರಶಿಕ್ಷಣ ವಿಭಾಗದ ಲಕ್ಷ್ಮೀನಾರಾಯಣ, ಸಂಸ್ಕಾರ ವಿಭಾಗದ ಹರೀಶ್ ಶೆಟ್ಟಿ ಪಡೀಲ್, ಪ್ರಾಂತ ಪ್ರತಿನಿಧಿ ಶಿವಾನಂದ ರೈ ಮಾರ್ಗದರ್ಶನ ಮಾಡಿದರು. ಜಿಲ್ಲಾ ಪ್ರಮುಖರಾದ ಶಿವಪ್ರಸಾದ್ ಪೊಳಲಿ, ಲೋಕೇಶ್, ಶೋಭಾ ಸುರತ್ಕಲ್, ಈಶ್ವರ್ ಕೊಟ್ಟಾರಿ, ಶ್ರೀಕಲಾ, ಸುಜಾತ ಪೊಳಲಿ, ಗೀತಾ ಉಳ್ಳಾಲ, ಸೂರಜ್, ಸುಬ್ರಹ್ಮಣ್ಯ ಭಟ್, ದಯಾನಂದ ಕಟೀಲ್, ನಗರ ಸಂಚಾಲಕ ಸುಂದರ ಉಳ್ಳಾಲ, ಗುರುರಾಜ್ ಶೆಟ್ಟಿ, ಶ್ರೀನಿವಾಸ್ ಕಾವೂರು, ಶ್ಯಾಮಲ, ಸದ್ಯೋಜಾತ, ನಾರಾಯಣ ಬಿ.ಸಿ.ರೋಡ್, ವಸಂತ, ಜನಾರ್ದನ್, ಪುಂಡಲೀಕ ಉಪಸ್ಥಿತರಿದ್ದರು.

ಸುತ್ತಮುತ್ತ

ಕಾರ್ಕಳದ ವಿವಿಧೆಡೆ ಯೋಗ ದಿನಾಚರಣೆ

ಕಾರ್ಕಳ: ಕಾರ್ಕಳ ತಾಲೂಕಿನ ವಿವಿಧೆಡೆ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು.

ಸಾಣೂರು ಯುವಕ ಮಂಡಲ:
ಭಾರತ ಸರಕಾರ ಯುವ ಕಾರ್ಯ ಕ್ರೀಡಾ ಸಚಿವಾಲಯ ಮೇರಾ ಯುವ ಭಾರತ್, ಯುವಕ ಮಂಡಲ ಸಾಣೂರು ಇವರ ಜಂಟಿ ಆಶ್ರಯದಲ್ಲಿ ಸಾಣೂರು ಸುವರ್ಣ ಗ್ರಾಮೋದಯ ಸೌಧ ಸಭಾಂಗಣದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಷನ್ ನ ಅಧ್ಯಕ್ಷ ಪ್ರಮೋದ್ ಚಂದ್ರ ಪೈ ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಮಂಡಲದ ಅಧ್ಯಕ್ಷ ಗುರುಪ್ರಸಾದ್ ಶೆಟ್ಟಿ ವಹಿಸಿದ್ದರು. ಯೋಗ ಗುರು ಅಶೋಕ್ ಕುಮಾರ್, ಉಪಾಧ್ಯಕ್ಷ ಮೋಹನ್ ಶೆಟ್ಟಿ ಕಾರ್ಯದರ್ಶಿ ರಾಜೇಶ್ , ಮಾಜಿ ಅಧ್ಯಕ್ಷ ಜಗದೀಶ್ ಕುಮಾರ್, ಕೋಶಾಧಿಕಾರಿ ಶುಭಕರ್ ಶೆಟ್ಟಿ ಸಾಂಸ್ಕೃತಿಕ ಕಾರ್ಯದರ್ಶಿ ಮುರಳಿ ಸುವರ್ಣ, ದತ್ತಾತ್ರೇಯ, ಸುನಿಲ್ ಕುಲಾಲ್, ರಮೇಶ್ ಪೂಜಾರಿ, ಜೀವನ್ ರಾವ್, ರವಿ ಆಚಾರ್ಯ, ಸುದರ್ಶನ್, ಸಂತೋಷ ಶೆಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಾಜೇಶ್ವರಿ ನ್ಯಾಷನಲ್ ಸ್ಕೂಲ್
ತಾಲೂಕಿನ ಸಾಣೂರು ಗ್ರಾಮದ ರಾಜೇಶ್ವರಿ ನ್ಯಾಷನಲ್ ಸ್ಕೂಲ್ ನಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನ ಮತ್ತು ವನಮಹೋತ್ಸವ ಕಾರ್ಯಕ್ರಮವನ್ನು ಶಾಸಕ ವಿ. ಸುನೀಲ್ ಕುಮಾರ್ ಉದ್ಘಾಟಿಸಿ, ಶುಭಹಾರೈಸಿದರು. ಶಾಲಾ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಉಪಸ್ಥಿತರಿದ್ದರು

ಮಾಳ ಗುರುಕುಲ ಶಾಲೆ
ತಾಲೂಕಿನ ಮಾಳ ಗುರುಕುಲ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಕಿ ಪ್ರತೀಕ್ಷಾ, ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬಿಜೆಪಿ ಹಳೆಯಂಗಡಿ ಮಹಾಶಕ್ತಿ ಕೇಂದ್ರದಿಂದ ಯೋಗ ದಿನಾಚರಣೆಯ

ಮುಲ್ಕಿ: ಬಿಜೆಪಿ ಹಳೆಯಂಗಡಿ ಮಹಾಶಕ್ತಿ ಕೇಂದ್ರದ ವತಿಯಿಂದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ ಎಸ್ ಕೋಡಿ ಕುಲಾಲ ಭವನದಲ್ಲಿ ನಡೆಯಿತು.

ಭಾ. ಜ. ಪ ಮುಲ್ಕಿ ಮೂಡಬಿದ್ರಿ ಮಂಡಲದ ಅಧ್ಯಕ್ಸ ದಿನೇಶ್ ಪುತ್ರನ್ ಕಾರ್ಯಕ್ರಮ ಉದ್ಘಾಟಿಸಿದರು ಹಳೆಯಂಗಡಿ ಮಹಾಶಕ್ತಿಕೇಂದ್ರದ ಅಧ್ಯಕ್ಷ ಲಕ್ಷ್ಮಣ್ ಸಾಲ್ಯಾನ್, ಮಂಡಲದ ಉಪಾಧ್ಯಕ್ಸ ವಿನೋದ್ ಬೊಳ್ಳೂರು, ಹಳೆಯಂಗಡಿ ಮಹಾಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿ ಜೀವನ್ ಶೆಟ್ಟಿ ಅಂಗರಗುಡ್ಡೆ, ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್, ಪಡುಪಣಂಬೂರು ಗ್ರಾಪಂ ಮಾಜೀ ಅಧ್ಯಕ್ಷರುಗಳಾದ ಕುಸುಮ ಚಂದ್ರಶೇಖರ, ಮೋಹನ್ ದಾಸ್, ಒ.ಬಿ.ಸಿ. ಮಂಡಲ ಪ್ರಧಾನ ಕಾರ್ಯದರ್ಶಿ ಹೇಮಂತ್ ಅಮೀನ್, ಕಿಲ್ಪಾಡಿ ಬೂತ್ ಕಾರ್ಯದರ್ಶಿ ಧನಂಜಯ್.ಶೆಟ್ಟಿಗಾರ್, ಯುವಮೋರ್ಚಾ ಮಂಡಲ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಪ್ರಕಾಶ್, ಪ್ರಮುಖರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಯೋಗ ಗುರು ಉದಯ್. ಜಿ. ಯವರನ್ನು ಗೌರವಿಸಲಾಯಿತು.

ಎಡಪದವು ಬಿಜೆಪಿ ಮಹಾಶಕ್ತಿ ಕೇಂದ್ರದಲ್ಲಿ ಯೋಗ ದಿನಾಚರಣೆ

ಕೈಕಂಬ: ವಿಶ್ವಯೋಗ ದಿನಾಚರಣೆಯ ಅಂಗವಾಗಿ ಭಾರತೀಯ ಜನತಾ ಪಾರ್ಟಿ ಎಡಪದವು ಮಹಾಶಕ್ತಿ ಕೇಂದ್ರದ ವತಿಯಿಂದ ಕುಪ್ಪೆಪದವಿನ ರಾಮಕೃಷ್ಣ ಭಜನಾ ಮಂದಿರದಲ್ಲಿ ಯೋಗ ದಿನಾಚರಣೆ ನಡೆಯಿತು.

ಎಡಪದವು ಬಿಜೆಪಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಹಾಬಲ ಸಾಲಿಯಾನ್ ಪ್ರಭಾರಿ ಸೋಹನ್ ಅಧಿಕಾರಿ, ಮಂಗಳೂರು ಉತ್ತರ ಮಂಡಲದ ಯುವ ಮೋರ್ಚಾದ ಉಪಾಧ್ಯಕ್ಷ ಸಂತೋಷ ಆಳ್ವ ಕಂಗಿನಡಿ, ಮುತ್ತೂರು ಪಂಚಾಯತ್ ನಿಕಟ ಪೂರ್ವ ಅಧ್ಯಕ್ಷ ಪ್ರವೀಣ್ ಆಳ್ವ ಗುಂಡ್ಯ, ಕುಪ್ಪೆಪದವು ಶಕ್ತಿ ಕೇಂದ್ರದ ಅಧ್ಯಕ್ಷ ರಾಜೇಶ್ ಶೆಟ್ಟಿ, ಪಕ್ಷದ ಪ್ರಮುಖರಾದ ಗಣೇಶ್ ಪಾಕಜೆ, ಶ್ರೀನಿವಾಸ್ ಶೆಟ್ಟಿ ಕಟ್ಟೆಪುಣಿ, ಸದಾನಂದ ಶೆಟ್ಟಿ ಕೊಳವೂರು ಗುತ್ತು ಮತ್ತು ಕೊಳವೂರು ಶಕ್ತಿ ಕೇಂದ್ರದ ಅಧ್ಯಕ್ಷ ಸತೀಶ್ ಬಲ್ಲಾಜೆ ಮತ್ತು ಕುಪ್ಪೆಪದವು ಮತ್ತು ಕೊಳವೂರು ಬೂತ್ ಅಧ್ಯಕ್ಷರಗಳು, ಕಾರ್ಯದರ್ಶಿ ಹಾಗೂ ಕಾರ್ಯಕರ್ತರು ಉಪಸಿತರಿದ್ದರು. ಎಸ್.ಪಿ.ವೈ. ಎಸ್.ಎಸ್.ನ ಕುಪ್ಪೆಪದವು ಶ್ರೀ ನಾರಾಯಣ ಗುರು ಶಾಖೆಯ ಯೋಗ ಶಿಕ್ಷಕ ರಿತೇಶ್ ಅಟ್ಟೆಪದವು ಕಾರ್ಯಕ್ರಮ ನಡೆಸಿಕೊಟ್ಟರು.


ದಂಡತೀರ್ಥ ವಿದ್ಯಾಸಂಸ್ಥೆ



ಚಿತ್ರಕೂಟ ಆಯುರ್ವೇದ ಚಿಕಿತ್ಸಾಲಯ


ಕರ್ನಾಟಕ ಪಬ್ಲಿಕ್ ಸ್ಕೂಲ್


ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆ

ಆಸನಗಳ ಪ್ರಾತ್ಯಕ್ಷಿಕೆ | ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳಿಂದ ಸಾಥ್

ಉಡುಪಿ ಜಿಲ್ಲೆಯಾದ್ಯಂತ ಯೋಗ ದಿನದ ಸಂಭ್ರಮ

ಕುಂದಾಪುರ/ಕಾಪು/ಕಾರ್ಕಳ/ಹೆಬ್ರಿ/ಶಿರ್ವ/ಕೋಟ: ಅಂತಾರಾಷ್ಟ್ರೀಯ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಉಡುಪಿ ಜಿಲ್ಲೆಯಾದ್ಯಂತ ಸಂಭ್ರಮದಿಂದ ಕಾರ್ಯಕ್ರಮ ಆಚರಿಸಲಾಯಿತು.

ವಕ್ವಾಡಿಯ ಬಾಂಡ್ಯ ಎಜುಕೇಶನಲ್ ಟ್ರಸ್ಟ್
ಕುಂದಾಪುರದ ವಕ್ವಾಡಿಯ ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ಅಂಗಸಂಸ್ಥೆಗಳಾದ ಗುರುಕುಲ ಪದವಿ ಪೂರ್ವ ಕಾಲೇಜು ಹಾಗೂ ಗುರುಕುಲ ಪಬ್ಲಿಕ್ ಸ್ಕೂಲ್ ಆಶ್ರಯದಲ್ಲಿ ಭಾನುವಾರ ನಡೆದ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು.
ಗುರುಕುಲ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲೆ ಡಾ. ರೂಪಾ ಶೆಣೈ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಭಾರತೀಯಸಂಸ್ಕೃತಿಯಪ್ರತಿಬಿಂಬವಾದಯೋಗವು ವಿಶ್ವಮಟ್ಟದಲ್ಲಿ ಉತ್ಕೃಷ್ಟ ಸ್ಥಾನವನ್ನು ಪಡೆದುದ್ದಲ್ಲದೆ ನಮ್ಮ ಉದಾತ್ತ ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ತಲುಪಿಸುವ ಮಹಾಕಾರ್ಯವಾಗಿ ರೂಪ ಪಡೆದಿದೆ ಎಂದು ಹೇಳಿದರು.
ಕಾಲೇಜಿನ ಪ್ರಾಂಶುಪಾಲ ಸಂದೀಪ್ ನಾಯ್ಕ ಯೋಗ ದಿನಾಚರಣೆಯ ಮಹತ್ವ ತಿಳಿಸಿದರು. ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ವಿವಿಧ ಯೋಗಾಸನ ಪ್ರದರ್ಶಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ತನುಶ್ರೀಯೋಗಾಸನದ ವಿವಿಧ ಆಯಾಮಗಳನ್ನು ನಿರ್ದೇಶಿಸಿದರು. ದೈಹಿಕ ಶಿಕ್ಷಕ ಶಿವಮೂರ್ತಿ ಕಾರ್ಯಕ್ರಮ ಸಂಘಟಿಸಿದ್ದರು. ಹವಿಶ ಕಾರ್ಯಕ್ರಮ ನಿರೂಪಿಸಿ, ಲಕ್ಷ್ಮೀ ಪ್ರಿಯ ಸ್ವಾಗತಿಸಿ, ಮಾನ್ಯ ವಂದಿಸಿದರು.

ಚಿತ್ರಕೂಟ ಆಯುರ್ವೇದ ಚಿಕಿತ್ಸಾಲಯ
ಯೋಗ ಎಂದರೆ ಕೇವಲ ಆಸನಗಳಲ್ಲ, ಅದೊಂದು ಜೀವನಶೈಲಿ ಆಗಬೇಕು. ಯೋಗ ಎಂದರೆ ಜೀವನಕ್ರಮ. ಜೀವನಕ್ರಮ ಚೆನ್ನಾಗಿದ್ದಾರೆ ಎಲ್ಲವೂ ಚೆನ್ನಾಗಿರುತ್ತದೆ ಎಂದು ಚಿತ್ರಕೂಟ ಆಯುರ್ವೇದ ಚಿಕಿತ್ಸಾಲಯದ ಮುಖ್ಯಸ್ಥ ಹಾಗೂ ಆಯುರ್ವೇದ ವೈದ್ಯ ಡಾ. ರಾಜೇಶ್ ಬಾಯರಿ ಹೇಳಿದರು.
ಉಡುಪಿ ಜಿಲ್ಲೆಯ ಅತ್ಯಂತ ಪಾರಂಪರಿಕ ಆಯುರ್ವೇದ ಚಿಕಿತ್ಸಾ ತಾಣವಾದ ಆಲೂರಿನ ಚಿತ್ರಕೂಟ ಆಯುರ್ವೇದ ಚಿಕಿತ್ಸಾಲಯದಲ್ಲಿ ಭಾನುವಾರ ನಡೆದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
ಮುಖ್ಯ ಅತಿಥಿಯಾಗಿದ್ದ ಶಂಕರನಾರಾಯಣ ಭಟ್ ಶಾರ್ಕೆ ಶುಭ ಹಾರೈಸಿದರು. ಚಿತ್ರಕೂಟದ ಯೋಗ ಶಿಕ್ಷಕ ಕೃಷ್ಣ ಪ್ರಸನ್ನ ಯೋಗ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಮಹಾಬಲ ಬಾಯರಿ, ಕಲಾವತಿ, ಡಾ. ಅನುಲೇಖಾ ಬಾಯರಿ ಇದ್ದರು.


ಗುರುಕುಲ ಪಬ್ಲಿಕ್ ಸ್ಕೂಲ್



ಜನತಾ ಶಾಲೆ


ಉಚ್ಚಿಲ ಶಾಲೆ



ಕಟಪಾಡಿ ಶಾಲೆ

ದಂಡ ತೀರ್ಥ ವಿದ್ಯಾಸಂಸ್ಥೆ
ಕಾಪುವಿನ ಉಳಿಯಾರಗೋಳಿ ದಂಡತೀರ್ಥ ವಿದ್ಯಾ ಸಂಸ್ಥೆಯಲ್ಲಿಯೋಗದಿನಾಚರಣೆ ಆಚರಿಸಲಾಯಿತು. ಪ್ರಾಂಶುಪಾಲ ನೀಲಾನಂದ ನಾಯ್ಕ್ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ಯೋಗ ಶಿಕ್ಷಕಿ ವಿದಿಶಾ ಜಿ. ರಾವ್ ಯೋಗದ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು. ಸಂಸ್ಥೆಯ ಮುಖ್ಯಸ್ಥರಾದ ಶಿವಣ್ಣ ಬಾಯರ್, ಪ್ರಭಾಕರ್ ಶೆಟ್ಟಿ, ಸೂರಜ್ ಕುಮಾರ್, ವೀಣಾ ನಾಯಕ್, ವಾಣಿ, ತೇಜಶ್ರೀ, ಹೇಮಲತಾ, ಸಂಗೀತ , ಶ್ವೇತಾ , ಮಮತಾ ಕಲ್ಯಾ, ಉದಯ ಕುಮಾರ್, ಸೋಮನಾಥ ಸಾಲ್ಯಾನ್ ಮೊದಲಾದವರು ಉಪಸ್ಥಿತರಿದ್ದರು.

ಕರ್ನಾಟಕ ಪಬ್ಲಿಕ್ ಸ್ಕೂಲ್
ಕುಂದಾಪುರದ ಕೋಟೇಶ್ವರದ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರೌಢಶಾಲಾ ವಿಭಾಗದಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಭಾನುವಾರ ಆಚರಿಸಲಾಯಿತು.
ಸಂಪನ್ಮೂಲ ವ್ಯಕ್ತಿಗಳಾಗಿ ಕುಂದಾಪುರದ ಆಯುಷ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಶಿಲ್ಪಾ ಕೆ. ಭಾಗವಹಿಸಿ, ಮಾಹಿತಿ ನೀಡಿದರು. ವಿವಿಧ ಯೋಗಾಸನಗಳು ಮತ್ತು ಪ್ರಾಣಾಯಾಮಗಳ ಪ್ರಾತ್ಯಕ್ಷಿಕೆಯನ್ನು ನಡೆಸಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಪ್ರೌಢಶಾಲಾ ವಿಭಾಗದ ಉಪಪ್ರಾಂಶುಪಾಲ ಚಂದ್ರಶೇಖರ್ ಶೆಟ್ಟಿ ವಹಿಸಿದ್ದರು. ಇದೇ ಸಂದರ್ಭದಲ್ಲಿ ಯೋಗ ಮತ್ತು ಆರೋಗ್ಯ ಕುರಿತಾದ ಬಿತ್ತಿ ಪತ್ರಿಕೆಯನ್ನು ಸಂಸ್ಥೆಯ ಪ್ರಾಂಶುಪಾಲ ಪ್ರಕಾಶ್ ಶೆಟ್ಟಿ ಅನಾವರಣಗೊಳಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಉದಯ ಮಡಿವಾಳ ಎಂ. ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಿದ್ಯಾರ್ಥಿನಿ ಕೃತಿ ಕಾರ್ಯಕ್ರಮ ನಿರೂಪಿಸಿದರು. ಅಧ್ಯಾಪಕಿ ಸುಧಾಬಾಯಿ ನಾಯಕ್ ವಂದಿಸಿದರು.

ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆ
ಹೆಬ್ರಿ ಇಲ್ಲಿನ ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಯೋಗ ದಿನಾಚರಣೆ ಆಚರಿಸಲಾಯಿತು. ಎಸ್. ಆರ್ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಪಾಲ್ಗೊಂಡರು. ಕಾರ್ಯಕ್ರಮವನ್ನು ಕ್ಯಾಂಪಸ್ ಇನ್ಚಾರ್ಜ್ ವಿಜಯ್ ಹಾಗೂ ವಿದ್ಯಾರ್ಥಿ ನಿಲಯದ ನಿಲಯಪಾಲಕ ದಿನೇಶ್, ರಾಜೇಶ್, ರಾಘವ್, ಸಚಿನ್ ನಿರ್ವಹಿಸಿದರು.

ಜನತಾ ಶಾಲೆ
ಕಿರಿಮಂಜೇಶ್ವರದ ಜನತಾ ನ್ಯೂ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.
ಜನತಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಗಣೇಶ ಮೊಗವೀರ ಭಾಗವಹಿಸಿ, ಮಾತನಾಡಿದರು. ಜನತಾ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಶ್ಯಾಮಲಾ ಗಣೇಶ್, ಜನತಾ ನ್ಯೂ ಇಂಗ್ಲೀಷ್ ಮೀಡಿಯಂ ಸ್ಕೂಲ್‌ನ ಮುಖ್ಯ ಶಿಕ್ಷಕಿ ದೀಪಿಕಾ ಆಚಾರ್ಯ, ಶಾಲಾ ಸಂಯೋಜಕಸುಬ್ರಮಣ್ಯಮರಾಟಿ ಉಪಸ್ಥಿತರಿದ್ದರು. ದೈಹಿಕ ಶಿಕ್ಷಕ ಮಂಜುನಾಥ ದೇವಾಡಿಗ ಸ್ವಾಗತಿಸಿ, ದೈಹಿಕ ಶಿಕ್ಷಕಿ ಮಲ್ಲಿಕಾ ವಂದಿಸಿದರು. ಯೋಗ ಶಿಕ್ಷಕಿ ಅನ್ವಿತಾ ನಿರೂಪಿಸಿದರು.

ಉಚ್ಚಿಲ ಸರಸ್ವತಿ ಶಾಲೆ
ಪಡುಬಿದ್ರಿಯ ಉಚ್ಚಿಲ ಸರಸ್ವತಿ ಮಂದಿರ ಶಾಲೆಗಳಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸ ಲಾಯಿತು . ದೈಹಿಕ ಶಿಕ್ಷಕ ಸುರೇಶ್ ಇವರು ವಿವಿಧ ರೀತಿಯ ಯೋಗವನ್ನು ಮಕ್ಕಳಿಂದ ಮಾಡಿಸಿದರು ಮುಖ್ಯ ಶಿಕ್ಷಕ ಬಾಬುರಾಯ ಆಚಾರ್ಯ ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಕಟಪಾಡಿ ಶಾಲೆಯಲ್ಲಿ ಯೋಗ
ಶಿರ್ವದ ಕಟಪಾಡಿ ಎಸ್‌ವಿ.ಕೆ/ಎಸ್‌ವಿಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಭಾನುವಾರ ವಿಶ್ವಯೋಗ ದಿನಾಚರಣೆ ಹಾಗೂ ಉಪನ್ಯಾಸ ನಡೆಯಿತು. ನಿವೃತ್ತ ಶಿಕ್ಷಕರು ಹಾಗೂ ಯೋಗ ಶಿಕ್ಷಕ ಭಾಸ್ಕರ ಕಾಮತ್ ಯೋಗದ ಮಹತ್ವ ಮತ್ತು ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಿದರು. ಶಾಲಾ ಆಡಳಿತ ಮಂಡಳಿ ಸದಸ್ಯ ಚಂದ್ರಕಾಂತ್ ಪೈ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ವಿವಿಧ ಆಸನಗಳು, ಸೂರ್ಯ ನಮಸ್ಕಾರ ಸಹಿತ ಪ್ರಾತ್ಯಕ್ಷಿಕೆ ನಡೆಯಿತು. ಮುಖ್ಯ ಶಿಕ್ಷಕಿ ಸುಜಾ ಡಿಸೋಜ, ಶೈಕ್ಷಣಿಕ ಸಲಹೆಗಾರ ದೇವೇಂದ್ರ ನಾಯಕ್ ಶಿರ್ವ,ಆಡಳಿತ ಮಂಡಳಿ ಸದಸ್ಯ ಶ್ರೀನಿವಾಸ ಕಿಣಿ, ಶಾಲಾ ನಾಯಕ ಪದ್ಮನಾಭ ನಾಯಕ್, ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಯೋಗ ಗುರು ಭಾಸ್ಕರ್ ಕಾಮತ್ ರನ್ನು ಗೌರವಿಸಲಾಯಿತು. ಶಮ್ಯಾ ದೇವಾಡಿಗ ನಿರೂಪಿಸಿದರು. ನುಶ್ರಾ ಫಾತಿಮಾ ಸ್ವಾಗತಿಸಿದರು. ಸಾದಿಯಾ ಧನ್ಯವಾದವಿತ್ತರು.

ಕೋಟದ ಪಂಚವರ್ಣ ಯುವಕ ಮಂಡಲ
ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ ಹಾಗೂ ಬಾರಿಕೆರೆ ಯುವಕ ಮಂಡಲದ ನೇತೃತ್ವದಲ್ಲಿ ಯೋಗ ದಿನಾಚರಣೆ ನಡೆಯಿತು. ಆರ್ಟ್ ಆಫ್ ಲಿವಿಂಗ್‌ನ ಸದಸ್ಯ ಶೇವಧಿ ಸುರೇಶ್ ಗಾಣಿಗ ಭಾಗವಹಿಸಿ, ಯೋಗ ದಿನದ ಮಹತ್ವದ ಬಗ್ಗೆ ಮಾತನಾಡಿದರು. ಬಾರಿಕೆರೆ ಯುವಕ ಮಂಡಲದ ಅಧ್ಯಕ್ಷ ರವಿ ಕುಂದರ್, ಮಾಜಿ. ಜಿ.ಪಂ ಸದಸ್ಯ ರಾಘವೇಂದ್ರ ಕಾಂಚನ್,ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಮನೋಹರ್ ಪೂಜಾರಿ, ಮಹಿಳಾ ಮಂಡಲದ ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್ ಮತ್ತಿತರರು ಇದ್ದರು.

ಕ್ರಿಸ್ಟಕಿಂಗ್ ಶಿಕ್ಷಣ ಸಂಸ್ಥೆ
ಕ್ರಿಸ್ಟಕಿಂಗ್ ಶಿಕ್ಷಣ ಸಂಸ್ಥೆಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಕಳ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಸದಸ್ಯ ವಿನಾಯಕ ಕುಡ್ವ ಭಾಗವಹಿಸಿ, ಮಾತನಾಡಿದರು.
ಸಂಸ್ಥೆಯ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯ ಐ. ಕ್ರಿಸ್ಟೋಫರ್ ಕೋಟ್ಯಾನ್, ಸಂಸ್ಥೆಯ ಹಿರಿಯ ವಿದ್ಯಾರ್ಥಿ ರಾಜ್ಯಮಟ್ಟದ ಯೋಗಪಟು ನಿಖಿಲ್ ಪೂಜಾರಿ ಯೋಗ ಪ್ರಾತ್ಯಕ್ಷಿಕೆಗಳನ್ನು ಪ್ರಸ್ತುತಪಡಿಸಿದರು.
ಸಂಸ್ಥೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳು ಯೋಗದ ವಿವಿಧ ಆಸನಗಳನ್ನು ಪ್ರದರ್ಶಿಸಿದರು. ವೇದಿಕೆಯಲ್ಲಿ ಪ್ರೌಢಶಾಲಾ ಮುಖ್ಯ ಶಿಕ್ಷಕಿ ಜ್ಯೋಸ್ನಾ ಸ್ನೇಹಲತಾ, ದೈಹಿಕ ಶಿಕ್ಷಣ ಶಿಕ್ಷಕರಾದ ಪ್ರಕಾಶ್ ನಾಯ್ಕ್, ಸಂಸ್ಥೆಯ ಪ್ರೌಢ ಶಾಲಾ ಶಿಕ್ಷಕಿ ರೀನಾ ಉಪಸ್ಥಿತರಿದ್ದರು.

ಆರೋಗ್ಯ ಭಾರತಿ, ಚೊಂತಾರು ಸರೋಜಿನಿ ಭಟ್ ಪ್ರತಿಷ್ಠಾನದಿಂದ ಯೋಗ



ಮಂಗಳೂರು: ಆರೋಗ್ಯ ಭಾರತಿ, ಮಂಗಳೂರು ಜಿಲ್ಲೆ ಮತ್ತು ಚೊಂತಾರು ಸರೋಜಿನಿ ಭಟ್ ಪ್ರತಿಷ್ಠಾನ ಇದರ ಜಂಟಿ ಆಶ್ರಯದಲ್ಲಿ ಯೋಗ ಶಿಬಿರ ಕಾರ್ಯಕ್ರಮ ಬಿಜೈಯ ಡಾ. ಮುರಲೀ ಮೋಹನ ಚೊಂತಾರು ನಿವಾಸ 'ಸರೋಜಿನಿ' ಯಲ್ಲಿ ನಡೆಯಿತು.

ಯೋಗ ಗುರು ಸುಮಾ ಶೆಟ್ಟಿ ಮತ್ತು ಕಾರ್ತಿಕ್ ಶೆಟ್ಟಿ ಯೋಗ ತರಬೇತಿ ನೀಡಿದರು. ಸುಮಾರು 25 ಮಂದಿ ಈ ಶಿಬಿರದಲ್ಲಿ ಭಾಗವಹಿಸಿ ಪ್ರಯೋಜನವನ್ನು ಪಡೆದರು. ಕಾರ್ಯಕ್ರಮದಲ್ಲಿ ವೀಣಾ ಶೆಟ್ಟಿ ಅವರು ಭಾಗವಹಿಸಿ, ಮಾತನಾಡಿದರು.

ಮಂಗಳೂರು ಮಹಾನಗರ ಸಂಘ ಚಾಲಕ ಡಾ. ಸತೀಶ್ ರಾವ್, ಆರೋಗ್ಯ ಭಾರತಿ ದಕ್ಷಿಣ ಕರ್ನಾಟಕ ಪ್ರಾಂತ ಉಪಾಧ್ಯಕ್ಷರೂ ಮಂಗಳೂರು ಜಿಲ್ಲಾ ಗೌರವಾಧ್ಯಕ್ಷರೂ ಆದ ಡಾ. ಮುರಲೀ ಮೋಹನ ಚೊಂತಾರು, ಆರೋಗ್ಯ ಭಾರತಿ ಮಂಗಳೂರು ವಿಭಾಗ ಸಂಚಾಲಕ ಪುರುಷೋತ್ತಮ ದೇವಸ್ಯ, ಆರೋಗ್ಯ ಭಾರತಿ ಮಂಗಳೂರು ಜಿಲ್ಲಾಧ್ಯಕ್ಷ ಡಾ ಈಶ್ವರ ಭಟ್ ಪಳ್ಳಾದೆ, ಜಿಲ್ಲಾ ಕಾರ್ಯದರ್ಶಿ ಉಮೇಶ್ ಪ್ರಭು, ಜೊತೆ ಕಾರ್ಯದರ್ಶಿ ದಿನೇಶ್ ಚಂದ್ರಗಿರಿ, ಸರೋಜಿನಿ ಪ್ರತಿಷ್ಠಾನದ ಡಾ. ರಾಜಶ್ರೀ ಮೋಹನ್, ಗ್ರೀನ್ ಏಕರ್ಸ್ ಬಡಾವಣೆಯ ವಕೀಲ ರವೀಂದ್ರ, ಎ. ಯಸ್. ಭಟ್, ವಿಜಯಾ ಭಟ್, ಡಾ. ಆಶಾ, ಮಧುರಾ ಭಟ್, ಅಂಬಿಕಾ ಶೆಟ್ಟಿ, ವೇದಂ ಆರೋಗ್ಯ ಆಯುರ್ವೇದ ಆಸ್ಪತ್ರೆಯ ಡಾ. ಸಚಿನ್ ನಡ್ಕ, ಡಾ. ಶಶಾಂಕ್ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಡಾ. ಈಶ್ವರ ಭಟ್ ಪಳ್ಳಾದೆ ಸ್ವಾಗತಿಸಿ, ಡಾ. ಮುರಲೀ ಮೋಹನ ಚೊಂತಾರು ವಂದಿಸಿದರು. ಇದೇ ಸಂದರ್ಭದಲ್ಲಿ ಸುಮಾ ಶೆಟ್ಟಿ ಹಾಗೂ ಕಾರ್ತಿಕ್ ಶೆಟ್ಟಿ ಅವರನ್ನು ಶಾಲು ಹೊದಿಸಿ, ಫಲ ಪುಷ್ಪ ನೀಡಿ ಗೌರವಿಸಲಾಯಿತು.

ಶ್ರೀ ರಾಮಕುಂಜೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಯೋಗ ದಿನದ ಸಂಭ್ರಮ



ಪುತ್ತೂರು: ಶ್ರೀ ರಾಮಕುಂಜೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ರಾಮಕುಂಜ ಇದರ ಶಾಖಾ ವ್ಯವಸ್ಥಾಪಕ ರಾಜಕುಮಾರ್ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ, ನಮ್ಮ ರಾಷ್ಟ್ರವು ವಿಶ್ವಕ್ಕೆ ಕೊಟ್ಟ ಕೊಡುಗೆ ಯೋಗ. ಯೋಗಭ್ಯಾಸವನ್ನು ಮಾಡುವುದರ ಮೂಲಕ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಲು ಸಾಧ್ಯ ಎಂದರು.

ಈ ಸಂದರ್ಭ ವೇದಿಕೆಯಲ್ಲಿ ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ ಕೆ. ಮತ್ತು ರಾಜ್ಯಶಾಸ್ತ್ರ ಉಪನ್ಯಾಸಕ ದಾಮೋದರ ಎನ್. ಇದ್ದರು. ದೈಹಿಕ ಶಿಕ್ಷಣ ಉಪನ್ಯಾಸಕ ಗಣೇಶ ಕೆ. ಸಂಯೋಜಿಸಿದರು. ಸಮಾಜಶಾಸ್ತ್ರ ಉಪನ್ಯಾಸಕ ರಾಜಾರಾಮ್ ವರ್ಮ ಸ್ವಾಗತಿಸಿದರು. ಉಪನ್ಯಾಸಕ ದಾಮೋದರ ಎನ್. ವಂದಿಸಿದರು. ಜೀವಿತ ಮತ್ತು ಬಳಗದವರು ಪ್ರಾರ್ಥನೆ ನೆರವೇರಿಸಿದರು.

ಕಾರ್ಕಳ ಶಾಸಕರ ವಿಕಾಸ ಕಚೇರಿಯಲ್ಲಿ ಯೋಗ

ಕಾರ್ಕಳ: ಬಿಜೆಪಿ ಕಾರ್ಕಳ ಮಂಡಲ ವತಿಯಿಂದ ವಿಕಾಸ ಜನಸೇವಾ ಕಚೇರಿಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಶಾಸಕ ವಿ. ಸುನಿಲ್ ಕುಮಾರ್, ಮಂಡಲ ಅಧ್ಯಕ್ಷ ನವೀನ್ ನಾಯಕ್ ನಿಟ್ಟೆ ಮತ್ತಿತರರು ಉಪಸ್ಥಿತರಿದ್ದರು. ಬಳಿಕ ಯೋಗ ಗುರುಗಳಿಂದ ಯೋಗಾಭ್ಯಾಸ ನಡೆಯಿತು.

ಪಟ್ಲ ಶಾಲೆಯಲ್ಲಿ ಯೋಗ ದಿನಾಚರಣೆ



ಉಡುಪಿ: ಪಟ್ಲದ ರೂರಲ್ ಎಜುಕೇಶನ್ ಸೊಸೈಟಿ ವಿದ್ಯಾ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.
ವಾರಣಾಸಿ ಯೋಗ ಕೇಂದ್ರದ ಯೋಗ ಗುರು ಪ್ರಕಾಶಾನಂದ ಗುರೂಜಿ ಭಾಗವಹಿಸಿ, ಸಂದೇಶ ನೀಡಿದರು. ಇದೇ ಸಂದರ್ಭ ಯೋಗ ಗುರುಗಳಿಗೆ ಗುರುಕಾಣಿಕೆ ನೀಡಿ ಬೀಳ್ಕೊಡಲಾಯಿತು. ರೂರಲ್ ಎಜುಕೇಶನ್ ಸೊಸೈಟಿಯ ಅಧ್ಯಕ್ಷ ಪೆರ್ಣಂಕಿಲ ಶ್ರೀಶ ನಾಯಕ್, ಆಡಳಿತ ಮಂಡಳಿಯ ಡಾ. ಕೆ. ನಾರಾಯಣ ಶೆಣೈ, ಜಯರಾಜ್ ಶೆಟ್ಟಿ ಹಾಗೂ ಸಮೂಹ ವಿದ್ಯಾಸಂಸ್ಥೆಗಳ ಗುರೂಜಿ ಮತ್ತು ಮಾತಾಜಿಯವರು ಉಪಸ್ಥಿತರಿದ್ದರು. ಶಾಲಾ ಮುಖ್ಯೋಪಾಧ್ಯಾಯ ಶಾಂತಪ್ಪ ಮೂಲಂಗಿ ಸ್ವಾಗತಿಸಿದರು.


ಕಟಪಾಡಿ ಸಮೀಪದ ಉದ್ಯಾವರ ಹಿಂದೂ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ ವಿಶ್ವ ಯೋಗ ದಿನಾಚರಣೆ ನಡೆಯಿತು. ಸಹ ಶಿಕ್ಷಕಿ ಮಂಜುಳಾ ಇವರ ಮುಂದಾಳತ್ವದಲ್ಲಿ ಯೋಗದ ಮಹತ್ವ, ಯೋಗಾಭ್ಯಾಸ ಮಾಡುವುದರಿಂದ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಲಾಯಿತು.

ಶ್ರೀ ಕ್ಷೇತ್ರ ಕಾರಿಂಜೇಶ್ವರದಲ್ಲಿ ಯೋಗ ದಿನಾಚರಣೆ | ಕ್ಯಾ. ಚೌಟ ಹೇಳಿಕೆ

ವಿಶ್ವಕ್ಕೆ ಪ್ರವಾಸಿ ತಾಣವನ್ನು ಪರಿಚಯಿಸುವ ಯತ್ನ

ಬಂಟ್ವಾಳ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಶ್ರೀ ಕ್ಷೇತ್ರ ಕಾರಿಂಜೇಶ್ವರದಲ್ಲಿ 'ಯೋಗ ವಿದ್ ಯೋಧ್' ಕಾರ್ಯಕ್ರಮ ಭಾನುವಾರ ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರ ನೇತೃತ್ವದಲ್ಲಿ ನಡೆಯಿತು.

ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಆರಂಭಗೊಂಡ ಯೋಗ ದಿನಾಚರಣೆಯು ವಿಶ್ವದಾದ್ಯಂತ ಆಚರಿಸಲ್ಪಡುತ್ತಿದ್ದು, ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದಿದೆ. ಪ್ರಕೃತಿ ಸೌಂದರ್ಯದ ನಡುವೆ ಕಂಗೊಳಿಸುವ ಕಾರಿಂಜೇಶ್ವರ ಕ್ಷೇತ್ರದ ಬೆಟ್ಟದ ಆವರಣದಲ್ಲಿ ಯೋಗಪಟು ಗೋಪಾಲಕೃಷ್ಣ ದೇಲಂಪಾಡಿ ಮಾರ್ಗದರ್ಶನದಲ್ಲಿ ನಡೆದ ಯೋಗಾಭ್ಯಾಸದಲ್ಲಿ ವಿದ್ಯಾರ್ಥಿಗಳು, ನಿವೃತ್ತ ಯೋಧರು, ಗಣ್ಯರು, ಯೋಗಾಸಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದರು.



ಈ ಬಾರಿ ಕಾರಿಂಜ ಬೆಟ್ಟದಲ್ಲಿ ಆಯೋಜಿಸಲಾಗಿದ್ದು ಈ ಅದ್ಭುತ ಧಾರ್ಮಿಕ ಹಾಗೂ ಪ್ರವಾಸಿ ತಾಣವು ಜಾಗತಿಕ ಭೂಪಟದಲ್ಲಿ ಗುರುತಿಸಿಕೊಳ್ಳಬೇಕು ಎನ್ನುವುದು ನಮ್ಮ ಆಶಯವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಕರಾವಳಿಯ ಶ್ರೀಮಂತ ಪರಂಪರೆಯನ್ನು ವಿಶ್ವಕ್ಕೆ ಪರಿಚಯಿಸುವ ಪ್ರಯತ್ನ ಇದಾಗಿದೆ. ಆ ಮೂಲಕ ದೇಶ-ವಿದೇಶಗಳ ಪ್ರವಾಸಿಗರು ಈ ಪವಿತ್ರ ತಾಣಕ್ಕೆ ಭೇಟಿ ನೀಡುವಂತೆ ಪ್ರೇರೇಪಿಸಬೇಕು ಎಂದರು.

ಈ ಸಂದರ್ಭ ಬಂಟ್ವಾಳ ಜಿ.ಪಿ.ಟಿ.ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ವಿತರಿಸಲಾಯಿತು.

ಕಟೀಲು ಶಿಕ್ಷಣ ಸಂಸ್ಥೆಗಳಲ್ಲಿ ಯೋಗ ದಿನಾಚರಣೆ | ಮೇಘಾ ಶೆಟ್ಟಿ ಕರೆ

ದೈಹಿಕ, ಮಾನಸಿಕ ಆರೋಗ್ಯ ಉತ್ತಮ ಪಡಿಸೋಣ

ಕಟೀಲು: ಯೋಗ ನಮ್ಮ ದೈನಂದಿನ ಚಟುವಟಿಕೆಗಳ ಭಾಗವಾಗಬೇಕು. ಆ ಮೂಲಕ ನಮ್ಮ ದೈಹಿಕ ಮಾನಸಿಕ ಆರೋಗ್ಯ ಉತ್ತಮ ಪಡಿಸೋಣ ಎಂದು ಅಂತಾರಾಷ್ಟ್ರೀಯ ಮಟ್ಟದ ಯೋಗ ಪಟು, ಕಟೀಲು ವಿದ್ಯಾಸಂಸ್ಥೆಯ ಹಳೆ ವಿದ್ಯಾರ್ಥಿನಿ ಮೇಘಾ ಶೆಟ್ಟಿ ಅವರು ಹೇಳಿದರು.

ಅವರು ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಳ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿದರು.



ಕಟೀಲು ದೇಗುಲದ ಅರ್ಚಕ ಶ್ರೀಹರಿ ನಾರಾಯಣದಾಸ ಅಸ್ರಣ್ಣ ಉದ್ಘಾಟಿಸಿದರು. ಯೋಗ ಶಿಕ್ಷಕ ದುರ್ಗಾಪ್ರಸಾದ್, ಕಟೀಲು, ಕಟೀಲು ಶಿಕ್ಷಣ ಸಂಸ್ಥೆಗಳ ಮೇಲುಸ್ತುವಾರಿ ದಯಾನಂದ ಮಾಡ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾದ ಡಾ. ವಿಜಯ್ ವಿ. ಕುಸುಮಾವತಿ, ರಾಜಶೇಖರ ಎಸ್. ಗಿರೀಶ್ ತಂತ್ರಿ, ಚಂದ್ರಶೇಖರ ಭಟ್, ಸರೋಜಿನಿ ಮೊದಲಾದವರು ಉಪಸ್ಥಿತರಿದ್ದರು. ಉಪನ್ಯಾಸಕಿ ತನುಜಾ ನಿರೂಪಿಸಿದರು.

ಕಟೀಲು ದೇಗುಲದ ಆರು ಶಿಕ್ಷಣ ಸಂಸ್ಥೆಗಳ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ಸಾಮೂಹಿಕ ಯೋಗ ಪ್ರದರ್ಶನವಾಯಿತು.

ಕೊಡಗಿನಲ್ಲಿ 'ಕಿಲ್ಕಾರಿ' ಸೇವೆ ಕುರಿತು ತರಬೇತಿ ಕಾರ್ಯಾಗಾರ | ಡಾ.ಸತೀಶ್ ಕುಮಾರ್ ಸಲಹೆ

ತಾಯಿ, ಶಿಶುವಿನ ಆರೋಗ್ಯದ ಕುರಿತು ಕಾಳಜಿ ವಹಿಸಿ



ಮಡಿಕೇರಿ: ಜಿಲ್ಲೆಯಲ್ಲಿ ವಿವಿಧ ಕಾರಣಗಳಿಂದ ಸಂಭವಿಸಬಹುದಾದ ತಾಯಿ ಮತ್ತು ನವಜಾತ ಶಿಶುಗಳ ಮರಣವನ್ನು ತಪ್ಪಿಸಲು ಕೇಂದ್ರ ಸರ್ಕಾರ 'ಕಿಲ್ಕಾರಿ' ಸೇವೆಯನ್ನು ಜಾರಿಗೆ ತಂದಿದೆ. ಆಶಾ ಕಾರ್ಯಕರ್ತರು ಹಾಗೂ ಆರೋಗ್ಯ ಸಿಬ್ಬಂದಿಗಳು ಉತ್ತಮ ಆರೋಗ್ಯ ಸೇವೆ ಒದಗಿಸುವುದರ ಜೊತೆಗೆ ಜಿಲ್ಲೆಯಲ್ಲಿ ತಾಯಿ ಮತ್ತು ಶಿಶು ಮರಣ ಪ್ರಮಾಣ ಕಡಿಮೆ ಮಾಡುವಲ್ಲಿ ಪ್ರಾಮಾಣಿಕ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಸಲಹೆ ಮಾಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಶ್ರಯದಲ್ಲಿ ನಗರದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ 'ಕಿಲ್ಕಾರಿ' ಸೇವೆ ಕುರಿತ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಗರ್ಭಧಾರಣೆ, ಗರ್ಭಿಣಿ ತಾಯಿ ಮತ್ತು ಮಗುವಿನ ಆರೋಗ್ಯದ ಮಾಹಿತಿಯನ್ನು ನೇರವಾಗಿ ಕುಟುಂಬಗಳ ಮೊಬೈಲ್ ಫೋನ್‌ಗೆ ತಲುಪಿಸಲಾಗುತ್ತದೆ. ಜಿಲ್ಲೆಯಲ್ಲಿ ತಾಯಿ-ಶಿಶು ಮರಣ ಪ್ರಮಾಣ ಕಡಿಮೆ ಮಾಡಲು ಆಶಾ ಕಾರ್ಯಕರ್ತೆಯರು, ಆರೋಗ್ಯ ಸಿಬ್ಬಂದಿಗಳು ಗರ್ಭಿಣಿಯರಿಗೆ ಕಾಲಕಾಲಕ್ಕೆ ಆರೋಗ್ಯ ಸೇವೆಗಳ ಮಾಹಿತಿ ನೀಡುವ ಮೂಲಕ ಹೆಚ್ಚಿನ ಕಾಳಜಿ ವಹಿಸಬೇಕು. ತಪ್ಪಿದಲ್ಲಿ ಕ್ರಮ ಕೈಗೊಳ್ಳಬೇಕಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಮಧುಸೂದನ್ ಅವರು ಮಾತನಾಡಿ, 'ಕಿಲ್ಕಾರಿ' ಎಂಬುದು ಗರ್ಭಿಣಿಯರು, ಬಾಣಂತಿಯರು ಮತ್ತು ನವಜಾತ ಶಿಶುಗಳ ಆರೋಗ್ಯ ರಕ್ಷಣೆಗಾಗಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಉಚಿತ ಮೊಬೈಲ್ ಆಧಾರಿತ ಧ್ವನಿ ಸಂದೇಶ ಸೇವೆಯಾಗಿದೆ. ತಾಯಿ ಮತ್ತು ಮಕ್ಕಳ ಮರಣ ಪ್ರಮಾಣವನ್ನು ತಗ್ಗಿಸುವುದು ಹಾಗೂ ಗ್ರಾಮೀಣ ಭಾಗದ ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಿಲ್ಕಾರಿ ಮೈಸೂರು ವಿಭಾಗದ ಕಾರ್ಯಕ್ರಮ ಅಧಿಕಾರಿ ಗುರುಪಾದ ಮಾತನಾಡಿ, ಕಿಲ್ಕಾರಿ ಸೇವೆ ಕೇಂದ್ರ ಸರ್ಕಾರದ ಉಚಿತ ಮೊಬೈಲ್ ಆರೋಗ್ಯ ಸೇವೆಯಾಗಿದೆ. ಶಿಶುಗಳ ಆರೋಗ್ಯ, ಲಸಿಕೆ, ಪೌಷ್ಟಿಕ ಆಹಾರ ಮತ್ತು ತಾಯಿ ಮಗು ಸುರಕ್ಷತೆ ಕುರಿತು ಜಾಗೃತಿ ಮೂಡಿಸುವಲ್ಲಿ ನೋಂದಾಯಿತ ಫಲಾನುಭವಿ ಗರ್ಭಿಣಿಯರು ಹಾಗೂ ತಾಯಂದಿರಿಗೆ ಮಾಹಿತಿ ನೀಡಲಾಗುವುದು. ಗರ್ಭಧಾರಣೆಯ ನಾಲ್ಕನೇ ತಿಂಗಳಿಂದ ಮಗುವಿನ ಮೊದಲ ಜನ್ಮದಿನದವರೆಗೆ ಆರೋಗ್ಯ ಸಂಬಂಧಿತ ಮಾಹಿತಿಯನ್ನು ಕರೆಗಳು ಹಾಗೂ ತಿಂಗಳಿಗೊಮ್ಮೆ ಧ್ವನಿ ಸಂದೇಶದ ಮೂಲಕ ನೀಡಲಾಗುತ್ತದೆ ಎಂದರು.

ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಸುರಕ್ಷತಾ ಅಧಿಕಾರಿಗಳು ಈ ಕುರಿತು ಅರಿವು ಮೂಡಿಸಬೇಕು. ಫಲಾನುಭವಿಯನ್ನು ನೋಂದಣಿ ಮಾಡಿಸಿ ಎಲ್ಲರಿಗೂ ಈ ಸೇವಾ ಸೌಲಭ್ಯ ದೊರಕುವಂತೆ ಮಾಡಿ, ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶ್ರೀನಿವಾಸ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಚ್.ಕೆ.ಶಾಂತಿ ಹಾಗೂ ಆಶಾ ಕಾರ್ಯಕರ್ತೆಯರು, ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿಗಳು ಇದ್ದರು. ಜಿಲ್ಲಾ ಎಂ.ಇ ವ್ಯವಸ್ಥಾಪಕಿ ಭೂಮಿಕಾ ಸ್ವಾಗತಿಸಿ, ವಂದಿಸಿದರು.

ಒಟ್ಟು 18 ಕರೆಗಳು

ಕಿಲ್ಕಾರಿಯಲ್ಲಿ ತಿಂಗಳಿಗೆ ಒಂದರಂತೆ ಒಟ್ಟು 18 ಕರೆಗಳು ಬರುತ್ತವೆ. ಗರ್ಭಿಣಿಯ ಸಮಯ ದಲ್ಲೇ 6 ಕರೆಗಳು (4ನೇ ತಿಂಗಳಿಂದ ಕರೆಗಳು ಪ್ರಾರಂಭವಾಗುತ್ತವೆ) ಹಾಗೂ ಮಗು ಜನಿಸಿದ ನಂತರ 12 ಕರೆಗಳು ಬರುತ್ತವೆ. ಕಿಲ್ಕಾರಿ ಸೇವೆಯ ಸದುಪಯೋಗ ಪಡೆಯಲು 14423 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯಬಹುದು. 1600403660 ಸಂಖ್ಯೆಯಿಂದ ನೋಂದಾಯಿತ ಫಲಾನುಭವಿಗಳ ಮೊಬೈಲ್ ಸಂಖ್ಯೆಗೆ ಕರೆ ಬರುತ್ತದೆ. ಕರೆ ಸ್ವೀಕಾರ ಮಾಡಿ ಮಾಹಿತಿ ಪಡೆಯಬಹುದು. ಕರೆ ಸ್ವೀಕಾರ ಮಾಡದಿದ್ದಲ್ಲಿ ಕರೆ ಬ್ಲಾಕ್ ಆಗುವ ಸಾಧ್ಯತೆ ಇದೆ.

ಸಾವಿತ್ರಿಬಾಯಿ ಫುಲೆ ಆಶ್ರಮ ವಿದ್ಯಾಲಯಕ್ಕೆ ಜಿಲ್ಲಾಧಿಕಾರಿ ಭೇಟಿ



ಕಾಸರಗೋಡು: ಕುಂಡಂಗುಳಿ ಸಾವಿತ್ರಿ ಬಾಯಿ ಫುಲೆ ಶಾಲೆಯ ಕಾರ್ಯ ಚಟುವಟಿಕೆಗಳನ್ನು ಜುಲೈ 15ರೊಳಗೆ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನಿರ್ದೇಶನ ನೀಡಿದ್ದಾರೆ. ಶಾಲೆಗೆ ಭೇಟಿ ನೀಡಿ ಚಟುವಟಿಕೆಗಳು ಮತ್ತು ನ್ಯೂನತೆಗಳನ್ನು ನೇರವಾಗಿ ನಿರ್ಣಯಿಸಿದ ನಂತರ ಅವರು ಈ ಆದೇಶ ನೀಡಿದ್ದಾರೆ.

ಹೊಸ ಕಟ್ಟಡದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ ಮತ್ತು ಪ್ರಸ್ತುತ ಹಳೆಯ ಕಟ್ಟಡದಲ್ಲಿ ಸುಮಾರು 250 ಮಂದಿ ಮಕ್ಕಳಿಗೆ ಸ್ಥಳಾವಕಾಶದ ಕೊರತೆಯಿದೆ. ಆದರೆ ಮಕ್ಕಳಿಗೆ ವಸತಿ ಸೌಲಭ್ಯ ಗಳು ಸದ್ಯಕ್ಕೆ ಹಳೆಯ ಶಾಲಾ ಕಟ್ಟಡ ದಲ್ಲಿಯೇ ಮುಂದುವರಿಯುತ್ತದೆ ಎಂದು ತಿಳಿಸಿದರು.

ಅಧ್ಯಯನ ಉದ್ದೇಶಗಳಿಗಾಗಿ ಶಾಲೆಗೆ 10 ಲ್ಯಾಪ್‌ಟಾಪ್‌ಗಳು ಮತ್ತು ಸಂವಹನ ಮಂಡಳಿಯನ್ನು ರಚಿಸಲು ಅನುಮತಿ ನೀಡಲಾಗುವುದು. ಮಕ್ಕಳನ್ನು ನೋಡಿಕೊಳ್ಳಲು ಎರಡು ಹೊಸ ಆಯಾ (ದಾದಿ)ಗಳನ್ನು ನೇಮಿಸಲಾಗುವುದು. ಹೊಸ ಕಟ್ಟಡದಲ್ಲಿ ಒಬ್ಬ ಸ್ವೀಪರ್ ಮತ್ತು ಕಾವಲುಗಾರನನ್ನು ನೇಮಿಸಲಾಗುವುದು ಎಂದರು.

ಹಳೆಯ ಕಟ್ಟಡವನ್ನು ಸಂದರ್ಶಿಸಿ, ಬಳಿಕ ಹೊಸ ಕಟ್ಟಡಕ್ಕೂ ಭೇಟಿ ನೀಡಿ ವೀಕ್ಷಿಸಿದರು. ಆಡಳಿತಾತ್ಮಕ ಬ್ಲಾಕ್, ಸಿಬ್ಬಂದಿ ಕೊಠಡಿಗಳು, ಪ್ರಯೋಗಾಲಯ ಮತ್ತು ಐಟಿ ಕೊಠಡಿಗಳ ಕೆಲಸ ಪೂರ್ತಿಯಾಗಿದೆ. ಹೈಯರ್ ಸೆಕೆಂಡರಿ ಕಟ್ಟಡ ಮತ್ತು ಸುತ್ತಮುತ್ತಲಿನ ಆವರಣಗೋಡೆಯ ಅಂದಾಜು ಸಿದ್ಧಪಡಿಸಲು ಲೋಕೋಪಯೋಗಿ ಸಹಾಯಕ ಇಂಜಿನಿಯರ್‌ಗೆ ಕಳುಹಿಸಲಾಗಿದೆ.

ಬೇಡಡ್ಕ ಗ್ರಾ. ಪಂ. ಅಧ್ಯಕ್ಷ ಇ.ಕುಂಞಿರಾಮನ್, ಪಿಟಿಎ ಅಧ್ಯಕ್ಷ ಮುರಳಿ, ಲೋಕೋಪಯೋಗಿ ಸಹಾಯಕ ಇಂಜಿನಿಯರ್ ರಂಜಿನಿ, ಬುಡಕಟ್ಟು ಅಭಿವೃದ್ಧಿ ಅಧಿಕಾರಿ ಕೆ.ವಿ.ರಾಘವನ್, ಸಹಾ ಯಕ ಅಧಿಕಾರಿ ಕೆ.ಎಂ. ಪ್ರಸನ್ನ, ಮುಖ್ಯೋಪಾಧ್ಯಾಯಿನಿ ಕೆ. ವೀಣಾ, ಗಿರೀಶ್ ಮುಂತಾದವರು ಈ ಸಂದರ್ಭ ಹಾಜರಿದ್ದರು.

ಮಕ್ಕಳ ಜೀವನ ರೂಪಿಸುವಲ್ಲಿ ಪೋಷಕರು, ಶಿಕ್ಷಕರ ಪಾತ್ರ ಮುಖ್ಯ



ಕುಂದಾಪುರ: ಮಕ್ಕಳಲ್ಲಿ ಸೃಜನಶೀಲತೆ, ನಾಯಕತ್ವ ಗುಣಗಳು ಹಾಗೂ ಜೀವನ ಕೌಶಲ್ಯಗಳನ್ನು ಬೆಳೆಸುವಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಬಹುಮುಖ್ಯದ್ದಾಗಿದ್ದು, ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಂತೆ ಮುತುವರ್ಜಿ ವಹಿಸಬೇಕು. ಶೈಕ್ಷಣಿಕ ಯೋಜನೆಗಳ ಮಾಹಿತಿ ಪೋಷಕರಿಗೆ ತಿಳಿದಾಗ ಅದರಂತೆ ತಮ್ಮ ಮಕ್ಕಳನ್ನು ಕಲಿಕೆಗೆ ಅಣಿಗೊಳಿಸಲು ಸಹಕಾರಿಯಾಗುತ್ತದೆ ಎಂದು ಇಶ್ನಾ ಪ್ಲೇ ಸ್ಕೂಲ್‌ನ ಸಹ ಸ್ಥಾಪಕಿ ಹಾಗೂ ಶಿಕ್ಷಕರ ತರಬೇತುದಾರೆ ಶಿಲ್ಪಾ ರಂಜಿತ್ ಶೆಟ್ಟಿ ಹೇಳಿದರು.

ವಕ್ವಾಡಿಯ ಗುರುಕುಲ ಪಬ್ಲಿಕ್ ಸ್ಕೂಲ್‌ನಲ್ಲಿ ಶನಿವಾರ ನಡೆದ ಶಾಲೆಯ ಪೂರ್ವ ಪ್ರಾಥಮಿಕದಿಂದ ಪ್ರಥಮ ತರಗತಿಯ ವಿದ್ಯಾರ್ಥಿಗಳ ಪೋಷಕ, ಶಿಕ್ಷಕರ ಸಭೆಯಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ಅವರು ಮಾತನಾಡಿ, ಮಕ್ಕಳ ಶಿಕ್ಷಣದಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದು. ಪರಸ್ಪರ ಸಹಕಾರ ಮನೋಭಾವದಿಂದ ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಸಾಧ್ಯ. ಮನೆಯೇ ಮೊದಲ ಪಾಠಶಾಲೆಯಾದ ಕಾರಣ ಮಕ್ಕಳ ಕಲಿಕೆಯ ಪ್ರತಿ ಹೆಜ್ಜೆಯನ್ನು ಸದೃಢಗೊಳಿಸಲು ಶಿಕ್ಷಕರೊಂದಿಗೆ ಪೋಷಕರು ಮುಕ್ತವಾಗಿ ಚರ್ಚಿಸಿದಾಗ ವಿದ್ಯಾರ್ಥಿಗಳ ಅಭಿರುಚಿಗೆ ಪೂರಕವಾದ ಉತ್ತಮ ಶಿಕ್ಷಣ ನೀಡಲು ಸಾಧ್ಯ ಎಂದು ಹೇಳಿದರು.

ಪ್ರಾಂಶುಪಾಲೆ ಡಾ. ರೂಪಾ ಶೆಣೈ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಕೀರ್ತಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಶ್ರೀ ರಾಮಕುಂಜೇಶ್ವರ ಪದವಿ ಪೂರ್ವ ಕಾಲೇಜು: ವಿದ್ಯಾರ್ಥಿ ಸಂಘದ ಚುನಾವಣೆ



ಮಂಗಳೂರು: ಶ್ರೀ ರಾಮಕುಂಜೇಶ್ವರ ಪದವಿಪೂರ್ವ ಕಾಲೇಜಿನ 2026ನೇ ಸಾಲಿನ ವಿದ್ಯಾರ್ಥಿ ಸಂಘದ ಚುನಾವಣೆಯು ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಅಧ್ಯಕ್ಷನಾಗಿ ದ್ವಿತೀಯ ಪಿಯುಸಿ SEBA ತರಗತಿಯ ರಾಜೀವ ಪಿ., ಉಪಾಧ್ಯಕ್ಷನಾಗಿ ಪ್ರಥಮ ಪಿಯುಸಿ CEBA ತರಗತಿಯ ಯಶ್ ರೈ, ಕಾರ್ಯದರ್ಶಿಯಾಗಿ ದ್ವಿತೀಯ ಪಿಯುಸಿ SEBA ತರಗತಿಯ ಲಿಶಾ ಶೆಟ್ಟಿ, ಕ್ರೀಡಾ ಕಾರ್ಯದರ್ಶಿಗಳಾಗಿ ದ್ವಿತೀಯ ಪಿಯುಸಿ CEBA ತರಗತಿಯ ಹರ್ಷಿತಾ ಜಿ. ಮತ್ತು ದ್ವಿತೀಯ ಪಿಯುಸಿ SEBA ತರಗತಿಯ ಗಗನ್ ವಿ.ಕೆ., ಸಾಂಸ್ಕೃತಿಕ ಕಾರ್ಯದರ್ಶಿಗಳಾಗಿ ದ್ವಿತೀಯ ಪಿಯುಸಿ CEBA ತರಗತಿಯ ಶ್ರೇಯಾ ಶೆಟ್ಟಿ ಮತ್ತು ದ್ವಿತೀಯ ಪಿಯುಸಿ SEBA ಆದಿತ್ಯ ಆಯ್ಕೆಯಾದರು.

ಎನ್‌ಎಸ್‌ಎಸ್ ಘಟಕಕ್ಕೆ ಆಯ್ಕೆ

ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ನಾಯಕನಾಗಿ ದ್ವಿತೀಯ ಪಿಯುಸಿ CEBA ತರಗತಿಯ ಪ್ರೀತಂ ಮತ್ತು ನಾಯಕಿಯಾಗಿ ದ್ವಿತೀಯ ಪಿಯು SEBA ತರಗತಿಯ ವೈಶಿಕ ಅವರನ್ನು ಆರಿಸಲಾಯಿತು.

ಚುನಾವಣಾ ಪ್ರಕ್ರಿಯೆಯನ್ನು ರಾಜ್ಯಶಾಸ್ತ್ರ ಉಪನ್ಯಾಸಕ ದಾಮೋದರ್ ಎನ್. ಮತ್ತು ಪ್ರಾಂಶುಪಾಲರಾದ ಚಂದ್ರಶೇಖರ್ ಕೆ. ಅವರ ಮಾರ್ಗದರ್ಶನದಲ್ಲಿ ನೆರವೇರಿಸಲಾಯಿತು. ಚುನಾವಣಾ ಅಧಿಕಾರಿಗಳಾದ ಚೇತನ್ ಎಂ. ಮತ್ತು ತನುಜಾ ಅವರು ಕಾರ್ಯಕ್ರಮ ಸಂಯೋಜಿಸಿದರು. ಉಪ ನ್ಯಾಸಕರಾದ ಗಣೇಶ್, ಲೋಹಿತ್, ಕೀರ್ತನ್, ತಿಲಕಾಕ್ಷ ಮತ್ತು ಸಿಬ್ಬಂದಿ ಹರಿಪ್ರಸಾದ್ ಸಹಕರಿಸಿದರು.

ವೆಂಕಟರಮಣ ಶಾಲೆಯಲ್ಲಿ ವಿದ್ಯಾರ್ಥಿ ಸಂಘ, ಲಲಿತ ಕಲಾ ಸಂಘಗಳ ಉದ್ಘಾಟನೆ



ಬಂಟ್ವಾಳ: ವಿದ್ಯಾಗಿರಿ ಶ್ರೀ ವೆಂಕಟರಮಣ ಸ್ವಾಮಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿದ್ಯಾರ್ಥಿ ಸಂಘ, ವಿಜ್ಞಾನ, ಲಲಿತ ಕಲಾ ಸಂಘಗಳ ಉದ್ಘಾಟನಾ ಸಮಾರಂಭ ನಡೆಯಿತು.

ಅಜ್ಜಿಬೆಟ್ಟು ಸರಕಾರಿ ಶಾಲೆಯ ಕಲಾ ಶಿಕ್ಷಕ ಸುಬ್ರಮಣ್ಯ ಭಟ್ ಅವರು ಕಾರ್ಯಕ್ರಮ ಉದ್ಘಾಟಿಸಿ, ಸಂಘದ ಪದಾಧಿಕಾರಿಗಳಿಗೆ ಪ್ರಮಾಣವಚನ ಬೋಧಿಸಿದರು. ಬಳಿಕ ಮಾತನಾಡಿದ ಅವರು, ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಶಿಕ್ಷಣದ ಜೊತೆಗೆ ಮೌಲ್ಯಯುತ ಚಟುವಟಿಕೆ ಅವಶ್ಯಕ. ವಿದ್ಯಾರ್ಥಿಗಳು ನಾಯಕತ್ವ ಗುಣವನ್ನು ಶಾಲಾ ಮಟ್ಟದಲ್ಲೇ ರೂಢಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳು ನಡೆಯಿತು. ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಹರಿಪ್ರಸಾದ್, ಆಯ್ಕೆಯಾದ ಪದಾಧಿಕಾರಿಗಳಿಗೆ ಶುಭ ಹಾರೈಸಿದರು.

ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಚೈತ್ರಾ ಶೆಟ್ಟಿ ಮತ್ತು ಪೂರ್ವ ಪ್ರಾ ವಿಭಾಗದ ಸಂಯೋಜಕಿಯಾದ ವೀಣಾ, ಶಾಲಾ ನಾಯಕ ಭವಿಷ್ ಎಲ್. ಪೂಜಾರಿ, ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡರು. ವಿದ್ಯಾರ್ಥಿಗಳಾದ ಮುನಾವರ್ ಮಾರ್ಝುಫ್ ಸ್ವಾಗತಿಸಿದರು. ರಿಧಾ ನಫೀಸಾ ಹಲಿಯಾರ್ ವಂದಿಸಿ, ಜೆನಿಶಾ ಲೋಬೋ ನಿರೂಪಿಸಿದರು.

ಪಾಲಿಕೆ ವತಿಯಿಂದಲೇ ಕುದ್ಮುಲ್ ರಂಗರಾವ್ ಜಯಂತಿ ನಡೆಯಲಿ: ಕಾಮತ್



ಮಂಗಳೂರು: ದಲಿತೋದ್ಧಾರಕ ಕುದ್ಮುಲ್ ರಂಗರಾಯರ ಜಯಂತಿಯು ಪಾಲಿಕೆ ವತಿಯಿಂದಲೇ ನಡೆಯುವ ಬಗ್ಗೆ ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ದಲಿತ ಮುಖಂಡರ, ಪಾಲಿಕೆ ಅಧಿಕಾರಿಗಳ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಶಾಸಕರು, ಕಳೆದ ಬಾರಿ ಪಾಲಿಕೆ ವತಿಯಿಂದ ರಂಗರಾಯರ ಜಯಂತಿ ಆಚರಿಸದಿರುವುದು ಅತ್ಯಂತ ಬೇಸರದ ಸಂಗತಿ. ಈ ಬಗ್ಗೆ ದಲಿತ ಮುಖಂಡರು ಕುಂದುಕೊರತೆ ಸಭೆಯಲ್ಲೂ ಪ್ರಸ್ತಾಪಿಸಿದ್ದು, ಇಂತಹ ತಪ್ಪುಗಳು ಮರುಕಳಿಸಬಾರದು. ಈ ಹಿಂದೆ ನಮ್ಮ ಅವಧಿಯಲ್ಲಿ ಮಂಗಳೂರು ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ರಂಗರಾಯರ ಜನ್ಮದಿನಾಚರಣೆ ನಡೆಸಲು ತೀರ್ಮಾನಿಸಲಾಗಿತ್ತು. ಅದೇ ಮಾದರಿಯನ್ನು ಮುಂದುವರಿಸಿಕೊಂಡು ಹೋಗಬೇಕು ಎಂದರು. ಅನುದಾನವನ್ನು ಪಾಲಿಕೆ ವತಿಯಿಂದ ಮೀಸಲಿಡಬೇಕು ಎಂದು ಶಾಸಕರ ನೇತೃತ್ವದಲ್ಲಿ ನಿರ್ಣಯಿಸಲಾಯಿತು.

ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಉಪ ಆಯುಕ್ತ ನರೇಶ್ ಶೆಣೈ, ಸಮಾಜ ಕಲ್ಯಾಣ ಇಲಾಖೆ ಸುರೇಶ್ ಅಡಿಗ, ಮಾಲಿನಿ, ನಿಕಟ ಪೂರ್ವ ಪಾಲಿಕೆ ಸದಸ್ಯ ಶೈಲೇಶ್ ಶೆಟ್ಟಿ, ಶಿವುಕುಮಾರ್, ದಲಿತ ಮುಖಂಡರಾದ ರಘುವೀರ್ ಬಾಬುಗುಡ್ಡೆ, ಶಿವಪ್ಪ ನಂತೂರು, ಹೃದಯನಾಥ್, ಸಂದೀಪ್ ಬೋಳೂರು, ಕಿರಣ್ ಕೊಡಿಯಾಲ್ ಬೈಲ್, ಪ್ರಕಾಶ್ ಕೋಡಿಕಲ್, ಉಮೇಶ್ ಕುಮಾರ್, ದೇವೇಂದ್ರ, ಪ್ರಭಾಕರ್ ಉಪಸ್ಥಿತರಿದ್ದರು.

ಕುಮಾರಮಂಗಲ ದೇಗುಲ ಜೀರ್ಣೋದ್ಧಾರ ಸಮಿತಿಯ ನೂತನ ಕಾರ್ಯಾಲಯ ಉದ್ಘಾಟನೆ



ಬದಿಯಡ್ಕ: ಬೇಳ ಕುಮಾರಮಂಗಲ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನವು ಕಾಸರಗೋಡು ಜಿಲ್ಲೆಯ ಅತ್ಯಂತ ಪುರಾತನ ಹಾಗೂ ಪವಿತ್ರವಾದ ನಾಗಾರಾಧನೆ ಕೇಂದ್ರವಾಗಿದೆ. ಇಲ್ಲಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಯನ್ನು ಮುಖ್ಯ ಆರಾಧ್ಯ ದೇವನಾಗಿ ಪೂಜಿಸಲಾಗುತ್ತದೆ. ಈ ಕ್ಷೇತ್ರವು ಸರ್ಪದೋಷ, ಕುಜ ದೋಷ ಮತ್ತು ಸಂತಾನ ದೋಷ ನಿವಾರಣೆಗೆ ಅತ್ಯಂತ ಪ್ರಸಿದ್ಧಿಯಾಗಿದೆ. ದೇವಸ್ಥಾನದ ಆವರಣದಲ್ಲಿ ಹುಲಿ ದನ ಕಲ್ಲು ಎಂಬ ವಿಶೇಷ ಶಿಲ್ಪವಿದೆ. ಇಲ್ಲಿ ಹುಲಿ ಮತ್ತು ದನವು ವೈರತ್ವವನ್ನು ಮರೆತು ಅನ್ಯೋನ್ಯತೆಯಿಂದಿದ್ದ ಪವಿತ್ರ ಸ್ಥಳವೆಂಬುದನ್ನು ಐತಿಹ್ಯವು ಸಾರುತ್ತದೆ ಎಂದು ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ, ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಹೇಳಿದ್ದಾರೆ.

ಇಲ್ಲಿ ಹಿಂದುಗಳಲ್ಲದೆ ಮುಸ್ಲಿಂ ಬಾಂಧವರು ಕೂಡಾ ಭಕ್ತಿ ಪೂರ್ವಕವಾಗಿ ಹರಕೆ ಗಳನ್ನು ಸಲ್ಲಿಸುತ್ತಾರೆ. ಈ ಎಲ್ಲಾ ಕಾರ್ಯಗಳಿಗೆ ಊರ ಪರವೂರ ಭಕ್ತ ಬಾಂಧವರ, ದಾನಿಗಳ ತನು, ಮನ, ಧನಗಳ ಸಹ ಕಾರ ಅಗತ್ಯವಿದೆ ಎಂದು ನುಡಿದರು. ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ನೂತನ ಕಾರ್ಯಾಲಯವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಜೀರ್ಣೋದ್ಧಾರ ಸಮಿತಿ ಕಾರ್ಯಾಧ್ಯಕ್ಷ ಶ್ರೀಧರ ಮಾಸ್ತರ್ ಬೇಳ, ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ ಹೆಬ್ಬಾರ್, ಕೋಶಾಧಿಕಾರಿ ಪ್ರದೀಪ್‌ಕುಮಾರ್ ಶೆಟ್ಟಿ, ಕ್ಷೇತ್ರದ ಗುರಿಕ್ಕಾರರಾದ ಕೊಡಕ್ಕೆರೆ ಶಿವಕುಮಾರ, ಕೇಶವಪ್ರಸಾದ್, ಮಾತೃ ಸಮಿತಿಯ ಅಧ್ಯಕ್ಷೆ ಡಾ.ಮಾಲತಿ ಪ್ರಕಾಶ್, ಕ್ಷೇತ್ರದ ಅರ್ಚಕ ಸುಬ್ರಹ್ಮಣ್ಯ ಅಡಿಗ, ಕ್ಷೇತ್ರದ ವ್ಯವಸ್ಥಾಪಕ ಹರಿಕೃಷ್ಣ ರಾಮಚಂದ್ರ ಶಾಸ್ತ್ರಿ, ಗಣೇಶ ಪೆರ್ವ, ವಿಜಯಕುಮಾರ್, ಶೀನ ಶೆಟ್ಟಿ ಗಣೇಶ ಕೃಷ್ಣ ಅಳಕ್ಕೆ, ಬಾಲಕೃಷ್ಣ ಮೂರ್ತಿ, ಮಹಾಲಿಂಗ ಪಾಟಾಳಿ, ನಾರಾಯಣ ಬಂಟ, ಸದಾಶಿವ ಮಾಸ್ತರ್, ಬಾಲಗೋಪಾಲ, ನಾರಾಯಣ ಮಣಿಯಾಣಿ ಮೊದಲಾದವರು ಉಪಸ್ಥಿತರಿದ್ದರು.

ಬಳಂಜ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಮಿತಿಯಿಂದ ಪುಸ್ತಕ-ವಿದ್ಯಾರ್ಥಿ ವೇತನ ವಿತರಣೆ, ತರಬೇತಿ ಕಾರ್ಯಾಗಾರ

ಶೈಕ್ಷಣಿಕ ಸಾಧನೆಗೆ ಇಚ್ಛಾಶಕ್ತಿ, ಬದ್ಧತೆ ಅತೀಮುಖ್ಯ: ದಾಸಪ್ಪ ಪೂಜಾರಿ



ಬೆಳ್ತಂಗಡಿ: ವಿದ್ಯಾರ್ಥಿಗಳು ಇಚ್ಛಾಶಕ್ತಿ ಮತ್ತು ಬದ್ಧತೆಯಿಂದ ಶಿಕ್ಷಣ ಪಡೆದರೆ ಶೈಕ್ಷಣಿಕ ಸಾಧನೆ ಮಾಡಲು ಸಾಧ್ಯ. ಶ್ರದ್ಧೆ, ಪರಿಶ್ರಮ ಹಾಗೂ ಆತ್ಮವಿಶ್ವಾಸದಿಂದ ಮುನ್ನಡೆದರೆ ಯಶಸ್ಸು ಖಚಿತ ಎಂದು ನಿವೃತ್ತ ಸೈನಿಕ ದಾಸಪ್ಪ ಪೂಜಾರಿ ಎನ್. ಹೇಳಿದರು.

ಅವರು ಜೂ 21ರಂದು ಬಳಂಜ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಮಿತಿ, ಯುವ ಬಿಲ್ಲವ ವೇದಿಕೆ ಮತ್ತು ಮಹಿಳಾ ಬಿಲ್ಲವ ವೇದಿಕೆಯಿಂದ ಆಯೋಜಿಸಲಾದ ದತ್ತಿನಿಧಿಯ ಪ್ರಯುಕ್ತ ಪುಸ್ತಕ ವಿತರಣೆ, ವಿದ್ಯಾರ್ಥಿ ವೇತನ, ಶೈಕ್ಷಣಿಕ ಸಾಧಕರಿಗೆ ಸನ್ಮಾನ ಹಾಗೂ ತರಬೇತಿ ಕಾರ್ಯಾಗಾರದ ಸಮಾರಂಭದಲ್ಲಿ ಉಪಯುಕ್ತ ಮಾಹಿತಿ ನೀಡಿದರು.

ಉತ್ತಮ ಶಿಕ್ಷಣದ ಮೂಲಕ ಸಮಾಜವನ್ನು ಬದಲಾಯಿಸಬಹುದು. ಎಲ್ಲರೂ ಶಿಕ್ಷಿತರಾಗಬೇಕು. ಸರಕಾರಿ ಉದ್ಯೋಗ, ಸೇನೆಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳಿಗೆ ಸಹಕಾರ ನೀಡಲು ಬದ್ಧ ಎಂದರು.

ಮಂಗಳೂರು ಶ್ರೀ ನಾರಾಯಣ ಗುರುದೇವ ಪ್ರತಿಷ್ಠಾನ ಅಧ್ಯಕ್ಷ ಸುರೇಶ್ ಕೆ. ಪಾಂಡವರಕಲ್ಲು ಮಾತನಾಡಿ, ಸಾಮಾಜಿಕ ವ್ಯವಸ್ಥೆಯಲ್ಲಿ ಆರೋಗ್ಯಪೂರ್ಣ ಜೀವನ ರೂಪಿಸಲು ಸರಳ ಉಪಕ್ರಮಗಳನ್ನು ಸಂದೇಶದ ಮೂಲಕ ತೋರಿಸಿ ಕೊಟ್ಟವರು ಗುರುಗಳು. ಉದ್ಯೋಗ, ಶಿಕ್ಷಣ ಮೂಲಕ ಸಮುದಾಯ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳಬಹುದು ಎಂದರು.

ಬಳಂಜ ನಾರಾಯಣ ಗುರು ಸೇವಾ ಸಮಿತಿ ಅಧ್ಯಕ್ಷ ಸಂತೋಷ್ ಪಿ.ಕೋಟ್ಯಾನ್ ಅಧ್ಯಕ್ಷತೆವಹಿಸಿದ್ದರು. ಶಿಕ್ಷಕಿ ಆರತಿ ಕಲ್ಲಡ್ಕ, ಸಂಘದ ಗೌರವಾಧ್ಯಕ್ಷ ಎಚ್. ಧರ್ಣಪ್ಪ ಪೂಜಾರಿ, ಕಾರ್ಯದರ್ಶಿ ರಂಜಿತ್ ಪೂಜಾರಿ, ಯುವ ಬಿಲ್ಲವ ವೇದಿಕೆ ಅಧ್ಯಕ್ಷ ಶರತ್ ಅಂಚನ್, ಮಹಿಳಾ ಬಿಲ್ಲವ ವೇದಿಕೆ ಅಧ್ಯಕ್ಷೆ ಭಾರತಿ ಸಂತೋಷ್ ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷ ಕೃಷ್ಣಪ್ಪ ಪೂಜಾರಿ ಬೊಂಟ್ರೋಟ್ಟು, ನಿರ್ದೇಶಕ ದಿನೇಶ್ ನಿಟ್ಟಡ್ಕ, ದೀಪಕ್ ಎಚ್. ಡಿ ನಾಲ್ಕೂರು, ದಿನೇಶ್ ಪೂಜಾರಿ ಅಂತರ, ಸಂತೋಷ್ ಕುಮಾರ್ ಹಿಮರಡ್ಡ, ಮನೋಹರ್ ಬಳಂಜ, ವಿಜಯ್ ಯೈಕುರಿ, ಪ್ರವೀಣ್ ಕೋಟ್ಯಾನ್ ದರ್ಖಾಸು, ರತ್ನಾಕರ ಪೂಜಾರಿ ಕೆಂಪುಂರ್ಜ, ಜಗದೀಶ್ ಬಳ್ಳಿದಡ್ಡ,ಮಾಜಿ ಅಧ್ಯಕ್ಷರಾದ ಶಾಂತಪ್ಪ ಸುವರ್ಣ, ಬಾಲಕೃಷ್ಣ ಪೂಜಾರಿ, ತಿಮ್ಮಪ್ಪ ಪೂಜಾರಿ, ಯ.ಬಿ.ವೇ ಕಾರ್ಯದರ್ಶಿ ಸತೀಶ್ ಕೋಟ್ಯಾನ್ ಹುಂಬೆಜೆ, ಮ.ಬಿ.ವೇ ಕಾರ್ಯದರ್ಶಿ ಸಂಧ್ಯಾ ಎಚ್.ಡಿ. ಹಾಗೂ ಸದಸ್ಯರು ಸಹಕರಿಸಿದರು. ಮಹಿಳಾ ಬಿಲ್ಲವ ವೇದಿಕೆ ಮಾಜಿ ಅಧ್ಯಕ್ಷೆ ವಿಶಾಲ ಜಗದೀಶ್ ನಿರೂಪಿಸಿ,ಅಧ್ಯಕ್ಷ ಸಂತೋಷ್ ಪಿ ಕೋಟ್ಯಾನ್ ಸ್ವಾಗತಿಸಿ,ಕೋಶಾಧಿಕಾರಿ ಪ್ರವೀಣ್ ಕುಮಾರ್ ಎಚ್.ಎಸ್ ವಂದಿಸಿದರು.

ವಿದ್ಯಾರ್ಥಿಗಳಿಗೆ ಸನ್ಮಾನ

ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ಬಿಂದ್ಯಾಶ್ರೀ, ಹರ್ಷಿತಾ, ಪೃಥ್ವಿ, ಪ್ರಣಾಮ್ ಜಗದೀಶ್ ಅವರನ್ನು ಸನ್ಮಾನಿಸಲಾಯಿತು. ಶೇ 90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಯಿತು. ಪ್ರೌಢ ಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ದತ್ತಿನಿಧಿಯಿಂದ ಪುಸ್ತಕ ವಿತರಣೆ ಮಾಡಲಾಯಿತು.


ಸುತ್ತ ಮುತ್ತ

ವಾರ್ಷಿಕ ಮಹಾಸಭೆ

ಕಾಸರಗೋಡು: ಕಾಸರಗೋಡು ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿಯ ವಾರ್ಷಿಕ ಮಹಾಸಭೆಯು ಜೂ.28ರಂದು ಸಂಜೆ 4.30ಕ್ಕೆ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ವಠಾರದಲ್ಲಿ ನಡೆಯಲಿದೆ. ಉತ್ಸವ ಸಮಿತಿಯ ಎಲ್ಲಾ ಸದಸ್ಯರು ಮತ್ತು ಭಕ್ತಜನರು ಈ ಸಭೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸಲಾಗಿದೆ.

ಜನ ಜಾಗೃತಿ ವೇದಿಕೆಯ ಬೆಟ್ಟಂಪಾಡಿ ವಲಯದ ನೂತನ ಸಮಿತಿ ರಚನೆ

ನಿಡ್ಪಳ್ಳಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಜಾಗೃತಿ ವೇದಿಕೆ ಬೆಟ್ಟಂಪಾಡಿ ವಲಯದ



ನೂತನ ಸಮಿತಿಯ ಪದಾಧಿಕಾರಿಗಳ ಆಯ್ಕೆ ಪಾಣಾಜೆ ಹಾಲು ಉತ್ಪಾದಕರ ಸಹಕಾರಿ ಸಂಘದ ಸಭಾಂಗಣದಲ್ಲಿ ನಡೆಯಿತು. ಸಮಿತಿಯ ನೂತನ ಅಧ್ಯಕ್ಷರಾಗಿ ನಾರಾಯಣ ಪ್ರಕಾಶ್ ನೆಲ್ಲಿತ್ತಿಮಾರು, ಉಪಾಧ್ಯಕ್ಷರಾಗಿ ಪ್ರಕಾಶ್ ರೈ ಬೈಲಾಡಿ, ಕೋಶಾಧಿಕಾರಿಯಾಗಿ ಬಾಬು ರೈ ಕೋಟೆ ಅವರನ್ನು ಆಯ್ಕೆ ಮಾಡಲಾಯಿತು. ಸಮಿತಿಯ ಕಾರ್ಯದರ್ಶಿಯಾಗಿ ವಲಯ ಮೇಲ್ವಿಚಾರಕ ಆದರ್ಶ್ ಕರ್ತವ್ಯ ನಿರ್ವಹಿಸಲಿದ್ದಾರೆ. ನವಜೀವನ ಸಮಿತಿಯ ಬೆಟ್ಟಂಪಾಡಿ ವಲಯಾಧ್ಯಕ್ಷರಾಗಿ ಜತ್ತಪ್ಪ ಗೌಡ ಆಯ್ಕೆಯಾಗಿದ್ದಾರೆ.

ಒಕ್ಕೂಟದ ವಲಯಾಧ್ಯಕ್ಷ ಬಾಲಕೃಷ್ಣ, ತಾಲೂಕು ಜನಜಾಗೃತಿ ಸದಸ್ಯರು, ನವ ಜೀವನ ಸಮಿತಿ ಸದಸ್ಯರು, ಒಕ್ಕೂಟದ ಅಧ್ಯಕ್ಷರು, ವಲಯದ ಸೇವಾ ಪ್ರತಿನಿಧಿಗಳು ಭಾಗವಹಿಸಿದರು. ಗೋಪಾಲ ಪ್ರಾರ್ಥಿಸಿದರು. ಸೇವಾ ಪ್ರತಿನಿಧಿ ಜಗನ್ನಾಥ ಪಾಟಾಳಿ ಸ್ವಾಗತಿಸಿ, ಸೇವಾ ಪ್ರತಿನಿಧಿ ಜಯಶ್ರೀ ಡಿ. ವಂದಿಸಿದರು.

ವಿವಿ ಕನ್ನಡ ವಿಭಾಗದಲ್ಲಿ ಯುಜಿಸಿ ನೆಟ್: ಉಚಿತ ಪರೀಕ್ಷಾ ತರಬೇತಿ

ಮುಡಿಪು: ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ ಕನಕ ಕಾಯಕ ದಾಸೋಹ ಉದ್ಯೋಗಮುಖಿ ಯೋಜನೆಯಡಿ ಯುಜಿಸಿಯ ನೆಟ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಎರಡು ದಿನಗಳ ಉಚಿತ ಪರೀಕ್ಷಾ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇಂದು(ಜೂ.22) ಮತ್ತು ನಾಳೆ (ಜೂ.23) ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಈ ತರಬೇತಿ ಕಾರ್ಯಾಗಾರ ನಡೆಯಲಿದೆ. ಮೊದಲ ದಿನ ಪ್ರಥಮ ಪತ್ರಿಕೆ ಜನರಲ್ ಹಾಗೂ ದ್ವಿತೀಯ ದಿನ ಕನ್ನಡ ಐಚ್ಛಿಕ ಪತ್ರಿಕೆಯ ಕುರಿತು ತಜ್ಞರು ತರಬೇತಿ ನೀಡಲಿದ್ದಾರೆ.

ಇಂದು ಬೆಳಗ್ಗೆ ಮಂಗಳೂರು ವಿವಿ ಕುಲಸಚಿವ ಪ್ರೊ.ಗಣೇಶ್ ಸಂಜೀವ್ ಉದ್ಘಾಟಿಸಲಿದ್ದಾರೆ. ಎಸ್ ವಿಪಿ ಕನ್ನಡ ವಿಭಾಗದ ಅಧ್ಯಕ್ಷರಾದ ಡಾ.ಅರ್ ನಾಗಪ್ಪ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಕಲಾ ನಿಕಾಯದ ಡೀನ್ ಪ್ರೊ.ಸೋಮಣ್ಣ ಹೊಂಗಳ್ಳಿ ಕನಕದಾಸ ಸಂಶೋಧನ ಕೇಂದ್ರದ ಸಂಯೋಜಕ ಡಾ.ಧನಂಜಯ ಕುಂಬ್ಳೆ ಭಾಗವಹಿಸುವರು. ಮಂಗಳೂರು ಸಹ್ಯಾದ್ರಿ ಇಂಜಿನಿಯರ್ ಮತ್ತು ಮ್ಯಾನೇಜ್ಮೆಂಟ್ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಪದ್ಮನಾಭ ಬಿ., ಲೇಖಕಿ, ಉಪನ್ಯಾಸಕಿ ಡಾ.ಮೈತ್ರಿ ಭಟ್, ಅಂಬ್ಲಮೊಗರು ಶಾಲೆಯ ಶಿಕ್ಷಕ ಡಾ. ರಾಮಮೂರ್ತಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗ ವಹಿಸಲಿದ್ದಾರೆ ಎಂದು ಕೇಂದ್ರದ ಪ್ರಕಟಣೆ ತಿಳಿಸಿದೆ.

ಕುಕ್ಕೆ: ಪುರುಷರಾಯ ಬೆಟ್ಟದಲ್ಲಿ ಶ್ರೀ ದೈವಗಳ ನೇಮೋತ್ಸವ



ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದ ಕಾರಣಿಕ ಪುರುಷರಾಯ ಬೆಟ್ಟದಲ್ಲಿನ ಹೊಸಳಿಗಮ್ಮ, ಪುರುಷರಾಯ ಬೆಟ್ಟದ ಇತರ ದೈವಗಳ ದೈವಸ್ಥಾನದಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಬೆಳಗ್ಗಿನ ತನಕ ದೈವಗಳ ನೇಮೋತ್ಸವ ನಡೆಯಿತು.ಶ್ರೀ ದೇವರ ನಿತ್ಯೋತ್ಸವವು ಸಂಪನ್ನವಾದ ಬಳಿಕ ರಾತ್ರಿ ಸುಮಾರು 11.30ರ ನಂತರ ದೈವಗಳ ನೇಮೋತ್ಸವವು ಆರಂಭಗೊಂಡು ಮುಂಜಾನೆ ತನಕ ನೆರವೇರಿತು.

ಶನಿವಾರ ರಾತ್ರಿ ಕಾಜುಕುಜುಂಬ, ಕಂಚಿರಾಯ ದೈವಗಳ ನೇಮ ನಡಾವಳಿಗಳು ಮತ್ತು ನರ್ತನ ಸೇವೆ ನಡೆಯಿತು. ಭಾನುವಾರ ಮುಂಜಾನೆ ಹೊಸಳಿಗಮ್ಮ, ಪುರುಷರಾಯ ಹಾಗೂ ಪಂಜುರ್ಲಿ ದೈವಗಳ ನೇಮ ನಡಾವಳಿಗಳು ಹಾಗೂ ನರ್ತನ ಸೇವೆ ನಡೆಯಿತು. ಅಂತಿಮವಾಗಿ ಪ್ರಸಾದ ವಿತರಣೆ ನೆರವೇರಿತು. ಪುರೋಹಿತ ನಾರಾಯಣ ಭಟ್ ವಿಧಿವಿಧಾನ ನೆರವೇರಿಸಿದರು.

ಈ ಸಂದರ್ಭದಲ್ಲಿ ಶ್ರೀ ದೇವಳದ ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ, ವ್ಯವಸ್ಥಾಪನ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಅಜಿತ್ ಕುಮಾರ್ ಪಾಲೇರಿ,ಸಹಾಯಕ ಕಾರ್ಯನಿರ್ವಹಣಾಧಿಕಾರಿ ಯೇಸುರಾಜ, ದೇವಳದ ಅಧೀಕ್ಷಕ ಕೆ.ಎಂ. ಗೋಪಿನಾಥ್ ನಂಬೀಶ, ಹೆಬ್ಬಾರ್ ಪ್ರಸನ್ನ ಭಟ್, ಪಾಟಾಳಿ ಲೋಕೇಶ್ ಎ.ಆರ್., ಶ್ರೀ ದೇವಳದ ನಾಗೇಶ್ ಎ.ವಿ., ಲೋಕೇಶ್ ಎಂ.ಆರ್., ಎನ್.ಸಿಲ್ವೆಸ್ಟ್ರ ದೈವದ ಪೂಜಾರಿ ದಯಾನಂದ ದೋಣಿಮನೆ ಸೇರಿದಂತೆ ದೇವಳದ ಸಿಬ್ಬಂದಿಗಳು ಮತ್ತು ಭಕ್ತರು ಉಪಸ್ಥಿತರಿದ್ದರು.

ಸುತ್ತಮುತ್ತ

ಶಾಲಾ ತರಕಾರಿ ತೋಟ ನಿರ್ಮಾಣ

ಮಂಜೇಶ್ವರ: ವಿಷರಹಿತ ತರಕಾರಿ ಹಾಗೂ ಆರೋಗ್ಯಪೂರ್ಣ ಜೀವನ ಎಂಬ ಆಶಯದೊಂದಿಗೆ ಪೆರ್ಮುದೆ ಬಿಪಿಪಿ ಎಎಲ್‌ಪಿ ಶಾಲೆಯಲ್ಲಿ ಪಿ.ಎಂ. ಪೋಷಣ್ ಯೋಜನೆಯ ಅಂಗವಾಗಿ ಶಾಲಾ ಮಕ್ಕಳ ಮಧ್ಯಾಹ್ನದ ಭೋಜನಕ್ಕಾಗಿ ಶಾಲಾ ತರಕಾರಿ ತೋಟ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು.
ಪೈವಳಿಕೆ ಗ್ರಾಮ ಪಂಚಾಯತ್ ಸ್ಥಾಯೀ ಸಮಿತಿ ಅಧ್ಯಕ್ಷ ಕೆ.ಎಚ್.ಶ್ರೀನಿವಾಸ ಮಾಸ್ತರ್ ಅವರು ಬೀಜ ಬಿತ್ತುವ ಮೂಲಕ ತರಕಾರಿ ತೋಟ ನಿರ್ಮಾಣವನ್ನು ಉದ್ಘಾಟಿಸಿದರು. ಶಾಲಾ ಮುಖ್ಯ ಶಿಕ್ಷಕ ಸದಾಶಿವ ಕೆ.ಕೆ., ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಸ್ಮರಣಾ ಸಭೆ

ಕಾಸರಗೋಡು: ದಿ.ಯು.ಕೆ.ಗಟ್ಟಿ ಮಾಸ್ತರ್ ಮತ್ತು ದಿ.ಶ್ಯಾಮ್‌ಪ್ರಸಾದ್ ಮುಖರ್ಜಿ ಸಂಸ್ಮರಣಾ ಕಾರ್ಯಕ್ರಮವನ್ನು ಜೂ.23ರಂದು ಸಂಜೆ 4.30ಕ್ಕೆ ರಾಮದಾಸನಗರದ ಮಾರಾರ್‌ಜಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಪಕ್ಷದ ಎಲ್ಲಾ ಕಾರ್ಯಕರ್ತರು ಭಾಗವಹಿಸಬೇಕಾಗಿ ವಿನಂತಿಸಲಾಗಿದೆ.

ಕಳಿಯೂರು ಶಾಲೆಯಲ್ಲಿ ವಾಚನಾ ವಾರಾಚರಣೆ

ಮಂಜೇಶ್ವರ: ಕಳಿಯೂರು ಸಂತ ಜೋಸೆಫರ ಅನುದಾನಿತ ಹಿರಿಯ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ ವಾಚನಾ ವಾರವನ್ನು ಆಚರಿಸಲಾಯಿತು. ಕಾಸರಗೋಡಿನ ನಿವೃತ್ತ ಡಿಡಿಇ ಇಬ್ರಾಹಿಂ ಬಿ. ಕಾರ್ಯಕ್ರಮವನ್ನು ಉದ್ಘಾಟಿಸಿ, ಚಿಕ್ಕಂದಿನಿಂದಲೇ ಓದಿನ ಹವ್ಯಾಸವನ್ನು ಮೈಗೂಡಿಸಿ ವ್ಯಕ್ತಿ ವಿಕಸನ ಪಡೆದು ದೇಶದ ಸತ್ಪ್ರಜೆಗಳಾಗಿ ಬಾಳಲು ಪ್ರಯತ್ನಿಸುವ ಎಂಬ ಸಂದೇಶವನ್ನು ನೀಡಿದರು. ವೇದಿಕೆಯಲ್ಲಿ ಶಾಲಾ ಪಿಟಿಎ ಅಧ್ಯಕ್ಷ ಜಯಪ್ರಕಾಶ್, ಎಂಪಿಟಿಎ ಅಧ್ಯಕ್ಷೆ ಸುಜಾತ, ಎಸ್‌ಎಸ್‌ಜಿ ಸಂಚಾಲಕ ಶ್ರೀಪತಿ, ಶಾಲಾ ಮುಖ್ಯೋಪಾಧ್ಯಾಯಿನಿ ಸುಜಾತ ಮುಂತಾದವರು ಉಪಸ್ಥಿತರಿದ್ದರು.

ಸೂರಂಬೈಲು ಶಾಲೆ: ವಾಚನಾ ಮಾಸಾಚರಣೆ

ಕುಂಬಳೆ: ಸೂರಂಬೈಲು ಸರಕಾರಿ ಪ್ರೌಢಶಾಲೆಯಲ್ಲಿ ವಾಚನಾ ಮಾಸಾಚರಣೆ ಹಾಗೂ ವಿವಿಧ ಕ್ಲಬ್‌ಗಳ ಉದ್ಘಾಟನೆ ನಡೆಯಿತು. ಮೀಯಪದವು ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ರಾಜಾರಾಮ ರಾವ್ ಟಿ. ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಶಿಕ್ಷಕಿ ಸುನೀತಾ ಎ. ಅಧ್ಯಕ್ಷತೆ ವಹಿಸಿದ್ದರು. ಲೇಖಕಿ ದೀಪಾ ಪಿ.ಎಂ. ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿದರು. ದರ್ಶಿನ್ ಚಿರಾಲ್ ಶಾಲಾ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದರು. ಸ್ಟಾಫ್ ಸೆಕ್ರೆಟರಿ ಶರತ್‌ಕುಮಾರ್ ಬೇಳ ಸ್ವಾಗತಿಸಿ, ಸೂರಜ್ ವಂದಿಸಿದರು. ವಿದ್ಯಾರ್ಥಿಗಳಿಂದ ಕವಿತಾಲಾಪನೆ, ಪುಸ್ತಕ ಪರಿಚಯ, ಆಸ್ವಾದನಾ ಟಿಪ್ಪಣಿ, ನೃತ್ಯ ರೂಪಕ, ನಾಟಕ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳು ಜರಗಿದವು. ಶುಭ ಕಣ್ಣೂರು ಕಾರ್ಯಕ್ರಮ ನಿರೂಪಿಸಿದರು. ಹೇಮಲತಾ ಎನ್. ಮತ್ತು ಗೀತಾ ನೇತೃತ್ವ ನೀಡಿದರು.

ಬದಿಯಡ್ಕ ಶ್ರೀ ಭಾರತೀ ವಿದ್ಯಾಪೀಠ ಶಾಲೆಯಲ್ಲಿ ವಾಚನಾ ದಿನಾಚರಣೆ

ಬದಿಯಡ್ಕ: ವಾಚನವೇ ಜ್ಞಾನಕ್ಕೆ ದಾರಿ, ಜ್ಞಾನವೇ ಯಶಸ್ಸಿಗೆ ಮೆಟ್ಟಿಲು ಎಂಬ ಮಾತಿ ನಂತೆ ಬದಿಯಡ್ಕ ಶ್ರೀ ಭಾರತಿ ವಿದ್ಯಾಪೀಠ ಶಾಲೆಯಲ್ಲಿ ಓದಿನ ಮಹತ್ವವನ್ನು ತಿಳಿಸುವ ನಿಟ್ಟಿನಲ್ಲಿ ವಾಚನಾ ದಿನವನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವ ನಿಟ್ಟಿನಲ್ಲಿ ಹಾಗೂ ಉದ್ದೇಶದೊಂದಿಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.



ಕಿರಿಯ ವಿಭಾಗದ ವಿದ್ಯಾರ್ಥಿಗಳಿಗೆ ಓದುವ ಸ್ಪರ್ಧೆಗಳನ್ನು ನಡೆಸಲಾಯಿತು. ಹಿರಿಯ ಹಾಗೂ ಹೈಸ್ಕೂಲ್ ವಿಭಾಗಗಳ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಎಲ್ಲಾ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳು ಓದಿನ ಮಹತ್ವದ ಹಾಗೂ ವಾಚನಾ ದಿನದ ಅಂಗವಾಗಿ ಕೇರಳದ ಗ್ರಂಥಾಲಯ ಚಳುವಳಿಯ ರೂವಾರಿ ಪಿ.ಎನ್ .ಪಣಿಕ್ಕರ್ ಅವರ ಬಗ್ಗೆ ಉತ್ತಮ ಭಾಷಣಗಳನ್ನು ಮಾಡಿದರು. ಶಾಲಾ ಅಧ್ಯಾಪಿಕೆ ಪವಿತ್ರಾ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಅಧ್ಯಾಪಿಕೆ ಶುಭ ರಸ ಪ್ರಶ್ನೆ ಕಾರ್ಯಕ್ರಮವನ್ನು ನಡೆಸಿ ಕೊಟ್ಟರು. ವಾಚನಾ ದಿನದ ಅಂಗವಾಗಿ ವಿದ್ಯಾ ಪೀಠದಲ್ಲಿ ಆಯೋ ಜಿಸಲಾದ ವಾಚನ ವಾರವು ಒಂದು ವಾರದ ವರೆಗೆ ವಿವಿಧ ಚಟುವಟಿಕೆ ಗಳೊಂದಿಗೆ ಮುಂದುವರಿಯಲಿದೆ.







ಕಾಸರಗೋಡು ಜಿಲ್ಲೆಯಾದ್ಯಂತ ಅಂತಾರಾಷ್ಟ್ರೀಯ ಯೋಗ ದಿನಾಚರಣೆ | ಎಂ.ಎಲ್.ಅಶ್ವಿನಿ ಸಲಹೆ

ಯೋಗದ ಮೂಲಕ ಜೀವನಶೈಲಿ ರೋಗಗಳಿಗೆ ಪರಿಹಾರ

ಕಾಸರಗೋಡು: ಜಿಲ್ಲೆಯಲ್ಲಿ ವಿವಿಧ ಕಡೆಗಳಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಶಾಲಾ-ಕಾಲೇಜು, ಸರ್ಕಾರಿ ಕಚೇರಿ, ಇತರ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಗಾಭ್ಯಾಸ ಮಾಡಿ, ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ, ನಾಗರಿಕರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು.

ಬಿಜೆಪಿ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಪಕ್ಷದ ಜಿಲ್ಲಾ ಕಚೇರಿಯಾದ ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ ಮಂದಿರದಲ್ಲಿ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಉದ್ಘಾಟಿಸಿ ಮಾತನಾಡಿಇಂದು ಯುವಜನತೆಯನ್ನು ಕಾಡುತ್ತಿರುವ ಜೀವನಶೈಲಿ ರೋಗಗಳು ಹಾಗೂ ಮಾನಸಿಕ ಒತ್ತಡವನ್ನು ಯೋಗದಿಂದ ಪರಿಹರಿಸಿಕೊಳ್ಳಬಹುದು ಎಂದು ಹೇಳಿದ್ದಾರೆ.

ಆಧುನಿಕ ಔಷಧ ಮತ್ತು ಯೋಗದ ಸಂಯೋಜನೆಯು ಮನುಕುಲದ ಆರೋಗ್ಯ ಸವಾಲುಗಳನ್ನು ಸ್ವಲ್ಪ ಮಟ್ಟಿಗೆ ಪರಿಹರಿಸಬಹುದು. ಆದರೆ ಹಲವು ಸರಕಾರಗಳು ಮತ್ತು ಸಂಸ್ಥೆಗಳು ಯೋಗವನ್ನು ಕೇವಲ ಒಂದು ಕ್ರೀಡೆಯಾಗಿ ಅಭ್ಯಾಸ ಮಾಡಲು ಆಸಕ್ತಿ ವಹಿಸುತ್ತಿದ್ದು, ಇದರಿಂದ ಯೋಗದ ಸಂಪೂರ್ಣ ಲಾಭ ಸಿಗುತ್ತಿಲ್ಲ ಎಂದರು.





ಯೋಗದಲ್ಲಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್, ಏಷ್ಯನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಹೊಂದಿರುವ ಹಲವಾರು ಯೋಗ ಚಾಂಪಿಯನ್‌ಶಿಪ್‌ಗಳಲ್ಲಿ ಚಿನ್ನದ ಪದಕ ವಿಜೇತೆ ಅಭಿಜ್ಞಾ ಕರಂದಕ್ಕಾಡು ಮತ್ತು ಯೋಗ ಶಿಕ್ಷಕಿ ತೇಜಾಕುಮಾರಿ ಅವರು ಯೋಗ ತರಬೇತಿಯ ನೇತೃತ್ವ ವಹಿಸಿದ್ದರು. ಬಿಜೆಪಿ ಕೇರಳ ರಾಜ್ಯ ಸಮಿತಿ ಸದಸ್ಯೆ ಸವಿತಾ ಟೀಚರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನಿಲ್, ಕಾಸರಗೋಡು ಮಂಡಲ ಅಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು ಮಾತನಾಡಿದರು.

ಉದುಮ ಮಂಡಲದಿಂದ ಯೋಗ

ಬಿಜೆಪಿ ಉದುಮ ಮಂಡಲ ಸಮಿತಿಯ ನೇತೃತ್ವದಲ್ಲಿ ಯೋಗ ದಿನವನ್ನು ಆಚರಿಸಲಾಯಿತು. ಪರವನಡ್ಕ ವಿಷ್ಣು ವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮವನ್ನು ಬಿಜೆಪಿ ಕಲ್ಲಿಕೋಟೆ ವಲಯ ಅಧ್ಯಕ್ಷ, ವಕೀಲ ಕೆ.ಶ್ರೀಕಾಂತ್ ಉದ್ಘಾಟಿಸಿ, ಯೋಗವು ಜೀವನದ ಒಂದು ಭಾಗವಾಗಿದೆ ಎಂದರು. ಯೋಗವನ್ನು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸಿದ್ದಾರೆ ಎಂದು ಕೆ.ಶ್ರೀಕಾಂತ್ ಹೇಳಿದರು. ಮಂಡಲ ಅಧ್ಯಕ್ಷೆ ಶೈನಿಮೋಳ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಬಾಬುರಾಜ್, ಕಾರ್ಯದರ್ಶಿ ಕೆ.ಟಿ.ಪುರುಷೋತ್ತಮನ್, ಮಾಧ್ಯಮ ಸಂಚಾಲಕ ವೈ. ಕೃಷ್ಣದಾಸ್, ಮಂಡಲ ಉಪಾಧ್ಯಕ್ಷ ನಾರಾಯಣನ್ ವಡಕಿನಿಯಾ, ಕಾರ್ಯದರ್ಶಿಗಳಾದ ಶ್ಯಾಮ್ ಪ್ರಸಾದ್ ಕಾಶಿ, ಸೌಮ್ಯಾ ಪದ್ಮನಾಭನ್, ಕೋಶಾಧಿಕಾರಿ ವಿ.ಎ.ರತೀಶ್ ಮತ್ತು ಇತರರು ಉಪಸ್ಥಿತರಿದ್ದರು.

ಯೋಗ ಫಾರ್ ಕಿಡ್ಸ್‌ನಿಂದ ಯೋಗ

ಅಂತಾರಾಷ್ಟ್ರೀಯ ಯೋಗ ದಿನದ ಭಾಗವಾಗಿ ಕರಂದಕ್ಕಾಡು ಯೋಗ ಫಾರ್ ಕಿಡ್ಸ್ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾದ ಯೋಗ ದಿನ ಕಾರ್ಯಕ್ರಮ ನಡೆಯಿತು.

ಕಾಸರಗೋಡು ಜನರಲ್ ಆಸ್ಪತ್ರೆಯ ವೈದ್ಯ ಡಾ.ಜನರ್ದಾನ ನಾಯ್ಕ್ ಉದ್ಘಾಟಿಸಿ ಯೋಗದಿಂದ ಜೀವನ ಶೈಲಿಯನ್ನು ಸಮತೋಲನದಲ್ಲಿ ಇರಿಸಬಹುದು. ಆದ್ದರಿಂದ ಪ್ರತಿಯೊಬ್ಬರೂ ಯೋಗ ವ್ಯಾಯಾಮಗಳಿಗೆ ವಿಶೇಷ ಆದ್ಯತೆ ನೀಡಬೇಕು ಎಂದು ಹೇಳಿದರು. ಕಾಸರಗೋಡು ನಗರಸಭಾ ಸದಸ್ಯ ಹರೀಶ್ ಕೆ.ಆರ್., ಕಾಸರಗೋಡು ಅಗ್ನಿಶಾಮಕ ದಳದ ಸೀನಿಯರ್ ಅಧಿಕಾರಿ ಪ್ರಸೀದ್, ಮೆಡಿಮಿಕ್ಸ್ ಮಾರ್ಕೆಟಿಂಗ್ ಪ್ರಮುಖರಾದ ಶ್ರೀಜೇಶ್, ಸಂಸ್ಥೆಯ ಶಿಕ್ಷಕಿ ತೇಜಾಕುಮಾರಿ, ಸುಪ್ರಿಯಾ ಕೇಶವ್, ಶಾಂತೇರಿ ಆರ್.ಕಾಮತ್, ಮಮತಾ ಪಿ., ಹರೀಶ್, ಪ್ರದೀಪ್, ಅಭಿಜ್ಞಾ ಕರಂದಕ್ಕಾಡು ಉಪಸ್ಥಿತರಿದ್ದರು.

ಅಂಬಿಲಡ್ಕ ಆರ್ಟ್ಸ್-ಸ್ಪೋರ್ಟ್ಸ್ ಕ್ಲಬ್

ಕುಂಬಳೆ ಅಂಬಿಲಡ್ಕ ಲಯನ್ಸ್ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್‌ನ ಸದಸ್ಯರು ಅಂಬಿಲಡ್ಕ ಕ್ರೀಡಾಂಗಣದಲ್ಲಿ ಅಂಗವಾಗಿ ಆಕರ್ಷಕ ಯೋಗ ಪ್ರದರ್ಶನ ನೀಡಿದರು.

ಬಾಲಗೋಕುಲದ ಮಕ್ಕಳಿಂದ ಯೋಗ

ವಿಶ್ವ ಯೋಗ ದಿನಾಚರಣೆಯ ಪ್ರಯುಕ್ತ ಉಪ್ಪಳ ಐಲ ಬ್ರಾಹ್ಮರಿ ಬಾಲಗೋಕುಲದ ಮಕ್ಕಳಿಂದ ಯೋಗ ಪ್ರದರ್ಶನ ನಡೆಯಿತು.

ಬೇಕಲಕೋಟೆಯಲ್ಲಿ ಯೋಗ ದಿನ

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನೇತೃತ್ವದಲ್ಲಿ ಬೇಕಲಕೋಟೆಯಲ್ಲಿ ಆಯೋಜಿಸಲಾಗಿದ್ದ ಯೋಗ ದಿನ ಕಾರ್ಯಕ್ರಮದಲ್ಲಿ ಉದುಮ ಶಾಸಕ ಕೆ.ನೀಲಕಂಠನ್, ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್, ಪದ್ಮಶ್ರೀ ಪುರಸ್ಕೃತ ಸತ್ಯನಾರಾಯಣ ಬೆಳೇರಿ, ಅಧಿಕಾರಿಗಳು ಇದ್ದರು.



ಅಂತಾರಾಷ್ಟ್ರೀಯ ಯೋಗ ದಿನಚರಣೆಯ ಅಂಗವಾಗಿ ಕಾಸರಗೋಡು ಕರಂದಕ್ಕಾಡಿನ ಆಕಾಶ ಪದ್ಮ ಅವರ ನೇತೃತ್ವದ ಅಷ್ಟಾಂಗ ಯೋಗ ಕೇಂದ್ರದ ಮಕ್ಕಳಿಂದ ಆಕರ್ಷಕ ಯೋಗ ಪ್ರದರ್ಶನ ನಡೆಯಿತು. ಯೋಗ ಗುರುಗಳಾದ ಸೀತಾಂಗೋಳಿ ಕುದ್ರೆಪಾಡಿ ಆಕಾಶ ಪದ್ಮ ಅವರು ಕಳೆದ ಎರಡೂವರೆ ವರ್ಷಗಳಿಂದ ಮಕ್ಕಳಿಗೆ ಯೋಗ ಶಿಕ್ಷಣವನ್ನು ನೀಡುತ್ತಿದ್ದು, ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಮಕ್ಕಳಿಗೆ ವಿಶೇಷ ಮಾರ್ಗದರ್ಶನ ಸಹಿತ ವಿವಿಧ ಯೋಗ ತರಗತಿಯ ಜೊತೆ ಮಾಹಿತಿಯನ್ನು ಕೂಡಾ ನೀಡಿದರು.



ಸೇವಾ ಭಾರತಿ ಕುಂಬಳೆ ಪಂಚಾಯತ್ ಸಮಿತಿ ಮತ್ತು ಭಾರತೀಯ ಜನತಾ ಪಕ್ಷ ಕುಂಬಳೆ ಇವುಗಳ ಜಂಟಿ ಆಶ್ರಯದಲ್ಲಿ ಕುಂಬಳೆ ಶ್ರೀ ಜಯ ಮಾರುತಿ ವ್ಯಾಯಾಮ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು.

ಬದಿಯಡ್ಕ ಪಂಚಾಯತ್ ನೇತೃತ್ವದಲ್ಲಿ ಯೋಗ ತರಬೇತಿ



ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್‌ನ ನೇತೃತ್ವದಲ್ಲಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾಸರಗೋಡು ಇದರ ವತಿಯಿಂದ ಜಾಗೃತಿ ಶಿಬಿರ ಹಾಗೂ ಯೋಗ ತರಬೇತಿ ಶಿಬಿರವು ಬದಿಯಡ್ಕ ಸಿಡಿಎಸ್ ಸಭಾಂಗಣದಲ್ಲಿ ಜರಗಿತು. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ವಿ. ಅಧ್ಯಕ್ಷತೆ ವಹಿಸಿದ್ದರು. ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಉದ್ಘಾಟಿಸಿ ಮಾತನಾಡಿದರು. ಶಿಲ್ಪಾ ಪಿ.ಆರ್. ಯೋಗ ತರಬೇತಿ ನೀಡಿದರು.

ಬದಿಯಡ್ಕ ವ್ಯಾಪ್ತಿಯಲ್ಲಿ ಕಾಲುಬಾಯಿ ರೋಗ ಪ್ರತಿರೋಧ ಲಸಿಕೆಗೆ ಚಾಲನೆ



ಬದಿಯಡ್ಕ: ಬದಿಯಡ್ಕ ಗ್ರಾಮ ಪಂಚಾಯತ್‌ನ ಪಶು ಚಿಕಿತ್ಸಾಲಯದ ನೇತೃತ್ವದಲ್ಲಿ ರಾಷ್ಟ್ರೀಯ ಜಂತು ರೋಗ ನಿವಾರಣಾ ಯೋಜನೆಯ ಭಾಗವಾಗಿ ಜಾನುವಾರುಗಳಿಗೆ ಕಾಲುಬಾಯಿ ರೋಗಬಾಧೆ ನಿಯಂತ್ರಿಸುವ ಅಂಗವಾಗಿ ನೀಡುವ ಚುಚ್ಚುಮದ್ದು ಯಜ್ಞದ ಉದ್ಘಾಟನಾ ಸಮಾರಂಭವು ಶನಿವಾರ ಜರಗಿತು. ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಉದ್ಘಾಟಿಸಿ ಮಾತನಾಡಿದರು. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ವಿ. ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ಶಾಹಿನಾ ಅನ್ವರ್, ಫೌಸಿಯಾ, ಪಶು ಚಿಕಿತ್ಸಾಲಯದ ವೈದ್ಯಾಧಿಕಾರಿ ಡಾ.ಗೋಪಿಕಾ, ಇಲಾಖೆಯ ಪ್ರಮುಖರು ಪಾಲ್ಗೊಂಡಿದ್ದರು.



ಪ್ರಧಾನಮಂತ್ರಿ ಕಿಸಾನ್ ಯೋಜನೆಯ 23ನೇ ಕಂತಿನ ನೇರ ಪ್ರಸಾರವನ್ನು ಕುಂಬ್ಡಾಜೆ ಗ್ರಾಮ ಪಂಚಾಯತ್‌ನ ಕೃಷಿ ಭವನದಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷೆ ಯಶೋಧಾ ಎನ್., ಜನಪ್ರತಿನಿಧಿಗಳು, ಕೃಷಿಕರು, ಸಿಬ್ಬಂದಿ ಇದ್ದರು.

ಕುಳೂರು ಶಾಲೆಯಲ್ಲಿ ವಾಚನಾ ದಿನಾಚರಣೆ, ಪಿ.ಎನ್.ಪಣಿಕ್ಕರ್ ಸಂಸ್ಮರಣೆ



- ಶಾಲಾ ಮಕ್ಕಳಿಗೆ ಕಥೆಗಳನ್ನು ಹೇಳಿ, ಪದ್ಯಗಳನ್ನು ಹಾಡಿ ಮನರಂಜಿಸಿದ ವಾರಿಜಾ
- ವಾಚನಾ ವಾರಾಚರಣೆ ಪ್ರಯುಕ್ತ ಹಲವಾರು ಚಟುವಟಿಕೆಗಳು ಹಾಗೂ ಸ್ಪರ್ಧೆಗಳಿಗೂ ಚಾಲನೆ

ಮಂಜೇಶ್ವರ: ಕೇರಳದ ಗ್ರಂಥಾಲಯ ಚಳುವಳಿಯ ಪಿತಾಮಹನೆಂದು ಕರೆಯಲ್ಪಡುವ ಪಿ.ಎನ್.ಪಣಿಕ್ಕರ್ ಅವರ ಸಂಸ್ಮರಣಾ ದಿನವನ್ನು ಕೇರಳದಾದ್ಯಂತ ವಾಚನಾ ದಿನವಾಗಿ ಆಚರಿಸಲಾಗುತ್ತದೆ. ಅದರಂತೆ ಕುಳೂರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಾಚನಾ ದಿನಾಚರಣೆಯ ಉದ್ಘಾಟನಾ ಸಮಾರಂಭ ನಡೆಯಿತು.

ಕಾರ್ಯಕ್ರಮವನ್ನು ನಿವೃತ್ತ ಶಿಕ್ಷಕಿ ವಾರಿಜಾ ಉದ್ಘಾಟಿಸಿ ಶುಭಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಜಯರಾಜ್ ಶೆಟ್ಟಿ ಚಾರ್ಲ ವಹಿಸಿದ್ದರು. ಶಾಲಾ ಮುಖ್ಯ ಶಿಕ್ಷಕಿ ಮಾಲತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಜಯಪ್ರಶಾಂತ್ ಪಾಲೆಂಗ್ರಿ ಸ್ವಾಗತಿಸಿ, ಶಿಕ್ಷಕಿ ಸೌಮ್ಯಾ ಪಿ. ವಂದಿಸಿದರು.

ಬಳಿಕ ಸಂಪನ್ಮೂಲ ವ್ಯಕ್ತಿ ವಾರಿಜಾ ಅವರು ಶಾಲಾ ಮಕ್ಕಳಿಗೆ ಕಥೆಗಳನ್ನು ಹೇಳಿ, ಪದ್ಯಗಳನ್ನು ಹಾಡಿ ಮನರಂಜಿಸಿದರು. ಎಲ್ಲಾ ಮಕ್ಕಳು ಸಕ್ರಿಯರಾಗಿ ಭಾಗವಹಿಸಿದ್ದರು. ಜೊತೆಗೆ ತಾವೇ ತಯಾರಿಸಿ ತಂದ ಮೈಸೂರು ಪಾಕ್ ಸಿಹಿತಿಂಡಿಯನ್ನು ಎಲ್ಲರಿಗೂ ಹಂಚಿ ಸಂಭ್ರಮಿಸಿದರು. ವಾರಿಜಾ ಅವರನ್ನು ಶಾಲಾ ಪರವಾಗಿ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಇದೇ ಸಂದರ್ಭ ವಾಚನಾ ವಾರಾಚರಣೆಗೆ ಚಾಲನೆ ನೀಡಲಾಯಿತು. ಆ ಪ್ರಯುಕ್ತ ಹಲವಾರು ಚಟುವಟಿಕೆಗಳು ಹಾಗೂ ಸ್ಪರ್ಧೆಗಳಿಗೂ ಚಾಲನೆ ದೊರೆಯಿತು.



ಕಾಸರಗೋಡು ಅಡ್ಕತ್ತಬೈಲು ಗುಡ್ಡೆ ದೇವಸ್ಥಾನ ರಸ್ತೆ ಸಮೀಪದ ಯುಗಪುರುಷ ನರೇಂದ್ರ ಮೋದಿ ವಿದ್ಯಾಲಯದಲ್ಲಿ ಪಿ.ಎನ್.ಪಣಿಕ್ಕರ್ ಸ್ಮರಣಾರ್ಥ ವಾಚನಾ ದಿನವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಹಮ್ಮಿಕೊಳ್ಳಲಾಯಿತು. 1ರಿಂದ 7ನೇ ತರಗತಿ ತನಕದ ಮಕ್ಕಳಿಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ಶಾಲಾ ಕೋ ಓರ್ಡಿನೇಟರ್ ಉಷಾ ಪಂಡಿತ್, ಮುಖ್ಯೋಪಾಧ್ಯಾಯಿನಿ ಶ್ರೀವಲ್ಲಿ ಮಾರ್ಗದರ್ಶನ ನೀಡಿದರು.



ಕುಂಬಳೆ ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಆಗಸ್ಟ್ 28ರಂದು ನಡೆಯಲಿರುವ ಸಾಮೂಹಿಕ ಶ್ರೀ ವರಮಹಾಲಕ್ಷ್ಮೀ ಪೂಜೆಯ ಆಮಂತ್ರಣ ಪತ್ರಿಕೆಯನ್ನು ಶ್ರೀ ದೇವರ ಸನ್ನಿಧಿಯಲ್ಲಿ ಬಿಡುಗಡೆಗೊಳಿಸಲಾಯಿತು. ಸಮಿತಿ ಪ್ರಧಾನ ಸಂಚಾಲಕಿ ಪ್ರೇಮಲತಾ ಶೆಟ್ಟಿ, ಅಧ್ಯಕ್ಷೆ ಕಮಲಾ ಪೂಜಾರಿ, ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮಿ ಶಂನಾಡಿಗ ಹಾಗೂ ಸದಸ್ಯೆಯರು ಪಾಲ್ಗೊಂಡಿದ್ದರು.

ಸ್ವರಚಿನ್ನಾರಿ, ಐಎಂಎ ಸಂಸ್ಥೆಯ ಕರೋಕೆ ಘಟಕದ ಸಹಯೋಗದಲ್ಲಿ ಅಂತರ್ಧ್ವನಿ-17 ವೈದ್ಯ ಧ್ವನಿ ಸಂಗೀತ | ಡಾ.ಹರಿಕಿರಣ್ ಬಂಗೇರ ಆಶಯ

ಒಳ್ಳೆಯ ಸಂಗೀತ ಕೇಳುವುದರಿಂದ ಸಂಕಟ, ಬೇಸರ, ಒಂಟಿತನ ದೂರವಾಗಿ ಶರೀರಕ್ಕೆ ಚೈತನ್ಯ ಲಭ್ಯ

ಕಾಸರಗೋಡು: ಎಲ್ಲಾ ಜಾತಿ ಮತ ಧರ್ಮಗಳಿಗಿಂತ ಶ್ರೇಷ್ಠವಾದುದು ಸಂಗೀತವಾಗಿದೆ. ಮನಸ್ಸಿನಲ್ಲಿರುವ ಸಂಕಟ, ಬೇಸರಗಳನ್ನು ನಿವಾರಿಸಲು ಸಂಗೀತವನ್ನು ಕೇಳಬೇಕು. ಒಳ್ಳೆಯ ಸಂಗೀತವನ್ನು ಕೇಳುವುದರಿಂದ ಒಂಟಿತನ ದೂರವಾಗುತ್ತದೆ. ಮಾತ್ರವಲ್ಲದೆ ಶರೀರದ ನರನಾಡಿಗಳಲ್ಲಿ ಪ್ರವಹಿಸಿ ಚೈತನ್ಯ ತುಂಬುತ್ತದೆ ಎಂದು ಖ್ಯಾತ ವೈದ್ಯ ಡಾ.ಹರಿಕಿರಣ್ ಟಿ. ಬಂಗೇರ ಹೇಳಿದ್ದಾರೆ.

ಕಾಸರಗೋಡಿನ ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ ಸಂಸ್ಥೆಯಾದ ರಂಗಚಿನ್ನಾರಿಯ ಸಂಗೀತ ಘಟಕ ಸ್ವರಚಿನ್ನಾರಿ ಮತ್ತು ಐಎಂಎ ಸಂಸ್ಥೆಯ ಕರೋಕೆ ಘಟಕದ ಸಹಯೋಗದೊಂದಿಗೆ ಐಎಂಎ ಸಭಾಗೃಹದಲ್ಲಿ ಜರಗಿದ ಅಂತರ್ಧ್ವನಿ-17 ವೈದ್ಯ ಧ್ವನಿ ಸಂಗೀತ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.



ಮುಖ್ಯ ಅತಿಥಿಯಾಗಿದ್ದ ಗಾಯಕಿ, ಪ್ರಸೂತಿ ತಜ್ಞೆ ಡಾ.ಮಾಯಾ ಎಸ್.ಮಲ್ಯ ಮಾತನಾಡಿ, ಕಾಸರಗೋಡಿನ ಪ್ರತಿಭೆಗಳಿಗೆ ಆದರಲ್ಲೂ ಗ್ರಾಮೀಣ ಪ್ರದೇಶದ ಗಾಯಕ ಗಾಯಕಿಯರಿಗೆ ವೇದಿಕೆ ಒದಗಿಸುತ್ತಿರುವ ರಂಗಚಿನ್ನಾರಿ ತಂಡಕ್ಕೆ ಶುಭಾಶಯಗಳನ್ನು ತಿಳಿಸಿದರು.

ಕವಿ ಸಿಂಚನ ಕಾರ್ಯಕ್ರಮದಲ್ಲಿ ಖ್ಯಾತ ಸಾಹಿತಿ, ಕವಿ ಡಾ.ಕೆ.ವಿ. ತಿರುಮಲೇಶ್‌ರ ಬಗ್ಗೆ ಕಥೆಗಾರ್ತಿ, ಸೌಮ್ಯಾ ಪ್ರವೀಣ್ ಮಾತನಾಡಿ, ಸಂಗೀತದ ಜೊತೆ ಕವಿಗಳನ್ನು ಪರಿಚಯಿಸುವ ಕೆಲಸ ನಿಜಕ್ಕೂ ಶ್ಲಾಘನೀಯ. ಕವಿ ಮಹಾಶಯರು ಬರೆದ ಕವನವನ್ನು ಓದುವ ಹವ್ಯಾಸವನ್ನು ಗಾಯಕ ಗಾಯಕಿಯರು ಮೈಗೂಡಿಸಿಕೊಳ್ಳಬೇಕು ಎಂದರು.

ಸಂಗೀತ ಕೂಡಾ ಕೆಲವು ರೋಗಗಳಿಗೆ ದಿವ್ಯ ಔಷಧ

ಸಮಾರೋಪ ಕಾರ್ಯಕ್ರಮದಲ್ಲಿ ಕಾಸರಗೋಡು ಜನರಲ್ ಆಸ್ಪತ್ರೆಯ ವೈದ್ಯ ಡಾ.ಜನಾರ್ದನ ನಾಯ್ಕ್ ಮಾತನಾಡಿ, ಸಂಗೀತ ಕೂಡಾ ಕೆಲವು ರೋಗಗಳಿಗೆ ದಿವ್ಯ ಔಷಧವಾಗಿದೆ ಎಂದರಲ್ಲದೆ, ಮ್ಯೂಸಿಕ್ ಥೆರಪಿ ಎಂಬುದು ಈಗ ವ್ಯಾಪಕವಾಗಿ ಜನಪ್ರಿಯವಾಗುತ್ತದೆ. ಸಂಗೀತದ ಕಂಪನ ಪ್ರಾಣಿಗಳಲ್ಲಿ ಕೂಡಾ ಪ್ರಭಾವ ಬೀರುತ್ತದೆ ಎಂದು ಹೇಳಿದರು. ರಂಗಚಿನ್ನಾರಿ ಸಂಸ್ಥೆಯು ಕಳೆದ ಎರಡು ದಶಕಗಳಿಂದ ಸಂಗೀತ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಬಗ್ಗೆ ಅಭಿನಂದನೆಗಳನ್ನು ತಿಳಿಸಿದದರು. ವೇದಿಕೆಯಲ್ಲಿ ಡಾ.ಕೆ.ಅನಂತ ಕಾಮತ್, ಡಾ.ಕೆ.ಕೆ.ಶ್ಯಾನುಭೋಗ್, ಡಾ.ಸಂತೋಷ್ ಕಾಮತ್, ಕೋಳಾರು ಸತೀಶ್ಚಂದ್ರ ಭಂಡಾರಿ ವೇದಿಕೆಯಲ್ಲಿದ್ದರು. ಅಂತರ್ಧ್ವನಿಯ ಸಹ ಸಂಚಾಲಕಿ ಬಬಿತಾ ಆಚಾರ್ಯ ನಿರೂಪಿಸಿದರು.

ಅಧ್ಯಕ್ಷತೆ ವಹಿಸಿದ್ದ ಖ್ಯಾತ ನೇತ್ರ ತಜ್ಞ, ಸಾಮಾಜಿಕ, ಧಾರ್ಮಿಕ ಮುಂದಾಳು ಡಾ.ಕೆ.ಅನಂತ ಕಾಮತ್ ಮಾತನಾಡಿ, ಐಎಂಎ ಸಂಸ್ಥೆಯ ವೈದ್ಯರ ಪ್ರತಿಭೆಗಳಿಗೂ ವೇದಿಕೆ ನಿರ್ಮಾಣವಾಗಿರುವುದು ಖುಷಿ ತಂದಿದೆ. ಅಲ್ಲದೆ ಪ್ರತಿ ತಿಂಗಳು ಇಂತಹ ವೈವಿಧ್ಯಮಯ ಕಾರ್ಯಕ್ರಮಗಳು ಜರಗಬೇಕು ಎಂದರು.

ರಂಗಚಿನ್ನಾರಿ ನಿರ್ದೇಶಕ, ಅಂತರ್ಧ್ವನಿಯ ಸಂಚಾಲಕ ಕಾಸರಗೋಡು ಚಿನ್ನಾ ಪ್ರಾಸ್ತಾವಿಕ ಮಾತನಾಡಿ, ಸ್ವಾಗತಿಸಿದರು. ಉಷಾ ಟೀಚರ್ ಪ್ರಾರ್ಥನೆ ಹಾಡಿದರು. ರಂಗಚಿನ್ನಾರಿ ನಿರ್ದೇಶಕ ಕೋಳಾರು ಸತೀಶ್ಚಂದ್ರ ಭಂಡಾರಿ ಅತಿಥಿಗಳನ್ನು ಗೌರವಿಸಿದರು. ರಂಗಚಿನ್ನಾರಿ ನಿರ್ದೇಶಕ, ವಕೀಲ ಎ.ಎನ್. ಅಶೋಕ್ ಕುಮಾರ್ ಇದ್ದರು. ಖ್ಯಾತ ವೈದ್ಯರು, ಸ್ವರಚಿನ್ನಾರಿಯ ಗಾಯಕ ಗಾಯಕಿಯರು ಹಲವಾರು ಭಾಷೆಯ ಹಾಡುಗಳನ್ನು ಹಾಡಿ ರಂಜಿಸಿದರು. ನಿರ್ದೇಶಕ ಡಾ.ಸಂತೋಷ್ ಕಾಮತ್ ವಂದಿಸಿದರು.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಸೋಮವಾರ 22, ಜೂನ್ 2026

ಸುತ್ತ ಮುತ್ತ

ಬಿಲ್ಲವ ಸಮಾಜ ಸೇವಾ ಸಂಘ: ಅಧ್ಯಕ್ಷರಾಗಿ ಭರತ್ ಆಯ್ಕೆ

ಕುಂದಾಪುರ: ಬಿಲ್ಲವ ಸಮಾಜ ಸೇವಾ ಸಂಘ ಕುಂದಾಪುರ ಇದರ ಅಂಗಸಂಸ್ಥೆ ಶ್ರೀ ನಾರಾಯಣ ಗುರು ಶೈಕ್ಷಣಿಕ ಮತ್ತು ದತ್ತಿ ಸಂಸ್ಥೆಯ ಅಧ್ಯಕ್ಷರಾಗಿ



ಉದ್ಯಮಿ ಭರತ್ ಎಸ್. ಪೂಜಾರಿ ಅವಿರೋಧವಾಗಿ ಆಯ್ಕೆಯಾದರು. ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಯಾಗಿ ಆನಂದ್ ಪೂಜಾರಿ ಕೋಡೇರಿ, ಸದಸ್ಯರಾಗಿ ಅಶೋಕ್ ಪೂಜಾರಿ ಬೀಜಾಡಿ, ಯೋಗೇಶ್ ಪೂಜಾರಿ ಕೋಡಿ, ಪ್ರಕಾಶ್ ಕೆ. ಚರ್ಚ್ ರೋಡ್, ಡಾ. ಪ್ರೇಮಾನಂದ್ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷತೆಯನ್ನು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಅಶೋಕ್ ಪೂಜಾರಿ ಬೀಜಾಡಿ ವಹಿಸಿದ್ದರು. ಸಂಸ್ಥೆ ಉಪಾಧ್ಯಕ್ಷರಾದ ರಾಮ ಪೂಜಾರಿ ಮೂಲ್ಕಿಮನೆ, ಮೋಹನ್ ಪೂಜಾರಿ ಉಪ್ಪುಂದ, ಆಡಳಿತ ಮಂಡಳಿ ಸದಸ್ಯರಾದ ಶಂಕರ್ ಪೂಜಾರಿ ಕೋಡಿ, ಕುಪ್ಪಯ್ಯ ಬಿಲ್ಲವ, ಯೋಗೇಶ್ ಪೂಜಾರಿ ಕೋಡಿ, ಸುನೀಲ್ ಕೋಡಿ, ವಿನಯ ಬನ್ನಾಡಿ, ರಾಜು ಮೂಡಕ್ಕಟ್ಟೆ, ಶೇಖರ್ ಕೋಟ್ಯಾನ್, ಪ್ರಕಾಶ್ ಕೆ., ಡಾ. ಪ್ರೇಮಾನಂದ ಉಪಸ್ಥಿತರಿದ್ದರು. ಕಾರ್ಯದರ್ಶಿ ಯೋಗೇಶ್ ಪೂಜಾರಿ ವಂದಿಸಿದರು.

ಮುಂಡ್ಕೂರು ಶ್ರೀ ಕೊರಗಜ್ಜ ಕ್ಷೇತ್ರದಲ್ಲಿ ಅಗೇಲು ಸೇವೆ

ಶಿರ್ವ: ಮುಂಡ್ಕೂರು ಜಾರಿಗೆಕಟ್ಟೆ ಶ್ರೀ ಕೊರಗಜ್ಜ ಕ್ಷೇತ್ರದಲ್ಲಿ, ಕಿನ್ನಿಗೋಳಿ ವಿಜಯ ಕಲಾವಿದರ 'ಅಗೇಲು ಸೇವೆ' ನಡೆಯಿತು.

ಸನ್ಮಾನ

ಕೀರ್ತಿಶೇಷ ದಿವಾಕರ ಪೂಜಾರಿ ಅವರ ಪತ್ನಿ ಶಾಂತಾ ದಿವಾಕರ ಪೂಜಾರಿ ಹಾಗೂ ಪ್ರಸ್ತುತ ಕ್ಷೇತ್ರದ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿರುವ ಧೀರಜ್ ಸುವರ್ಣ ಅವರನ್ನು ಸನ್ಮಾನಿಸಲಾಯಿತು. ಮುಂಡ್ಕೂರು ವ್ಯವಸಾಯ ಸೇವಾ ಸಹಕಾರಿ ಸಂಘದ ಕಾರ್ಯನಿರ್ವಹಣಾಧಿಕಾರಿ ಅರುಣ್ ರಾವ್, ವಿಜಯ ಕಲಾವಿದ ಅಧ್ಯಕ್ಷ ಶರತ್ ಶೆಟ್ಟಿ ಗೌರವ ಅಧ್ಯಕ್ಷ ಭುವನಾಭಿರಾಮ ಉಡುಪ, ಸಂಚಾಲಕ ಸಾಯಿನಾಥ ಶೆಟ್ಟಿ, ಕಾರ್ಯದರ್ಶಿ ಲಕ್ಷ್ಮಣ ಬಿ.ಬಿ. ನಿರ್ವಾಹಕ ಸುಧಾಕರ ಸಾಲಿಯಾನ್, ನಾಟಕ ಬರಹಗಾರ ಹರೀಶ್ ಪಡುಬಿದ್ರಿ, ಸ್ವರಾಜ್ ಶೆಟ್ಟಿ ಮಮತಾ ಶರತ್ ಶೆಟ್ಟಿ ಹಾಗೂ ನಿರ್ಜ ಕಲಾವಿದರು ಉಪಸ್ಥಿತರಿದ್ದರು. ಶ್ರೀ ಮಹಾಮ್ಮಾಯಿ ಕ್ಷೇತ್ರದ ದೇವಿ ಪಾತ್ರಿ ಸತೀಶ್ ಮಂಚಕಲ್, ಪ್ರಾರ್ಥನೆ ನೆರವೇರಿಸಿದರು.

ಮೊದಲನೇ ಪುಟದಿಂದ

ತ್ರಾಸಿಯ ಬೀಚ್!

ಸ್ವಚ್ಛತೆ ಮತ್ತು ಪ್ರವಾಸೋದ್ಯಮದ ದೃಷ್ಟಿಯಿಂದ ಮಹತ್ವದ ಪ್ರದೇಶವಾಗಿರುವ ತ್ರಾಸಿ ಬೀಚ್‌ನಲ್ಲಿ ಇಂತಹ ಅವ್ಯವಸ್ಥೆ ಕಂಡು ಬಂದಿರುವುದಕ್ಕೆ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತ್ರಾಸಿ ಬೀಚ್‌ನಲ್ಲಿ ಸುಮಾರು 9 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿಯ ಕಾಮಗಾರಿಗಳು ನಡೆಯುತ್ತಿದ್ದು ಶೌಚಾಲಯದ ಅಭಿವೃದ್ಧಿ ಕೂಡ ಇದರಲ್ಲಿ ಸೇರಿದೆ. ಸರಕಾರ ಹಾಗೂ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಅವರು ಸ್ವಚ್ಛತೆಗಾಗಿ ಸಾಕಷ್ಟು ಪ್ರಯತ್ನದ ಜೊತೆಗೆ ಯೋಜನೆಗಳನ್ನು ರೂಪಿಸುತ್ತಿದ್ದು ಇಲ್ಲಿ ಮಾತ್ರ ಸ್ವಚ್ಛತೆ ಎಂಬ ಪದಕ್ಕೆ ಅಪವಾದ ಎಂಬಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರಜ್ಞಾವಂತ ನಾಗರಿಕರು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಂಜೇಶ್ವರ ಬೀಚ್ ರಸ್ತೆ

ಕಣ್ವತೀರ್ಥ ಬೀಚ್‌ಗೆ ಸಂಪರ್ಕ ಕಲ್ಪಿಸುವ ಪರ್ಯಾಯ ರಸ್ತೆ ಇದ್ದರೂ, ಕರಾವಳಿ ಭಾಗದ ಪ್ರಮುಖ ಬೀಚ್ ರಸ್ತೆ ಸಂಪೂರ್ಣ ನಿರ್ಲಕ್ಷ್ಯಕ್ಕೊಳಗಾಗಿದೆ ಎನ್ನಲಾಗಿದೆ. ಕುಂಡುಕೊಳಕೆ ಬೀಚ್‌ನಲ್ಲಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಹಲವು ಯೋಜನೆಗಳು ಜಾರಿಯಲ್ಲಿದ್ದರೂ, ಅಲ್ಲಿಗೆ ತಲುಪಲು ಸೂಕ್ತ ರಸ್ತೆ ವ್ಯವಸ್ಥೆ ಇಲ್ಲದಿರುವುದು ಅಭಿವೃದ್ಧಿಗೆ ಅಡ್ಡಿಯಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಪ್ರತಿಭಟನೆಗೆ ಸಿದ್ಧತೆ

ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ರಸ್ತೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬ ಆರೋಪ ಕೇಳಿಬಂದಿದೆ. ತಕ್ಷಣ ರಸ್ತೆ ದುರಸ್ತಿ ಕಾಮಗಾರಿ ಆರಂಭಿಸದಿದ್ದರೆ ಸಾರ್ವಜನಿಕರು ಹಾಗೂ ಸ್ಥಳೀಯ ಸಂಘಟನೆಗಳು ಪ್ರತಿಭಟನೆ ನಡೆಸಲು ಸಿದ್ಧತೆ ನಡೆಸುತ್ತಿರುವುದಾಗಿ ತಿಳಿದುಬಂದಿದೆ.

ಉಡುಪಿ ಜಿಲ್ಲಾ ಬಿಜೆಪಿ, ಐಎಂಎಯಿಂದ ವಿಶ್ವಯೋಗ ದಿನಾಚರಣೆ | ಪ್ರಾತ್ಯಕ್ಷಿಕೆ ಮೂಲಕ ಯೋಗಾಭ್ಯಾಸ

ಯೋಗ ದೈನಂದಿನ ಜೀವನದ ಭಾಗವಾಗಲಿ: ಕುತ್ಯಾರು

ಉಡುಪಿ: ವಿಶ್ವ ಯೋಗ ದಿನಾಚರಣೆ ಅಂಗವಾಗಿ ಉಡುಪಿ ಜಿಲ್ಲಾ ಬಿಜೆಪಿ ನೇತೃತ್ವದಲ್ಲಿ ಕಿದಿಯೂರ್‌ನ ಮಾಧವ ಕೃಷ್ಣ ಸಭಾಂಗಣದಲ್ಲಿ ಹಾಗೂ ಐಎಂಎ ಉಡುಪಿ ಕರಾವಳಿ ಸಂಯುಕ್ತ ಆಶ್ರಯದಲ್ಲಿ ಐಎಂಎ ಭವನದಲ್ಲಿ ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ವಿಶ್ವದಲ್ಲಿ ಯೋಗಕ್ಕೆ ಮಾನ್ಯತೆ

ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೆ ಪೂರಕವಾದ ಯೋಗದಿಂದ ಆರೋಗ್ಯಕರ ಜೀವನ ಸಾಧ್ಯ. ಪ್ರಧಾನಿ ನರೇಂದ್ರ ಮೋದಿ ಅವರಿಂದ ಭಾರತೀಯ ಯೋಗ ಪದ್ಧತಿಗೆ ಇಂದು ವಿಶ್ವ ಮಾನ್ಯತೆ ಲಭಿಸಿದೆ. ಆದರೆ ಯೋಗಾಭ್ಯಾಸ ಕೇವಲ ಒಂದು ದಿನಕ್ಕೆ ಸೀಮಿತವಾಗಿರದೆ ನಿತ್ಯ ನಿರಂತರವಾಗಿ ನಮ್ಮ ಜೀವನದ ಭಾಗವಾಗಬೇಕು ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಹೇಳಿದರು.

ಉಡುಪಿ ಜಿಲ್ಲಾ ಬಿಜೆಪಿ ನೇತೃತ್ವದಲ್ಲಿ, ಜಿಲ್ಲಾ ಯುವ ಮೋರ್ಚಾ ಸಹಯೋಗದೊಂದಿಗೆ ಹೋಟೆಲ್ ಕಿದಿಯೂರ್‌ನ ಮಾಧವ ಕೃಷ್ಣ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ, ಮಾತನಾಡಿದರು.



ಯೋಗ ಶಿಕ್ಷಕಿ ಮಮತಾ ಶೆಟ್ಟಿಗಾರ್ ಮಾರ್ಗದರ್ಶನ ಹಾಗೂ ಸಹ ಶಿಕ್ಷಕ ಗಣೇಶ್ ಆಚಾರ್ಯ ಅವರ ಪ್ರಾತ್ಯಕ್ಷಿಕೆಯಲ್ಲಿ ಒಂದು ಗಂಟೆ ಕಾಲ ಸಾಮೂಹಿಕ ಯೋಗಾಭ್ಯಾಸ ನಡೆಯಿತು. ಕಾರ್ಯಕ್ರಮದಲ್ಲಿ ಉಡುಪಿ ಶಾಸಕ ಯಶ್‌ಪಾಲ್ ಎ. ಸುವರ್ಣ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಮಟ್ಟಾರ್ ರತ್ನಾಕರ ಹೆಗ್ಡೆ, ಮಾಜಿ ಮಂಗಳೂರು ವಿಭಾಗ ಪ್ರಭಾರಿ ಕೆ. ಉದಯ ಕುಮಾರ್ ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಸತ್ಯಾನಂದ ನಾಯಕ್, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಂದರ್, ಆರೋಗ್ಯ ಭಾರತಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಭಾಕರ್ ಭಟ್ ಸೇರಿದಂತೆ ಪಕ್ಷದ ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಐಎಂಎ ಭವನ

ಕರ್ನಾಟಕ ರಾಜ್ಯ ಹೆರಿಗೆ ಹಾಗೂ ಸ್ತ್ರೀ ರೋಗ ತಜ್ಞರ ಸಂಘ, ಮಣಿಪಾಲ ಹೆರಿಗೆ ಹಾಗೂ ಸ್ತ್ರೀ ರೋಗ ತಜ್ಞರ ಸಂಘ ಮತ್ತು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಉಡುಪಿ ಕರಾವಳಿ ಸಂಯುಕ್ತ ಆಶ್ರಯದಲ್ಲಿ ಐಎಂಎ ಭವನದಲ್ಲಿ ಯೋಗ ದಿನ ಆಚರಿಸಲಾಯಿತು. ಮುಖ್ಯ ಸಂಪನ್ಮೂಲ ವ್ಯಕ್ತಿ ರಾಜಯೋಗಿ ಅವಿನಾಶ್ ವಂಕರ್ ಮಾತನಾಡಿ ಯೋಗದ ಮಹತ್ವ ವಿವರಿಸಿದರು. ರಾಜ್ಯ ಸಂಘದ ಅಧ್ಯಕ್ಷೆ ಡಾ. ರಾಜಶ್ರೀ ಪಾಲಡಿ ಪ್ರಸ್ತಾವನೆ ಜರೂರು ಮಾಡಿದರು. ಯೋಗ ಪಟು ಡಾ. ಅನ್ನಪೂರ್ಣ ಹಾಗೂ ಶಿಷ್ಯೆಯರಿಂದ ಪ್ರಾತ್ಯಕ್ಷಿಕೆ ಹಾಗೂ ಐಎಂಎ ಮಹಿಳಾ ವಿಭಾಗದಿಂದ ಯೋಗ ನೃತ್ಯ ನಡೆಯಿತು. ವೇದಿಕೆಯಲ್ಲಿ ಡಾ. ಮಾನಸ್, ಡಾ. ಸನತ್ ರಾವ್, ಡಾ. ಇಂದಿರಾ ಶಾನುಭೋಗ್ ಇದ್ದರು. ಡಾ. ಶರತ್ ಪ್ರಾರ್ಥಿಸಿದರು, ಮಣಿಪಾಲ ಸಂಘದ ಅಧ್ಯಕ್ಷೆ ಡಾ. ರಾಜಲಕ್ಷ್ಮೀ ಸ್ವಾಗತಿಸಿ, ಡಾ. ಅಂಜಲಿ ಮುಂಡ್ಕೂರು ಹಾಗೂ ಡಾ. ರಂಜಿತಾ ನಾಯಕ್ ನಿರೂಪಿಸಿದರೆ, ಐಎಂಎ ಅಧ್ಯಕ್ಷ ಡಾ. ಅಶೋಕ್ ಕುಮಾರ್ ಕಾಮತ್ ವಂದಿಸಿದರು. ಇದೇ ವೇಳೆ ರಾಜಯೋಗಿ ಅವಿನಾಶ್ ವಂಕರ್ ಅವರನ್ನು ಸನ್ಮಾನಿಸಲಾಯಿತು.

> ನಿತ್ಯ ಯೋಗಾಭ್ಯಾಸದಿಂದ ಆರೋಗ್ಯ ವೃದ್ಧಿಯಾಗುತ್ತದೆ. ಭಾರತದ ಯೋಗವನ್ನು ವಿಶ್ವದ ಎಲ್ಲಾ ರಾಷ್ಟ್ರಗಳೂ ಅನುಸರಿಸುತ್ತಿರುವುದು ನಮಗೆಲ್ಲರಿಗೂ ಹೆಮ್ಮೆ ತಂದಿದೆ. ಪ್ರಧಾನಿ ಮೋದಿ ಅವರು ವಿಶ್ವಕ್ಕೆ ಯೋಗ ದಿನಾಚರಣೆ ಆಚರಿಸಲು ಕರೆ ನೀಡಿರುವುದು ಅವರ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ.
> ● **ಯಶ್‌ಪಾಲ್ ಸುವರ್ಣ,** ಶಾಸಕ

> ಇಂದಿನ ಯುವ ಪೀಳಿಗೆಯ ಒತ್ತಡಯುಕ್ತ ಜೀವನಕ್ಕೆ ಯೋಗವು ಪರಿಹಾರ ಮಾರ್ಗವಾಗಿದೆ. ಯೋಗದಿಂದ ಆರೋಗ್ಯವು ಸದೃಢವಾಗಿ ಇಡಲು ಸಾಧ್ಯ. ಅಲ್ಲದೇ ಕ್ರಿಯಾಶೀಲ ಹಾಗೂ ಮನಸ್ಸಿನ ಉಲ್ಲಾಸ ಹೆಚ್ಚಿಸುತ್ತದೆ.
> ● **ಕುತ್ಯಾರು ನವೀನ್ ಶೆಟ್ಟಿ** ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ

ಆದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗಳಲ್ಲಿ ವಿಶ್ವ ಯೋಗ ದಿನಾಚರಣೆ



ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಎನ್‌ಎಸ್‌ಎಸ್ ಘಟಕ ಹಾಗೂ ಉಡುಪಿ ಜಿಲ್ಲಾ ಪತಂಜಲಿ ಯೋಗ ಸಮಿತಿಯ ಜಂಟಿ ಆಶ್ರಯದಲ್ಲಿ ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗಳಲ್ಲಿ ಯೋಗ ದಿನಾಚರಣೆ ಅದಮಾರು ಶ್ರೀ ವಾಸುದೇವ ಸಭಾಂಗಣದಲ್ಲಿ ಆಚರಿಸಲಾಯಿತು.

ಪತಂಜಲಿ ಯೋಗ ಸಮಿತಿಯ ಉಡುಪಿ ಜಿಲ್ಲಾ ಕಾರ್ಯದರ್ಶಿ, ಬೆಳ್ಮಣ್ ಲಯನ್ಸ್ ಕ್ಲಬ್ ಅಧ್ಯಕ್ಷ ರಂಜಿತ್ ಕೆ ಎಸ್ ರವರು ಯೋಗದಮಹತ್ವ ಹಾಗೂ ಯೋಗಾಸನಗಳ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.

ಕಾಲೇಜಿನ ಹಾಗೂ ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮ ಪ್ರೌಢಶಾಲೆಗಳ 8 ವಿದ್ಯಾರ್ಥಿಗಳು ಸೂರ್ಯ ನಮಸ್ಕಾರ ಸಹಿತ ಅನೇಕ ವಿಶೇಷ ಯೋಗಾಸನ ಪ್ರದರ್ಶಿಸಿದರು. ಬಳಿಕ ಸಾಮೂಹಿಕ ಯೋಗಾಸನ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಯೋಗ ಗುರು ರಂಜಿತ್ ಕೆ. ಎಸ್. ಮಾತನಾಡಿ, ದಿನ ನಿತ್ಯ ಯೋಗಾಸನ ಮತ್ತು ಪ್ರಾಣಾಯಾಮ ಮಾಡುತ್ತಿದ್ದರೆ ಸದೃಢ ದೇಹ ಹಾಗೂ ಸುಸ್ಥಿರ ಆರೋಗ್ಯ, ಮತ್ತು ನೆಮ್ಮದಿ ಉಂಟಾಗುತ್ತದೆ. ಮಕ್ಕಳಲ್ಲಿ ಕಲಿಕೆಯ ಕಡೆಗೆ ಆಸಕ್ತಿ ಹೆಚ್ಚಾಗುತ್ತದೆ ಎಂದು ತಿಳಿಸಿದರು.

ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಂಜೀವ ನಾಯ್ಕ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಎನ್‌ಎಸ್‌ಎಸ್ ಯೋಜನಾಧಿಕಾರಿ ಡಾ. ಜಯಶಂಕರ ಕಂಗಣ್ಣಾರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪೂರ್ಣಪ್ರಜ್ಞ ಕನ್ನಡ ಮಾಧ್ಯಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಶ್ರೀಕಾಂತ್ ರಾವ್, ವಾಣಿಜ್ಯ ವಿಭಾಗದ ಸಂಯೋಜಕ ಜಯಶ್ರೀ ಜೋಗಿ ಉಪಸ್ಥಿತರಿದ್ದರು. ನಿಧಿ ಸ್ವಾಗತಿಸಿದರು. ಶ್ರಿಯಾ ವಂದಿಸಿದರು. ಛಾಯಾ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಯೋಗ ದಿನದ ಸಂಭ್ರಮ



ಕುಂದಾಪುರ: ಒತ್ತಡದ ಜೀವನದಲ್ಲಿ ಯೋಗಕ್ಕೆ ಹೆಚ್ಚಿನ ಮಹತ್ವ ನೀಡ ಬೇಕಾಗಿದೆ. ಯೋಗದಿಂದ ದೈಹಿಕ ಬದಲಾವಣೆ ಆಗುವುದಕ್ಕಿಂತ ಮುಖ್ಯವಾಗಿ ಆತ್ಮ ಶುದ್ಧಿಯಾಗಲಿದೆ ಎಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮತ್ತು ತಾಲೂಕು ಕಾನೂನು ಸೇವೆಗಳ ಸಮಿತಿ ಅಧ್ಯಕ್ಷ ಅಬ್ದುಲ್ ರಹೀಮ್ ಹುಸೇನ್ ಶೇಖ್ ಹೇಳಿದರು.


ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆ ಕುಂದಾಪುರ, ತಾಲೂಕು ಕಾನೂನು ಸೇವೆಗಳ ಸಮಿತಿ ಕುಂದಾಪುರ, ಕುಂದಾಪುರ ಬಾರ್ ಅಸೋಸಿಯೇಶನ್ ಕುಂದಾಪುರ ಹಾಗೂ ಶಾಲಾ ಶಿಕ್ಷಣ ಇಲಾಖೆ ಕುಂದಾಪುರ ಇವರ ಸಂಯುಕ್ತ ಆಶ್ರಯದಲ್ಲಿ ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆಯ ಸಭಾಂಗಣದಲ್ಲಿ ಭಾನುವಾರ ನಡೆದ ವಿಶ್ವ ಯೋಗ ದಿನಾಚರಣೆ-2026 ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಒಂದನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಶ್ರೀನಿವಾಸ ಕೆ.ಆರ್. ಮಾತನಾಡಿ, ಒತ್ತಡದ ಜೀವನ ನಡೆಸುತ್ತಿರುವ ಇಂದಿನ ದಿನಗಳಲ್ಲಿ ಯೋಗ ಅತೀ ಅವಶ್ಯ. ಮಾನಸಿಕ ಒತ್ತಡ ನಿವಾರಣೆಗೆ ಮತ್ತು ಪ್ರತಿನಿತ್ಯ ಯೋಗಾಭ್ಯಾಸ ಮಾಡಬೇಕು ಎಂದರು. ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶೆ ಮಂಜುಳಾ ಬಿ. ಶುಭ ಹಾರೈಸಿದರು. ಬಿಜೂರು ಸರಕಾರಿ ಶಾಲೆಯ ಮುಖ್ಯ ಶಿಕ್ಷಕ ಮಂಜುನಾಥ ಬಿಜೂರು, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಸತ್ಯನಾರಾಯಣ ಜಿ., ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಸುಬ್ರಹ್ಮಣ್ಯ ಎಸ್., ಉಡುಪಿ ಜಿಲ್ಲೆ ಪಿಎಲ್‌ವಿ ತಿಲೋತ್ತಮ ನಾಯಕ್ ಮತ್ತಿತರಿದ್ದರು. ಶಾಲೆಯ ಮುಖ್ಯ ಶಿಕ್ಷಕ ಕೃಷ್ಣ ಅಡಿಗ ಸ್ವಾಗತಿಸಿ, ದೈಹಿಕ ಶಿಕ್ಷಣ ಶಿಕ್ಷಕ ನಾಗೇಂದ್ರ ಕಾರ್ಯಕ್ರಮ ನಿರ್ವಹಿಸಿ, ವಸಂತ ಕುಮಾರ್ ವಂದಿಸಿದರು.

ಬಿಜೆಪಿ ಯುವ ಮೋರ್ಚಾ ಕಾಪು ಮಂಡಲದಿಂದ ಯೋಗ ದಿನಾಚರಣೆ



ಕಾಪು: ಬಿಜೆಪಿ ಯುವ ಮೋರ್ಚಾ ಕಾಪು ಮಂಡಲ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಓಶಿಯನ್ ಬೀಚ್ ರೆಸಾರ್ಟ್ ಕಾಪು ಇಲ್ಲಿ ಹಮ್ಮಿಕೊಳ್ಳಲಾದ 'ಅಂತಾರಾಷ್ಟ್ರೀಯ ಯೋಗ ದಿನಾಚರಣೆ' ಕಾರ್ಯಕ್ರಮದಲ್ಲಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಭಾಗವಹಿಸಿದರು.



ಮಾಜಿ ಶಾಸಕರ ಸಾಥ್

ಈ ಸಂದರ್ಭ ಕಾಪು ಮಂಡಲ ಬಿಜೆಪಿ ಅಧ್ಯಕ್ಷ ಜಿತೇಂದ್ರ ಶೆಟ್ಟಿ, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಜಿ. ಸುವರ್ಣ, ಕಾಪು ಮಂಡಲ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸೋನು ಪಾಂಗಾಳ, ಮಾಜಿ ಶಾಸಕರಾದ ಲಾಲಾಜಿ ಆರ್ ಮೆಂಡನ್, ಕಾಪು ಪುರಸಭೆಯ ಸದಸ್ಯರಾದ ನಿತಿನ್, ಹಿರಿಯ ಕಾರ್ಯಕರ್ತ ಕೊಲ್ಲಬೆಟ್ಟು ರವೀಂದ್ರ ಶೆಟ್ಟಿ, ನಿವೃತ್ತ ಸೈನಿಕರಾದ ಕುಶ ಸಾಲ್ಯಾನ್, ಕಾಪು ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗೋಪಾಲ ಕೃಷ್ಣರಾವ್, ಶರಣ್ ಕುಮಾರ್ ಮಟ್ಟು ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬಿಜೆಪಿ ಕುಂದಾಪುರ ಯುವ ಮೋರ್ಚಾದಿಂದ ಯೋಗ ದಿನಾಚರಣೆ



ಕುಂದಾಪುರ: 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಬಿಜೆಪಿ ಕುಂದಾಪುರ ಯುವ ಮೋರ್ಚಾ ವತಿಯಿಂದ ತೆಕ್ಕಟ್ಟೆ ಸುಧೀಂದ್ರ ಸಭಾ ಭವನದಲ್ಲಿ ಬೃಹತ್ ಯೋಗ ಕಾರ್ಯಕ್ರಮ ಭಾನುವಾರ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕುಂದಾಪುರ ಮಂಡಲ ಅಧ್ಯಕ್ಷ ಸುರೇಶ ಶೆಟ್ಟಿ ಗೋಪಾಡಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ವಿಶ್ವದಾದ್ಯಂತ 180ಕ್ಕೂ ಹೆಚ್ಚು ದೇಶಗಳಲ್ಲಿ ಯೋಗ ದಿನಾಚರಣೆ ಆಚರಿಸಲ್ಪಡುತ್ತಿದೆ. ಕುಂದಾಪುರ ಯುವ ಮೋರ್ಚಾ ಕಾರ್ಯಕರ್ತರೇ ಪಕ್ಷದ ನಿಜವಾದ ಶಕ್ತಿ. ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ದೊಡ್ಡದು ಎಂದು ಹೇಳಿದರು.

ಕುಂದಾಪುರ ಬಿಜೆಪಿ ಮಂಡಲ ನಿಕಟ ಪೂರ್ವಅಧ್ಯಕ್ಷ ಶಂಕರ ಅಂಕದಕಟ್ಟೆ, ಪ್ರಧಾನ ಕಾರ್ಯದರ್ಶಿ ಸುಧೀರ್ ಕೆ. ಎಸ್., ಮಂಡಲ ಉಪಾಧ್ಯಕ್ಷ ಸುನೀಲ್ ಶೆಟ್ಟಿ ಹೇರಿಕುದ್ರು, ಜಿಲ್ಲಾ ಕಾರ್ಯದರ್ಶಿ ಸದಾನಂದ ಬಳ್ಕೂರು, ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ಪ್ರಸಾದ ಬಿಲ್ಲವ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ವಿನೋದ್ ದೇವಾಡಿಗ, ಯುವ ಮೋರ್ಚಾ ಅಧ್ಯಕ್ಷ ಕಿರಣ್ ಪೂಜಾರಿ ತೆಕ್ಕಟ್ಟೆ, ಪ್ರಧಾನ ಕಾರ್ಯದರ್ಶಿ ಚೇತನ್ ಖಾರ್ವಿ, ತೆಕ್ಕಟ್ಟೆ ಶಕ್ತಿ ಕೇಂದ್ರದ ಅಧ್ಯಕ್ಷ ಶ್ರೀನಾಥ್ ಶೆಟ್ಟಿ, ಕಾರ್ಯದರ್ಶಿ ಗಣೇಶ ಮೊಗವೀರ, ಅನೇಕ ಪ್ರಮುಖರು, ಕುಂದಾಪುರ ಮಂಡಲದ ಪದಾಧಿಕಾರಿಗಳು, ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಯೋಗಾಭ್ಯಾಸದ ಗುರು ಸಂಜೀವ ಕೋಟ, ವಿನಯ, ಶಂಕರ ಕೋಟ, ರಮೇಶ್ ಪ್ರಭು ನೇತೃತ್ವದಲ್ಲಿ ಯುವ ಕಾರ್ಯಕರ್ತರು, ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಯೋಗ ಅಭಿಮಾನಿಗಳು ಭಾಗವಹಿಸಿ ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಯೋಗಾಭ್ಯಾಸದ ತರಬೇತಿ ಪಡೆದರು.

ಬೈಂದೂರು ಆಸ್ಪತ್ರೆಗೆ ವೈದ್ಯರ ನೇಮಕಕ್ಕೆ ಒಪ್ಪಿಗೆ: ಶಾಸಕ ಗುರುರಾಜ್ ಗಂಟಿಹೊಳೆ

ಬೈಂದೂರು: ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬೈಂದೂರು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನುರಿತ ವೈದ್ಯಾಧಿಕಾರಿಗಳ ಕೊರತೆಯಿಂದ ಜನಸಾಮಾನ್ಯರಿಗೆ ತೊಂದರೆಆಗುತ್ತಿರುವಕಾರಣಪ್ರಸ್ತುತ ಗ್ರಾಮೀಣ ಸೇವೆಗೆ ಲಭ್ಯರಿರುವ ಆಸಕ್ತ ಸ್ಥಳೀಯ ಎಂಬಿಬಿಎಸ್ ವೈದ್ಯರ ನೇಮಕಗೊಳಿಸಲು ಆರೋಗ್ಯ ಇಲಾಖೆಯ ಆಡಳಿತವು ಒಪ್ಪಿಗೆ ಸೂಚಿಸಿದೆ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದ್ದಾರೆ.



ಸಿಬ್ಬಂದಿಗಳನ್ನು ನೇಮಕಗೊಳಿಸಿ

ಪ್ರಸ್ತುತ ಸ್ಥಳೀಯವಾಗಿ ಆರೋಗ್ಯ ಕ್ಷೇತ್ರದ ಕುರಿತು ಕಾಳಜಿ ಇರುವವರ ಮುಖಾಂತರ ಅವರೆಲ್ಲರನ್ನು ಸಂಪರ್ಕಿಸಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳಿಗೆ ವೈದ್ಯರನ್ನು ನೇಮಕಗೊಳಿಸಲಾಗಿದ್ದು ಮತ್ತು ವೈದ್ಯರು ಸ್ಥಳೀಯರೇ ಆಗಿರುವುದರಿಂದ ಜನರ ನಾಡಿಮಿಡಿತ ಚೆನ್ನಾಗಿ ಬಲ್ಲವರಾಗಿ ಉತ್ತಮ ಆರೋಗ್ಯ ಸೇವೆ ಒದಗಿಸಲು ಸಾಧ್ಯವಾಗುವುದರಿಂದ ಕ್ಷೇತ್ರದ ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡಲು ಒತ್ತು ನೀಡಲಾಗಿದೆ. ಇದರ ಪರಿಣಾಮವಾಗಿ ಸಿದ್ಧಾಪುರ ಆರೋಗ್ಯ ಕೇಂದ್ರ ಹಾಗೂ ಬೈಂದೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ವೈದ್ಯರ ಸೇವೆ ಲಭ್ಯವಾಗುತ್ತಿದ್ದು ಇದಕ್ಕಾಗಿ ಗ್ರಾಮೀಣ ಆರೋಗ್ಯ ಸೇವೆಗೆ ಒಪ್ಪಿರುವ ಎಲ್ಲಾ ವೈದ್ಯರಿಗೂ ಕೃತಜ್ಞತೆ ಸಲ್ಲಿಸಿರುವ ಶಾಸಕರು, ವೈದ್ಯರ ಬೇಡಿಕೆ ಇರುವ ಕ್ಷೇತ್ರದ ಇನ್ನುಳಿದ ಆರೋಗ್ಯ ಕೇಂದ್ರಗಳಿಗೂ ಸ್ಥಳೀಯ ನುರಿತ ಎಂಬಿಬಿಎಸ್ ವೈದ್ಯರನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ನೇಮಕ ಮಾಡಿ ಗ್ರಾಮೀಣ ಜನರ ಆರೋಗ್ಯಕ್ಕೆ ಒತ್ತು ನೀಡಲಾಗುವುದು ಎಂದು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆಯವರು ಹೇಳಿದ್ದಾರೆ.

ಆ್ಯಂಬುಲೆನ್ಸ್ ಸೇವೆಗೆ ಒತ್ತಾಯ

ಬೈಂದೂರಿನ ಬಹು ಬೇಡಿಕೆಯ ನೂರು ಹಾಸಿಗೆಗಳ ತಾಲೂಕು ಆಸ್ಪತ್ರೆ ನಿರ್ಮಾಣ, ಸಿದ್ಧಾಪುರ, ವಂಡ್ಸೆ, ಕಿರಿಮಂಜೇಶ್ವರ ಹಾಗೂ ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವುದು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಲ್ಯಾಬ್ ಟೆಕ್ನಿಷಿಯನ್, ಹಾಗೂ ಇತರೆ ಆರೋಗ್ಯ ಸಿಬ್ಬಂದಿಗಳ ಪೂರ್ಣ ಪ್ರಮಾಣದ ನೇಮಕಾತಿ ಮತ್ತು ಜಿಲ್ಲೆಯಲ್ಲಿ ಸಮರ್ಪಕ ರೀತಿಯಲ್ಲಿ ತುರ್ತು 108 ಆ್ಯಂಬುಲೆನ್ಸ್ ಸೇವೆ ಒದಗಿಸಲು ಶಾಸಕರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.



ಬೈಂದೂರು ದೇವಾಡಿಗ ಒಕ್ಕೂಟದ ಸಮುದಾಯ ಭವನಕ್ಕೆ ಶಾಸಕರ ಶಿಫಾರಸ್ಸಿನ ಅನ್ವಯ ಮಂಜೂರಾದ ರೂ.20 ಲಕ್ಷದ ಅನುದಾನದಲ್ಲಿ ನಡೆಯಲಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಗುರುರಾಜ ಗಂಟಿಹೊಳೆ ಭಾನುವಾರ ಶಿಲಾನ್ಯಾಸ ನೆರವೇರಿಸಿದರು. ವಿಶ್ವ ದೇವಾಡಿಗ ಮಹಾಮಂಡಳಿ ಅಧ್ಯಕ್ಷ ಯು. ಧರ್ಮಪಾಲ ದೇವಾಡಿಗ, ಪ್ರಮುಖರಾದ ರವಿ ದೇವಾಡಿಗ, ಗಿರೀಶ್ ಬೈಂದೂರು, ರಾಘವೇಂದ್ರ ದೇವಾಡಿಗ, ನಾರಾಯಣ ದೇವಾಡಿಗ ಕೋಣೂರು, ಕೆ. ನಾರಾಯಣ ದೇವಾಡಿಗ, ನಾರಾಯಣ ದೇವಾಡಿಗ ಬಸವನಕೆರೆ, ಪುರುಷೋತ್ತಮದಾಸ್, ಗುತ್ತಿಗೆದಾರ ಪ್ರವೀಣ್ ಸೋಮಯ್ಯ ಇದ್ದರು.



ಚುನಾವಣಾ ಆಯೋಗದ ಎಸ್.ಐ.ಆರ್ ಪ್ರಕ್ರಿಯೆ ಕುರಿತಾಗಿ ಕಾಪು ವಿಧಾನಸಭಾ ಕ್ಷೇತ್ರದ ಹೆಜಮಾಡಿ ಬಿಜೆಪಿ ಶಕ್ತಿ ಕೇಂದ್ರ ವ್ಯಾಪ್ತಿಯಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಭಾನುವಾರ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಭಾಗವಹಿಸಿದರು. ಸಭೆಯಲ್ಲಿ ಶಾಸಕರು ಎಸ್.ಐ.ಆರ್ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿದರು. ಕಾಪು ಮಂಡಲ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ನೀತಾ ಗುರುರಾಜ್, ಉಡುಪಿ ಜಿಲ್ಲಾ ಬಿಜೆಪಿ ಮಾಜಿ ಉಪಾಧ್ಯಕ್ಷರಾದ ಪ್ರಕಾಶ್ ಶೆಟ್ಟಿ ಪಾದೆಬೆಟ್ಟು, ಶಕ್ತಿ ಕೇಂದ್ರದ ಶರಣ್ ಕುಮಾರ್ ಮಟ್ಟು ಶಿವಕುಮಾರ್, ಕಾರ್ಯಕರ್ತರು ಉಪಸ್ಥಿತರಿದ್ದರು.

ಕೋಟ ಕಾರಂತ ಥೀಮ್ ಪಾರ್ಕ್‌ನಲ್ಲಿ ಚುಟುಕು ಸಾಹಿತ್ಯ ಸಮ್ಮೇಳನ | ಆನಂದ ಕುಂದರ್ ಅಭಿಮತ

ಯುವ ಜನರ ಬೌದ್ಧಿಕ, ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ

ಕೋಟ: ಡಾ. ಶಿವರಾಮ ಕಾರಂತ ಪ್ರತಿಷ್ಠಾನ ಕೋಟ, ಕಾರಂತ ಅನೌಪಚಾರಿಕ ಶಿಕ್ಷಣ ಕೇಂದ್ರ ಕೋಟತಟ್ಟು ಗ್ರಾ.ಪಂ., ನೆನಪು ಮೂವೀಸ್ ಹಾಗೂ ಉಸಿರು ಕೋಟ ಇವುಗಳ ಜಂಟಿ ಆಶ್ರಯದಲ್ಲಿ 5ನೇ ಕಾಲಮಿತಿ ಸಾಹಿತ್ಯ ಸಮ್ಮೇಳನ ನೆಲಗುಮ್ಮ- 2026 (ಹನಿಯ ಚಿಲುಮೆ), ಚುಟುಕು ಸಾಹಿತ್ಯ ಸಮ್ಮೇಳನ ಹಾಗೂ ಕಾರಂತ ಅನೌಪಚಾರಿಕ ಶಿಕ್ಷಣ ಕೇಂದ್ರದ 2026ನೇ ಸಾಲಿನ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಕೋಟದ ಕಾರಂತ ಥೀಮ್ ಪಾರ್ಕ್‌ನಲ್ಲಿ ಜರುಗಿತು.

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಸೋಮಶೇಖರ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದ ಸಮ್ಮೇಳನಾಧ್ಯಕ್ಷತೆ ವಹಿಸಿದ ಶಂಕರ ಶೆಟ್ಟಿ ಕೊತ್ತಾಡಿ ವಡ್ಡರ್ಸೆ ಅವರು ಸಾಹಿತ್ಯದ ಅಗತ್ಯತೆ ಮತ್ತು ಚುಟುಕು ಸಾಹಿತ್ಯದ ಮಹತ್ವದ ಕುರಿತು ಆಶಯ ನುಡಿಗಳನ್ನಾಡಿದರು.



ಇದೇ ಸಂದರ್ಭ ಕೋಟದ ಪಂಚವರ್ಣ ಸಂಘಟನೆಯ ಪ್ರಮುಖರಾದ ಮಹೇಶ್ ಹವಾಲ್ದಾರ್ ಹಾಗೂ ಪಂಚವರ್ಣ ಮಹಿಳಾ ಮಂಡಲದ ಸದಸ್ಯೆ ರೇವತಿ ತೆಕ್ಕಟ್ಟೆ ಅವರು ನಡೆಸಿಕೊಟ್ಟ ಚುಟುಕು ಸಂವಾದಲ್ಲಿ ನೆರೆದಿದ್ದ ಸಾಹಿತ್ಯಾಸಕ್ತರ ಗಮನ ಸೆಳೆಯಿತು.

ಕಾರಂತ ಅನೌಪಚಾರಿಕ ಶಿಕ್ಷಣ ಕೇಂದ್ರದ ನೂತನ ಸಾಲಿನ ಚಟುವಟಿಕೆಗಳಿಗೆ ಚಾಲನೆ ನೀಡಿದ ಕಾರಂತ ಪ್ರತಿಷ್ಠಾನದ ಗೌರವಾಧ್ಯಕ್ಷ ಆನಂದ ಸಿ. ಕುಂದರ್ ಅವರು ಯುವಜನರ ಬೌದ್ಧಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಇಂತಹ ಶಿಕ್ಷಣ ಕೇಂದ್ರಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಪ್ರತಿಷ್ಠಾನದ ಸುಶೀಲ ಸೋಮಶೇಖರ್, ಗ್ರಾ.ಪಂ. ಮಾಜಿ ಅಧ್ಯಕ್ಷ ಪ್ರಮೋದ ಹಂದೆ, ಡಾ. ಕಾರಂತ ಪ್ರತಿಷ್ಠಾನದ ಕಾರ್ಯದರ್ಶಿ ನರೇಂದ್ರ ಕುಮಾರ್ ಕೋಟ, ಸಂಯೋಜಕರಾದ ಸುಬ್ರಾಯ ಆಚಾರ್, ಸತೀಶ್ ವಡ್ಡರ್ಸೆ, ಸಾಹಿತ್ಯಾಭಿಮಾನಿಗಳು ಉಪಸ್ಥಿತರಿದ್ದರು.

ಆಕರ್ಷಕ ಚುಟುಕು ಕವಿಗೋಷ್ಠಿ

ಸಮ್ಮೇಳನದ ಪ್ರಮುಖ ಆಕರ್ಷಣೆಯಾಗಿ ನಡೆದ ಚುಟುಕು ಕವಿಗೋಷ್ಠಿಯಲ್ಲಿ ನಾಡಿನ ವಿವಿಧ ಭಾಗಗಳ ಹಲವಾರು ಕವಿಗಳು ಭಾಗವಹಿಸಿ ತಮ್ಮ ಚುಟುಕು ಕವನಗಳ ಮೂಲಕ ಸಾಹಿತ್ಯ ಸುಧೆಹರಿಸಿದರು. ಸುಮನ ಹೇರ್ಳೆ, ಚೇಂಪಿ ದಿನೇಶ್ ಮತ್ತು ಮಂಜುನಾಥ ಗುಂಡ್ಮಿ ಅವರು ಕವಿಗೋಷ್ಠಿಯ ಯಶಸ್ವಿ ನಿರ್ವಹಣೆ ಮಾಡಿದರು.

ಫೀಡರ್‌ಗಳಲ್ಲಿ ತುರ್ತು ನಿರ್ವಹಣೆ ಕಾಮಗಾರಿ

ಜೂ.23: ವಿದ್ಯುತ್ ವ್ಯತ್ಯಯ

ಉಡುಪಿ: ಫೀಡರ್ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸಿಂಡಿಕೇಟ್ ಸರ್ಕಲ್, ಎಂ.ಜಿ.ಸಿ ಸ್ಕೂಲ್, ಬಿ.ಎಸ್.ಎನ್.ಎಲ್, ವಿದ್ಯಾರತ್ನ ನಗರ, ಡಿ.ಸಿ ಕಚೇರಿ, ಆರ್.ಟಿ.ಓ ಆಫೀಸ್, ಪೆರಂಪಳ್ಳಿ, ಸಗ್ರಿ ನೋಳೆ, ಹುಡ್ಕೋ, ಅನಂತನಗರ, ಕಲ್ಯಾಣನಗರ, ಸೋನಿಯಾ ಕ್ಲಿನಿಕ್, ಹಯಗ್ರೀವನಗರ, ಲಕ್ಷ್ಮೀಂದ್ರನಗರ, ಇಂದ್ರಾಳಿ ರೈಲ್ವೆ ನಿಲ್ದಾಣ, ಮಣಿಪಾಲ ಟೌನ್, ವೇಣುಗೋಪಾಲ ಟೆಂಪಲ್, ಮೀಡಿಯಾ ನೆಟ್ ವರ್ಕ್ ಏರಿಯಾ, ಈಶ್ವರ ನಗರ, ಸರಳೇಬೆಟ್ಟು, ಗಣೇಶ್ ಭಾಗ್, ಪ್ರಗತಿನಗರ, ಶಾಂತಿನಗರ, ರಾಜೀವನಗರ, 80ಬಡಗುಬೆಟ್ಟು, ಮಣಿಪುರ, ಮೂಡುಬೆಳ್ಳೆ, ಮರ್ಣೆ, ಕಟ್ಟಿಂಗೇರಿ, ಕೆಮ್ತೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.23ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಉಡುಪಿ/ಬನ್ನಂಜೆ/ನಿಟ್ಟೂರು

ಫೀಡರ್‌ನಲ್ಲಿ ತುರ್ತು ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಬನ್ನಂಜೆ, ಶಿರಿಬೀಡು, ಅಜ್ಜರಕಾಡು, ಎಲ್.ಐ.ಸಿ, ಬ್ರಹ್ಮಗಿರಿ, ನಾಯರ್ ಕೆರೆ, ಕಾಡಬೆಟ್ಟು, ವಿದ್ಯಾರಣ್ಯ ಮಾರ್ಗ, ಸರ್ವಿಸ್ ಬಸ್ ನಿಲ್ದಾಣ, ಎನ್. ಎಚ್66 ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.23ರಂದು ಬೆಳಿಗ್ಗೆ 9.30ರಿಂದ ಸಂಜೆ 4.30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.